ಭಾನುವಾರ, ಡಿಸೆಂಬರ್ 22, 2024 | ₹ 7.00
www.prajavani.net
prajavani.net prajavani Prajavani Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೇಮಕ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ಕನ್ನಡಿಗ ಮದನ್ ಬಿ. ಲೋಕೂರ್ ಅವರನ್ನು ವಿಶ್ವಸಂಸ್ಥೆಯ 'ಇಂಟರ್ನಲ್ ಜಸ್ಟೀಸ್ ಕೌನ್ಸಿಲ್' ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ

9



ರಾಜಕಾರಣಿಗಳ ಸಾಹಿತ್ಯ ಕುರಿತು ಅಸ್ಪೃಶ್ಯ ಧೋರಣೆ: ಸಚಿವ ಎಚ್‌.ಕೆ.ಪಾಟೀಲ

ಸದನದ ಭಾಷೆ: ಪರ –ವಿರುದ್ಧ ಚರ್ಚೆ

• ಸಿದ್ದು ಆರ್‌.ಜಿ.ಹಳ್ಳಿ

‘ಸದನದ ಚರ್ಚೆಗಳು ಸಾಹಿತ್ಯದ ಭಾಗವಾಗಬೇಕು’ ಎಂದು ಪ್ರಧಾನ ವೇದಿಕೆಯಲ್ಲಿ ಸಚಿವ ಎಚ್‌.ಕೆ.ಪಾಟೀಲ ಅವರು ಶನಿವಾರ ಬೆಳಿಗ್ಗೆ ಪ್ರತಿಪಾದಿಸಿದರೆ, ಅದೇ ವೇದಿಕೆಯಲ್ಲಿ ಮಧ್ಯಾಹ್ನ ವಿಮರ್ಶಕ ಪ್ರೊ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು, ‘ಸದನದಲ್ಲಿ ಜನಪ್ರತಿನಿಧಿಗಳು ಬಳಸುತ್ತಿರುವ ಭಾಷೆ ನೋಡಿದರೆ ನಾಚಿಕೆಯಾಗುತ್ತದೆ’ ಎಂದು ವಿಷಾದಿಸಿದರು.

ಹೀಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನ ಪ್ರಧಾನ ವೇದಿಕೆಯು ಸದನದಲ್ಲಿ ಭಾಷಾ ಬಳಕೆ ಕುರಿತ ಪರ–ವಿರುದ್ಧದ ಚರ್ಚೆಗೆ ಸಾಕ್ಷಿಯಾಯಿತು.

‘ಸಾಹಿತ್ಯದಲ್ಲಿ ರಾಜಕೀಯ, ರಾಜಕೀಯದಲ್ಲಿ ಸಾಹಿತ್ಯ’ ಕುರಿತ ಬೆಳಗಿನ ಗೋಷ್ಠಿಯಲ್ಲಿ ವಿಧಾನ ಪರಿಷತ್‌ ಸದಸ್ಯ ಸಿ.ಟಿ.ರವಿ ಅವರೂ ವಿಚಾರ ಮಂಡಿಸಬೇಕಿತ್ತು. ಆದರೆ ಅವರ ವಿರುದ್ಧ ವಿವಿಧ ಸಂಘಟನೆಗಳ ಮುಖಂಡರು ಪ್ರವೇಶ ದ್ವಾರದ ಮುಂಭಾಗದಲ್ಲೇ ‘ಗೋಬ್ಯಾಕ್’ ಚಳವಳಿ ನಡೆಸಿದರು. ಆದರೆ ರವಿ ಗೋಷ್ಠಿಗೆ ಬಂದಿರಲಿಲ್ಲ.


ಬೆಳಿಗ್ಗೆ ಮಾತನಾಡಿದ ಎಚ್‌.ಕೆ. ಪಾಟೀಲ, ‘ಸಾಹಿತ್ಯ ಅಕಾಡೆಮಿಯು ರಾಜಕಾರಣಿಗಳ ಸಾಹಿತ್ಯಕ್ಕೆ, ಅವರ ಉತ್ತಮ ಭಾಷಣಕ್ಕೆ ಪ್ರಶಸ್ತಿ ಕೊಟ್ಟಿಲ್ಲ. ಉತ್ತಮ ತೀರ್ಪು ಬರೆದ ನ್ಯಾಯಾಧೀಶರನ್ನೂ ಪರಿಗಣಿಸಿಲ್ಲ. ಸದನದ ಚರ್ಚೆಗಳು ಕೂಡ ಸಾಹಿತ್ಯದ ಭಾಗವಾಗಬೇಕು. ಈ ಸಮ್ಮೇಳನದಿಂದ ಇಂಥದ್ದೊಂದು ಬದಲಾವಣೆ ಆರಂಭವಾಗಲಿ’ ಎಂದು ಪ್ರತಿಪಾದಿಸಿದರು.

‘ರಾಜಕಾರಣಿಗಳನ್ನು ಸಾಹಿತ್ಯ ಕ್ಷೇತ್ರದಿಂದ ದೂರವಿಡುವ ಪ್ರಯತ್ನ ಮೊದಲಿನಿಂದಲೂ ಇದೆ. ರಾಜಕಾರಣಿಗಳು ಬರೆದದ್ದನ್ನು ಸಾಹಿತ್ಯ ಎಂದು ಪರಿಗಣಿಸುವುದೇ ಇಲ್ಲ. ಈ ಅಸ್ಪೃಶ್ಯತೆ ನಿವಾರಣೆಯಾಗಬೇಕು’ ಎಂದರು.

‘ಸಾಹಿತಿಗಳು ತಪ್ಪನ್ನು ಖಂಡಿಸಬೇಕು, ಸರಿಯಾದ ಮಾರ್ಗದರ್ಶನ ಮಾಡಬೇಕು. ರಾಜಕಾರಣಿಗಳನ್ನು ಎಚ್ಚರಿಸುವ ಕೆಲಸವನ್ನು ಲಂಕೇಶ್ ಮಾಡಿದರು. ಇಂದು ಎಚ್ಚರಿಸುವವರ ಕೊರತೆಯಿಂದ ರಾಜಕಾರಣ ಅಧೋಗತಿಯತ್ತ ಸಾಗುತ್ತಿದೆ. ಪತ್ರಿಕಾ ಕ್ಷೇತ್ರ ಜನರ ಧ್ವನಿಯಾಗಿ ಕೆಲಸ ಮಾಡುತ್ತಿಲ್ಲ. ಮಾಲೀಕರ ಧ್ವನಿಯಾಗಿದೆ. ರಚನಾತ್ಮಕ ಟೀಕೆಗಳ ಮೂಲಕ ವಿಪಕ್ಷ ನಾಯಕರಂತೆ ಪತ್ರಿಕೆಗಳು ಕೆಲಸ ಮಾಡಬೇಕು’ ಎಂದರು.

ಚಳವಳಿಗಳ ಸುವರ್ಣ ಯುಗ: ರಾಜಕೀಯ ಚಿಂತಕ ಬಿ.ಎಲ್‌.ಶಂಕರ್ ಮಾತನಾಡಿ, ‘ಗಾಂಧೀಜಿ ನಾಯಕತ್ವ ಮತ್ತು ಅಂಬೇಡ್ಕರ್ ವಿದ್ವತ್ತು ಸೇರಿ 20ನೇ ಶತಮಾನ ಚಳವಳಿಗಳಿಗೆ ಸುವರ್ಣ ಯುಗ ಎನಿಸಿದೆ. 1924ರಲ್ಲಿ ಬೆಳಗಾವಿಯಲ್ಲಿ ಗಾಂಧಿ ನೇತೃತ್ವದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ‘ಕರ್ನಾಟಕ ಏಕೀಕರಣ’ದಲ್ಲಿ ದೊಡ್ಡ ಪಾತ್ರ ವಹಿಸಿತು. ಕುವೆಂಪು ಅವರು ರಾಜಪ್ರಭುತ್ವದ ವಿರುದ್ಧ ಧ್ವನಿ ಎತ್ತಿದರು. ಸಮಾನತೆ, ಸಾಮರಸ್ಯವನ್ನು ಅವರ ಕಾವ್ಯದಲ್ಲಿ ಕಾಣಬಹುದು’ ಎಂದರು.

ರಾಜಕೀಯ ವಿಶ್ಲೇಷಕ ರವೀಂದ್ರ ರೇಷ್ಮೆ ಮಾತನಾಡಿ, ‘ರಕ್ತಪಾತವಿಲ್ಲದ ಯುದ್ಧವೆಂದರೆ ರಾಜಕಾರಣ, ರಕ್ತಪಾತ ಸಹಿತ ರಾಜಕಾರಣವೆಂದರೆ ಯುದ್ಧ. ರಕ್ತಪಾತವಿಲ್ಲದ ರಾಜಕಾರಣ ಮಾಡಿದರೆ ಅದು ನಮ್ಮ ಸೌಭಾಗ್ಯ. ಜವಾಹರಲಾಲ್ ನೆಹರೂ ಮಗಳಿಗೆ ಬರೆದ ಪತ್ರಗಳು ಅದ್ಭುತ ಸಾಹಿತ್ಯ ವಲ್ಲವೇ? ಗಾಂಧಿ, ನೆಹರೂ, ಅಂಬೇಡ್ಕರ್ ರಾಜಕಾರಣದಲ್ಲಿದ್ದರೂ ಅದ್ಭುತ ಸಾಹಿತ್ಯ ಬರೆದರು. ಬರವಣಿಗೆ–ಬದುಕಿಗೆ ವ್ಯತ್ಯಾಸವಿಲ್ಲದಂತೆ ಬಾಳಿದರು’ ಎಂದು ಶ್ಲಾಘಿಸಿದರು.



ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸಚಿವ ಎಚ್‌.ಕೆ.ಪಾಟೀಲರು ಬರೆದ ಕೃತಿಯನ್ನು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು. ಮಾಜಿ ಶಾಸಕ ಕೆ.ಅನ್ನದಾನಿ, ಚಂದ್ರಕಲಾ ರವಿಕುಮಾರ್, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಚಿಂತಕ ಬಿ.ಎಲ್‌.ಶಂಕರ್, ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ, ಮಾಜಿ ಸಚಿವೆ ಉಮಾಶ್ರೀ, ರಾಜಕೀಯ ವಿಶ್ಲೇಷಕ ರವೀಂದ್ರ ರೇಷ್ಮೆ, ಮಾಜಿ ಶಾಸಕ ಡಿ.ಆರ್‌.ಪಾಟೀಲ, ಶಾಸಕ ಪಿ.ಎಂ. ನರೇಂದ್ರಸ್ವಾಮಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಗೋಷ್ಠಿಯ ಶೀರ್ಷಿಕೆಗೆ ಶಂಕರ್ ಆಕ್ಷೇಪ

‘ಗೋಷ್ಠಿಯ ಶೀರ್ಷಿಕೆ ‘ರಾಜಕೀಯದಲ್ಲಿ ಸಾಹಿತ್ಯ’ ಎನ್ನುವುದು ರಾಜಕಾರಣದಲ್ಲಿ ಸಾಹಿತ್ಯ ಎಂದಾಗಬೇಕಿತ್ತು. ಈ ಬಗ್ಗೆ ನನ್ನ ಆಕ್ಷೇಪವಿದೆ’ ಎಂದು ರಾಜಕೀಯ ಚಿಂತಕ ಬಿ.ಎಲ್‌.ಶಂಕರ್ ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ರಾಜಕೀಯದಲ್ಲಿ ಸಾಹಿತ್ಯ ಇರಬೇಕು. ಆದರೆ, ಸಾಹಿತ್ಯದಲ್ಲಿ ರಾಜಕೀಯ ಇರಬಾರದು. ರಾಜಕೀಯ ಎಂಬ ನೀರಿನ ಮೇಲೆ ಸಾಹಿತ್ಯ ಎಂಬ ದೋಣಿ ತೇಲಿ ದಡ ಮುಟ್ಟಬೇಕು. ದೋಣಿಯೊಳಗೆ ನೀರು ತುಂಬದಂತೆ ಎಚ್ಚರವಹಿಸಬೇಕು’ ಎಂದಾಗ ಸಭಿಕರು ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು.

‘ರಾಜಕಾರಣಿಗಳು ಅಕ್ಷರ ಶತ್ರುಗಳು’

‘ಯಾವ ರಾಜಕಾರಣಿ ಸಾಹಿತ್ಯ, ಸಂಸ್ಕೃತಿ ಜೊತೆ ಸಂಬಂಧ ಇಟ್ಟುಕೊಂಡಿರುತ್ತಾನೋ, ಅವನಿಗೆ ನಾಡಿನ ಮುನ್ನೋಟವಿರುತ್ತದೆ. ಆದರೆ, ಇಂದಿನ ರಾಜಕಾರಣಿಗಳು ಅಕ್ಷರ ಶತ್ರುಗಳಾಗಿದ್ದಾರೆ’ ಎಂದು ವಿಮರ್ಶಕ ಪ್ರೊ.ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

ಪ್ರಧಾನ ವೇದಿಕೆಯಲ್ಲಿ ನಡೆದ ‘ಕರ್ನಾಟಕ–50: ಹಿನ್ನೋಟ–ಮುನ್ನೋಟ; ಕನ್ನಡವೆಂದರೆ ಬರಿ ನುಡಿಯಲ್ಲ’ ಗೋಷ್ಠಿಯಲ್ಲಿ ಮಾತನಾಡಿ, ‘ಸಾಹಿತ್ಯದಿಂದ ರಾಜಕಾರಣಿಗಳು ತುಂಬಾ ದೂರವಿದ್ದಾರೆ. ನನ್ನ ಸ್ನೇಹಿತರೊಬ್ಬರು ರಾಜಕಾರಣಿಯೊಬ್ಬರಿಗೆ ಪುಸ್ತಕ ಉಡುಗೊರೆ ನೀಡಿದಾಗ, ಅವರು ಓದುವುದಿಲ್ಲವೆಂದು ವಾಪಸ್ ನೀಡಿದ್ದರು’ ಎಂದರು.

‘ವಿಧಾನಮಂಡಲದ ಅಧಿವೇಶನಗಳಲ್ಲಿ ಜನಪ್ರತಿನಿಧಿಗಳು ಬಳಕೆ ಮಾಡುತ್ತಿರುವ ಭಾಷೆ ನೋಡಿದರೆ ಅವರಿಗೆ ಸಾಹಿತ್ಯ ಪ್ರಜ್ಞೆ ಇಲ್ಲವೆಂದು ಗೊತ್ತಾಗುತ್ತದೆ. ಕನ್ನಡ ಭಾಷೆ ಇಂಥ ದುಸ್ಥಿತಿಗೆ ಬಂದಿದೆಯೇ ಎಂಬ ನಾಚಿಕೆಯಾಗುತ್ತದೆ’ ಎಂದು ಹೇಳಿದರು.

ಸಿ.ಟಿ ರವಿ ವಿರುದ್ಧ ಗೋಬ್ಯಾಕ್ ಚಳವಳಿ

ವಿಧಾನ ಪರಿಷತ್‌ನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ವಿರುದ್ಧ ಅವಾಚ್ಯ ಶಬ್ದ ಬಳಸಿದ್ದಾರೆ ಎಂದು ಆರೋಪಿಸಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ವಿರುದ್ಧ ಶನಿವಾರ ‘ಗೋ ಬ್ಯಾಕ್ ಚಳವಳಿ’ ನಡೆಯಿತು.

ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಶನಿವಾರ ಆಯೋಜಿಸಿದ್ದ ‘ಸಾಹಿತ್ಯದಲ್ಲಿ ರಾಜಕೀಯ-ರಾಜಕೀಯದಲ್ಲಿ ಸಾಹಿತ್ಯ’ ನಾಲ್ಕನೇ ಗೋಷ್ಠಿಯಲ್ಲಿ ಸಿ.ಟಿ.ರವಿ ಅವರು ‘ಸಾಹಿತ್ಯ ಕೇಂದ್ರಿತವಾದ ಸೈದ್ಧಾಂತಿಕ- ರಾಜಕೀಯ ನಿಲುವುಗಳು’ ಕುರಿತು ವಿಷಯ ಮಂಡನೆ ಮಾಡಬೇಕಿತ್ತು. ಆದರೆ ಅವರು ಬಂದಿರಲಿಲ್ಲ.

ವಿವಿಧ ಸಂಘಟನೆಗಳ ಪದಾಧಿಕಾರಿಗಳು, ‘ಕುವೆಂಪು ನೆಲದಲ್ಲಿ ಸಿ.ಟಿ. ರವಿಗೆ ಜಾಗವಿಲ್ಲ. ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುವ ಯಾವ ನೈತಿಕತೆಯು ನಿನಗಿಲ್ಲ, ವಾಪಸ್ ಹೋಗಬೇಕು’ ಎಂದು ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೃಷ್ಣೇಗೌಡ, ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಎನ್‌.ಎಲ್‌. ಭರತ್‌ರಾಜ್, ವಕೀಲರಾದ ಲಕ್ಷ್ಮಣ ಚೀರನಹಳ್ಳಿ, ರಾಮಯ್ಯ, ಜನವಾದಿ ಮಹಿಳಾ ಸಂಘಟನೆಯ ಡಿ.ಕೆ.ಲತಾ, ಸುಶೀಲಾ, ಮಂಜುಳಾ, ಜನಶಕ್ತಿ ಸಂಘಟನೆಯ ಪೂರ್ಣಿಮಾ, ಸಿದ್ದರಾಜು, ಸಂತೋಷ್, ಎಂ.ವಿ. ಕೃಷ್ಣ ಪಾಲ್ಗೊಂಡಿದ್ದರು.

ರಸಪಾಕ–ರಸಾಸ್ವಾದ

ಸಮ್ಮೇಳನದ ಸ್ಥಳದಲ್ಲಿ ಬಾಡೂಟ

‘ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜತೆಗೆ ಮಾಂಸಾಹಾರವನ್ನೂ ಬಡಿಸಬೇಕು’ ಎಂದು ಆಗ್ರಹಿಸುತ್ತಿದ್ದ ಪ್ರಗತಿಪರ ಸಂಘಟನೆಗಳ ಮುಖಂಡರು ಶನಿವಾರ ಸಮ್ಮೇಳನ ಸ್ಥಳದಲ್ಲಿ ಬಾಡೂಟ ಸವಿದರು.

ಮಧ್ಯಾಹ್ನ ‘ಬಾಡೂಟ ಬಳಗ’ದ ಕೆಲವು ಸದಸ್ಯರು ಸಮ್ಮೇಳನದ ಆಹಾರ ಕೌಂಟರ್‌ನಲ್ಲಿ ನೀಡಿದ ಅನ್ನವನ್ನು, ಮನೆ ಯಿಂದ ತಾವು ತಂದಿದ್ದ ಬೋಟಿ ಗೊಜ್ಜಿನೊಂದಿಗೆ ಸೇವಿಸಿದರು. ಕೆಲವರು ಮೊಟ್ಟೆ ಮತ್ತು ಚಿಕನ್ ಬಿರಿಯಾನಿ ತಂದು ಸೇವಿಸಿದರು. ಕೆಲವರು ಸಮ್ಮೇಳನದಲ್ಲಿ ‘ಇದು ಆಹಾರ ಅಸಮಾನತೆ ಎತ್ತಿ ಹಿಡಿದ ಸಮ್ಮೇಳನ’ ಎಂದ ಬ್ಯಾಡ್ಜ್ ಧರಿಸಿ ಓಡಾಡುತ್ತಿದ್ದರು.



ಸಮ್ಮೇಳನದ ಆಹಾರ ಕೌಂಟರ್‌ನಲ್ಲಿ ಕೊಟ್ಟ ಅನ್ನಕ್ಕೆ ಹೊರಗಿನಿಂದ ತಂದಿದ್ದ ಬೋಟಿ ಗೊಜ್ಜನ್ನು ಕಲೆಸಿಕೊಂಡು ತಿಂದ ಪ್ರಗತಿಪರ ಸಂಘಟನೆಗಳ ಮುಖಂಡರು

ಮಳೆ: ಸಾಹಿತ್ಯಾಸಕ್ತರು ಗಲಿಬಿಲಿ



ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಶನಿವಾರ ಸಂಜೆ 6.30ರಿಂದ 7 ಗಂಟೆಯವರೆಗೆ ಜೋರಾಗಿ ಮಳೆ ಸುರಿದ ಪರಿಣಾಮ ಸಾಹಿತ್ಯಾಸಕ್ತರು ಗಲಿಬಿಲಿಗೊಂಡರು.

ಬೆಳಿಗ್ಗೆಯಿಂದಲೂ ಬಿರು ಬಿಸಿಲಿತ್ತು. ಸಂಜೆ ವೇಳೆಗೆ ದಿಢೀರ್ ಮಳೆ ಬಂದ ಕಾರಣ ಜನ ಆಶ್ರಯ ಹುಡುಕುತ್ತಾ ಓಡಿದರು. ಪ್ರಧಾನ ವೇದಿಕೆ ಮತ್ತು ಪುಸ್ತಕ ಮಳಿಗೆಗಳ ನಡುವಿನ ಜಾಗದಲ್ಲಿ ಅಲ್ಲಲ್ಲಿ ನೀರು ನಿಂತು ರಾಡಿಯಾಯಿತು.

ಮಳೆ ಬಂದರೆ ಸಮ್ಮೇಳನಕ್ಕೆ ಜನರು ಬರಲು ತೊಂದರೆಯಾಗುತ್ತದೆ ಎಂದು ಜಿಲ್ಲಾಡಳಿತ ಮತ್ತು ಕನ್ನಡ ಸಾಹಿತ್ಯ ಪರಿಷತ್ ಡಿಸೆಂಬರ್‌ನಲ್ಲಿ ಸಮ್ಮೇಳನದ ದಿನಾಂಕ ನಿಗದಿಪಡಿಸಿತ್ತು.

ಸಾವಿನ ಬಗ್ಗೆ ಚಿಂತೆ ಇಲ್ಲ: ಗೊರುಚ



‘ಸಾವಿನ ಬಗ್ಗೆ ನನಗೆ ಚಿಂತೆ ಇಲ್ಲ, ಆದ್ದರಿಂದ ಆರೋಗ್ಯ ಕೆಡುವುದಿಲ್ಲ’ ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಹೇಳಿದರು.

ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಸಂಜೆ ನಡೆದ ‘ಅಧ್ಯಕ್ಷರೊಂದಿಗೆ ಸಂವಾದ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮಿತಾಹಾರವೇ ಆರೋಗ್ಯದ ಗುಟ್ಟು, ಜ್ಯೋತಿಷಿಯೊಬ್ಬರು ನಾನು 100 ವರ್ಷ ಬದುಕುವುದಾಗಿ ಹೇಳಿದ್ದಾರೆ. ಅವರ ಮಾತು ಉಳಿಸುವುದಕ್ಕಾಗಿಯಾದರೂ ನಾನು ಬದುಕಬೇಕು’ ಎಂದರು.

‘ಸಮಯದ ಅಭಾವದಿಂದ ನಾಲ್ವರ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ, ಅವರು ಪ್ರಶ್ನೆಗಳನ್ನು ಬರೆದುಕೊಡಬೇಕು, ಅದಕ್ಕೆ ಲಿಖಿತ ಉತ್ತರ ಕೊಡಿಸಲಾಗುವುದು’ ಎಂದು ಘೋಷಿಸಲಾಯಿತು.

ಆಗ ‘ವಿಧಾನಮಂಡಲ ಅಧಿವೇಶನದಲ್ಲಿ ಲಖಿತ ಉತ್ತರ ಕೊಟ್ಟಂತಾಯಿತು’ ಎಂದು ಗೊರುಚ ಹಾಸ್ಯ ಚಟಾಕಿ ಹಾರಿಸಿದರು.

ಸಮಕಾಲೀನ ವಿವಾದಕ್ಕೆ ಕನ್ನಡಿ ಹಿಡಿದು ಗಮನವನ್ನು ಸೆಳೆದ ಸಮಾಜ ಕಲ್ಯಾಣ ಇಲಾಖೆ ಮಳಿಗೆ

‘ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್’

• ಜಯಸಿಂಹ ಆರ್.

‘ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್...’.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಭಾಗವಾಗಿ ಏರ್ಪಡಿಸಲಾಗಿರುವ ವಸ್ತು ಪ್ರದರ್ಶನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮಳಿಗೆ ಎದುರು ಇರಿಸಲಾಗಿರುವ ಬಿ.ಆರ್‌.ಅಂಬೇಡ್ಕರ್ ಅವರ ಪ್ರತಿಮೆ ಕಂಡು ವಿದ್ಯಾರ್ಥಿಗಳು, ಮಕ್ಕಳು ಹೀಗೆ ಉತ್ಸಾಹದಿಂದ ಪ್ರತಿಕ್ರಿಯಿಸುತ್ತಿದ್ದರು.

ಕೆಲವರು, ‘ಜೈ ಭೀಮ್’ ಎಂದರು. ಇನ್ನೂ ಕೆಲವರು, ‘ಅಂಬೇಡ್ಕರ್‌ಗೆ ಜಯವಾಗಲಿ’ ಎಂದರು. ಕೆಲವರು ಅಂಬೇಡ್ಕರ್ ಪ್ರತಿಮೆಯ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡರು..

ಅಂಬೇಡ್ಕರ್ ಹೆಸರನ್ನು ಪದೇ ಪದೇ ಹೇಳುವುದರ ಕುರಿತು ಕೇಂದ್ರ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಗೆ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಅದರ ಬೆನ್ನಲ್ಲೇ ಸಂಸತ್ತಿನ ಒಳಗೂ–ಹೊರಗು ಜಟಾಪಟಿ–ಪ್ರತಿಭಟನೆಗಳು ನಡೆದವು. ಈ ಹೊತ್ತಿನಲ್ಲೇ ಸಾಹಿತ್ಯ ಸಮ್ಮೇಳನದಲ್ಲಿ ಇರಿಸಿ ರುವ ಅಂಬೇಡ್ಕರ್ ಅವರ ಪ್ರತಿಮೆ ಜನಾಕರ್ಷಣೆಯ ಕೇಂದ್ರವಾಗಿ ಬದಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆಯ ಮಳಿಗೆಯ ಎದುರು ಸಣ್ಣ ಪೀಠದ ಮೇಲೆ, ಕುರ್ಚಿಯಲ್ಲಿ ಕೂತಿರುವ ಭಂಗಿಯ ಅಂಬೇಡ್ಕರ್ ಅವರ ಪ್ರತಿಮೆ ಇರಿಸಲಾಗಿದೆ. ಪ್ರತಿಮೆಯ ಹಿಂದೆ ಅಶೋಕನ ಚಕ್ರವೂ ಇದೆ. ಅಲ್ಲಿ ಜನರ ನಡೆವಳಿಕೆಯು ಅಂಬೇಂಡ್ಕರ್ ಕುರಿತ ಅವರ ಪ್ರೀತಿ ಮತ್ತು ಅಭಿಮಾನದ ಪ್ರತೀಕವೆಂಬಂತೆ ಕಾಣುತ್ತಿತ್ತು.

ಈ ಪ್ರತಿಮೆಯ ಎದುರು ನಿಂತು ಹಲವರು ಸೆಲ್ಫಿ ತೆಗೆದುಕೊಳ್ಳುತ್ತಿದ್ದರೆ, ಕೆಲವರು ‘ಗ್ರೂಪ್ ಫೋಟೊ’ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಚಿತ್ರ ತೆಗೆಸಿಕೊಳ್ಳುವವರು ತಮ್ಮ ಸರದಿಗಾಗಿ ಕಾಯಬೇಕಾದ ಸ್ಥಿತಿ ಬಂದರೂ, ಎಲ್ಲರೂ ತಾಳ್ಮೆಯಿಂದ ಸಹಕರಿಸುತ್ತಿದ್ದರು.

ಶಾಲಾ–ಕಾಲೇಜು ಮಕ್ಕಳಷ್ಟೇ ಅಲ್ಲ. ಸಾರ್ವಜನಿಕರು, ಗೃಹಿಣಿಯರು, ವೃದ್ಧರೂ ಪ್ರತಿಮೆ ಎದುರು ನಿಂತು ಚಿತ್ರ ತೆಗೆಸಿಕೊಂಡು ಅಂಬೇಡ್ಕರ್ ಪ್ರೀತಿ ಮೆರೆದರು. ಮಳವಳ್ಳಿಯ ಜಿ.ಎಂ ಸ್ಟ್ರೀಟ್‌ನ ಸುನಂದಮ್ಮ ಅವರು ಪ್ರತಿಮೆಯ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡರು. ಅವರ ಹಿಂದೆ ನಿಂತಿದ್ದ ಇತರ ಮಹಿಳೆಯರು ಮತ್ತು ಮಕ್ಕಳೂ ಅವರನ್ನೇ ಅನುಸರಿಸಿದರು. ಜತೆಗೆ ಅಂಬೇಡ್ಕರ್, ಬಾಬಾ ಸಾಹೇಬ್, ಸಂವಿಧಾನ ಶಿಲ್ಪಿ ಎಂಬ ಘೋಷಣೆಗಳು ಮರುಕಳಿಸುತ್ತಲೇ ಇದ್ದವು.

ಚಿತ್ರ ತೆಗೆಸಿಕೊಳ್ಳುವುದು, ಪ್ರತಿಮೆಗೆ ನಮಸ್ಕರಿಸುವುದು ನಡೆದೇ ಇತ್ತು. ಅಲ್ಲಿ ವ್ಯಕ್ತವಾಗುತ್ತಿದ್ದ ಪ್ರೀತಿಯನ್ನು ಉದ್ದೀಪಿಸುವಂತೆ ಯುವಕರ ಗುಂಪೊಂದು, ‘ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್’ ಎಂದು ಆರು ಬಾರಿ ಕೂಗಿತು. ಪ್ರತಿಮೆ ಬಳಿ ಫರ್ಲಾಂಗು ಉದ್ದವಿದ್ದ ಸಾಲಿನಲ್ಲೂ ಆ ಹೆಸರು ಅನುರಣಿಸಿತು.

ಸಂವಿಧಾನ ಪ್ರಸ್ತಾವನೆ ಓದು: ಸಮಾಜ ಕಲ್ಯಾಣ ಇಲಾಖೆಯ ಮಳಿಗೆಯಲ್ಲಿ ಸಂವಿಧಾನದ ಪ್ರಸ್ತಾವನೆಯ ಚಿತ್ರವನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಶಾಲಾ ಮಕ್ಕಳನ್ನು ಕರೆತಂದಿದ್ದ ಶಿಕ್ಷಕರು, ಸಂವಿಧಾನದ ಪ್ರಸ್ತಾವನೆಯನ್ನು ಓದುವಂತೆ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

‘ಭಾರತೀಯ ಪ್ರಜೆಗಳಾದ ನಾವು...’ ಎಂದು ಗಟ್ಟಿಯಾಗಿ ಪ್ರಸ್ತಾವನೆ ಓದಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಮೆಚ್ಚುಗೆ ಗಳಿಸಿದರು. ಅದರಿಂದ ಸ್ಫೂರ್ತಿ ಪಡೆದ ಕೆಲ ಸಾರ್ವಜನಿಕರೂ ಗಟ್ಟಿ ದನಿಯಲ್ಲಿ ಪ್ರಸ್ತಾವನೆಯನ್ನು ಓದಿದರು.



ಸಮ್ಮೇಳನದ ಅಂಗವಾಗಿ ಸಮಾಜ ಕಲ್ಯಾಣ ಇಲಾಖೆಯ ಮಳಿಗೆಯಲ್ಲಿ ಇಡಲಾಗಿರುವ ಬಿ.ಆರ್‌.ಅಂಬೇಡ್ಕರ್ ಪ್ರತಿಮೆ ಎದುರು ಶನಿವಾರ ಚಿತ್ರ ತೆಗೆಸಿಕೊಂಡು ಸಂಭ್ರಮಿಸಿದ ಮಹಿಳೆಯರು –ಪ್ರಜಾವಾಣಿ ಚಿತ್ರ

‘ಟೀಕಿಸುವವರಿಗೂ ಅಧಿಕಾರ’



ಆಕಾಶ್ ಎನ್‌.ಕೆ.



ರವಿಸಿಂಗೆ

ಅಂಬೇಡ್ಕರ್ ಪ್ರತಿಮೆ ಎದುರು ಎಲ್ಲರೂ ಫೋಟೊ ತೆಗೆಸಿಕೊಳ್ಳುತ್ತಿದ್ದಾರೆ. ನಮ್ಮ ಬಳಿ ಫೋನ್ ಇಲ್ಲ, ಫೋಟೊವೂ ಇಲ್ಲ. ಸಂವಿಧಾನ ಕೊಟ್ಟ, ಆ ಮೂಲಕ ಅಸ್ಪೃಶ್ಯತೆ ಹೋಗಲಾಡಿಸಿದ ಮತ್ತು ಮೀಸಲಾತಿ ಮೂಲಕ ಅವಕಾಶ ಮಾಡಿಕೊಟ್ಟ ಅಂಬೇಡ್ಕರ್ ಅವರನ್ನು ಸ್ಮರಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಅವರ ಹೆಸರು ಹೇಳುವುದನ್ನು ಆಡಿಕೊಂಡವರಿಗೂ ಸಂವಿಧಾನದ ಮೂಲಕವೇ ಅಧಿಕಾರ ದೊರೆತಿದ್ದು ಎಂಬುದನ್ನು ಅವರು ಮರೆಯಬಾರದು.

ಆಕಾಶ್ ಎಸ್‌.ಕೆ., ರವಿಸಿಂಗೆ, ಪಿಯುಸಿ ವಿದ್ಯಾರ್ಥಿಗಳು, ಮಳವಳ್ಳಿ ಸಿದ್ಧಾರ್ಥ ಕಾಲೇಜು



ಜನಸಾಗರ ಮಂಡ್ಯದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಶನಿವಾರ ಜನಸಾಗರವೇ ಹರಿದು ಬಂದಂತೆ ಕಂಡಿತು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ತಳಸಮುದಾಯದಿಂದ ಸರ್ಕಾರಿ ಶಾಲೆ ಉಳಿವು

• ಮೋಹನ್ ರಾಗಿಮುದ್ದನಹಳ್ಳಿ

‘ತಳ ಸಮುದಾಯದ ಮಕ್ಕಳು ತಮ್ಮ ಹೆಗಲ ಮೇಲೆ ಕನ್ನಡ ಭಾಷೆಯನ್ನು ಹೊತ್ತು ಸಾಗುತ್ತಿರುವುದರಿಂದಲೇ ಕನ್ನಡ ಶಾಲೆಗಳು ಉಳಿದಿವೆ’ ಎಂಬ ಪ್ರತಿಪಾದನೆಗೆ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆಯು ಶನಿವಾರ ಸಾಕ್ಷಿಯಾಯಿತು.

‘ದಲಿತ ಸಾಹಿತ್ಯ ನೆಲೆಗಳು’ ಶೀರ್ಷಿಕೆಯಲ್ಲಿ ನಡೆದ ಗೋಷ್ಠಿಯಲ್ಲಿ, ‘ಕನ್ನಡ ಸಂವರ್ಧನೆಯಲ್ಲಿ ತಳಸಮುದಾಯಗಳ ಪಾತ್ರ’ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಚಲುವರಾಜು ಮಾತನಾಡಿದರು.

‘ಕರ್ನಾಟಕ ದಲಿತ ಸಂಘರ್ಷ ಸಮಿತಿ ಹುಟ್ಟಿ, ಸಿದ್ದಲಿಂಗಯ್ಯ ಅವರ ನೆಲಮಾದಿಗರ ಹಾಡು ರಚನೆಯಾಗಿ ಬರೋಬ್ಬರಿ 50 ವರ್ಷಗಳಾಗಿವೆ. ದಲಿತ ಚಳವಳಿಯ ಹುಟ್ಟು ಮತ್ತು ಮಹತ್ವದ ಕುರಿತು ಚರ್ಚೆಗೆ, ಆತ್ಮಾವಲೋಕನಕ್ಕೆ ಸಾಹಿತ್ಯ ಸಮ್ಮೇಳನ ವೇದಿಕೆಯಾಗಿದ್ದು ವಿಶೇಷ’ ಎಂದು ಜಯದೇವಿ ಗಾಯಕವಾಡ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, ‘ದಲಿತ ಸಾಹಿತ್ಯವು ನೋವು ಹಾಗೂ ಕಿಚ್ಚಿನ ರೂಪದಲ್ಲಿ ಹುಟ್ಟಿಕೊಂಡ ಪದಗಳು’ ಎಂದರು. ‘ದಲಿತ ಸಂಘಟನೆಗಳ ಅಸ್ಮಿತೆ’ ಕುರಿತು ಎಂ.ವೆಂಕಟಸ್ವಾಮಿ ವಿಷಯ ಮಂಡಿಸಿದರು.

ರಾಜ್ಯದಲ್ಲಿ ಬಾಲಾಪರಾಧ ಹೆಚ್ಚಳ; ಕಳವಳ

‘ರಾಜ್ಯದಲ್ಲಿ ಮೂರು ವರ್ಷಗಳಲ್ಲಿ’ 9,871 ಬಾಲಾಪರಾಧ ಪ್ರಕರಣಗಳು ದಾಖಲಾಗಿದ್ದು, ಸಮಾಜವು ದುಸ್ಥಿತಿಗೆ ಹೋಗುತ್ತಿರುವುದರ ಸಂಕೇತವಾಗಿದೆ. ಅಂಕ ಆಧಾರಿತ ಶಿಕ್ಷಣಕ್ಕೆ ಜೋತುಬಿದ್ದಿರುವ ಶಿಕ್ಷಕರು ಮತ್ತು ಪೋಷಕರು ಮಕ್ಕಳಿಗೆ ಜೀವನ ಮೌಲ್ಯ ಕಲಿಸಿ, ಸಂಸ್ಕಾರ ತುಂಬುವ ಕೆಲಸ ಮಾಡಬೇಕು’ ಎಂದು ಮಕ್ಕಳ ಸಾಹಿತಿ ಟಿ.ಎಸ್‌.ನಾಗರಾಜಶೆಟ್ಟಿ ಅಭಿಪ್ರಾಯಪಟ್ಟರು.

87ನೇ ನುಡಿಜಾತ್ರೆಯ ಸಂಚಿಹೊನ್ನಮ್ಮ ಮತ್ತು ಕಾದಂಬರಿ ಸಾಮ್ರಾಜ್ಞಿ ತ್ರಿವೇಣಿ ವೇದಿಕೆಯಲ್ಲಿ ಶನಿವಾರ ನಡೆದ ‘ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯದ ಪಾತ್ರ’ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಕೊಲೆ, ದರೋಡೆ, ಅತ್ಯಾಚಾರ ಪ್ರಕರಣಗಳಲ್ಲಿ ಮಕ್ಕಳು ಭಾಗಿಯಾಗುತ್ತಿರುವುದು ಕಳವಳಕಾರಿ ಅಂಶ. ಮೊಬೈಲ್, ಕಂಪ್ಯೂಟರ್‌ಗಳ ದುಶ್ಚಟದಿಂದ ಮಕ್ಕಳನ್ನು ಪಾರು ಮಾಡಬೇಕು. ಪಠ್ಯ ಬಿಟ್ಟು ಬೇರೆ ಏನನ್ನೂ ಓದಲು ಪೋಷಕರು ಬಿಡುತ್ತಿಲ್ಲ. ಉತ್ತಮ ದಾರಿ ತೋರಿದರೆ ಮಕ್ಕಳು ಒಳ್ಳೆಯ ಪೌರರಾಗುತ್ತಾರೆ ಎಂದರು.

‘ಕನ್ನಡದ ಹೆಸರಲ್ಲಿ ವಿಭಜನೆ’

ಗೋಷ್ಠಿಯಲ್ಲಿ ಲೇಖಕ ಸುಧಾಕರ್ ಹೊಸಹಳ್ಳಿ ಕಳವಳ

‘ಕನ್ನಡದ ಹೆಸರಿನಲ್ಲಿ ಭಾರತವನ್ನು ಒಡೆಯುವ ಕೆಲಸವಾಗುತ್ತಿದೆ’ ಎಂದು ಲೇಖಕ ಸುಧಾಕರ್ ಹೊಸಹಳ್ಳಿ ಹೇಳಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಿ ಹೊನ್ನಮ್ಮ ಮತ್ತು ಕಾದಂಬರಿ ಸಾಮ್ರಾಜ್ಞಿ ತ್ರಿವೇಣಿ ವೇದಿಕೆಯಲ್ಲಿ ಶನಿವಾರ ನಡೆದ ‘ಯುವಜನ ಮತ್ತು ಸಬಲೀಕರಣ’ ಗೋಷ್ಠಿಯ ಆಶಯ ನುಡಿಗಳನ್ನಾಡಿದ ಅವರು, ‘ಕನ್ನಡಿಗರು ಎಂದರೆ ಯಾರು ಎಂಬುದರ ಬಗ್ಗೆ ಗೊಂದಲಗಳಿವೆ. ಗೋಷ್ಠಿಯಲ್ಲಿ ಅದಕ್ಕೆ ಪರಿಹಾರ ದೊರೆಯುತ್ತದೆಯೇ ಎಂಬುದನ್ನು ನೋಡಬೇಕು’ ಎಂದರು.

‘ಭಾರತವಿಲ್ಲದೆ ಕನ್ನಡಕ್ಕೆ ಅಸ್ತಿತ್ವವೇ ಇಲ್ಲ. ಕನ್ನಡವಿಲ್ಲದೆ ಭಾರತಕ್ಕೆ ಶಕ್ತಿಯಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಕನ್ನಡದ ಹೆಸರಿನಲ್ಲಿ ದೇಶವನ್ನು ಒಡೆಯುವ ವಿಚಾರಗಳಿಗೆ, ವಿಧ್ವಂಸಕ ಸಾಹಿತ್ಯಗಳಿಗೆ ಸಮ್ಮೇಳನ ವೇದಿಕೆಯಾಗಬಾರದು. ಕೇಂದ್ರ ಸರ್ಕಾರ ಹಣ ನೀಡಿದರಷ್ಟೇ ಎಲ್ಲ ಕೆಲಸಗಳೂ ಆಗುವುದಿಲ್ಲ. ಬದಲಿಗೆ ಇಲ್ಲಿನ ಜನಪ್ರತಿನಿಧಿಗಳ, ನೀತಿ ನಿರೂಪಕರ, ಯುವಜನರ ಇಚ್ಛಾಶಕ್ತಿಯೂ ಮುಖ್ಯವಾಗುತ್ತದೆ’ ಎಂದರು.

ಇದಕ್ಕೂ ಮುನ್ನ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ್ದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮುರಳೀಧರ ಹಾಲಪ್ಪ ಅವರು, ‘ಕೇಂದ್ರ ಸರ್ಕಾರದ ನೇಮಕಾತಿ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಯುತ್ತವೆ. ಹೀಗಾಗಿಯೇ ಹಿಂದಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಾರೆ. ಕನ್ನಡದಲ್ಲೂ ಪರೀಕ್ಷೆ ನಡೆದರೆ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಾರೆ’ ಎಂದಿದ್ದರು.

‘ಈ ಬಗ್ಗೆ ಬೇಡಿಕೆ ಸಲ್ಲಿಸಿದಾಗಲೆಲ್ಲಾ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರು, ಕಾರ್ಮಿಕ ಸಚಿವರು ಕನ್ನಡದಲ್ಲೂ ಪರೀಕ್ಷೆ ನಡೆಸುತ್ತೇವೆ ಎಂದು ಭರವಸೆ ನೀಡುತ್ತಾರೆ. ಆದರೆ ಅದು ಅನುಷ್ಠಾನವಾಗುವುದಿಲ್ಲ. ಇನ್ನು ಮುಂದೆ ಕೇಂದ್ರದ ಮೇಲೆ ಒತ್ತಡ ಹೇರುವ ಕೆಲಸವಾಗಬೇಕು. ಯುವಜನ ಮತ್ತು ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರವು ದಕ್ಷಿಣದ ರಾಜ್ಯಗಳಿಗೆ ಅತ್ಯಂತ ಕಡಿಮೆ ಅನುದಾನ ನೀಡುತ್ತಿದೆ. ಅದನ್ನು ಹೆಚ್ಚಿಸುವಂತೆ ಒತ್ತಡ ಹೇರಬೇಕು. ಈ ಸಂಬಂಧ ಸಮ್ಮೇಳನದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು’ ಎಂದು ಕರೆ ನೀಡಿದ್ದರು.

‘ಸನಾತನಿ ಕುವೆಂಪು’

‘ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಮುಖ್ಯಮಂತ್ರಿ, ಬಾಬರಿ ಮಸೀದಿಯನ್ನು ಒಡೆದದ್ದು ಜಾತ್ಯತೀತ ನಿಲುವನ್ನು ಒಡೆದಂತೆಯೇ ಎಂದ ಎ.ಎನ್‌. ಮೂರ್ತಿರಾಯರ ನಾಡು ಇದು ಎಂದಿದ್ದರು. ಆದರೆ, ರಾಮ ಮತ್ತು ರಾಮಾಯಣದ ಅಸ್ತಿತ್ವವನ್ನು ಒಪ್ಪಿಕೊಂಡ ಸನಾತನಿ ಕುವೆಂಪು ಅವರಿದ್ದ ನಾಡೂ ಸಹ ಹೌದು’ ಎಂದು ಸುಧಾಕರ ಹೊಸಹಳ್ಳಿ ಪ್ರತಿಪಾದಿಸಿದರು.

‘ನಾವೆಲ್ಲಾ ಏನು ಮಾತನಾಡಿದರೂ ಯುವಜನ ಅವರಿಗೆ ಅನ್ನಿಸಿದ್ದನ್ನು ಮಾಡುತ್ತಾರೆ. ದೇಶದ ಪರಂಪರೆಯನ್ನು ತಿರಸ್ಕರಿಸಲಾಗುತ್ತಿದೆ. ಹಾಗೆ ಮಾಡಿದರೆ, ಯುವಜನ ‘ಸ್ಪ್ಲಿಟ್ ಪರ್ಸನಾಲಿಟಿ’ಗೆ ತುತ್ತಾಗುತ್ತಾರೆ. ಅದನ್ನು ತಪ್ಪಿಸಬೇಕೆಂದರೆ ಪರಂಪರೆಯನ್ನು ಗೌರವಿಸಿ, ಅದರ ಒಳಿತುಗಳನ್ನು ಜೋಡಿಸಬೇಕು’ ಎಂದರು. ‘ಯುವಜನ ಮಾನಸಿಕ ದೃಢತೆಗಾಗಿ ವಿವೇಕಾನಂದ ಹಾಗೂ ಸಾವರ್ಕರ್ ಅವರನ್ನು ಅನುಸರಿಸಬೇಕು’ ಎಂದು ಕರೆ ನೀಡಿದರು.

ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಅಭಿಮತ

ಜಲ ಆಯೋಗ ರಚನೆ ಅನಿವಾರ್ಯ

ಪ್ರಜಾವಾಣಿ ವಾರ್ತೆ

‘ಗಣಿಗಾರಿಕೆಯಿಂದ ಕೆ.ಆರ್‌.ಎಸ್‌. ಅಣೆಕಟ್ಟೆಯನ್ನು ರಕ್ಷಿಸಿಕೊಳ್ಳಬೇಕಾಗಿದೆ. ರಾಜ್ಯದ ಪಾಲಿನ ನೀರಿನ ಹಕ್ಕಿಗಾಗಿ ಜಲ ಆಯೋಗ ರಚನೆ ಅನಿವಾರ್ಯ. ನೆಲ– ಜಲದ ಬಗ್ಗೆ ಜನರಲ್ಲಿ ಸಾಕ್ಷರತೆ ಮೂಡಿಸುವುದು ಅಗತ್ಯ’ ಎಂದು ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಅಭಿಪ್ರಾಯಪಟ್ಟರು.

ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಶನಿವಾರ ನಡೆದ ‘ನೆಲ– ಜಲ ಸಾಕ್ಷರತೆ: ಅವಲೋಕನ’ ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ರಾಜ್ಯದ ಪಾಲಿನ ನೀರಿನ ಅಗತ್ಯ ಮತ್ತು ಜಲಹಕ್ಕಿನ ಪ್ರಾಧಿಕಾರ ಮತ್ತು ಸಮಿತಿಗೆ ಅರ್ಥೈಸಬೇಕು. ಮುಂಗಾರು ಮಳೆ ನೀರನ್ನೇ ನಾವು ಸಂಗ್ರಹಿಸಿಟ್ಟುಕೊಂಡು ನೀರಾವರಿ ಮತ್ತು ಕುಡಿಯುವ ನೀರಿಗೆ ಬಳಸಿಕೊಳ್ಳಬೇಕು. ರಾಜ್ಯದ ನೀರು ಇಲ್ಲಿಯೇ ಉಳಿಯಬೇಕು. ನಮ್ಮ ಪಾಲಿನ ನೀರಿನ ಹಕ್ಕನ್ನು ಬಳಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜಲ ಆಯೋಗ ರಚನೆಗೆ ರಾಜ್ಯದ ಜನಪ್ರತಿನಿಧಿಗಳು ಮುಂದಾಗಬೇಕು. ಜನರಿಗೂ ಜಲ ಸಾಕ್ಷರತೆ ಮೂಡಿಸಬೇಕು’ ಎಂದರು.

‘ರಾಜ್ಯಕ್ಕೆ ಕಾವೇರಿ ಅಚ್ಚುಕಟ್ಟು ಪ್ರದೇಶದ ಕೇವಲ 40 ಸಾವಿರ ಹೆಕ್ಟರ್‌ನಲ್ಲಿ ಮಾತ್ರ ಕಬ್ಬು ಬೆಳೆಯಲು ಅವಕಾಶ ನೀಡಲಾಗಿದೆ. ಇದು ಸರಿಯಲ್ಲ. ರಾಜ್ಯದ ಜಲಾಶಯಗಳಿರುವುದು ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಗೆ ನೀರು ಕೊಡಲು ಎಂದು ಕಾವೇರಿ ನದಿ ನೀರು ನಿರ್ವಹಣಾ ಸಮಿತಿ, ಕಾವೇರಿ ನದಿ ನೀರು ಪ್ರಾಧಿಕಾರವು ಅಂದುಕೊಂಡಂತಿದೆ’ ಎಂದು ವಿಷಾದಿಸಿದರು.

ಕಾವೇರಿ ಅಚ್ಚುಕಟ್ಟಿನ ಕೆರೆಕಟ್ಟೆಗಳ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ ಎಂ.ಎನ್‌. ತಿಮ್ಮೇಗೌಡ, ‘ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯ ಕೆರೆಗಳು 47 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯವಿದ್ದರೂ, ಬಹುತೇಕ ಕೆರೆಕಟ್ಟೆಗಳಲ್ಲಿ ಹೂಳು ತುಂಬಿವೆ’ ಎಂದು ವಿಷಾದಿಸಿದರು.



ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಶನಿವಾರ ‘ನೆಲ–ಜಲ ಸಾಕ್ಷರತೆ: ಅವಲೋಕನ’ ಗೋಷ್ಠಿಯಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರೊಂದಿಗೆ ಕ್ಯಾಪ್ಟನ್ ರಾಜಾರಾವ್ ಮಾತುಕತೆ ನಡೆಸಿದ ಕ್ಷಣ. ಡಾ.ಎಂ.ಎನ್‌.ತಿಮ್ಮೇಗೌಡ, ಕೃಷ್ಣ ಕೊಲ್ಹಾರಕುಲಕರ್ಣಿ, ಎ.ಬಿ.ಪಾಟೀಲ ಪಾಲ್ಗೊಂಡಿದ್ದರು

ಕೃಷ್ಣಾ ನದಿಯೊಂದರಿಂದಲೇ ಇಡೀ ಕರ್ನಾಟಕದ ಜನ ಬದುಕಬಹುದು. ಆದರೆ, ನಾನಾ ಕಾರಣಗಳಿಂದ ಅದು ಸಾಧ್ಯವಾಗುತ್ತಿಲ್ಲ. 40 ವರ್ಷಗಳ ಮಹದಾಯಿ ಯೋಜನೆಯದು ತ್ರಿಶಂಕು ಸ್ಥಿತಿ. ಮೂರೂವರೆ ಟಿಎಂಸಿ ನೀರನ್ನು ಕುಡಿಯುವ ನೀರಿಗಾಗಿ ಬಳಸಿಕೊಳ್ಳಲು ಹೋರಾಟ ನಡೆಸಬೇಕಿದೆ

ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಇತಿಹಾಸಕಾರ

ಮಾನವ ನೆಲೆಸುವ ಜಾಗದಲ್ಲಿ ಸಂಸ್ಕೃತಿಗಳು ಹುಟ್ಟುತ್ತಿದ್ದವು. ಆದರೀಗ ಜನಸಂಖ್ಯಾ ಸ್ಫೋಟದಿಂದಾಗಿ ಬರಗಾಲ, ಮರಭೂಮಿ ಹುಟ್ಟುವ ಪರಿಸ್ಥಿತಿ ಬಂದೊದಗಿದೆ. ಮಣ್ಣು ಬರಡಾದರೆ ಕಣ್ಣು ಕುರುಡಾಗುತ್ತದೆ, ಮಣ್ಣೇ ಮಾಣಿಕ್ಯ-ನೀರೇ ಅಮೃತ ಎಂಬ ಮಾತಿದೆ. ಮಕ್ಕಳಿಗೆ ಶಾಲಾ ಹಂತದಲ್ಲಿ ನೆಲ-ಜಲದ ಬಗ್ಗೆ ಅರಿವು ಮೂಡಿಸಬೇಕಿದೆ

ಡಾ.ಎ.ಬಿ. ಪಾಟೀಲ, ಜಲತಜ್ಞ

ಭಾನುವಾರ, ಡಿಸೆಂಬರ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 353 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಅಘನಾಶಿನಿ ನದಿ ಅರಬ್ಬೀ ಸಮುದ್ರ ಸೇರುವ ಅಳಿವೆಗೆ ರಾಮ್‌ಸಾರ್ ತಾಣ ಎಂಬ ಜಾಗತಿಕ ಮನ್ನಣೆ ದೊರೆತಿದೆ



ಕರ್ನಾಟಕ ಸೇರಿ ಆರು ರಾಜ್ಯಗಳ ಘಟ್ಟಪ್ರದೇಶದ 25 ಜಿಲ್ಲೆಗಳಲ್ಲಿ 58.22 ಚ.ಕಿ.ಮೀ ಕಾಡು ಬರಡು

ಪಶ್ಚಿಮಘಟ್ಟದಲ್ಲಿ ಭಾರಿ ಅರಣ್ಯ ನಾಶ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪರಿಸರ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟದ ಕಳೆದ ಹತ್ತು ವರ್ಷಗಳಲ್ಲಿ 58.22 ಚದರ ಕಿ.ಮೀ ಅರಣ್ಯ ನಾಶವಾಗಿದೆ ಎಂದು ಡೆಹ್ರಾಡೂನ್‌ನಲ್ಲಿ ಶನಿವಾರ ಬಿಡುಗಡೆಯಾದ ಭಾರತೀಯ ಅರಣ್ಯದ ಸ್ಥಿತಿಗತಿ (ಐಎಸ್‌ಎಫ್) ವರದಿ ಹೇಳಿದೆ.

ಈ ಅವಧಿಯಲ್ಲಿ ಪಶ್ಚಿಮ ಘಟ್ಟಗಳಲ್ಲಿ, ಅತ್ಯಂತ ದಟ್ಟಾರಣ್ಯಗಳು 3,465.12 ಚ.ಕಿ.ಮೀಗಳಷ್ಟು ಹೆಚ್ಚಾದರೆ, ಮಧ್ಯಮ ದಟ್ಟಾರಣ್ಯಗಳು ಮತ್ತು ತೆರೆದ ಅರಣ್ಯಗಳು ಕ್ರಮವಾಗಿ 1,043.23 ಚದರ ಕಿ.ಮೀ ಮತ್ತು 2,480.11 ಚ.ಕಿ.ಮೀ ಕಡಿಮೆಯಾಗಿವೆ ಎಂದು ಭಾರತೀಯ ಅರಣ್ಯ ಸಮೀಕ್ಷೆ ಸಿದ್ಧಪಡಿಸಿದ ಈ ವರದಿ ತಿಳಿಸಿದೆ.

ಪಶ್ಚಿಮಘಟ್ಟ ವ್ಯಾಪ್ತಿಯ ಆರು ರಾಜ್ಯಗಳ 45 ಘಟ್ಟ ಜಿಲ್ಲೆಗಳ ಪೈಕಿ ಮಧ್ಯಮ ದಟ್ಟಾರಣ್ಯ ಹಾಗೂ ತೆರೆದ ಅರಣ್ಯ ಹೊಂದಿದ 25 ಜಿಲ್ಲೆಗಳು ಅರಣ್ಯ ನಾಶಕ್ಕೆ ಸಾಕ್ಷಿಯಾಗಿವೆ. ಗರಿಷ್ಠ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಕಳೆದುಕೊಂಡಿರುವ ಪ್ರದೇಶಗಳಾಗಿ ತಮಿಳುನಾಡಿನ ನೀಲಗಿರಿ (123 ಚದರ ಕಿ.ಮೀ.ಗಿಂತ ಹೆಚ್ಚು), ಕೇರಳದ ಇಡುಕ್ಕಿ (98 ಚ. ಕಿ.ಮೀ), ಮಹಾರಾಷ್ಟ್ರದ ಪುಣೆ (83 ಚ.ಕಿ.ಮೀ) ಹಾಗೂ ಕರ್ನಾಟಕದ ಶಿವಮೊಗ್ಗ ಜಿಲ್ಲೆಗಳನ್ನು (74.5 ಚ.ಕಿ.ಮೀ) ಗುರುತಿಸಲಾಗಿದೆ.

ಪಶ್ಚಿಮಘಟ್ಟ ಪ್ರದೇಶದಲ್ಲಿ, ನೀಲಗಿರಿ ಪ್ರದೇಶವು 123 ಚದರ ಕಿಲೋ ಮೀಟರ್‌ಗಳಷ್ಟು ದೊಡ್ಡ ಪ್ರಮಾಣದಲ್ಲಿ ಕ್ಷೀಣಿಸಿರುವುದನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಾದ್ಯಂತ ಹಬ್ಬಿರುವ ನೀಲಗಿರಿ ಪರ್ವತ ಶ್ರೇಣಿಯು ಜನಪ್ರಿಯ ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾಗಿದೆ.

ಪಶ್ಚಿಮಘಟ್ಟದ ವ್ಯಾಪ್ತಿಯ ಕೇರಳದ ವಯನಾಡ್‌ನಲ್ಲಿ ಈ ವರ್ಷದ ಆರಂಭದಲ್ಲಿ ಸಂಭವಿಸಿದ ಭೀಕರ ಭೂಕುಸಿತಗಳು ನೂರಾರು ಜನರನ್ನು ಬಲಿ ತೆಗೆದುಕೊಂಡಿವೆ.

ರಾಜ್ಯಗಳ ವಿರೋಧದ ನಡುವೆ 2013ರಿಂದಲೂ ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಕಾನೂನು ರಕ್ಷಣೆ ನೀಡಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ.

9ನೇ ಪುಟ ನೋಡಿ



ದೇಶದಲ್ಲಿ 1,445 ಚ.ಕಿ.ಮೀ. ಅರಣ್ಯಹೆಚ್ಚಳ

ಮೆಗಾಸಿಟಿಗಳ ಅರಣ್ಯ ಪಟ್ಟಿಯಲ್ಲಿ ಬೆಂಗಳೂರು

ಒಂದು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಯನ್ನು ಹೊಂದಿರುವ ಆರು ಮೆಗಾಸಿಟಿಗಳ ಅರಣ್ಯ ವ್ಯಾಪ್ತಿಯನ್ನು ವರದಿಯು ಪಟ್ಟಿಮಾಡಿದೆ.

ದೆಹಲಿಯು 194 ಚ.ಕಿ.ಮೀ ಅರಣ್ಯಗಳೊಂದಿಗೆ ಅಗ್ರಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಮುಂಬೈ (110 ಚ.ಕಿ.ಮೀ), ಬೆಂಗಳೂರು (89 ಚ.ಕಿ.ಮೀ) ಮತ್ತು ಹೈದರಾಬಾದ್ (80 ಚ.ಕಿ.ಮೀ) ಇವೆ. ಕೋಲ್ಕತ್ತ (2 ಚ.ಕಿ.ಮೀ) ಕಡಿಮೆ ಅರಣ್ಯ ವ್ಯಾಪ್ತಿ ಹೊಂದಿರುವ ನಗರವೆನಿಸಿದೆ.

ಕಾಡಿನ ಬೆಂಕಿ ಅವಘಡಗಳಲ್ಲಿ ಹಿಮಾಚಲ ಪ್ರದೇಶ (14 ಪಟ್ಟು) ಮತ್ತು ಉತ್ತರಾಖಂಡ (4 ಪಟ್ಟು) ಹೆಚ್ಚು ಅಪಾಯ ಎದುರಿಸುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದೇಶವು ಈಗಾಗಲೇ 229 ಕೋಟಿ ಟನ್‌ಗಳಷ್ಟು ಹೆಚ್ಚುವರಿ ಇಂಗಾಲದ ಪ್ರಮಾಣ ತಗ್ಗಿಸಿರುವ ವರದಿಯು ಅತ್ಯಂತ ಸಕಾರಾತ್ಮಕ ಅಂಶವಾಗಿದೆ

ಭೂಪೇಂದರ್ ಯಾದವ್
ಪರಿಸರ ಸಚಿವ

ಬಿದಿರಿನ ಹೊದಿಕೆಯನ್ನು ಮರಗಳ ಜತೆಗೆ ಸೇರಿಸಲಾಗಿದೆ. ದೇಶದಲ್ಲಿ ಒಟ್ಟು ಬಿದಿರಿನ ಪ್ರದೇಶವು ಈಗ 1,54,670 ಚದರ ಕಿ.ಮೀ ಎಂದು ಅಂದಾಜಿಸಲಾಗಿದೆ. 2021ಕ್ಕೆ ಹೋಲಿಸಿದರೆ 5,227 ಚದರ ಕಿ.ಮೀ ಹೆಚ್ಚಾಗಿದೆ

ಅನೂಪ್ ಸಿಂಗ್, ಎಫ್‌ಎಸ್‌ಐ ಮಹಾನಿರ್ದೇಶಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಳಸಿದ ಇ.ವಿ ಕಾರು ತುಟ್ಟಿ

ಜೈಸಲ್ಮೇರ್ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ 55ನೇ ಸಭೆಯು, ವಿದ್ಯುತ್‌ಚಾಲಿತ ಬಳಸಿದ ಕಾರುಗಳ ಮಾರಾಟದ ಮೇಲಿನ ಜಿಎಸ್‌ಟಿಯನ್ನು ಶೇ 12 ರಿಂದ ಶೇ 18ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

ವಿಮಾನ ಇಂಧನವನ್ನು (ಎಟಿಎಫ್) ಜಿಎಸ್‌ಟಿ ವ್ಯಾಪ್ತಿಗೆ ಒಳಪಡಿಸಲು ಸಭೆಯು ಒಪ್ಪಿಗೆ ನೀಡಿಲ್ಲ. ಉಪ್ಪು ಮತ್ತು ಮಸಾಲೆ ಮಿಶ್ರಿತ (ಪ್ಯಾಕಿಂಗ್‌ರಹಿತ) ಪಾಪ್‌ಕಾರ್ನ್‌ಗೆ ಶೇ 5, ಪ್ಯಾಕಿಂಗ್ ಮತ್ತು ಲೇಬಲ್ ಅಂಟಿಸಿದ ಪಾಪ್‌ಕಾರ್ನ್‌ಗೆ ಶೇ 12ರಷ್ಟು ಹಾಗೂ ಕ್ಯಾರಮೆಲ್ ಪಾಪ್‌ಕಾರ್ನ್‌ಗೆ (ಸಕ್ಕರೆ ಮಿಶ್ರಿತ) ಶೇ 18ರಷ್ಟು ತೆರಿಗೆ ವಿಧಿಸಲು ತೀರ್ಮಾನಿಸಿದೆ. ಪ್ಯಾಕಿಂಗ್ ಹಾಗೂ ಲೇಬಲ್ ಅಂಟಿಸಿದ ಪಾಪ್‌ಕಾರ್ನ್ ಮೇಲಿನ ತೆರಿಗೆ ಬಗೆಗಿನ ಗೊಂದಲ ಕುರಿತು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯು (ಸಿಬಿಐಸಿ) ಸುತ್ತೋಲೆ ಮೂಲಕ ಸ್ಪಷ್ಟನೆ ನೀಡಲಿದೆ ಎಂದು ಸಭೆಯು ತಿಳಿಸಿದೆ.



ಯಾವುದು ಇಳಿಕೆ?: ಸಾರವರ್ಧಿತ ಅಕ್ಕಿ ಮೇಲಿನ ತೆರಿಗೆಯನ್ನು ಶೇ 18ರಿಂದ ಶೇ 5ಕ್ಕೆ ತಗ್ಗಿಸಿದೆ. ಶೇ 50ಕ್ಕಿಂತ ಹೆಚ್ಚು ಹಾರು ಬೂದಿಯಿಂದ ತಯಾರಿಸಿದ ಎಸಿಸಿ ಬ್ಲಾಕ್‌ಗಳ ಮೇಲಿನ ತೆರಿಗೆಯನ್ನು ಶೇ 18ರಿಂದ ಶೇ 12ಕ್ಕೆ ಇಳಿಸಿದೆ. ಜೀನ್ ಥೆರಪಿ ಚಿಕಿತ್ಸೆಗೆ ತೆರಿಗೆ ವಿನಾಯಿತಿ ನೀಡಲಾಗಿದೆ.

ಕಾರಿನ ಮೇಲೆ ಕಂಟೇನರ್ ಬಿದ್ದು ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿಯ ತಿಪ್ಪಗೊಂಡನಹಳ್ಳಿ–ತಾಳೇಕೆರೆ ಗೇಟ್ ಬಳಿ ಶನಿವಾರ ವೋಲ್ವೊ ಕಾರಿನ ಮೇಲೆ ಕಂಟೇನರ್ ಬಿದ್ದು ಸಾಫ್ಟ್‌ವೇರ್ ಕಂಪನಿ ಮಾಲೀಕ ಸೇರಿದಂತೆ ಅವರ ಕುಟುಂಬದ ಆರು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಐಷಾರಾಮಿ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ಮೃತದೇಹಗಳನ್ನು ಸಾರ್ವಜನಿಕರು ಹಾಗೂ ಕ್ರೇನ್ ನೆರವಿನಿಂದ ಪೊಲೀಸರು ಹೊರ ತೆಗೆದರು.

ಐಎಎಸ್‌ಟಿ ಸಾಫ್ಟ್‌ವೇರ್ ಸಲ್ಯೂಷನ್ ವ್ಯವಸ್ಥಾಪಕ ನಿರ್ದೇಶಕ ಚಂದ್ರಮ್ ಏಗಪ್ಪಗೋಳ (46), ಅವರ ಪತ್ನಿ ಗೌರಾಬಾಯಿ(40) ಪುತ್ರ ಗ್ಯಾನ್ (16), ಪುತ್ರಿ ದೀಕ್ಷಾ (10) ಹಾಗೂ ಗೌರಾಬಾಯಿ ಅವರ ತಂಗಿ ವಿಜಯಲಕ್ಷ್ಮಿ(35) ಹಾಗೂ ಚಂದ್ರಮ್ ಅವರ ಸಹೋದರನ ಪುತ್ರಿ ಆರ್ಯಾ(6) ಮೃತಪಟ್ಟವರು.

ಎರಡು ತಿಂಗಳ ಹಿಂದೆಯಷ್ಟೇ ಖರೀದಿಸಿದ್ದ ವೋಲ್ವೊ ಕಾರಿನಲ್ಲಿ (ಕೆಎ01 ಎನ್‌ಡಿ 1536) ಮಹಾರಾಷ್ಟ್ರಕ್ಕೆ ತೆರಳುತ್ತಿದ್ದರು. ಹೆದ್ದಾರಿಯಲ್ಲಿ ಕಾರಿನ ಮೇಲೆ ಕಂಟೇನರ್ ಬಿದ್ದು ದುರ್ಘಟನೆ ಸಂಭವಿಸಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

6ನೇ ಪುಟ ನೋಡಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED CEO
Tool Holders Pvt. Ltd.,
Auto Parts Manufacturing Company
Located in Belgaum with 120 Workers is looking for a CEO willing to locate in Belgaum with 10-12 years Experience in running a manufacturing unit of sheet metal fabrication and VMC 4th Axis Machining of Parts is preferred. A package of Rs.10-12 Lakhs CTC or more is offered.
Send your resume to
thpl.hr@toolholdersbgm.com
94480 66244

SRI VIDYA MANDIR EDUCATIONAL INSTITUTIONS
11th Cross, West Park Road, Malleswaram, Bengaluru – 560 003. Tel. No. 080 – 23342658

REQUIRED
QUALIFIED AND EXPERIENCED TEACHERS IN THE FOLLOWING DEPARTMENT FOR THE ACADEMIC YEAR 2025 – 2026

LOWER PRIMARY	Physical Education (Female)
HIGHER PRIMARY	Science/Mathematics
HIGH SCHOOL	Physical Education (Male), English

Application along with resume to be submitted to the above address by post/ in person before 30.12.2024
Principal

ಪ್ರತಿ ತಿಂಗಳು ಈ ಚೆಕ್ಕು ನಿಮ್ಮದಾಗಬಹುದು..!!
This Could be your Next Monthly Cheque !!
ಈ ಮೇಲಿನ ಚೆಕ್ಕು ನಿಮ್ಮದಾಗಬೇಕೆ.
This could be your monthly cheque starting from now.
Please call us on
ಕೆಳಗಿನ ಸಂಖ್ಯೆಗೆ ಕರೆ ಮಾಡಿ
9845243806
9353419925

Shriram Finance Ltd.
Shriram is a pioneer in the NBFC Industry with a strong rural presence. The Shriram Finance Limited is one of the India's leading NBFCs, with 9.02 Million (as on Sept 30, 2024) private and corporate customers across India. Shriram's customers benefit from a broad range of diverse product portfolio: Fixed Deposits, Fixed Investment Plan, Insurance Products (Life Insurance and General Insurance) and Mutual Funds.
Wanted - Across Karnataka
• Senior Branch Manager • Branch Manager
• Business Development Manager
• Business Development Executives
Preferred Eligibility Criteria
• Preferably Candidates who are worked in Life Insurance/ Financial Distribution companies in agency channel or Fresher's also can apply
• Any Degree • Age 23 to 40 • Two wheeler Mandatory
Benefits
• Salary as per industry standard • PF • ESI benefits
• Attractive Incentives • Bonus and Trips
Please send your CV to
E-mail: abdul.r25@shriramfinance.in
Date of interview will be informed to the short-listed candidates
For more details Pl. Contact: 9844996942 / 9995010540

Engg/ Production Technical

WANTED ENGINEERS (B.E./Diploma) with 7+ years' experience for Hyderabad projects. Requirements: B.E./B.Tec./ Diploma in civil engineering, 7+ years' experience, Proficient in English & Hindi. Attractive Salary, Accommodation and Allowances. Apply with a resume to: engrs4gsl@gmail.com Director Green Souls Life Spaces Pvt.Ltd., Ph: 9972472772.

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

Hospital & Medical Jobs

REQUIRED FOR LIONS BLOOD CENTRE
Bangalore Lions Service Trust
Bhagwan Mahaveer Jain Hospital, Millers Road, Bangalore North - 560 001
Vacancies Available
Doctor : MBBS and working experience in Blood Bank. Retired doctors of the age group 60-70 years are also eligible to apply.
Staff Nurse : (Qualification GNM) Retired Nurses are also eligible to apply.
Blood Bank Technicians: with or without experience (Qualification PUC & DMLT).
Applications with copies of qualification and experience can be sent to : blstsecretary@gmail.com lionsbloodbank1983@gmail.com
Application can also be sent by post to : PDG P.S. Venkatachalam, No.4, 14th Main Road, Vasanthnagar, Bangalore -560001.

Teachers/ Professors

CRESCENT HIGH SCHOOL#28, Sultan Road, Banagalore-02 Contact: 9071120120 7019929814 Qualified Teachers are Required to teach in Pre-Primary, Primary Middle & High School (All Subjects Including Art & Craft, Computer & PET (Male &Female teachers).and PUC (Commerce-HEBA) Candidates with experience and fluency in English may apply to:Chairman, Enclosing Bio-data,& photostat copies of the testimonials within 10 days by Email: mmacrescent@gmail.com

TEACHER REQUIRED for Maths and as head Master for High school Kenmore School Basavanagudi whatsapp 9901501185 and Email: kenmoreschool@gmail.com

VIDYASHREE HIGH SCHOOL CBSE Anjananagar, Bengaluru-91.Required Trained and Experienced NTT,PRT,TGT and PGT Teachers for the Academic year 2025-26 to teach Mathematics, Science and English for Primary and High school.Walk-in between 9:30am to 4:30pm.Drop your CV @vidyashreehighschool@gmail.com Contact:9035858269

REQUIRED QC/LAB CHEMIST, Qual: BSc. in Chemistry with 2 years of experience. Veterinary Product Manufacturers, Full Time/Permanent @ Peenya Industrial Area. If Interested Share Your CV/Resume to : kusha.makam280@gmail.com & makamanusha2108@gmail.com Mobile: 7019522438, Ph: 0804127273

WANTED ELECTRICAL TECHNICIAN in Bangalore. Qualification: ITI/ Diploma EEE Freshers Preferred, 2 Wheeler Required. Call: 9342529325.

WANTED FRESH Diploma Engineers for Factory on Magadi Road, Urgently. Call-9880133173

General

WANTED STORES IN-CHARGE (Female) Experience: 2 years, Basic Computer Knowledge, Industry at Peenya. Immediate Appointment. 9972410541, 9845915484 infusilindia@infusil.in

Walk-in

DC AUTO Parts Pvt. Ltd. Peenya 2nd Stage, Bengaluru-560058. Hiring DME/ITI Experience 2-5 years, in Supervisory position in Precision Machine shops with Conventional and CNC Manchines. With Knowledge in CNC Programming. Salary as per Company Standard. Interested Candidates can WALK-IN/ Share resumes to: hr@dcprecise.com Contact: 8123266936

DH Classifieds ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

REAL ESTATE SELLING

Sites

Airport Road

"30X40-CORNER 60 FEET ROAD BIAPPA approved E Katha before International Airport near KIABD & Bagalur Police station 23 houses built families staying in our Layout 65 Lakhs only genuine buyers. 9845286505"

Banashankari

"AVAILABLE"BDA SITES Banashankari 6th Stage,4th H Block,30x40,North Near 80Road: 9844216344 Brokers Excuse

Devanahalli

GATEWAY RESIDENCY BIAAPA AND RERA APPROVED PLOTS NEAR BANGALORE INTERNATIONAL AIRPORT. Price: 64 Lakhs onwards. Pay 25% Rest in EMI, Loans by SBI, HDFC. Contact: 97421-16699.

Hosur Road

SALE SITES 30x40, 25x40, 25x30 Built-Up Area at Attibelle Near Hosur Toll Road Rs.4500/- Sft, Call:7892531744

Electronic City

SALE KIADB 28,000sft Industrial/ Commercial Land at Electronic City Phase-2, Facing North & South with 150KV, VERNA DEVELOPERS, MG.Road, Bangalore. 9916310226/ 9620253180

Hennur

HENNUR MAIN Road Near By 40,300 Sqft Land For Sale Call: 9845623970/ 9739400838 Brokers Excuse

Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

J P Nagar

JP.NAGAR 6TH 20x30 income 90K 1.95Cr.JPN 2nd 40x60-North 32000/-Psft, 60x90 East 34000/-Psft 30x50 East Duplex 4.70Cr & 30x40 West 3.13cr-9945310899

JP.NAGAR 2ND Phase BDA 30x42, 45x60, Rs.30,000/-40x60, 6BHK, New House Rs.11Cr Call-9845704509

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

SALE: JAYANAGAR Co-operative Society 2nd stage 30x40 East facing Rs.14000 Nego., Near 80ft 'MAHARAJA PALACE' (Kanakapura Road) Contact: 8197276607

Kempegowda Layout

"30X40 WF TOP LOCATION SITE SALE NEAR PROPOSED BDA COMPLEX 6TH BLOCK KEMPEGOWDA LAYOUT- 9845143579"

BDA SITE FOR SALE @ Kempegowda Layout 40x60, 50x80 Good Location Contact: 9845555666

Magadi Road

FOR SALE: 50X90 (4500 Sft) South facing site with old building at 1-A Main Road, Govindarajanagar (M.C. Layout)Near Hotel Swathi Green Land (Jaimunirao Circle) Bengaluru. Broker's excuse. Contact: 9343432456

Mangaluru

SITES FOR SALE-MANGALORE KAVOOR MALLI LAYOUT 15 cents 10.25/ Cent, Hosabettu near Nilgiris 15 cents 8.30/ Cent. Call: 70222-66660

Mysore

SITES @MYSORE DTCP Facing State Highway A Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace, 9845287802 /8050001571

Nagarabhavi

"RAILWAY 1ST-STAGE 30x50 South facing site for sale Near Vidyaniketan school, Good location, Genuine buyers only Contact: 9036577910"

20X30 BEAUTIFULLY Site for Sale Nagarabhavi 11th Block, West facing 40 feet Road: 9844171085/ 7019573161

Vishweshwariah Layout

SITE SALE 30x40, 40x60 East, Visweshwaryya Layout 6th Block, RHCS Layout 2nd Stage 40x60 East, 8105688602.

"VISVESHWARAIAH LAYOUT 40x60 East & North facing Site for Sale. Genuine Buyers & Sellers Contact: 9845268611"

"AVAILABLE/ WANTED Sites Vishveshwaraiah any Block Kempegowda Layout Good location, Genuine Buyers/ Sellers Contact: 7259675150"

"DIRECT OWNER" 40x60 N/F BDA Site Sale VISHVESWARAIAH LAYOUT BLOCK-1 near KHB Platinum Apartment. 9742681666

Mysore

SALE, SITE, 85x116, 9280 sqft, No 3838 M-36, North-East Corner, Opp. Eidgah Maidan, Tilaknagar, Mysore. MOHANRAJ: 9886325259

SALE 40X60 North Facing DTS RAO NAGAR SATAGALLI-MYSORE Clear Titles. Contact Owner: 93416 34793

Kengeri Satellite Town

SITE FOR Sale site no. 4412, 4413, 30x40, 40 Feet Road, Nadaprabhu Kempegowda Layout 3rd Block, L.Sector South Face close to PRR Road, Price Rs. 7700/-sq.feet. Negotiable. 9980339217/ 9448709882.

Agricultural Land

Mysore Road

"RAMNAGAR 10 Guntas with mangoes ₹30 Lakhs, CHANAPATNA 27 Guntas ₹40 Lakhs. Call: Owner- 9845178335"

Outskirts

60KM FROM Bangalore 1.5 acr and 3acr Farmland For Sale 59 Lakhs Contact: 8951240669

Out-Station

9LAKH PER ACRE Agriculture, and Poultry and Solar Project Land For Sale 190km from Bangalore Call:8951240669

Commerical

Multiple Locations

10 ACRES Indl. Rent, 40x60 west Nagarabhavi sale, 9000 sqft on Dr.Rajkumar Road Sale, BasaveshwaraNagar 5000 sqft Sale. 9035010595

Flat

Hennur

3 BHK LUXURY FLATS DREAMVILLE HOME BBMP & PERA Approved Hennur Main Road, Kothanur 8073977742 / 9731374392 promaxdreamvillehome.com

J P Nagar

PANDURANGANAGAR CLOSE to J.P.Nagar Dollars Colony, prime location 3 BHK Ultra Premium Flats, 2595 Sft, 2.60Cr. ready to occupy, Italian Marble flooring, 2 Car-parking, Forest Facing Corner Plot, Vastu Complient, Call-9845296068 /9740292904.

House

Jayanagar

JAYANAGAR 5TH Block Corner Site 65x35 Excellent location 40 Road, near Metro Station 9,10,00,000/- -9731775536.

Kanakapura Road

HOUSE FOR Sale Corner 40x50 With 4 Shops & 2 Bedrooms Konanakunte Near Sowdhamini: 9845289422

Industrial & Factory

Jigani

SALE JIGANI Industrial area 5000sqft Shed, Power, 40feet Wide Road Near OTIS Circle Ct: 9066399102

Magadi Road

SALE KADABAGERE Dasanapura Hobli Kachohalli Village 100x100 With 5000 Sft Shed North Facing ct: 9844134068 8073859758

Tumkur

SALE TUMAKURU KIADB Land 1.04acre at Anatharasanhalli, Lingapur Village With 1900sft Shed on 100feet Road 9844134068 8073859758

Villas/Bunglows

Thanisandra

SALE: DUPLEX VILLA SOBACITY- ARISTOS F44, Near Thanisandra B'lore 3 BRs, 1Servent quarter, 2carpark, Fully furnished, Cost 5.25 Crs. Contact: 94483-51294.

REAL ESTATE BUYING

Commerical

Mysore

PROPERTY WANTED 8000-15,000 sqft of property for outright purchase on any 80 FT road in central Mysore for corporate office. Direct Owners only respond. Brokers Excuse. Contact: 6361440655.

WEEKEND CORNER
ಕ್ಲಾಸಿಫೈಡ್ಸ್

NEW RESORT
Starting operations with Valuable land asset in Electronic City, looking for experienced Operator/ Manager. Partial Dilution of Equity in LLP to invest also Available.
for more details contact:
9341286903

WANTED SITES
Required BDA Sites:
50x80, 40x60, 30x40 & 20x30 at Banashankari 6th Stage, JP.Nagar, Kanakapura Road, & Anjanapura. Visveshwaraiah Layout, Magadi Road.
Owner / Genuine Seller Only Contact
Also Available Sites: 50x80, 40x60, 30x40 at Banashankari, 6th Stage, JP.Nagar, Kanakapura Road, & Anjanapura. Visveshwaraiah Layout, & Jigani
Call: 9008271951/ 9845144365

INDIA'S NO.1 TEACHERS TRAINING INSTITUTE
NIECCE
NATIONAL INSTITUTE OF EARLY CHILD CARE & EDUCATION
Nursery Teachers Training Course (NTT) (Montessori Integrated)
Duration : 6 Months
Batches : Online & Offline
Eligibility : 10th / 12th / Degree
Placement Assistance
To Work in CBSE / ICSE / State / IGCSE Board Schools
Batches Starting Soon
AUTHORISED TRAINING CENTERS

Chandralayout: 80958 11112	T C Palya: 97404 71746
Rajajinagar: 91085 44922	Kittanahalli: 97404 49264
Jayanagar: 99010 61160	Bannerghatta Rd.: 95916 11009
Indiranagar: 70223 34402	Nagadevanahalli: 98800 99444
Yelahanka: 96116 61190	D. Bommasandra: 97311 97460
Electronic City: 84318 88784	Doddaballapura: 98456 06364
Ullal: 63666 99899	Mysore: 97404 08333
Matthikere: 70198 06668	Channapatna: 96633 11973
R R Nagar: 98800 75345	Tumkur: 87629 37081
M S Palya: 97412 33113	Kalburgi: 99009 75676
Laggere: 99455 51324	Hubli: 95451 60180
Haralur: 91087 53091	Cuddalore (AP): 63000 26699
Marathahalli: 96111 68923	Krishnagiri (TN): 90036 56604
Navodayanagar: 95919 77740	And more coming soon...

Franchise : 9886855700 / www.niecce.com

Rajajinagar

WANTED: PURE Commercial Property Minimum 2 lakh Rent Coming Property. Location: Rajajinagar, Mahalakashmi Layout, Malleshawaram, Basaveshwaranagar, Vijaynagar and Chandra Layout: 7899570235

SCINTILLATING ACTS BY AFRICAN ARTISTS
JUMBO CIRCUS
FROM 18 DECEMBER 2024
ITI GROUND KR PURAM NEAR OVER BRIDGE, DOORAVANI NAGAR, BANGALORE - 16
Advance Booking bookmyshow.com
Ph : 94967 90336, 63524 19244, 86670 13077
Daily 3 Shows • 1pm • 4pm • 7pm
For Rs 500 & 350 only Ticket Rate: 500 350 250 150

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan Nagar BCCHS Layout, Gubblala, Agent Excuse. Call: 9008259222.

M G Road And Around

LOOKING AT residential Site or old House 40x60 or 60x50 surrounding M.G Road and Trinity metro station. preference to corner site corner side. WhatsApp only 99800-20666.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramakaranth Layout.Contact: SAPTHAGIRI, 9900268073 9448068073.

R T Nagar

WANTED 30X50, 40x60 BDA SITE IN R.T.NAGAR, HMT LAYOUT, ANANDNAGAR. Property Owners Please Call: 9900001973

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE ON RENT 900 Sqft. Space for office/Godown near Dhobhi Ghat, Rajajinagar, Bengaluru. Contact: 9449853323, 9845922704.

KORAMANGALA GROUND Floor 1600 Sqft 1st Floor 200 to 2200 Sqft Available For Rent Call Owner Rajesh 9845167755.

OFFICE SPACE For Rent16,000 sqft HBR layout 4th Block Facing Ring Road 8861817913 / 9008025761

Industrial And Factory

AVAILABLE OF Industrial Shed of 95000 sqft at Soukya Road, Whitefield. Available Built-to-Suit Warehouse 160000 sqft. Vijipura Hoskote Contact: 9341234288/ 9663224353/ 9845417487.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Business

FIRE EXTINGUISHERS, MAJOR SOURCE TO ALL HOTELS BAR & RESTAURANTS IN BANGALORE CITY, AND KARNATAKA ALL DISTRICT & TALUKAS. CALL: FIRE PROTECTION SYSTEMS CORPN. (M) 9886019240 (L) 08026623994

Business Offers

Business Centre

WANTED BUSINESS partner in Branded Rice & Dryfruit Business only interested person Call: 9000182908

Finance

WE ARRANGE Mortgage/ Purchase-Construction & Business loan, from Schedule Banks. Mrs Jyothi 8971132289/ 9380509779.

Business For Sale

For Sale
Coffee Curing Unit
Fully equipped well maintained Coffee Curing unit machines for sale Elevators, Hullers, Grades, Separators, Switch Boards, Controllers, Wiring & Spares etc at Salem, Tamil Nadu
Ct : MSP Coffee Ltd
9443263464, 9842829996
E- mail@mspcoffee.com

MATRIMONIAL

Brides Wanted

Muslim

MUSLIM BOY 1986 Divorce /5'10'/ Senior Software Engineer / 1 Cr / Working in Bangalore/ Is looking for match (080-69070635)

MUSLIM BOY 1992 Born 5'7' Businessman/ Rich/ is looking for match (080-69070635)

MUSLIM BOY 1994 Born 5'10'/ MS/ Doctor / Resident of Bangalore is looking for Match (080-69072090)

Telugu

TELUGU BOY 1994 / 5'11'/ MS (Doctor) is Looking for a girl for marriage (080-69074927)

Grooms Wanted

Hindu

WANTED FORWARD HINDU GROOM
Beautiful Rich 5'.4"/ 1994/ MBBS+MD/ Constructing Own Hospital @ Bangalore/ Forward Hindu "Doctor Bride" Requires MBBS+MD/ PG studing/ Working Forward Hindu "Doctor Groom" (Preferably Willing to Settle in Bangalore) Contact:
9743403900

Muslim

MUSLIM BEAUTIFUL Very Fair Girl 2001 / 5'4"/ Not Working/ Affluent /R T Nagar BLR/ is Looking for a Match (080- 69072090)

WANTED GROOMS
Sunni Muslim Lady Doctor 34/5'3", Bangalore based MBBS, MS (Gen. Surgeon) Working as a VCS in reputed Hospitals. Looking for a suitable alliances from Doctor/ Engineers / CA/ MBA/ estb. Industrialists / Businessman or Govt. Officers.
7022549426, 9980068461

SC/ ST

WANTED GROOM
Looking bridegroom for a girl, 30 years, MSC Biotech. Madiga (sc).
9148833532 / 8050519100

Telugu

TELUGU BEAUTIFUL Girl 1999 Born/ 5'5'/ Studying/ from a Affluent Family of Bangalore is looking for match (080-69074927)

PERSONAL

Change of Name

CHANGE OF NAME
I, FATHIMA SABEENA, declare that my Husband's Original name was Mr. Mohammed Nawaz Gurpur son of late Mr. C.S Gurpur and later changed to Mr. Mohammed Cheyyabba. Both the names are pertaining to the same person and represents and stands to him only. His earlier name is abandon to use in lieu of his correct and changed name MOHAMMED CHEYYAPPA for the purpose of evidencing such changed correct name, vide Affidavit dated 20-12-2024, sworn before Notary A. Nagaraja, Bangalore.

CHANGE OF NAME
I, BASAVA, Spouse of No. 13618389Y EX NK Kalappa Neeralagi Residing at #188, Sri Ramalingeshwar Temple Road, Balobal Village, Beerangaddi P.O. Belagavi Dist, Karnataka-591307 have changed my name from BASAVVA to BASAVVA NEERALAGI vide affidavit dated 21.12.2024 before Notary N. Kanchivaradaraju, Bangalore.

CHANGE OF NAME
I, GEETHA. M Residing at #243, Lal Bagh Road, K.S. Garden, Wilson Garden, Bengaluru-560027 have changed my name to GEETHA MADHAN vide affidavit dated 20.12.2024 before Notary V. Rajashekhara, Bangalore. Henceforth I shall be known as GEETHA MADHAN only.

I, PAVITHRA ARUN SHETTY W/o Arun Kumar M have changed my name to PAVITHRA KUMARI SHETTY M vide affidavit dated: 21/12/2024 Before Notary Shreeshail B.Gobbani Bangalore.

I, RAMESH NAG PRASAD S/o Prasad N H have changed my name to RAMESH NAGENAHALLI PRASAD vide affidavit dated: 21/12/2024 Before Notary Shreeshail B.Gobbani Bangalore.

ಮಹಿಳೆ ಬಂಧನ , ಆಭರಣ ಸೇರಿ ಹಲವು ವಸ್ತುಗಳ ಜಪ್ತಿ • ವರ್ತೂರು ಪ್ರಕಾಶ್‌ಗೆ ನೋಟಿಸ್

ಮಾಜಿ ಸಚಿವರ ಆಪ್ತೆ ಸೋಗಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಆಪ್ತೆ ಎಂದು ಪರಿಚಯಿಸಿಕೊಂಡು, ಚಿನ್ನ ಖರೀದಿಸುವ ನೆಪದಲ್ಲಿ ಆಭರಣ ಅಂಗಡಿ ಮಾಲೀಕರಿಗೆ ವಂಚಿಸಿದ್ದ ಆರೋಪದ ಅಡಿ ಮಹಿಳೆಯೊಬ್ಬರನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಗಲಗುಂಟೆ ನಿವಾಸಿ ಶ್ವೇತಾ ಗೌಡ ಬಂಧಿತ ಆರೋಪಿ. ಇವರಿಂದ ಚಿನ್ನ, ಕಾರು ಹಾಗೂ ಇತರ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ವರ್ತೂರು ಪ್ರಕಾಶ್ ಅವರಿಗೂ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಸೋಮವಾರ ವಿಚಾರಣೆಗೆ ಹೋಗುವೆ’

‘ಆರೋಪಿ ಮಹಿಳೆ ಮೂರು ತಿಂಗಳ ಹಿಂದೆ ಸಾಮಾಜಿಕ ಕಾರ್ಯಕರ್ತೆ ಎಂದು ಪರಿಚಯಿಸಿಕೊಂಡಿದ್ದರು. ಆಮೇಲೆ ನನಗೆ ಅವರ ಸಂಪರ್ಕ ಇಲ್ಲ. ಆಕೆ ಒಡವೆ ಖರೀದಿಸಿರುವ ಮಾಹಿತಿ ಇಲ್ಲ. ಆಭರಣ ಅಂಗಡಿ ಮಾಲೀಕರೂ ನನಗೆ ತಿಳಿಸಿಲ್ಲ. ಆಕೆಯ ವ್ಯವಹಾರ, ಆಭರಣದ ಬಗ್ಗೆ ನನ್ನ ಬಳಿ ಏನೂ ಹೇಳಿಲ್ಲ. ನಮ್ಮ ಮನೆ ಬಳಿ ಬೇರೆ ಜನ ಬಂದ ಹಾಗೆ ಆಕೆಯೂ ಬಂದಿದ್ದಾಳೆ. ದೂರು ನೀಡಿರುವ ವಿಚಾರ ಪೊಲೀಸರಿಂದ ಗೊತ್ತಾಗಿದೆ. ಸೋಮವಾರ ವಿಚಾರಣೆಗೆ ಹೋಗುತ್ತೇನೆ’ ಎಂದು ವರ್ತೂರು ಪ್ರಕಾಶ್ ಅವರು ತಿಳಿದ್ದಾರೆ.

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿನ ನವರತ್ನ ಜ್ಯುವೆಲ್ಲರ್ಸ್ ಮಾಲೀಕ ಸಂಜಯ್ ಬಾಫ್ನಾ ಅವರಿಂದ ಸುಮಾರು 2.945 ಕೆ.ಜಿ ಚಿನ್ನ ಪಡೆದು ವಂಚಿಸಿದ್ದ ಆರೋಪದ ಅಡಿ ಮೈಸೂರಿನಲ್ಲಿ ಆರೋಪಿಯನ್ನು ಬಂಧಿಸಲಾಗಿದೆ.

ಸಂಜಯ್ ಬಾಫ್ನಾ ಅವರ ಮಳಿಗೆಗೆ ಬರುತ್ತಿದ್ದ ಮಹಿಳೆ, ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಆಪ್ತೆ ಎಂದು ತಮ್ಮನ್ನು ಪರಿಚಯಿಸಿಕೊಂಡಿದ್ದರು. ತಾನು ‘ಚಿನ್ನಾಭರಣ ವ್ಯಾಪಾರ ಆರಂಭಿಸುತ್ತಿದ್ದು, ನಿಮ್ಮಿಂದಲೇ ಆಭರಣ ಖರೀದಿಸುತ್ತೇನೆ’ ಎಂದಿದ್ದರು. ಸಂಜಯ್ ಒಪ್ಪಿದ್ದರು. ಆಭರಣಗಳನ್ನು ಮನೆಯವರಿಗೆ ತೋರಿಸಿಕೊಂಡು ಬರುವುದಾಗಿ ಅನುಮತಿ ಪಡೆದು ಮಹಿಳೆ ತನ್ನ ಮನೆಗೆ ಒಯ್ದಿದ್ದರು.

‘ಅ.26ರಿಂದ ಡಿ. 8ರ ವರೆಗಿನ ಅವಧಿಯಲ್ಲಿ ಆರೋಪಿ ಹೇಳಿದ್ದ ವಿಳಾಸಕ್ಕೆ ಆಭರಣ ಅಂಗಡಿ ಸಿಬ್ಬಂದಿ ಸುಮಾರು ₹ 2.42 ಕೋಟಿ ಮೌಲ್ಯದ 2.945 ಕೆ.ಜಿ ಚಿನ್ನ, ವಜ್ರಾಭರಣಗಳನ್ನು ತಲುಪಿಸಿದ್ದರು. ‘ಚಿನ್ನ ಮರಳಿಸಿ ಇಲ್ಲವೇ, ಹಣ ಪಾವತಿಸಿ’ ಎಂದು ಕೇಳಿದಾಗ ಬೆದರಿಕೆ ಹಾಕಿದ್ದಾಳೆ’ ಎಂದು ಸಂಜಯ್ ಬಾಫ್ನಾ ಕಮರ್ಷಿಯಲ್ ಸ್ಟ್ರೀಟ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪುಲಿಕೇಶಿನಗರ ಉಪ ವಿಭಾಗದ ಎಸಿಪಿ ಗೀತಾ ನೇತೃತ್ವದ ತಂಡ ತನಿಖೆ ಕೈಗೊಂಡಿತು. ಕೋಲಾರ ಜಿಲ್ಲೆಯ ಬಿಜೆಪಿ ಮುಖಂಡರ ಕಾರಿನಲ್ಲಿ ಆರೋಪಿ ಶ್ವೇತಾ ಗೌಡ ಮೈಸೂರಿಗೆ ತೆರಳಿದ ಸುಳಿವು ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಸಾಮಾಜಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದ ಶ್ವೇತಾ ಗೌಡ ಅವರನ್ನು ಈ ಮೊದಲು ಇದೇ ರೀತಿ ಚಿನ್ನದ ವ್ಯಾಪಾರಿಗೆ ಮೋಸ ಮಾಡಿದ್ದ ಆರೋಪದ ಅಡಿ ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದರು.

ಡಾಲರ್ಸ್ ಕಾಲೊನಿಯಲ್ಲಿರುವ ವರ್ತೂರು ಪ್ರಕಾಶ್ ಅವರ ಮನೆ ವಿಳಾಸ ನೀಡಿ ಆರೋಪಿ 2.945 ಕೆ.ಜಿ ಚಿನ್ನ ಪಡೆದಿದ್ದಳು. ಆದ್ದರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ವರ್ತೂರು ಪ್ರಕಾಶ್ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಒನ್ 8 ಕಮ್ಯೂನ್’ಗೆ ಬಿಬಿಎಂಪಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಜಿ.ರಸ್ತೆಯ ರತ್ನಂ ಕಾಂಪ್ಲೆಕ್ಸ್‌ನಲ್ಲಿರುವ ‘ಒನ್ 8 ಕಮ್ಯೂನ್’ ಬಾರ್ ಆ್ಯಂಡ್ ರೆಸ್ಟೋರೆಂಟ್, ‘ಅಗ್ನಿ-ಶಾಮಕದಳದ ಅನುಮತಿ ಪಡೆದಿಲ್ಲ’ ಎಂದು ಬಿಬಿಎಂಪಿ ನೋಟಿಸ್ ಜಾರಿ ಮಾಡಿದೆ.

‘ಅಗ್ನಿಶಾಮಕ ದಳದಿಂದ ನಕ್ಷೆ, ಪ್ರಮಾಣ ಪತ್ರ, ಎನ್‌ಒಸಿ, ಅನುಮತಿ ಪರವಾನಗಿ ಪಡೆಯದೆ ಬಾರ್ ಆ್ಯಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ. ಅಗ್ನಿ ಅವಘಡ ಸಂಭವಿಸಿದಲ್ಲಿ ಪ್ರಾಣಹಾನಿ ಆಗುವ ಸಂಭವವಿರುತ್ತದೆ ಎಂದು ಸಾಮಾಜಿಕ ಹೋರಾಟಗಾರ ಎಚ್.ಎಂ. ವೆಂಕಟೇಶ್, ಕುಣಿಗಲ್ ನರಸಿಂಹಮೂರ್ತಿ ದೂರು ನೀಡಿದ್ದಾರೆ’ ಎಂದು ಪೂರ್ವವಲಯದ ಶಾಂತಿನಗರ ವಿಭಾಗದ ಆರೋಗ್ಯ ವೈದ್ಯಾಧಿಕಾರಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಏಳು ದಿನಗಳಲ್ಲಿ ಉತ್ತರ ನೀಡಬೇಕು ಎಂದು ನ.29ರಂದು ನೀಡಿದ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

‘ಎರಡು ನೋಟಿಸ್ ನೀಡಿದ ಮೇಲೆ ಬೀಗಮುದ್ರೆ ಹಾಕಬಹುದು. ಸೋಮವಾರ ಮತ್ತೆ ನೋಟಿಸ್ ಜಾರಿ ಮಾಡಿ, ನಂತರ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ವೈದ್ಯಾಧಿಕಾರಿ ತಿಳಿಸಿದರು.

ಸ್ನೇಹಿತೆ ಮೇಲೆ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರಾಂತ್ಯದ ಪಾರ್ಟಿಗೆಂದು ಸ್ನೇಹಿತೆಯನ್ನು ಕರೆದೊಯ್ದು ಅತ್ಯಾಚಾರ ಮಾಡಿದ ಆರೋಪದ ಮೇಲೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ

ಹರೀಶ್, ಹೇಮಂತ್ ಬಂಧಿತರು. ‘ಆರೋಪಿಗಳು ಪರಸ್ಪರ ಗೆಳತಿಯರನ್ನು ಅದಲು, ಬದಲು ಮಾಡಿಕೊಂಡು ಸಹಕರಿಸಲು ಒತ್ತಾಯಿಸಿದ್ದರು. ಸಹಕರಿಸದಿದ್ದಾಗ ಅತ್ಯಾಚಾರ ಎಸಗಿದ್ದಾರೆ’ ಎಂದು ಯುವತಿ ದೂರು ನೀಡಿದ್ದರು. ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

‘ಯುವತಿಯ ಪರಿಚಯ ಮಾಡಿಕೊಂಡಿದ್ದ ಹರೀಶ್, ಪ್ರೀತಿಸುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡಿದ್ದ. ನಗರದ ಹೊರವಲಯದಲ್ಲಿ ಪಾರ್ಟಿಗೆಂದು ಕರೆದೊಯ್ದು ಸ್ನೇಹಿತನೊಂದಿಗೆ ಸಹಕರಿಸುವಂತೆ ಒತ್ತಾಯಿಸಿದ್ದ. ಆಕೆ ಒಪ್ಪದಿದ್ದಾಗ ಆರೋಪಿಗಳು ಅತ್ಯಾಚಾರ ಮಾಡಿದ್ದಾರೆಂದು ದೂರು ನೀಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸ್ವಿಂಗರ್ಸ್’ ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್ ಮಾಡಿಕೊಂಡಿದ್ದ ಆರೋಪಿಗಳು, ಪಾರ್ಟಿ ಆಯೋಜಿಸಿ ಗೆಳತಿಯರ ಜೊತೆ ತೆರಳುತ್ತಿದ್ದರು. ಬಳಿಕ ಪರಸ್ಪರ ಗೆಳತಿಯರನ್ನು ಬದಲಿಸಿಕೊಂಡು, ಲೈಂಗಿಕವಾಗಿ ಸಹಕರಿಸಲು ಒತ್ತಾಯಿಸುತ್ತಿದ್ದರು. ಆರೋಪಿಗಳ ಮೊಬೈಲ್ ಫೋನ್‌ನಲ್ಲಿ ಯುವತಿಯರ ನಗ್ನ ಫೋಟೊಗಳು, ಖಾಸಗಿ ವಿಡಿಯೊಗಳು ಪತ್ತೆಯಾಗಿವೆ. ವಿಡಿಯೊ, ಫೋಟೊಗಳನ್ನು ತೋರಿಸಿ ಯುವತಿಯರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಸದ್ಯ ಇಬ್ಬರು ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಇದರಲ್ಲಿ ಹಲವು ಮಂದಿ ಪಾಲ್ಗೊಂಡಿರುವ ಮಾಹಿತಿ ಇದ್ದು, ತನಿಖೆ ನಡೆಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ನಗರದಲ್ಲಿ ಇಂದು

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ವಿ. ವಿಶ್ವನಾಥನ್, ಉಪಸ್ಥಿತಿ: ಡಿ.ಆರ್.ಶಶಿಧರ್, ಸಾಧಕರಿಗೆ ಸನ್ಮಾನ: ಬಿ.ಮಹದೇವಪ್ಪ, ಸುಭಾಷ್ ಎಂ., ಸಿ.ಮಾರ್ಕಂಡೇಯ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಏಳನೇ ಮುಖ್ಯರಸ್ತೆ, ಸಿಕ್ಯುಎಲ್ ಬಡಾವಣೆ, ಸಹಕಾರ ನಗರ, ಬೆಳಿಗ್ಗೆ 10

‘ಭೂಮಿ ರೈತ ಪ್ರಶಸ್ತಿ–2024’ ಪ್ರದಾನ: ಅತಿಥಿಗಳು: ಕೆ.ಮಂಜುನಾಥ್ ನಾಯಕ್, ಅಶೋಕ್ ಎಸ್. ಆಲೂರ್, ಧನಂಜಯ್, ಟಿ.ರಮೇಶ್, ಚಿದಾನಂದ್ ಬಿ.ಎಲ್., ಆಯೋಜನೆ: ಭೂಮಿ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಬೆಳಿಗ್ಗೆ 10.30ರಿಂದ

ಕುವೆಂಪು ಜನ್ಮದಿನಾಚರಣೆ ಅಂಗವಾಗಿ ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಶಿವರಾಮ್, ಅತಿಥಿಗಳು: ಎಚ್.ಎಸ್. ಶಿವಲಿಂಗಯ್ಯ, ಶ್ರೀನಿವಾಸ್ ವಿಶ್ವಕರ್ಮ, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್‌ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

‘ಜಸ್ಟೀಸ್ ಇ.ಎಸ್.ವೆಂಕಟರಾಮಯ್ಯ’ ದತ್ತಿ: ‘ಸಾಂವಿಧಾನಿಕ ಸಂಸ್ಥೆಗಳನ್ನು ಮರುರೂಪಿಸುವುದು– ಸಮಗ್ರತೆ, ದಕ್ಷತೆ ಮತ್ತು ಹೊಣೆಗಾರಿಕೆ’ ಉಪನ್ಯಾಸ: ಪಿ.ಎಸ್. ನರಸಿಂಹ, ಆಯೋಜನೆ: ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

‘ಕರಿಯರ್ ಉತ್ಸವ್’ ಶೈಕ್ಷಣಿಕ ಮೇಳ: ‘ಬೋರ್ಡ್ ಎಕ್ಸಾಮ್‌ಗಳಲ್ಲಿ ಉತ್ತಮ ಅಂಕ ಪಡೆಯುವುದು ಹೇಗೆ?’: ಶ್ರೀಪಾಲ್ ಜೈನ್, ಆಯೋಜನೆ: ಕರಿಯರ್ ಉತ್ಸವ್, ಸ್ಥಳ: ಪ್ರಿನ್ಸೆಸ್ ಶ್ರೈನ್, ಅರಮನೆ ಮೈದಾನ ಗೇಟ್ ನಂ. 9, ಮೇಖ್ರಿ ವೃತ್ತ, ಮಧ್ಯಾಹ್ನ 3.15

‘ನರಸಿಂಹ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ: ಅತಿಥಿ: ಎಚ್.ಆರ್. ರಂಗನಾಥ್, ಅಧ್ಯಕ್ಷತೆ: ಪಿ.ಎಂ.ಗಿರಿಧರ ಉಪಾಧ್ಯಾಯ, ಪ್ರಶಸ್ತಿ ಪುರಸ್ಕೃತರು: ಸುನಂದಾ ಉಪಾಧ್ಯ, ಡಾ. ಉದಯಕುಮಾರ ಮಯ್ಯ, ರಾಧಾಕೃಷ್ಣ ಉರಾಳ, ಕೆ.ಕೃಷ್ಣ ಉರಾಳ, ಎಂ. ರಮೇಶ ಮಯ್ಯ, ಪಿ. ಜನಾರ್ದನ ಅಡಿಗ, ಆಯೋಜನೆ: ಕೂಟ ಮಹಾಜಗತ್ತು ಸಾಲಿಗ್ರಾಮ, ಬೆಂಗಳೂರು ಅಂಗಸಂಸ್ಥೆ, ಸ್ಥಳ: ಗುರುನರಸಿಂಹ ಕಲ್ಯಾಣ ಮಂದಿರ, ಬಸವನಗುಡಿ, ಸಂಜೆ 4

‘ಪುಟ್ಟಮಗು ಕಥೆ ಕೇಳು’ ಸಂಚಿಕೆ, ‘ಉತ್ತರ ಹೇಳೋಣ ಬಾರಮ್ಮ– ಬಹುಮಾನ ಪಡೆಯಲೇ ಬೇಕಮ್ಮ’: ರಜನಿ ಪುಟ್ಟಣ್ಣ, ಶ್ರೀನಿವಾಸ್, ಅತಿಥಿಗಳು: ಯಶವಂತ ಕುಮಾರ್ ಜಿ.ಎ., ಸ್ಫೂರ್ತಿ ಶ್ರೀಧರ್, ಸುಬ್ರಮಣ್ಯಾಚಾರ್, ಆಯೋಜನೆ: ಗ್ರಂಥಾಲಯ ಇಲಾಖೆ , ಸ್ಥಳ: ಗ್ರಂಥಗುಡಿ ನಗರ ಗ್ರಂಥಾಲಯದ ಸಭಾಂಗಣ, ಕುಮಾರಸ್ವಾಮಿ ಬಡಾವಣೆ, ಸಂಜೆ 5.30

‘ನೀರ್ಮಾದಳ ಹೂವಿನೊಂದಿಗೆ’ ಏಕವ್ಯಕ್ತಿ ರಂಗ ಪ್ರಯೋಗ: ಅಭಿನಯ: ಇಂದಿರಾ ನಾಯರ್, ನಿರ್ದೇಶನ: ಶ್ರೀಪಾದ ಭಟ್ಟ, ಸಂಗೀತ: ಅನುಷ್ ಶೆಟ್ಟಿ, ಮುನ್ನ ಮೈಸೂರು, ಸಂಗೀತ ನಿರ್ವಹಣೆ: ಪ್ರವೀಣ್ ಬೆಳ್ಳಿ, ಬೆಳಕು: ಮಧೂಸೂದನ್ ನೀನಾಸಂ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, 32 ಎ ಮುಖ್ಯರಸ್ತೆ, ಜೆ.ಪಿ. ನಗರ 1ನೇ ಹಂತ, ಸಂಜೆ 6

‘ಶ್ರೀಮದ್ಭಾಗವತ’ ಸಪ್ತಾಹ ಪ್ರವಚನ: ರಾಮವಿಠಲಾಚಾರ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಮಂತ್ರಿಮಾಲ್ ಸಮೀಪ, ಸಂಜೆ 6

‘ಪುಕ್ಕಟೆ ಸಲಹೆ’ ನಾಟಕ ಪ್ರದರ್ಶನ: ರಚನೆ: ಎಚ್.ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾ ಭವನ, ಎನ್. ಆರ್. ಕಾಲೊನಿ, ಬಸವನಗುಡಿ, ಸಂಜೆ 7

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣೆ ನಿಮಿತ್ತ ಇಸ್ರೊ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಡಿ.23ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಇಸ್ರೊ ಲೇಔಟ್ ಕೈಗಾರಿಕಾ ವಲಯ, ಕುಮಾರಸ್ವಾಮಿ ಲೇಔಟ್, ಯಲಚೇನಹಳ್ಳಿ, ಇಲಿಯಾಸ್ ನಗರ, ಗಂಗಾಧರ ನಗರ, ವಿವೇಕಾನಂದ ಕಾಲೊನಿ, ಪ್ರಗತಿಪುರ, ಸರಬಂಡೆಪಾಳ್ಯ, ಪ್ರತಿಭಾ ಇಂಡಸ್ಟ್ರಿಯಲ್ ಏರಿಯಾ, ಸುಪ್ರೀಂ ಲೆದರ್ ಗಾರ್ಮೆಂಟ್ಸ್, ಚಂದ್ರನಗರ, ಕಾಶಿನಗರ, ವಿಕ್ರಮ್‌ನಗರ, ನಂಜಪ್ಪ ಲೇಔಟ್, ಬಿಕಾಸಿಪುರ, ಟೀಚರ್ಸ್ ಕಾಲೊನಿ, ಜೆ.ಹೆಚ್.ಬಿ.ಸಿ.ಎಸ್. ಲೇಔಟ್, ಬೇಂದ್ರೆ ನಗರ, ಈಶ್ವರನಗರ, ಮಿನಾಜ್ ನಗರ, ಕನಕ ಲೇಔಟ್, ಕನಕನಗರ, ಆಸುಪಾಸಿನ ವಸತಿ ಪ್ರದೇಶಗಳು.

ಸಮಾನ ಮನಸ್ಕ ಸಂಘಟನೆಗಳ ಪ್ರತಿಭಟನೆ

ಅಮಿತ್ ಶಾ, ರವಿ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ರಾಜೀನಾಮೆಗೆ ಆಗ್ರಹಿಸಿ ಸಮಾನ ಮನಸ್ಕರು ಮತ್ತು ಸಂಘಟನೆಗಳ ಮುಖಂಡರು ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಅಂಬೇಡ್ಕರ್ ಕುರಿತು ಹಗುರವಾಗಿ ಮಾತನಾಡಿ ಅಗೌರವ ತೋರಿದ್ದಾರೆ. ಅಮಿತ್ ಶಾ ಅವರಿಗೆ ಸಚಿವರಾಗಿ ಮುಂದುವರಿಯುವ ನೈತಿಕತೆ ಇಲ್ಲ. ತಕ್ಷಣವೇ ರಾಜೀನಾಮೆ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸದನದಲ್ಲಿ, ‘ಅವಾಚ್ಯ ಶಬ್ಧಗಳಿಂದ ನಿಂದಿಸಿ ಮಹಿಳಾ ಸಚಿವರನ್ನು ಅಪಮಾನ ಮಾಡಿದ್ದಾರೆ. ಸಿ.ಟಿ.ರವಿ ಅವರನ್ನು ಪರಿಷತ್ ಸದಸ್ಯತ್ವದಿಂದ ಅನರ್ಹಗೊಳಿಸಬೇಕು’ ಎಂದು ಒತ್ತಾಯಿಸಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾನ ಮನಸ್ಕರು ಮತ್ತು ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮುಖಂಡರಾದ ಪ್ರೊ.ಎಸ್. ಜಿ.ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಡಾ ವಿಜಯಾ, ಎಸ್. ವರಲಕ್ಷ್ಮಿ, ಗೋಪಾಲಕೃಷ್ಣ, ಹರಳಹಳ್ಳಿ ಎನ್ ರಾಜಣ್ಣ, ಅಮ್ಜದ್, ಕೆ.ಎಸ್. ವಿಮಲಾ, ಗೌರಮ್ಮ, ಕೆ.ಎಸ್. ಲಕ್ಷ್ಮಿ, ಬಿ.ಎನ್. ಮಂಜುನಾಥ್, ಶಿವಪ್ಪ, ಮಮತಾ ಯಜಮಾನ್, ಮಲ್ಲಿಗೆ, ಶಿವಶಂಕರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

ಹಸಿರೀಕರಣಕ್ಕೆ 'ಮ್ಯಾಪಥಾನ್' ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಪ್ರದೇಶಗಳಲ್ಲಿ ಸ್ಥಳೀಯ ಹಸಿರೀಕರಣ ಕಾರ್ಯವನ್ನು ಮುನ್ನಡೆಸಲು ಸಮುದಾಯಗಳಿಗೆ ಅಧಿಕಾರ ನೀಡಲಾಗುತ್ತಿದ್ದು, ಇದಕ್ಕಾಗಿ 'ಮ್ಯಾಪಥಾನ್' ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ' ಎಂದು ಹವಾಮಾನ ಕ್ರಿಯಾಕೋಶದ ಮುಖ್ಯಸ್ಥೆ ಪ್ರೀತಿ ಗೆಹ್ಲೋಟ್ ಹೇಳಿದರು.

ಬಿಬಿಎಂಪಿ ಹವಾಮಾನ ಕ್ರಿಯಾ ಕೋಶದ ವತಿಯಿಂದ 'ಬೆಂಗಳೂರಿನ ಹವಾಮಾನ ಕ್ರಿಯೆ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆ'ಗೆ ಸಂಬಂಧಿಸಿದಂತೆ ಸಭೆಯಲ್ಲಿ ಅವರು ಮಾತನಾಡಿದರು.

'ಡಿಜಿಟಲ್ ಮ್ಯಾಪಿಂಗ್' ಬಳಸಿ ಸ್ಥಳಗಳನ್ನು ಗುರುತಿಸಿ, ಹಸಿರಾಗಿ ಪರಿವರ್ತಿಸಲು ಇದು ಸರಳ ಚೌಕಟ್ಟು ಒದಗಿಸುತ್ತದೆ. ಗುರುತಿಸಿದ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯದಲ್ಲಿ ನಾಗರಿಕರಿಗೆ ಅವಕಾಶ ಮಾಡಿಕೊಡುವುದು ಮ್ಯಾಪಥಾನ್ ಉದ್ದೇಶವಾಗಿದೆ ಎಂದರು.

ಬಿಬಿಎಂಪಿ ಹವಾಮಾನ ಕ್ರಿಯಾ ಕೋಶ ಸ್ಥಾಪಿಸಿದೆ. ಸಂಘ ಸಂಸ್ಥೆಗಳು, ಎನ್‌ಜಿಒಗಳು, ಶೈಕ್ಷಣಿಕ ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಕೈಜೋಡಿಸಬಹುದು. ಕೆರೆಗಳು ಮತ್ತು ಉದ್ಯಾನಗಳ ಮೇಲ್ವಿಚಾರಣೆಗೆ ನವೀಕರಿಸಿದ ಆವೃತ್ತಿಗಳನ್ನು (https://lms.bbmpgov.in/lakes, https://pms.bbmpgov.in/park) ಬಿಡುಗಡೆ ಮಾಡಲಾಗಿದೆ ಎಂದರು.

'ಸಂಚಾರ ಸುಸ್ಥಿತಿಗೆ ₹54 ಸಾವಿರ ಕೋಟಿ'

'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ'ಯಡಿ 'ಕಾರ್ಯಸಾಧ್ಯತಾ ವರದಿ' ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರಕ್ಕೆ ಅನುವಾಗಲು 16 ಮೇಲ್ಸೇತುವೆ/ಅಂಡರ್‌ಪಾಸ್, ಎರಡು ಡಬಲ್ ಡೆಕರ್ ಕಾರಿಡಾರ್, ಎರಡು ಸುರಂಗ ರಸ್ತೆ ನಿರ್ಮಿಸಲು ₹54 ಸಾವಿರ ಕೋಟಿ ವೆಚ್ಚದ ಯೋಜನೆಗಳ ಕಾರ್ಯಸಾಧ್ಯತಾ ವರದಿ ಸಿದ್ಧಗೊಂಡಿದೆ.

'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ'ಯಡಿ ದಟ್ಟಣೆ ತಗ್ಗಿಸಲು ಮತ್ತು ನಿರ್ವಹಣೆಗಾಗಿ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕಾರ್ಯಸಾಧ್ಯತಾ ವರದಿಯನ್ನು ದೆಹಲಿಯ ಅಲ್ಟಿನೋಕ್ ಸಂಸ್ಥೆ ಬಿಬಿಎಂಪಿಗೆ ಸಲ್ಲಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024–25ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಗಾಗ್ಗೆ ಪ್ರಕಟಿಸಿದ ಯೋಜನೆಗಳು, ಬಿಬಿಎಂಪಿಯಲ್ಲಿ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆಗಳ ವೆಚ್ಚ, ಮಾರ್ಗ, ಅನುಷ್ಠಾನ, ಪರಿಸರದ ಮೇಲಿನ ಪರಿಣಾಮ ಒಳಗೊಂಡ ವರದಿ ಇದಾಗಿದೆ.

ನಗರದಲ್ಲಿ ಬಳಕೆದಾರರಿಗೆ ಉತ್ತಮ ಸಂಚಾರ, ಸಂಪರ್ಕ, ಸುಗಮ ಮತ್ತು ಆರಾಮದಾಯಕ ಸೌಲಭ್ಯಗಳನ್ನು ಒದಗಿಸುವುದು 'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ' ಗುರಿ. ಹೀಗಾಗಿ, ಪ್ರಸ್ತುತ ಮೂಲಸೌಕರ್ಯಗಳನ್ನು ಮೌಲ್ಯಮಾಪನ ಮಾಡಿ, ಸೀಮಾತೀತ ಪ್ರಯಾಣಕ್ಕೆ ಸಂಪರ್ಕ, ಸುರಕ್ಷೆ ಹಾಗೂ ಅನುಕೂಲಗಳನ್ನು ಕಲ್ಪಿಸಲು ದೀರ್ಘಕಾಲದ ಯೋಜನೆಗಳನ್ನು ರೂಪಿಸಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಹೊಸ ಯೋಜನೆಗಳಲ್ಲದೆ, ಹಾಲಿ ಇರುವ ರಸ್ತೆ ಹಾಗೂ ಜಂಕ್ಷನ್, ಇಂಟರ್‌ಸೆಕ್ಷನ್‌ಗಳಲ್ಲಿ ಸುಗಮ ಸಂಚಾರಕ್ಕೆ ಹಲವು ಸಲಹೆಗಳನ್ನೂ ಉಲ್ಲೇಖಿಸಲಾಗಿದೆ. ಮೈಸೂರು ರಸ್ತೆ, ತುಮಕೂರು ರಸ್ತೆ, ಹಳೆ ಮದ್ರಾಸ್ ರಸ್ತೆಗಳಲ್ಲಿ ಅತಿಹೆಚ್ಚು ದಟ್ಟಣೆ ಇರುವ 5 ಇಂಟರ್‌ಸೆಕ್ಷನ್, 2 ಪ್ರದೇಶಗಳು, ಪಾದಚಾರಿಗಳಿಗೆ ಅನನುಕೂಲವಾಗಿರುವ 5 ಇಂಟರ್‌ಸೆಕ್ಷನ್, ಬಸ್ ಹಾಗೂ ಕಾರುಗಳ ಸಂಚಾರದ ಗತಿ ಕಡಿಮೆಯಿರುವ 11 ಕಿ.ಮೀ ಉದ್ದದ ರಸ್ತೆ, 5 ಇಂಟರ್‌ಸೆಕ್ಷನ್‌ಗಳಲ್ಲಿ ಸಂಚಾರ ಸಿಗ್ನಲ್‌ಗಳ ಸಮಸ್ಯೆಗಳನ್ನು ಹೇಳಲಾಗಿದೆ. ಇವುಗಳ ನಿವಾರಣೆಗೆ ಬಸ್‌ಗಳ ನಿಲುಗಡೆ, ನಿಲ್ದಾಣಗಳ ಮರುವಿನ್ಯಾಸ, ಪಾದಚಾರಿ ಮಾರ್ಗಗಳಲ್ಲಿನ ಅಡೆತಡೆ ತೆರವು, ಕೆಲವು ರಸ್ತೆಗಳು ಹಾಗೂ ಜಂಕ್ಷನ್‌ನಲ್ಲಿ ರಸ್ತೆಯನ್ನು ವಿಸ್ತರಿಸುವುದರಿಂದ ಹಲವು ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಹೇಳಲಾಗಿದೆ.

ಅಂಕಿ ಅಂಶ

₹54,964 ಕೋಟಿ
ಒಟ್ಟು ಯೋಜನಾ ವೆಚ್ಚ

₹40 ಸಾವಿರ ಕೋಟಿ
46 ಕಿ.ಮೀ ಸುರಂಗ ರಸ್ತೆಗಾಗುವ ವೆಚ್ಚ


₹14,964 ಕೋಟಿ
124.7 ಕಿ.ಮೀ ಉದ್ದದ ಮೇಲ್ಸೇತುವೆ–ಡಬಲ್ ಡೆಕರ್‌ಗಾಗುವ ವೆಚ್ಚ

46 ಕಿ.ಮೀ
ಎರಡು ಸುರಂಗ ರಸ್ತೆ ಕಾರಿಡಾರ್‌ಗಳ ಉದ್ದ

124.7 ಕಿ.ಮೀ
ಎಲಿವೇಟೆಡ್ ಕಾರಿಡಾರ್–ಅಂಡರ್‌ಪಾಸ್‌ಗಳ ಒಟ್ಟು ಉದ್ದ

ವರದಿಯ ಪ್ರಮುಖ ಅಂಶಗಳು

- ನಗರದ ಎಲ್ಲ ಕಾರಿಡಾರ್‌ಗಳಲ್ಲಿ ಸಂಚಾರ ದಟ್ಟಣೆ ಅತ್ಯಂತ ಉನ್ನತ ಮಟ್ಟಕ್ಕೇರಿದ್ದು, ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಾಗಲಿದೆ.
- ಗುರುತಿಸಲಾದ ಎಲ್ಲ ಕಾರಿಡಾರ್‌ಗಳಲ್ಲಿ ದಿನದ ಎಲ್ಲ ಸಮಯದಲ್ಲೂ ದಟ್ಟಣೆ ಇರುತ್ತದೆ.
- ವಾಹನಗಳ ಸಂಚಾರವನ್ನು ಸುಗಮಗೊಳಿಸಲು ವ್ಯವಸ್ಥಿತವಾದ ಸಂಚಾರ ಸಿಗ್ನಲ್‌ಗಳನ್ನು ಅಳವಡಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ.
- ಹಲವು ಇಂಟರ್‌ಸೆಕ್ಷನ್‌ಗಳನ್ನು ಮರು ವಿನ್ಯಾಸಗೊಳಿಸಿ, ಸಂಚಾರ ದಟ್ಟಣೆ ನಿರ್ವಹಿಸಲು ಸಾಧ್ಯವಾಗುವಂತೆ ಉನ್ನತೀಕರಿಸಬೇಕಿದೆ.
- ಪ್ರಸ್ತುತ ಪ್ರತಿ ಗಂಟೆಗೆ ಸರಾಸರಿ 10 ಕಿ.ಮೀ ವೇಗದಲ್ಲಿ ಸಂಚರಿಸುತ್ತಿರುವ ವಾಹನಗಳು ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣದ ನಂತರ 2051ರ ವೇಳೆಗೆ 40 ಕಿ.ಮೀ ವೇಗದಲ್ಲಿ ಸಂಚರಿಸಬಹುದಾಗಿದೆ.
- ಮುಂದಿನ 30 ವರ್ಷಗಳು ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಹಾಗೂ ನಿರ್ವಹಿಸಲು ಕಾರ್ಯಸಾಧ್ಯತಾ ವರದಿಯನ್ನು ವಿನ್ಯಾಸಗೊಳಿಸಲಾಗಿದೆ.



ಅಭಿವೃದ್ಧಿ ಪಡಿಸಲು ಗುರುತಿಸಲಾಗಿರುವ ರಸ್ತೆಗಳು

1,600	ಪ್ರತಿದಿನ ನಗರದಲ್ಲಿ ನೋಂದಣಿಯಾಗುವ ವಾಹನಗಳ ಸರಾಸರಿ
1,100	ದ್ವಿಚಕ್ರ ವಾಹನ
300	ನಾಲ್ಕು ಚಕ್ರ ವಾಹನ
200	ಇತರೆ ವಾಹನ
240%	ಕಳೆದ ಎರಡು ದಶಕದಲ್ಲಿ ವಾಹನಗಳ ಪ್ರಮಾಣ ಹೆಚ್ಚಳ
10 ಕಿ.ಮೀ	ಅತಿ ದಟ್ಟಣೆ ಸಮಯದಲ್ಲಿ ಪ್ರತಿ ಗಂಟೆಗೆ ವಾಹನಗಳು ಸಂಚರಿಸುವ ವೇಗ

ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ಬಾಕಿ ಮೊತ್ತ ಪಾವತಿ

ಪ್ರಜಾವಾಣಿ ವಾರ್ತೆ

ನಿಗಮ	ನಿವೃತ್ತರು	ಬಾಕಿ ಮೊತ್ತ ₹ ಕೋಟಿಗಳಲ್ಲಿ
ಕೆಎಸ್‌ಆರ್‌ಟಿಸಿ	4,711	86.55
ಬಿಎಂಟಿಸಿ	1,833	50.25
ಡಬ್ಲ್ಯುಕೆಆರ್‌ಟಿಸಿ	3,116	51.50
ಕೆಕೆಆರ್‌ಟಿಸಿ	2,034	35.75

ಬೆಂಗಳೂರು: ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ಬಾಕಿ ಇದ್ದ ಉಪದಾನ, ಗಳಿಕೆ ನಗದೀಕರಣ ಮೊತ್ತ ಪಾವತಿ ಕಾರ್ಯಕ್ಕೆ ಶನಿವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

'ಹಿಂದೆ ನೌಕರರ ಸಂಘಟನೆಗಳ ಮುಖಂಡರ ಜೊತೆಗೆ ಸಭೆ ನಡೆಸಲಾಗಿತ್ತು. ಅವರು ಸಲ್ಲಿಸಿದ್ದ ಬೇಡಿಕೆಗಳಲ್ಲಿ ಕೆಲವನ್ನು ಈಡೇರಿಸುವ ಭರವಸೆ ನೀಡಲಾಗಿತ್ತು. 2020ರ ಜನವರಿ 1ರಿಂದ 2023ರ ಫೆಬ್ರುವರಿ 28ರವರೆಗೆ ಸಂಸ್ಥೆಗಳಿಂದ ನಿವೃತ್ತರಾದ 11,694 ಜನರಿಗೆ ವಿತರಿಸಲು ಸರ್ಕಾರ ₹224.05 ಕೋಟಿ ಬಿಡುಗಡೆ ಮಾಡಿದೆ. ಆರ್‌ಟಿಜಿಎಸ್ ಹಾಗೂ ಚೆಕ್ ಮೂಲಕ ವಿತರಿಸುವ ಕಾರ್ಯ ಇಂದಿನಿಂದ ನಡೆಯುತ್ತದೆ. ನಾವು ನುಡಿದಂತೆ ನಡೆಯುತ್ತಿರುವುದು ಸಾಬೀತಾಗಿದೆ' ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ನಾಲ್ಕೂ ಸಾರಿಗೆ ನಿಗಮಗಳ 1,308 ಚಾಲನಾ ಮತ್ತು ತಾಂತ್ರಿಕ ಸಿಬ್ಬಂದಿಯ ಅಂತರ ನಿಗಮ ವರ್ಗಾವಣೆಯ ತಾತ್ಕಾಲಿಕ ಪಟ್ಟಿಯನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ ಎಂದರು.

ಸಿಬ್ಬಂದಿಗೆ ಕಾಲಕಾಲಕ್ಕೆ ಆರ್ಥಿಕ ಹಾಗೂ ಇತರೆ ಸೌಲಭ್ಯಗಳನ್ನು ನೀಡದಿದ್ದರೆ, ಸಮಸ್ಯೆಗಳಿಗೆ ಕಾರಣವಾಗುತ್ತದೆ. ಎಲ್ಲ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಈ ಬಗ್ಗೆ ಗಮನ ಹರಿಸಬೇಕು ಎಂದು ಸೂಚನೆ ನೀಡಿದರು. ವಿವಿಧ ನಿಗಮಗಳ ಅಧಿಕಾರಿಗಳು ಉಪಸ್ಥಿತರಿದ್ದರು.

23ರಿಂದ ಹೈಕೋರ್ಟ್ ರಜೆ

ಬೆಂಗಳೂರು: ರಾಜ್ಯ ಹೈಕೋರ್ಟ್‌ಗೆ ಇದೇ 23ರಿಂದ 31ರವರೆಗೆ ಚಳಿಗಾಲದ ರಜೆ ಇರಲಿದೆ. 2025ರ ಜನವರಿ ಮೊದಲ ದಿನ ಹೊಸ ವರ್ಷಕ್ಕೆ ರಜೆ ಇರಲಿದ್ದು, ಅಧಿಕೃತವಾಗಿ ಹೈಕೋರ್ಟ್ ಕಲಾಪ 2025ರ ಜನವರಿ 6ರಿಂದ ಪುನರ್ ಆರಂಭವಾಗಲಿದೆ. 'ತುರ್ತು ಪ್ರಕರಣಗಳ ವಿಚಾರಣೆಗಾಗಿ ಡಿ.24, 27 ಮತ್ತು 31ರಂದು ರಜಾಕಾಲೀನ ನ್ಯಾಯಪೀಠಗಳು ಕಾರ್ಯ ನಿರ್ವಹಿಸಲಿವೆ' ಎಂದು ಹೈಕೋರ್ಟ್ ನ್ಯಾಯಾಂಗ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿವರಗಳಿಗೆ ಹೈಕೋರ್ಟ್‌ನ ವೆಬ್‌ಸೈಟ್ ವೀಕ್ಷಿಸಬಹುದು.



ವಿಶ್ವ ಧ್ಯಾನ ದಿನ
ವಿಶ್ವ ಧ್ಯಾನ ದಿನದ ಪ್ರಯುಕ್ತ ವಿಧಾನಸೌಧದ ಮೆಟ್ಟಿಲುಗಳ ಮೇಲೆ 'ಆರ್ಟ್ ಆಫ್ ಲಿವಿಂಗ್' ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ, ಪ್ರಶಾಂತ್ ಎಚ್.ಜಿ.

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ, ಪೂರ್ವ, ದಕ್ಷಿಣ, ಮಹದೇವಪುರ, ದಾಸರಹಳ್ಳಿ ಹಾಗೂ ರಾಜರಾಜೇಶ್ವರಿ ನಗರ ವಲಯಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಹಾಗೂ ಒಎಫ್‌ಸಿ ಕೇಬಲ್ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಸಿಬ್ಬಂದಿ ಶನಿವಾರ ನಡೆಸಿದರು.

ಶಿವಾಜಿನಗರ ವಿಭಾಗದ ಮಿಲ್ಲರ್ ರಸ್ತೆ, ಕಂಟೋನ್ಮೆಂಟ್ ರೈಲ್ವೆ ವಸತಿಗೃಹಗಳು, ತಿಮ್ಮಯ್ಯ ರಸ್ತೆ, ಜಯಮಹಲ್, ವಸಂತನಗರ ಭಾಗಗಳಲ್ಲಿ ಹಾಗೂ ಶಾಂತಿನಗರ ಉಪ ವಿಭಾಗದ ಲಕ್ಷ್ಮೀ ರಸ್ತೆಯ ಪಾದಚಾರಿ ಮಾರ್ಗಗಳಲ್ಲಿದ್ದ ಅಂಗಡಿಗಳನ್ನು ತೆರವುಗೊಳಿಸಲಾಯಿತು.

ದಾಸರಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬಳ್ಳಾರಿ ರಸ್ತೆ, ಹೆಬ್ಬಾಳ-ಕೆಂಪಾಪುರ, ಆರ್.ಎಂ.ಜಡ್. ಲ್ಯಾಟಿಟ್ಯೂಡ್ ರೆಸಿಡೆನ್ಸಿ ರಸ್ತೆ, ದಾಸರಹಳ್ಳಿ ಕೆಂಪಾಪುರ ಮುಖ್ಯ ರಸ್ತೆಗಳ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಲಾಯಿತು. ಯಲಹಂಕ ಉಪನಗರದಲ್ಲಿ ಅಳವಡಿಸಲಾಗಿದ್ದ ಬ್ಯಾನರ್‌ಗಳನ್ನು ತೆರವು ಮಾಡಲಾಯಿತು.

ಬ್ಯಾಟರಾಯನಪುರ ವಿಭಾಗದ ಸಹಕಾರನಗರದ ಮುಖ್ಯರಸ್ತೆಗಳಲ್ಲಿ ಮರ ಮತ್ತು ಕಂಬಗಳ ಮೇಲೆ ಹಾದುಹೋಗಿರುವ, ಬಾಗಿರುವ ಒಎಫ್‌ಸಿ ಕೇಬಲ್‌ಗಳನ್ನು ತೆಗೆದುಹಾಕಲಾಯಿತು.

ಮಹದೇವಪುರ ವಲಯದ ಕೆ.ಆರ್ ಪುರ ಸ್ಕೈವಾಕ್ ಬಳಿ ಹಾಗೂ ಮುನ್ನೆಕೊಳ್ಳಾಲು ಬಸ್ ತಂಗುದಾಣದ ಮುಖ್ಯರಸ್ತೆ; ರಾಜರಾಜೇಶ್ವರಿನಗರ ವಲಯದ ಜೆ.ಪಿ ಪಾರ್ಕ್, ಯಶವಂತಪುರ, ಆರ್.ಆರ್. ನಗರ, ವಿಶ್ವೇಶ್ವರಯ್ಯ ಬಡಾವಣೆ 5ನೇ ಬ್ಲಾಕ್, ಲಕ್ಷ್ಮಿದೇವಿನಗರದ ವಿವಿಧ ರಸ್ತೆಗಳು, ದಕ್ಷಿಣ ವಲಯದ ಬನಶಂಕರಿ 1ನೇ ಹಂತ, ಸದ್ದುಗುಂಟೆಪಾಳ್ಯ ವ್ಯಾಪ್ತಿಯ ಬನ್ನೇರುಘಟ್ಟ ಮುಖ್ಯರಸ್ತೆ, ವಿ.ವಿ ಪುರ, ಮಡಿವಾಳ ಮುಖ್ಯರಸ್ತೆಗಳಲ್ಲಿನ ಪಾದಚಾರಿ ಮಾರ್ಗದಲ್ಲಿದ್ದ ತಾತ್ಕಾಲಿಕ ಮಳಿಗೆಗಳು, ತಳ್ಳುಗಾಡಿಗಳು, ವ್ಯಾಪಾರಿ ಸಾಮಗ್ರಿಗಳು, ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಯಿತು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



ಯಲಹಂಕದಲ್ಲಿ ಪಾದಚಾರಿ ಮಾರ್ಗದಲ್ಲಿನ ಮಳಿಗೆಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದರು



'ತೃತೀಯ ವಿಶ್ವ ಹವ್ಯಕ ಸಮ್ಮೇಳನ'ದ ನಿಮಿತ್ತ ಅಖಿಲ ಹವ್ಯಕ ಮಹಾಸಭಾ ಬಸವನಗುಡಿಯಿಂದ ಗಿರಿನಗರದವರೆಗೆ ಶನಿವಾರ ಏರ್ಪಡಿಸಿದ್ದ ಬೈಕ್ ರ್‍ಯಾಲಿಗೆ ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ ಎಲ್‌ಎ., ಗಾಯಕ ವಾಸುಕಿ ವೈಭವ್, 'ಹೊಸದಿಗಂತ' ಪತ್ರಿಕೆ ಸಂಪಾದಕ ವಿನಾಯಕ ಭಟ್ಟ ಮೂರೂರು ಚಾಲನೆ ನೀಡಿದರು. ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ, ಉಪಾಧ್ಯಕ್ಷ ಶ್ರೀಧರ ಜೆ.ಭಟ್ಟ ಕೆಕ್ಕಾರು, ಪ್ರಧಾನ ಕಾರ್ಯದರ್ಶಿ ವೇಣುವಿಘ್ನೇಶ ಸಂಪ, ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್ಟ, ಕಾರ್ಯದರ್ಶಿ ಪ್ರಶಾಂತ್ ಭಟ್ಟ, ಮಾಧ್ಯಮ ಸಂಚಾಲಕ ಸಂದೇಶ ತಲಕಾಲಕೊಪ್ಪ ಉಪಸ್ಥಿತರಿದ್ದರು

ಗೃಹ ಖಾತೆ ಉಳಿಸಿಕೊಂಡ ಮಹಾರಾಷ್ಟ್ರ ಸಿ.ಎಂ

ನಾಗ್ಪುರ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಎರಡು ವಾರದ ತರುವಾಯ ಖಾತೆಗಳ ಹಂಚಿಕೆ ಪ್ರಕ್ರಿಯೆ ನಡೆದಿದೆ.

ಪ್ರಮುಖವಾದ ಗೃಹ ಖಾತೆಯ ಜೊತೆಗೆ ಇಂಧನ, ಕಾನೂನು ಮತ್ತು ನ್ಯಾಯಾಂಗ, ಸಿಬ್ಬಂದಿ ಆಡಳಿತ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಖಾತೆಗಳನ್ನು ಸಿ.ಎಂ ಉಳಿಸಿಕೊಂಡಿದ್ದಾರೆ.

ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ನಗರಾಭಿವೃದ್ಧಿ ಹಾಗೂ ವಸತಿ, ಲೋಕೋಪಯೋಗಿ ಖಾತೆಗಳು ಹಂಚಿಕೆಯಾಗಿದ್ದರೆ, ಮತ್ತೊಬ್ಬ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಹಣಕಾಸು ಮತ್ತು ಯೋಜನೆ ಹಾಗೂ ಅಬಕಾರಿ ಖಾತೆ ಹಂಚಿಕೆಯಾಗಿವೆ.

ಶಿವಸೇನೆಯು ಗೃಹಖಾತೆಗೆ ಪಟ್ಟು ಹಿಡಿದಿತ್ತು, ಆದರೆ, ಗರಿಷ್ಠ ಸ್ಥಾನಗೆದ್ದಿರುವ ಮೈತ್ರಿಕೂಟದ ನೇತೃತ್ವ ವಹಿಸಿರುವ ಬಿಜೆಪಿ ಈ ಪಟ್ಟಿಗೆ ಮಣಿಯಲಿಲ್ಲ ಎಂದು ಮೂಲಗಳು ತಿಳಿಸಿವೆ.

50 ವರ್ಷಗಳ ಸಂಗೀತ ಸಾಧನೆಗೆ ಶಿಷ್ಯರಿಂದ ಗೌರವ ಸಮರ್ಪಣೆ

ಆರ್.ಕೆ.ಪದ್ಮನಾಭಗೆ 'ಗಾನಕಲಾ ಬ್ರಹ್ಮರ್ಷಿ' ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಕೆ.ಪಿ.ಅಭಿನಂದನಾ ಸಮಿತಿ ಹಮ್ಮಿಕೊಂಡಿದ್ದ 'ಪದ್ಮನಾದೋತ್ಸವ' ಸಮಾರಂಭದಲ್ಲಿ ಗಾಯಕ ಆರ್.ಕೆ. ಪದ್ಮನಾಭ ಅವರಿಗೆ ಶನಿವಾರ 'ಗಾನಕಲಾ ಬ್ರಹ್ಮರ್ಷಿ' ಬಿರುದು ಪ್ರದಾನ ಮಾಡಲಾಯಿತು.

ಅವರ 75ನೇ ಜನ್ಮದಿನ ಹಾಗೂ 50 ವರ್ಷಗಳ ಸಂಗೀತ ಸಾಧನೆಯ ಪ್ರಯುಕ್ತ ನಡೆದ ಸಮಾರಂಭದಲ್ಲಿ ಶಿಷ್ಯರು ಅವರನ್ನು ಗೌರವಿಸಿದರು. ಬೆಳ್ಳಿ ಕಿರೀಟ, ಚಿನ್ನದ ಸರ, ಕಾಲು ಕಡಗ, ನೋಟುಗಳ ಹಾರ, ಬಿರುದು ಪತ್ರ ಹಾಗೂ ಗೌರವ ಕಾಣಿಕೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುದ್ದೇನಹಳ್ಳಿಯ ಸತ್ಯಸಾಯಿ ಆಶ್ರಮದ ಮಧುಸೂದನ್ ಸಾಯಿ ಮಹಾರಾಜ್, 'ಆರ್.ಕೆ.ಪದ್ಮನಾಭ ಅವರ 50 ವರ್ಷಗಳ ಸಂಗೀತ ಸಾಧನೆಯ ಗೌರವಾರ್ಥವಾಗಿ 'ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ'ದ ವತಿಯಿಂದ ಪ್ರತಿವರ್ಷ ಓರ್ವ ವಿದ್ಯಾರ್ಥಿಗೆ ಚಿನ್ನದ ಪದಕ ನೀಡಲಾಗುವುದು' ಎಂದು ಘೋಷಿಸಿದರು.

ಸಂಸ್ಕಾರ ಭಾರತಿ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಮೈಸೂರು ಮಂಜುನಾಥ್, 'ಶಾಸ್ತ್ರೀಯ ಸಂಗೀತದಲ್ಲಿ ಆರ್.ಕೆ.ಪದ್ಮನಾಭ ಅವರ ಸಾಧನೆ ಅಪಾರ. ಅವರಿಗೆ ಕೇಂದ್ರ ಸರ್ಕಾರವು 'ಪದ್ಮ ಪ್ರಶಸ್ತಿ' ನೀಡಬೇಕು' ಎಂದು ಆಗ್ರಹಿಸಿದರು.

ಆರ್.ಕೆ.ಪದ್ಮನಾಭ ಅವರು, 'ಈ ರೀತಿಯ ಗುರುವಂದನಾ ಕಾರ್ಯಕ್ರಮ ಪ್ರತಿಯೊಬ್ಬ ಸಂಗೀತ ಗುರುವಿಗೂ ಸಿಗಬೇಕು. ಇದರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಪರಂಪರೆ ಬೆಳಗುತ್ತದೆ. ಪ್ರತಿ ಹಳ್ಳಿಯಲ್ಲೂ ಸಂಗೀತದ ಆಸಕ್ತಿ ಬೆಳೆಯುವಂತಾಗಬೇಕು' ಎಂದರು.

ಇದೇ ವೇಳೆ 'ಪದ್ಮಕುಸುಮ' ಅಭಿನಂದನಾ ಗ್ರಂಥ, ಆರ್.ಕೆ.ಪದ್ಮನಾಭ ಅವರ 'ಸುವರ್ಣ ಗಾನ' ಮತ್ತು 'ಬೇವು ಬೆಲ್ಲ' ಕಾದಂಬರಿಗಳು ಬಿಡುಗಡೆಯಾದವು.



ಸಮಾರಂಭದಲ್ಲಿ ಆರ್‌ಕೆ. ಪದ್ಮನಾಭ ಅವರಿಗೆ 'ಗಾನಕಲಾ ಬ್ರಹ್ಮರ್ಷಿ' ಬಿರುದು ಪ್ರದಾನ ಮಾಡಿ ಗೌರವಿಸಲಾಯಿತು. ಮಧುಸೂದನ್ ಸಾಯಿ ಮಹಾರಾಜ್, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿ.ವಿ. ಕುಲಪತಿ ವಿ.ಎನ್ ನರಸಿಂಹಮೂರ್ತಿ ಹಾಗೂ ಶಿಷ್ಯರು ಉಪಸ್ಥಿತರಿದ್ದರು

₹106 ಕೋಟಿ ವೆಚ್ಚದ ಸುಸಜ್ಜಿತ ಕಟ್ಟಡ • ವೈದ್ಯರು, ಸಿಬ್ಬಂದಿ ಕೊರತೆ: ತುರ್ತು ಚಿಕಿತ್ಸಾ ಘಟಕವೂ ಇಲ್ಲ

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ 'ಅನಾರೋಗ್ಯ'

• ಕೆ.ಎಸ್.ಸುನಿಲ್

ಬೆಂಗಳೂರು: ನೆಲ ಮಹಡಿ ಸೇರಿ ನಾಲ್ಕು ಅಂತಸ್ತಿನ ಸುಸಜ್ಜಿತ ಕಟ್ಟಡ, ನಿರ್ಮಾಣ ವೆಚ್ಚ ₹106 ಕೋಟಿ. ಒಳಗೆ ದೂಳು ಹಿಡಿದಿರುವ ಪರಿಕರಗಳು, ಆಧುನಿಕ ಯಂತ್ರೋಪಕರಣಗಳು. ಚಿಕಿತ್ಸಾ ಕೊಠಡಿಗಳಿಗೆ ಬೀಗ. ವೈದ್ಯರು ಮತ್ತು ಸಿಬ್ಬಂದಿ ಕೊರತೆ...

–ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಅಗ್ರಹಾರ ದಾಸರಹಳ್ಳಿ ವಾರ್ಡ್‌ನ ಎಂ.ಸಿ.ಲೇಔಟ್‌ನಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಅವರ ಗೌರವಾರ್ಥವಾಗಿ ನಿರ್ಮಿಸಿರುವ 300 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ದುಸ್ಥಿತಿ ಇದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ (ಬಿಬಿಎಂಪಿ) ಈ ಆಸ್ಪತ್ರೆ ನಿರ್ವಹಿಸುತ್ತಿದೆ. ಹಿಂದೆ ಹೆರಿಗೆ ಆಸ್ಪತ್ರೆಯಿದ್ದ ಸ್ಥಳದಲ್ಲೇ ₹106 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದು, 2023ರ ಮಾರ್ಚ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದ್ದರು.

ಆದರೆ, ಉದ್ಘಾಟನೆಯ ಬಳಿಕ ಕೆಲವು ತಿಂಗಳು ಆಸ್ಪತ್ರೆ ಕಾರ್ಯಾರಂಭವೇ ಮಾಡಿರಲಿಲ್ಲ. ಸಾರ್ವಜನಿಕರ ಒತ್ತಡದಿಂದಾಗಿ ಕೆಲ ತಿಂಗಳ ಹಿಂದೆ ಹೊರ ರೋಗಿಗಳ ವಿಭಾಗ (ಒಪಿಡಿ) ಕಾರ್ಯಾರಂಭ ಮಾಡಿತು. ನೇತ್ರ ತಪಾಸಣೆ, ಕಿವಿ, ಮೂಗು, ಗಂಟಲು ತಪಾಸಣೆ, ದಂತ ವೈದ್ಯರ ಸೇವೆ ಮಾತ್ರ ಲಭ್ಯ ಇದೆ.

ತಜ್ಞ ವೈದ್ಯರು ಮತ್ತು ಸಿಬ್ಬಂದಿ ಕೊರತೆಯಿಂದಾಗಿ ತುರ್ತು ಚಿಕಿತ್ಸಾ ಘಟಕ ಇನ್ನೂ ಕಾರ್ಯನಿರ್ವಹಿಸುತ್ತಿಲ್ಲ. ರೋಗಿಗಳಿಗೆ ಪೂರ್ಣ ಪ್ರಮಾಣದಲ್ಲಿ ವೈದ್ಯಕೀಯ ಸೇವೆ ದೊರಕುತ್ತಿಲ್ಲ ಎನ್ನುತ್ತಾರೆ ಆಸ್ಪತ್ರೆಯ ವೈದ್ಯರು.

ಹೈಟೆಕ್ ಕಟ್ಟಡ ನೋಡಿ ನಿತ್ಯ ನೂರಾರು ರೋಗಿಗಳು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬರುತ್ತಾರೆ. ದಾಸರಹಳ್ಳಿ, ತಾವರೆಕೆರೆ, ವಿಜಯನಗರ, ಹೊಸಹಳ್ಳಿ, ಗೋವಿಂದರಾಜನಗರ, ಕಾಮಾಕ್ಷಿಪಾಳ್ಯ, ಲಗ್ಗೆರೆ, ನಂದಿನಿ ಲೇಔಟ್ ಸೇರಿ ವಿವಿಧೆಡೆಯಿಂದ ಬಡ ಹಾಗೂ ಮಧ್ಯಮ ವರ್ಗದವರು ಬರುತ್ತಿದ್ದಾರೆ. ಆದರೆ, ಆರೋಗ್ಯ ಸೇವೆ ದೊರೆಯದೆ ವಾಪಸ್ ತೆರಳುತ್ತಿದ್ದಾರೆ.

ನೆಲ ಮಹಡಿಯಲ್ಲಿ ಒಪಿಡಿ ವಿಭಾಗ ಇದೆ. ಮೊದಲ ಮಹಡಿಯಲ್ಲಿ ಸಣ್ಣ ಪ್ರಮಾಣದ (ಮೈನರ್) ಶಸ್ತ್ರಚಿಕಿತ್ಸೆಗಳು ನಡೆಯಲಿವೆ. ಹರ್ನಿಯಾ, ಪೈಲ್ಸ್ ಶಸ್ತ್ರಚಿಕಿತ್ಸೆಗಳನ್ನು ಮಾತ್ರ ಮಾಡಲಾಗುತ್ತಿದೆ. ಏಳು ಶಸ್ತ್ರ ಚಿಕಿತ್ಸಾ ಕೊಠಡಿಗಳಿವೆ. ತುರ್ತು ನಿಗಾ ಘಟಕ, ವೆಂಟಿಲೇಟರ್ ವ್ಯವಸ್ಥೆ ಇಲ್ಲ. ಪ್ರಮುಖ (ಮೇಜರ್) ಶಸ್ತ್ರಚಿಕಿತ್ಸೆಗಳಿಗೆ ಕೆ.ಸಿ.ಜನರಲ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತಿದೆ.

ಸದ್ಯ ಏಳು ವೈದ್ಯರು ಪಾಳಿ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಹೊರಗುತ್ತಿಗೆ ಮೇಲೆ ವೈದ್ಯರು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ತಜ್ಞ ವೈದ್ಯರು, ಶುಶ್ರೂಷಕರು, ಅರೆ ವೈದ್ಯಕೀಯ ಸಿಬ್ಬಂದಿ, ಪ್ರಯೋಗಾಲಯ ತಂತ್ರಜ್ಞರ ನೇಮಕಾತಿ ಆಗಿಲ್ಲ.

ಮಾಹಿತಿ ನಿರಾಕರಣೆ: ಲಭ್ಯವಿರುವ ಸೌಲಭ್ಯ ಕುರಿತು ವೈದ್ಯಕೀಯ ಅಧೀಕ್ಷಕ ಯೋಗಾನಂದ ಅವರು ಮಾಹಿತಿ ನೀಡಲು ನಿರಾಕರಿಸಿದರು. ಎರಡು ಬಾರಿ ಅವರನ್ನು ಭೇಟಿ ಮಾಡಿದಾಗಲೂ, 'ಹಿರಿಯ ಅಧಿಕಾರಿಯಿಂದ ಅನುಮತಿ ಪತ್ರ ತರಬೇಕು. ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಮಾಹಿತಿ ಸಿಗುತ್ತದೆ ನೋಡಿಕೊಳ್ಳಿ' ಎಂದಷ್ಟೇ ಹೇಳಿದರು.

'ಆಸ್ಪತ್ರೆ ಉದ್ಘಾಟನೆಯ ಆರಂಭದಲ್ಲಿ ಆರೋಗ್ಯ ಇಲಾಖೆಗೆ ಹಸ್ತಾಂತರಿಸಬೇಕೋ ಅಥವಾ ಬಿಬಿಎಂಪಿಯೇ ನಿರ್ವಹಣೆ ಮಾಡಬೇಕೋ ಎಂಬ ಚರ್ಚೆ ಇತ್ತು. ಸದ್ಯ, ಬಿಬಿಎಂಪಿ ನಿರ್ವಹಣೆ ಮಾಡುತ್ತಿದೆ. ಗುತ್ತಿಗೆ ಆಧಾರದಲ್ಲಿ ವೈದ್ಯರು ಮತ್ತು ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ತಜ್ಞ ವೈದ್ಯರ ಕೊರತೆ ಇರುವುದರಿಂದ ಪ್ರಮುಖ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿಲ್ಲ. ಆರೋಗ್ಯ ಇಲಾಖೆಯು ತಜ್ಞ ವೈದ್ಯರು, ಶುಶ್ರೂಷಕರು, ಪ್ಯಾರಾ ಮೆಡಿಕಲ್ ಸಿಬ್ಬಂದಿ ನಿಯೋಜನೆ ಮಾಡಿದ ಬಳಿಕ ರೋಗಿಗಳಿಗೆ ಎಲ್ಲಾ ಸೇವೆಗಳು ದೊರೆಯಲಿವೆ' ಎಂದು ಹೇಳಿದರು.

ಅಂಕಿ ಅಂಶ

300 ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ

100-120 ಒಪಿಡಿಗೆ ನಿತ್ಯ ಭೇಟಿ ನೀಡುವ ರೋಗಿಗಳು

07 ಸದ್ಯ ಕಾರ್ಯನಿರ್ವಹಿಸುತ್ತಿರುವ ವೈದ್ಯರು

20-30 ತಿಂಗಳಿಗೆ ಸರಾಸರಿ ನಡೆಯುವ ಸಣ್ಣ ಶಸ್ತ್ರಚಿಕಿತ್ಸೆಗಳು



ಅಗ್ರಹಾರ ದಾಸರಹಳ್ಳಿ ವಾರ್ಡ್‌ನ ಎಂ.ಸಿ ಲೇಔಟ್ ನಲ್ಲಿ 300 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ. ಪ್ರಜಾವಾಣಿ ಚಿತ್ರ:

ದೂಳು ಹಿಡಿದ ಯಂತ್ರೋಪಕರಣಗಳು

ಆಸ್ಪತ್ರೆ ತಳಮಹಡಿಯಲ್ಲಿ ಪ್ರಯೋಗಾಲಯ, ವಿಕಿರಣಶಾಸ್ತ್ರ ವಿಭಾಗ, ವಿದ್ಯುತ್, ಅಗ್ನಿಶಾಮಕ, ಎಸ್‌.ಟಿ.ಪಿ, ಪಾರ್ಕಿಂಗ್, ಮೂರು ಲಿಫ್ಟ್ ಇದೆ. ನೆಲಮಹಡಿಯಲ್ಲಿ ಒಪಿಡಿ ವಿಭಾಗ ಹಾಗೂ ಉಳಿದ ಮಹಡಿಗಳಲ್ಲಿ ಪ್ರಯೋಗಾಲಯ, ಔಷಧಾಲಯ, ತುರ್ತು ಚಿಕಿತ್ಸೆ, ಒಳರೋಗಿ ವಿಭಾಗ, ಐ.ಸಿ.ಯು, ಶಸ್ತ್ರ ಚಿಕಿತ್ಸಾ ವಿಭಾಗ, ಡಯಾಲಿಸಿಸ್ ಸೆಂಟರ್, ಎಕ್ಸ್ ರೇ ವಿಭಾಗ, ಸಾಮಾನ್ಯ, ಸ್ಪೆಷಲ್ ವಾರ್ಡ್‌ಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಸಿಟಿ ಸ್ಕ್ಯಾನಿಂಗ್, ಎಂಆರ್‌ಐ ಯಂತ್ರಗಳು ದೂಳು ಹಿಡಿದಿವೆ.

'ಹೆಸರಿಗಷ್ಟೇ ಹೈಟೆಕ್...'

'ಹೆಸರಿಗಷ್ಟೇ ಇದು ಹೈಟೆಕ್ ಆಸ್ಪತ್ರೆ ಅತ್ಯಾಧುನಿಕ ಯಂತ್ರೋಪಕರಣಗಳು ಇವೆ. ತಜ್ಞ ವೈದ್ಯರ ನೇಮಕವಾಗಿಲ್ಲ. ಆಸ್ಪತ್ರೆಯ ಉದ್ಘಾಟನೆ ಸಂದರ್ಭದಲ್ಲಿ ಕಿದ್ವಾಯಿ ಆಸ್ಪತ್ರೆ, ನಿಮ್ಹಾನ್ಸ್, ಜಯದೇವ ಹೃದ್ರೋಗ ಆಸ್ಪತ್ರೆಯ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಮಾತುಕತೆ ನಡೆಯಿತು. ಆದರೆ ಆಸ್ಪತ್ರೆ ಪೂರ್ಣ ಪ್ರಮಾಣದಲ್ಲಿ ಆರಂಭವಾಗದ ಕಾರಣ ರೋಗಿಗಳಿಗೆ ಚಿಕಿತ್ಸೆ ದೊರೆಯುತ್ತಿಲ್ಲ' ಎಂದು ಆಸ್ಪತ್ರೆ ವೈದ್ಯರು ಬೇಸರ ವ್ಯಕ್ತಪಡಿಸಿದರು.

ಅಂಗಾಂಗ ದಾನ: 'ಬೆಳಕಾದ' ಅಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ದಾಟುತ್ತಿದ್ದಾಗ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ 48 ವರ್ಷದ ಅಂಧ ವ್ಯಕ್ತಿಯೊಬ್ಬರ, ಅಂಗಾಂಗಗಳನ್ನು ದಾನ ಮಾಡಲಾಗಿದ್ದು, ಅಂಗಾಂಗ ವೈಫಲ್ಯಕ್ಕೆ ಒಳಗಾಗಿದ್ದವರಿಗೆ ಬೆಳಕಾಗಿದ್ದಾರೆ.

ಮಂಜುನಾಥ್ ವಿ. ಅವರು ಅಂಗಾಂಗ ದಾನ ಮಾಡಿದ್ದಾರೆ. ಇದೇ 14ರಂದು ಸಂಜೆ 6.30ರ ವೇಳೆಗೆ ಮೈಸೂರು ರಸ್ತೆಯಲ್ಲಿ ಕುಂಬಳಗೋಡು ಸಮೀಪ ಕದಂಬ ಹೋಟೆಲ್ ಬಳಿ, ಇಬ್ಬರು ಅಂಧ ಸ್ನೇಹಿತರ ಜತೆಗೆ ರಸ್ತೆ ದಾಟುವಾಗ ಅಪಘಾತ ಸಂಭವಿಸಿತ್ತು. ಮಂಜುನಾಥ್ ಅವರ ತಲೆಗೆ ಗಂಭೀರ ಗಾಯವಾದರೆ, ಇಬ್ಬರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದವು. ಮಂಜುನಾಥ್ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆಸ್ಪತ್ರೆಯ ನರರೋಗ ತಜ್ಞ ಡಾ.ನವೀನ್ ಮಂಡ್ಯ ನೇತೃತ್ವದಲ್ಲಿ ಚಿಕಿತ್ಸೆ ಒದಗಿಸಲಾಗಿತ್ತು. ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಡಿ. 16ರಂದು ವೈದ್ಯರು ಘೋಷಿಸಿದರು. ಆಗ, ಮಂಜುನಾಥ್ ಅವರ ಅಂಗಾಂಗವನ್ನು ದಾನವಾಗಿ ಪಡೆಯಲು ಕುಟುಂಬದವರು ಸಮ್ಮತಿಸಿದ್ದರಿಂದ, ಜೀವಸಾರ್ಥಕತೆ ಸಂಸ್ಥ ಯಡಿ ಮೂತ್ರಪಿಂಡ, ಹೃದಯದ ಕವಾಟಗಳು, ಯಕೃತ್ತು ಮತ್ತು ಕಣ್ಣಿನ ಕಾರ್ನಿಯಾವನ್ನು ದಾನವಾಗಿ ಪಡೆಯಲಾಯಿತು.

ಜೀವಸಾರ್ಥಕತೆ ಸಂಸ್ಥೆಯಡಿ ಅಂಗಾಂಗಕ್ಕಾಗಿ ಹೆಸರು ನೋಂದಾಯಿಸಿದ್ದ ಅಸ್ಪಾಂನ ವ್ಯಕ್ತಿಯೊಬ್ಬರಿಗೆ ಯಕೃತ್ತು ಮತ್ತು ಮೂತ್ರಪಿಂಡ ಕಸಿ ಮಾಡಲಾಯಿತು. ಮತ್ತೊಂದು ಮೂತ್ರಪಿಂಡವನ್ನು ನೆಫ್ರೊ-ಯೂರಾಲಜಿ ಸಂಸ್ಥೆಗೆ ಕಳುಹಿಸಲಾಯಿತು. ಹೃದಯ ಕವಾಟಗಳನ್ನು ಜಯದೇವ ಹೃದ್ರೋಗ ಸಂಸ್ಥೆಗೆ ನೀಡಲಾಯಿತು. ಕಾರ್ನಿಯಾಗಳನ್ನು ಪ್ರಭಾ ಐ ಕ್ಲಿನಿಕ್ ರವಾನಿಸಲಾಗಿದೆ ಎಂದು ಆಸ್ಪತ್ರೆಯ ಹೇಳಿಕೆ ತಿಳಿಸಿದೆ.



'ಬಸವನಗುಡಿ ವಾರ್ಡ್ ನಂ. 154 ರೆಸಿಡೆಂಟ್ಸ್ ಅಸೋಸಿಯೇಷನ್' ಉದ್ಘಾಟನೆ ಸಮಾರಂಭದಲ್ಲಿ ಚಿದಾನಂದ, ಆರ್‌. ರಾಮರಾಜ್ ಅರಸ್, ಸುರಳ್ಕರ್ ವಿಕಾಸ್ ಕಿಶೋರ್, ಗಾಯಕಿ ಶಶಿಕಲಾ, ಸುಶೀಲಮ್ಮ ರಾವ್, ಪ್ರತಿಬಿಂಬ ಅಧ್ಯಕ್ಷ ಮುರಳಿ ವಿ. ರಾವ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಕಾರ್ಯದರ್ಶಿ ವೆಂಕಟೇಶ್ ಪ್ರಸಾದ್, ಸತ್ಯಲಕ್ಷ್ಮಿ ರಾವ್ ಭಾಗವಹಿಸಿದ್ದರು

'ಬಸವನಗುಡಿ ವಾರ್ಡ್ ನಿವಾಸಿಗಳ ಸಂಘ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಸಂಸ್ಥೆಗಳಿರುವ ಬಸವನಗುಡಿಯಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಹಾಗೂ ಪ್ರದೇಶದ ಸ್ವಚ್ಛತೆ, ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲು 'ಬಸವನಗುಡಿ ವಾರ್ಡ್ ನಂ. 154 ರೆಸಿಡೆಂಟ್ಸ್ ಅಸೋಸಿಯೇಷನ್' ಶನಿವಾರದಿಂದ ಅಧಿಕೃತವಾಗಿ ಕಾರ್ಯಾರಂಭಿಸಿತು.

'ನಮ್ಮ ಬಡಾವಣೆ, ನಮ್ಮ ಬವಣೆ, ನಮ್ಮ ಹೊಣೆ' ಘೋಷವಾಕ್ಯದಡಿ 30 ವರ್ಷದಿಂದ 75 ವರ್ಷ ವಯಸ್ಸಿನ ವರೆಗಿನ ಪದಾಧಿಕಾರಿಗಳನ್ನು ಈ ಸಂಸ್ಥೆ ಒಳಗೊಂಡಿದೆ' ಎಂದು ಅಧ್ಯಕ್ಷೆ ಸತ್ಯಲಕ್ಷ್ಮಿ ರಾವ್ ಅವರು ಉದ್ಘಾಟನಾ ಸಮಾರಂಭದಲ್ಲಿ ತಿಳಿಸಿದರು.

'ರಸ್ತೆ ಅಭಿವೃದ್ಧಿ, ಕಸ ವಿಲೇವಾರಿ, ನೀರು ಸರಬರಾಜು ವಿಷಯಗಳಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ನಾಗರಿಕರು ಸಂಘಕ್ಕೆ ತಿಳಿಸಬಹುದು. ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸುವ ಕೆಲಸವನ್ನು ಮಾಡುತ್ತೇವೆ. 24 ಗಂಟೆಯೂ ಸಂಘದ ಕಾರ್ಯಕ್ಕೆ ಬದ್ಧವಾಗಿರುತ್ತೇವೆ' ಎಂದು ಸತ್ಯಲಕ್ಷ್ಮಿ ಹೇಳಿದರು.

'ಎಲ್ಲರನ್ನೂ ಸೇರಿಸಿ ಸಂಸ್ಥೆ ಕಟ್ಟಲಾಗಿದೆ. ಮುಂದಿನ ಕಾರ್ಯಾಚರಣೆಯೇ ಸವಾಲಿನ ಕೆಲಸ. ಸರ್ಕಾರ ಅಥವಾ ಬಿಬಿಎಂಪಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದು ಅರಿವಾಗುತ್ತದೆ. ವ್ಯವಸ್ಥೆಯಲ್ಲಿ ಕೆಲಸ ಮಾಡುವ ಅರಿವು ನಿಮಗೆಲ್ಲ ಆಗುತ್ತದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅಭಿಪ್ರಾಯಪಟ್ಟರು.

'ಆರೋಗ್ಯ ಹಾಗೂ ಸ್ವಚ್ಛತೆಗೆ ಸಂಬಂಧಿಸಿ ಬಿಬಿಎಂಪಿ ಹಲವು ಕಾರ್ಯಗಳನ್ನು ಮಾಡುತ್ತಿದೆ. ಈ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸಲು ಸಂಸ್ಥೆಯಿಂದ ಯಾವುದಾದರೂ ಹೊಸ ಯೋಜನೆಗಳಿದ್ದರೆ ಗಮನಕ್ಕೆ ತರಬಹುದು' ಎಂದು ಅವರು ಹೇಳಿದರು.

'ರೋಟರಿ ಕ್ಲಬ್ ವತಿಯಿಂದ ಶಿಕ್ಷಣ, ಆರೋಗ್ಯ ವಿಷಯದಲ್ಲಿ ಜನರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಅಗತ್ಯವಿರುವ ಫಲಾನುಭವಿಗಳನ್ನು ಗುರುತಿಸುವುದು ನಮ್ಮಂಥ ಸಂಸ್ಥೆಗಳ ಕೆಲಸ' ಎಂದು ರೋಟರಿ ಕ್ಲಬ್‌ನ ಡಿಸ್ಟ್ರಿಕ್ಟ್ ಗವರ್ನರ್ ಆರ್‌. ರಾಮರಾಜ್ ಅರಸ್ ಅಭಿಪ್ರಾಯ ಪಟ್ಟರು.

'ಬಸವನಗುಡಿಯಲ್ಲಿ 1954ರಿಂದ ವಾಸಿಸುತ್ತಿದ್ದೇನೆ. ದಶಕದ ಹಿಂದೆ ಇಲ್ಲಿ ಪ್ರತಿ ಮನೆಯ ಮುಂದೆ ಹೂದೋಟವಿತ್ತು. ಇಂದು ಎಲ್ಲ ಕಡೆ ಕಾಂಕ್ರೀಟ್ ಆಗಿದೆ. ಗಾಂಧಿಬಜಾರ್‌ಗೆ ವಾಯುವಿಹಾರಕ್ಕೆ ಬರುತ್ತಿದ್ದೆವು. ಈಗ ದಟ್ಟಣೆ ಹೆಚ್ಚಾಗಿ, ಸ್ವಚ್ಛತೆ ಇಲ್ಲದೆ ಯಾಕೆ ಬಂದೆವೋ ಎಂಬಂತಾಗಿದೆ. ಎಲ್ಲವನ್ನೂ ಸರಿಪಡಿಸುವ ಜವಾಬ್ದಾರಿ ನಾಗರಿಕರದ್ದು. ಸಂಘ ಅಂತಹ ಕೆಲಸ ಮಾಡಲಿ' ಎಂದು ಮಹಿಳಾ ಮಂಡಳಿ ಅಧ್ಯಕ್ಷೆ ಸುಶೀಲಮ್ಮ ರಾವ್ ಹೇಳಿದರು.

ಪದಾಧಿಕಾರಿಗಳಾದ ಹನುಮೇಶ್ ಯಾವಗಲ್, ಶ್ರೀಧರ್, ಸುಧಾಕರ್, ಗೋಪಿನಾಥ್, ಸುಧೀಂದ್ರ ರಾವ್, ಪ್ರಸನ್ನ ಉಪಸ್ಥಿತರಿದ್ದರು.

ಮನೆ-ಮನೆ ಭೇಟಿ: ಮತದಾರರ ಪಟ್ಟಿ 'ಸೂಪರ್ ಚೆಕ್ಕಿಂಗ್'

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಶನಿವಾರ ಮನೆಗಳಿಗೆ ಭೇಟಿ ನೀಡಿ, 'ಸೂಪರ್ ಚೆಕ್ಕಿಂಗ್' ಕಾರ್ಯವನ್ನು ನಡೆಸಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ಪುನರ್ ಪರಿಶೀಲನೆಯನ್ನು ಅಧಿಕಾರಿಗಳು ಸರಿಯಾಗಿ ಮಾಡಿದ್ದಾರೆಯೇ, ಇಲ್ಲವೇ ಎಂದು ಪರಿಶೀಲಿಸಲು 'ಸೂಪರ್ ಚೆಕ್ಕಿಂಗ್' ನಡೆಸಿದರು. ಬ್ಯಾಟರಾಯನಪುರ, ಹೆಬ್ಬಾಳ, ವಿಜಯನಗರ ಹಾಗೂ ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರಗಳಲ್ಲಿ ನಮೂನೆಗಳನ್ನು ಪರಿಶೀಲಿಸಿದರು. ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಶರಣಪ್ಪ ಉಪಸ್ಥಿತರಿದ್ದರು.

ಚರ್ಚ್‌ಸ್ಟ್ರೀಟ್: ಕಸಮುಕ್ತಗೊಳಿಸಲು ಸಭೆ

ಬೆಂಗಳೂರು: ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್ 'ಫೇಸ್‌ಲಿಫ್ಟ್' ಯೋಜನೆಯಡಿ ಚರ್ಚ್‌ಸ್ಟ್ರೀಟ್ ಅನ್ನು ಕಸಮುಕ್ತ ರಸ್ತೆಯಾಗಿಸಲು ವ್ಯಾಪಾರಿಗಳ ಸಭೆ ನಡೆಸಲಾಯಿತು. ಅಂಗಡಿ ಮಾಲೀಕರು, ಸಂಚಾರ ಪೊಲೀಸರು ಮತ್ತು ಬಿಬಿಎಂಪಿ ಆರೋಗ್ಯಾಧಿಕಾರಿಗಳು, ನಿವಾಸಿಗಳು ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಚರ್ಚ್‌ಸ್ಟ್ರೀಟ್‌ನಲ್ಲಿ ಪ್ರತಿದಿನ ಉತ್ಪತ್ತಿಯಾಗುವ 5 ಸಾವಿರ ಕೆಜಿ ತ್ಯಾಜ್ಯವನ್ನು ಯಾವ ರೀತಿ ನಿರ್ವಹಣೆ ಮಾಡಬೇಕು ಎಂಬ ಬಗ್ಗೆ ಚರ್ಚಿಸಲಾಯಿತು.

'ಚರ್ಚ್‌ಸ್ಟ್ರೀಟ್ ಅನ್ನು ಸುಂದರವಾಗಿಸಲು ನಡೆಯುತ್ತಿರುವ ಕೆಲಸ ಪ್ರಶಂಸನೀಯ' ಎಂದು ಶಾಸಕ ಎನ್‌.ಎ.ಹ್ಯಾರಿಸ್ ತಿಳಿಸಿದರು. ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಶನ್ ಸಿಇಒ ಮಾಲಿನಿ ಗೋಯಲ್ ಅವರು, 'ಚರ್ಚ್‌ಸ್ಟ್ರೀಟ್ ಸುಂದರಗೊಳಿಸುವ ಕಾರ್ಯಕ್ಕೆ ಸ್ಥಳೀಯ ನಿವಾಸಿಗಳು, ವ್ಯಾಪಾರಸ್ಥರು ಸಹಕರಿಸಬೇಕು' ಎಂದು ಕೋರಿದರು.

ಜಾತಿಗಣತಿ: ವರದಿ ಬಹಿರಂಗಪಡಿಸಲು ಮನವಿ

ಬೆಂಗಳೂರು: 'ಜಾತಿ ಗಣತಿ ವಿವರವನ್ನು ಬಹಿರಂಗಪಡಿಸಿದ ಬಳಿಕ ಸಣ್ಣ, ಅತಿಸಣ್ಣ ಜಾತಿಗಳು ಸೇರಿದಂತೆ ಪರಿಶಿಷ್ಟ ಜಾತಿಯ ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಬೇಕು' ಎಂದು ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮು ಆಗ್ರಹಿಸಿದರು.

ಈ ಬಗ್ಗೆ ಪರಿಶಿಷ್ಟ ಜಾತಿ ಒಳಮೀಸಲಾತಿ ಆಯೋಗದ ಸದಸ್ಯ ಕಾರ್ಯದರ್ಶಿ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

2011ರಲ್ಲಿ ಜೆ.ಸಿ.ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯು 101 ಪರಿಶಿಷ್ಟ ಜಾತಿಗಳನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಿ ವರದಿ ನೀಡಿತ್ತು. ಅದರಂತೆ ಸೂಕ್ತ ತಿದ್ದುಪಡಿ ಮಾಡಿ ಅನುಮೋದನೆಗೆ ಭಾರತ ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು.



ಸಮಾರಂಭದಲ್ಲಿ ಗಾಯಕಿ ಎಂ.ಎಸ್‌. ಶೀಲಾ ಅವರಿಗೆ 'ಎಸ್‌.ವಿ. ನಾರಾಯಣ ಸ್ವಾಮಿ ರಾವ್ ಜನ್ಮಶತಮಾನೋತ್ಸವ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎಸ್‌.ಎನ್‌. ರಾಮಪ್ರಸಾದ್, ಯೆಲ್ಲಾ ವೆಂಕಟೇಶ್ವರ ರಾವ್, ಎ. ರವೀಂದ್ರ ಹಾಗೂ ಸಂಪತ್ ರಾಜು ಉಪಸ್ಥಿತರಿದ್ದಾರೆ.

20 ಸಾಧಕರಿಗೆ ಜೀವಮಾನ ಸಾಧನೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ಶನಿವಾರ ಹಮ್ಮಿಕೊಂಡಿದ್ದ ಎಸ್‌.ವಿ. ನಾರಾಯಣಸ್ವಾಮಿ ರಾವ್ ಜನ್ಮಶತಮಾನೋತ್ಸವ ಸಮಾರಂಭದಲ್ಲಿ 20 ಮಂದಿಗೆ 'ಎಸ್‌.ವಿ. 'ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಟ್ರಸ್ಟ್ ಅಧ್ಯಕ್ಷ ಎ.ರವೀಂದ್ರ, ವ್ಯವಸ್ಥಾಪಕ ಟ್ರಸ್ಟಿ ಎಸ್‌.ಎನ್‌.ರಾಮಪ್ರಸಾದ್, ಮೃದಂಗ ವಾದಕ ಯೆಲ್ಲಾ ವೆಂಕಟೇಶ್ವರ ರಾವ್, ಗಾಯಕ ಎಸ್‌.ಶಂಕರ್, ಬೆಂಗಳೂರು ದಕ್ಷಿಣದ ನೆಲಗುಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಪತ್ ರಾಜು ಪ್ರಶಸ್ತಿ ಪ್ರದಾನ ಮಾಡಿದರು.

ಕೊಳಲು ವಾದಕ ಎಂ.ಎಸ್‌. ಶ್ರೀನಿವಾಸಮೂರ್ತಿ, ಮೃದಂಗ ವಾದಕ ಗುರುವಾಯೂರ್ ದೊರೈ, ಪಿಟೀಲು ವಾದಕ ಎಸ್‌. ಶೇಷಗಿರಿ ರಾವ್, ಬೆಂಗಳೂರು ಗಣೇಶ ಉತ್ಸವದ ಸಂಸ್ಥಾಪಕ ಎ. ಮರಿಯಪ್ಪ, ಗಾಯಕರಾದ ನಾಗಮಣಿ ಶ್ರೀನಾಥ್, ಎಂ.ಎಸ್‌. ಶೀಲಾ, ಆರ್‌.ಕೆ. ಪದ್ಮನಾಭ, ರಾಜ್‌ಕುಮಾರ್ ಭಾರತಿ, ಪತ್ರಕರ್ತೆ ಆರ್‌. ಪೂರ್ಣಿಮಾ, ವೀಣಾ ವಾದಕರಾದ ಸುಮಾ ಸುಧೀಂದ್ರ, ಡಿ. ಬಾಲಕೃಷ್ಣ, 'ಅನನ್ಯ' ಸಂಸ್ಥೆ ಸ್ಥಾಪಕ ಆರ್‌.ವಿ. ರಾಘವೇಂದ್ರ, ಗಮಕಿ ಎಂ.ಆರ್‌. ಸತ್ಯನಾರಾಯಣ, ಸಂಗೀತ ವಿಮರ್ಶಕ ಎಂ. ಸೂರ್ಯಪ್ರಸಾದ್, ಬೆಂಗಳೂರು ಮುದ್ರಣಾಲಯದ ಎಚ್‌.ಆರ್‌. ಅನಂತ್, ಪತ್ರಕರ್ತೆ ಚೂಡಿ ಶಿವರಾಂ, ಪ್ರಭಾತ್ ಕಲಾವಿದರು ಶ್ರೀನಿವಾಸ್ ಟಿ.ಡಿ., ರಾಜೇಂದ್ರ ಟಿ.ಡಿ., ಸಂಗೀತ ತಜ್ಞರಾದ ಶಿವರಾಮಯ್ಯ ಹಾಗೂ ವಿನಾಯಕ ಅಕುನೂರಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬೆಳಿಗ್ಗೆ ಮಂಗಳವಾದ್ಯದ ವಿಶೇಷ ಸಂಗೀತ ಕಛೇರಿ ನಡೆಯಿತು. ಮಧ್ಯಾಹ್ನ ಎಸ್‌.ಶಂಕರ್ ಅವರಿಂದ ಗಾಯನ ನಡೆಯಿತು. ಸಂಜೆಯವರೆಗೂ ನಡೆದ ಸಂಗೀತ ಕಛೇರಿಯಲ್ಲ ಪ್ರವೀಣ್ ಗೋಡ್ಖಿಂಡಿ, ಯೆಲ್ಲಾ ವೆಂಕಟೇಶ್ವರ ರಾವ್, ಜಯತೀರ್ಥ ಮೇವುಂಡಿ, ಪ್ರಸಾದ್ ಕಾಮತ್, ನಂದಿನಿರಾವ್ ಸೇರಿದಂತೆ ಹಲವರು ಕಾರ್ಯಕ್ರಮ ನೀಡಿದರು.

ಸುಧಾ ಓದಿರಿ





ಅತ್ಯಲ್ಪ ಕೃಷಿ ಆದಾಯ ರೈತರ ಬದುಕು ಅಸಹನೀಯ

ಗ್ರಾಹಕ ನೀಡುವ ಬೆಲೆಯಲ್ಲಿ ಮೂರನೇ ಒಂದು ಭಾಗ ಮಾತ್ರ ಪಡೆಯುವ ರೈತ

● ಬಿ.ವಿ.ಶ್ರೀನಾಥ್

ದಿನಕ್ಕೆ ಕೇವಲ ಇಪ್ಪತ್ತ ಏಳು ರೂಪಾಯಿ ಆದಾಯ!

ಭಾರತದಲ್ಲಿ ದಿಲ್ಲಿಯಿಂದ ಹಳ್ಳಿ ಮಟ್ಟದವರೆಗೆ ರಾಜಕಾರಣಿಗಳು ನಿತ್ಯ ಸ್ಮರಣೆ ಮಾಡುವ, 'ದೇಶದ ಬೆನ್ನೆಲುಬು', 'ಅನ್ನದಾತ' ಎಂಬೆಲ್ಲ ವಿಶೇಷಣಗಳಿಂದ ಕರೆಸಿಕೊಳ್ಳುವ, ಸಂಪೂರ್ಣವಾಗಿ ಕೃಷಿಯನ್ನೇ ಅವಲಂಬಿಸಿರುವ ರೈತನ ಕುಟುಂಬದ ದಿನದ ಆದಾಯ ಇದು.

ರೈತರ ಬೇಡಿಕೆಗಳ ಪರಿಶೀಲನೆಗಾಗಿ ಸುಪ್ರೀಂ ಕೋರ್ಟ್ ನೇಮಿಸಿದ್ದ ನ್ಯಾ. ನವಾಬ್ ಸಿಂಗ್ ನೇತೃತ್ವದ ತಜ್ಞರ ಸಮಿತಿ ತನ್ನ ಮಧ್ಯಂತರ ವರದಿಯಲ್ಲಿ ಈ ಅಂಶವನ್ನು ಪ್ರಸ್ತಾಪಿಸಿದೆ. 2018-19ರ ರೈತರ ಸ್ಥಿತಿಗತಿ ಬಗೆಗಿನ ರಾಷ್ಟ್ರೀಯ ಸಮೀಕ್ಷೆಯ (ಸಿಚುಯೇಷನ್ ಅಸೆಸ್‌ಮೆಂಟ್ ಆಫ್ ಅಗ್ರಿಕಲ್ಚರಲ್ ಹೌಸ್ ಹೋಲ್ಡ್ಸ್ ಆ್ಯಂಡ್ ಲ್ಯಾಂಡ್ ಆ್ಯಂಡ್ ಲೈವ್‌ಸ್ಟಾಕ್ ಹೋಲ್ಡಿಂಗ್ ಆಫ್ ಹೌಸ್ ಹೋಲ್ಡ್ಸ್ ಆಫ್ ರೂರಲ್ ಇಂಡಿಯಾ) ದತ್ತಾಂಶ ಆಧರಿಸಿ ಸಮಿತಿ ವರದಿ ತಯಾರಿಸಿದೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಅಡಿ ಕೂಲಿಯಾಳಿಗೆ ನೀಡಲಾಗುತ್ತಿರುವ ಕನಿಷ್ಠ ಮೊತ್ತ ₹234. ರೈತರ ಆದಾಯವು ನರೇಗಾ ಕೂಲಿಗಿಂತಲೂ ಸುಮಾರು ಎಂಟೂವರೆ ಪಟ್ಟು ಕಡಿಮೆ ಇದೆ. ಸರ್ಕಾರದ ಮಾನದಂಡದ ಪ್ರಕಾರ, ಇಷ್ಟು ಆದಾಯ ಇರುವ ರೈತ ಕುಟುಂಬಗಳೆಲ್ಲವೂ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳೇ ಆಗಿವೆ. ದಿನಕ್ಕೆ ₹27ರಷ್ಟು ಕಡಿಮೆ ಆದಾಯದಲ್ಲಿ ಘನತೆಯ ಬದುಕು ನಡೆಸುವುದು ಇರಲಿ, ಜೀವನ ನಡೆಸಲಿಕ್ಕೇ ಸಾಧ್ಯವಿಲ್ಲ; ಹೀಗಾಗಿಯೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಎಂದು ಸಮಿತಿ ಅಭಿಪ್ರಾಯ ಪಟ್ಟಿದೆ. ಇದರಲ್ಲಿ ಕರ್ನಾಟಕದ ರೈತರ ಆದಾಯವನ್ನೂ ಪರಿಗಣಿಸಿದೆ.

ಮತ್ತೊಂದು ಸಮಿತಿಯೂ ಇಂಥವೇ ಅಂಶಗಳುಳ್ಳ ವರದಿ ನೀಡಿದೆ. ಅದು ಸಂಸದ ಚರಣ್‌ಜೀತ್ ಸಿಂಗ್ ಚನ್ನಿ ಅಧ್ಯಕ್ಷತೆಯ ಕೃಷಿ, ಹೈನುಗಾರಿಕೆ, ಆಹಾರ ಸಂಸ್ಕರಣೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿ. ಡಿಸೆಂಬರ್ 17ರಂದು ಸಮಿತಿಯು ಲೋಕಸಭೆಗೆ ತನ್ನ ವರದಿ ಸಲ್ಲಿಸಿದ್ದು, ಕೃಷಿ ಕ್ಷೇತ್ರವನ್ನು ತೀವ್ರವಾಗಿ ಬಾಧಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ, ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ದಿಸೆಯಲ್ಲಿ ಮಹತ್ವದ ಶಿಫಾರಸುಗಳನ್ನು ಮಾಡಿದೆ.

ಸರ್ಕಾರ ನೇಮಿಸಿದ ಸಮಿತಿ, ಆಯೋಗಗಳು ರೈತರ ಪರಿಸ್ಥಿತಿಯ ಬಗ್ಗೆ ಆಗಿಂದಾಗ್ಗೆ ವರದಿಗಳನ್ನು ನೀಡುತ್ತಲೇ ಇವೆ. ಆದರೆ, ರೈತರ ಸ್ಥಿತಿ ಸುಧಾರಿಸುವ ಬದಲು ಮತ್ತಷ್ಟು ಹದಗೆಡುತ್ತಲೇ ಇದೆ. ವಿಪರೀತ ಎನ್ನುವಷ್ಟು ದುಡಿದರೂ ಬೇಸಾಯಗಾರನ ಆದಾಯ ಅತ್ಯಂತ ಕನಿಷ್ಠ ಮಟ್ಟದಲ್ಲಿ ಏಕೆ ಉಳಿದಿದೆ? ರೈತ ದುಡಿದದ್ದು ಎಲ್ಲಿಗೆ ಹೋಗುತ್ತಿದೆ, ಯಾರ ಪಾಲಾಗುತ್ತಿದೆ? ಯಾವುದು ಈ ಅರ್ಥಶಾಸ್ತ್ರ?

ರೈತನ ಪಾಲು ಅತ್ಯಲ್ಪ: ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ದಿಸೆಯಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (ಆರ್‌ಬಿಐ) ಅಧ್ಯಯನವನ್ನು ಗಮನಿಸಬೇಕಿದೆ. ಆರ್‌ಬಿಐ ಇದೇ ವರ್ಷದ ಅಕ್ಟೋಬರ್‌ನಲ್ಲಿ 'ವರ್ಕಿಂಗ್ ಪೇಪರ್ ಸೀರೀಸ್' ಪ್ರಕಟ ಮಾಡಿದ್ದು, ಅದರಲ್ಲಿ ರೈತನ ದುಡಿಮೆಯಲ್ಲಿ ಯಾರ್‍ಯಾರಿಗೆ ಎಷ್ಟು ಪಾಲು ಸಿಗುತ್ತದೆ ಎನ್ನುವುದರ ಬಗ್ಗೆ ಅಂಕಿಅಂಶ ಸಮೇತ ಉಲ್ಲೇಖಿಸಿದೆ.

ಟೊಮೆಟೊ, ಈರುಳ್ಳಿ ಮತ್ತು ಆಲೂಗಡ್ಡೆ ಈ ಮೂರು ತರಕಾರಿಗಳು, ಹಾಲು, ಮೊಟ್ಟೆ, ಮಾಂಸದ ಬೆಲೆಗಳ ಬಗ್ಗೆ ಆರ್‌ಬಿಐ ಅಧ್ಯಯನದಲ್ಲಿ ರೈತರ ದುಡಿಮೆ ಯಾರ ಪಾಲಾಗುತ್ತಿದೆ ಎನ್ನುವ ವಿವರದ ಬಗ್ಗೆ ಒಂದು ಸ್ಥೂಲ ನೋಟವನ್ನು ಒದಗಿಸುತ್ತದೆ.

ಈ ತರಕಾರಿಗಳಿಗೆ ಗ್ರಾಹಕ ನೀಡುವ ಬೆಲೆಯಲ್ಲಿ ರೈತನ ಕೈ ಸೇರುವುದು ಎಷ್ಟು ಎನ್ನುವುದನ್ನು ಲೆಕ್ಕಾಚಾರ ಮಾಡಲಾಗಿದೆ. ಗ್ರಾಹಕ ನೀಡುವ ಬೆಲೆಯ ಪೈಕಿ ಟೊಮೆಟೊ ಬೆಲೆಯಲ್ಲಿ ಶೇ 33, ಈರುಳ್ಳಿ ಬೆಲೆಯಲ್ಲಿ ಶೇ 36 ಮತ್ತು ಆಲೂಗಡ್ಡೆ ಬೆಲೆಯಲ್ಲಿ ಶೇ 37 ಮಾತ್ರ ರೈತರಿಗೆ ಸಿಗುತ್ತದೆ ಎಂದು ಆರ್‌ಬಿಐ ಅಧ್ಯಯನ ಹೇಳಿದೆ.

ಪಶುಸಂಗೋಪನೆ ವಿಭಾಗದಲ್ಲಿ, ಹೈನುಗಾರಿಕೆ, ಮೊಟ್ಟೆ ಮತ್ತು ಕೋಳಿ ಸಾಕಣೆಯ ವಿಭಾಗಗಳಲ್ಲಿಯೂ ಗ್ರಾಹಕರು ನೀಡುವ ಹಣದಲ್ಲಿ ರೈತನಿಗೆ ಸಿಗುವುದು ಕಡಿಮೆ. ಹೈನುಗಾರಿಕೆಯಲ್ಲಿ ಶೇ 70, ಮೊಟ್ಟೆಯಲ್ಲಿ ಶೇ 75, ಕೋಳಿ ಸಾಕಣೆಯಲ್ಲಿ ಶೇ 56ರಷ್ಟು ಪಾಲು ರೈತರಿಗೆ ಸಿಗುತ್ತದೆ ಎಂದು ಅದು ಹೇಳಿದೆ.

ರೈತರಿಗೆ ಸಿಗುವ ಹಣದಲ್ಲಿ ಉತ್ಪಾದನಾ ವೆಚ್ಚಗಳ ಜತೆಗೆ ಕಾರ್ಮಿಕರು ಮತ್ತು ಸಾಗಾಣಿಕಾ ವೆಚ್ಚವೂ ಸೇರಿರುತ್ತದೆ. ತರಕಾರಿ ರೈತರಿಂದ ಮಧ್ಯವರ್ತಿಗಳಿಗೆ, ಅವರಿಂದ ಸಗಟು ಮಾರಾಟಗಾರರಿಗೆ, ಅವರಿಂದ ಚಿಲ್ಲರೆ ಮಾರಾಟಗಾರರಿಗೆ ಸೇರಿ, ಕೊನೆಗೆ ಗ್ರಾಹಕರ ಕೈ ಸೇರುತ್ತದೆ. ಪ್ರತಿಯೊಂದು ಹಂತದಲ್ಲಿಯೂ ರೈತನಿಗೆ ಆದಾಯ ಸೋರಿಕೆ ಆಗುತ್ತದೆ ಎನ್ನುತ್ತಾರೆ ರೈತ ಮುಖಂಡರು.

ಉತ್ಪಾದನೆ ಹೆಚ್ಚು, ಬೆಲೆ ಕಡಿಮೆ: ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 2022–23ರಲ್ಲಿ ಸಾರ್ವಕಾಲಿಕ ಹೆಚ್ಚಳ ಕಂಡಿತ್ತು (32.97 ಕೋಟಿ ಟನ್). ಎಣ್ಣೆಬೀಜಗಳ ಉತ್ಪಾದನೆ 4.14 ಕೋಟಿ ಟನ್. ಒಟ್ಟಾರೆ ಕೃಷಿ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಎರಡನೆಯ ಸ್ಥಾನ ಪಡೆದಿದೆ. ಆದರೆ, ಕೃಷಿ ರಫ್ತಿನಲ್ಲಿ ಭಾರತದ ಪಾಲು ಶೇ 2.4 ಆಗಿದ್ದು, ಜಗತ್ತಿನಲ್ಲಿ 8ನೇ ಸ್ಥಾನ ಪಡೆದಿದೆ. ತಾನು ಬೆಳೆದ ತರಕಾರಿಯ ಬೆಲೆ ಕುಸಿದು ಅದನ್ನು ರೈತ ರಸ್ತೆಗೆ ಸುರಿಯುವ ಘಟನೆಗಳು ನಮ್ಮಲ್ಲಿ ಸಾಮಾನ್ಯ.

'ರೈತ ಹೆಚ್ಚು ಬೆಳೆಯುತ್ತಾನೆ, ಹಾಗಾಗಿ ಬೆಲೆ ಸಿಕ್ಕುವುದಿಲ್ಲ ಎನ್ನುವುದು ಅರ್ಥವಿಲ್ಲದ ವಾದ. ದೇಶದ ಎಲ್ಲ ಭಾಗದಲ್ಲೂ ವರ್ಷದ ಎಲ್ಲ ಕಾಲದಲ್ಲೂ ಆಹಾರ ಉತ್ಪನ್ನಗಳಿಗೆ ಬೇಡಿಕೆ ಸಮನಾಗಿರುತ್ತದೆ. ಬೆಳೆಯನ್ನು ಬೆಳೆಯೋ ಸ್ಥಳದಿಂದ ಬೇಡಿಕೆ ಇರುವ ಜಾಗಕ್ಕೆ ಸಾಗಣೆ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಜತೆಗೆ, ಸರ್ಕಾರಗಳು ಉತ್ಪನ್ನಗಳನ್ನು ಖರೀದಿಸಬೇಕು. ಉದಾರೀಕರಣ ವ್ಯವಸ್ಥೆ ಬಂದು, ವಿಶ್ವ ವ್ಯಾಪಾರ ಸಂಸ್ಥೆಯ (ಡಬ್ಲ್ಯುಟಿಒ) ಪ್ರಸ್ತಾವಗಳಿಗೆ ಭಾರತ ಸಹಿ ಹಾಕಿದ ನಂತರ ಸರ್ಕಾರ ರೈತ ಉತ್ಪನ್ನಗಳನ್ನು ಖರೀದಿ ಮಾಡಬಾರದು ಎನ್ನುವ ನಿಯಮ ಬಂತು. ನಮ್ಮ ಸರ್ಕಾರಗಳಿಗೂ ಅದೇ ಬೇಕಿತ್ತು' ಎನ್ನುತ್ತಾರೆ ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ.

ಸ್ಥಿರವಾಗಿರುವ ಇಳುವರಿ, ಉತ್ಪಾದನಾ ವೆಚ್ಚದಲ್ಲಿ ಏರಿಕೆ, ಕೃಷಿ ಆದಾಯದಲ್ಲಿ ಇಳಿಕೆ, ಕುಸಿಯುತ್ತಿರುವ ಉದ್ಯೋಗಾವಕಾಶ ಇವೆಲ್ಲವೂ ಕೃಷಿ ಕ್ಷೇತ್ರದ ಬಿಕ್ಕಟ್ಟನ್ನು ಹೆಚ್ಚಿಸಿವೆ; ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರ ಬದುಕನ್ನು ಸಂಕಷ್ಟಕ್ಕೀಡು-ಮಾಡಿವೆ. ಕಡಿಮೆ ಹುಟ್ಟುವಳಿ, ಹೆಚ್ಚು ಸಾಲ ಸಹ ರೈತರ ಬದುಕನ್ನು ಅಸಹನೀಯಗೊಳಿಸಿವೆ ಎನ್ನುವುದು ಕೃಷಿ ಆರ್ಥಿಕ ತಜ್ಞರ ವಿಶ್ಲೇಷಣೆ.

ಹಂತಹಂತದಲ್ಲೂ ಆದಾಯ ಸೋರಿಕೆ: ರೈತ ಬೆಳೆ ಬೆಳೆಯುವಾಗ ಮತ್ತು ಬೆಳೆದ ಮೇಲೆ ಹಲವು ಹಂತಗಳಲ್ಲಿ ಕಷ್ಟ–ನಷ್ಟ ಅನುಭವಿಸುತ್ತಾನೆ. ಫಸಲನ್ನು ಒಕ್ಕಣೆ ಮಾಡುವ ಹಂತದಲ್ಲಿ ಬೆಳೆ ನಷ್ಟವಾಗುತ್ತದೆ. ಆಹಾರ ಸಂಸ್ಕರಣಾ ಉದ್ಯಮಗಳ ಸಚಿವಾಲಯದ 2022ರ ದತ್ತಾಂಶದ ಪ್ರಕಾರ, ಭಾರತದಲ್ಲಿ ಕಟಾವಿನ ನಂತರ ಬೆಳೆ ನಷ್ಟದ ಮೊತ್ತವೇ ವಾರ್ಷಿಕವಾಗಿ ₹1.53 ಲಕ್ಷ ಕೋಟಿ. ಕಟಾವಿನ ನಂತರದ ನಷ್ಟದ ಮೊತ್ತವು ಮೊಟ್ಟೆ, ಮೀನು ಮತ್ತು ಮಾಂಸ (ಶೇ 22), ಹಣ್ಣುಗಳು (ಶೇ 19) ಮತ್ತು ತರಕಾರಿಗಳಲ್ಲಿ (ಶೇ 18) ಗಣನೀಯವಾಗಿದೆ. ವ್ಯಾಪಾರಿಗಳ ಕೈ ಸೇರಿದ ಮೇಲೂ ನಷ್ಟದ ಲೆಕ್ಕಾಚಾರ ಹಾಕಿಯೇ ವ್ಯಾಪಾರ ಮಾಡಲಾಗುತ್ತದೆ. ಪ್ರತಿ ಹಂತದಲ್ಲೂ ನಷ್ಟದ ಲೆಕ್ಕಾಚಾರ ಉತ್ಪಾದಕರಿಗೆ ವರ್ಗ ಆಗುತ್ತಿದೆ.

ಮುಂದಿನ ಹಂತ ಮಾರುಕಟ್ಟೆಯ-ದ್ದು. ಮಾರುಕಟ್ಟೆಗೆ ತರಕಾರಿ ಸೇರಿದಂತೆ ಬೆಳೆ ಸಾಗಣೆ ಮಾಡುವುದು ಇಂದಿಗೂ ದುಸ್ಸಾಹಸದ ಕೆಲಸವಾಗಿದೆ. ರೈತರ ದೀನ ಸ್ಥಿತಿಗೆ ಅಸಮರ್ಪಕ ಮಾರುಕಟ್ಟೆ ಮತ್ತು ಗ್ರಾಹಕರು ಮತ್ತು ರೈತರ ನಡುವೆ ಒಂದು ವ್ಯವಸ್ಥಿತವಾದ, ಸಮಗ್ರವಾದ ಮಾರಾಟ ಜಾಲ ಇಲ್ಲದೇ ಇರುವುದೇ ಕಾರಣ. ಈ ಬಗ್ಗೆ ಅಧ್ಯಯನ ನಡೆಸಿದ್ದ ರೈತರ ಆದಾಯ ದ್ವಿಗುಣ ಸಮಿತಿಯು (ಡಿಎಫ್‌ಐ), ಪೂರೈಕೆ ವ್ಯವಸ್ಥೆಯನ್ನು ಬಲಪಡಿಸುವುದು ಪ್ರಮುಖ ಆದ್ಯತೆಯಾಗಬೇಕಿದೆ ಎಂದಿತ್ತು.

ಆಹಾರ ಧಾನ್ಯಗಳು ಮತ್ತು ಇತರ ಕೃಷಿ ಉತ್ಪನ್ನಗಳ ಬೆಲೆ ಹೆಚ್ಚಿಸಿದರೆ, ಆಹಾರ ಹಣದುಬ್ಬರ ಹೆಚ್ಚಾಗಿ ಬಡವರಿಗೆ ತೊಂದರೆ ಆಗುತ್ತದೆ ಎನ್ನುವ ವಾದವನ್ನು ಮಂಡಿಸಲಾಗುತ್ತದೆ. ಅರ್ಥ ವ್ಯವಸ್ಥೆ-ಯಲ್ಲಿ ಗ್ರಾಹಕನೇ ಸಾರ್ವಭೌಮ, ಸರಿ. ಆದರೆ, ರೈತನೂ ಗ್ರಾಹಕನೇ ಎನ್ನುವುದನ್ನು, ಆತನಿಗೂ ಆದಾಯ ಬೇಕು ಎನ್ನುವುದನ್ನು ಸರ್ಕಾರ ಸೇರಿದಂತೆ ಎಲ್ಲರೂ ಮರೆತಿದ್ದಾರೆ. ನಗರದ ಮೇಲ್ಮಧ್ಯಮ ವರ್ಗದ ಗ್ರಾಹಕರ ಹಿತಾಸಕ್ತಿಗಳಿಗೆ ಹೆಚ್ಚು ಮನ್ನಣೆ ಸಿಗುತ್ತಿದೆ ಎನ್ನುವ ವಾದ ಇದೆ. ಕೃಷಿ ಆರ್ಥಿಕ ತಜ್ಞರು ಹೇಳುವಂತೆ, ಉತ್ಪನ್ನಗಳ ಬೆಲೆ ಹೆಚ್ಚಾದಾಗ ಅವುಗಳ ರಫ್ತು ನಿಷೇಧಿಸುವ ತಕ್ಷಣದ ಕ್ರಮಗಳಿಗಿಂತ ರೈತರ, ವ್ಯಾಪಾರಿಗಳ ಮತ್ತು ಗ್ರಾಹಕರ ಹಿತವನ್ನು ಗಮನದಲ್ಲಿಟ್ಟು-ಕೊಂಡು ದೀರ್ಘಕಾಲದ ಯೋಜನೆಗಳನ್ನು ರೂಪಿಸಬೇಕಿದೆ.

ಭಾರತದ ಕೃಷಿ ವಲಯವು ಶೇ 42.3 ಮಂದಿಗೆ ಜೀವನೋಪಾಯ ಒದಗಿಸಿದ್ದು, ದೇಶದ ಜಿಡಿಪಿಯಲ್ಲಿ ಶೇ 18.2 ಪಾಲು ಹೊಂದಿದೆ ಎಂದು ಆರ್ಥಿಕ ಸಮೀಕ್ಷೆ 2023–24ಯಲ್ಲಿ ಹೇಳಿದೆ. 'ದೇಶದ ಶೇ 42.3ರಷ್ಟು ಮಂದಿಗೆ ಶೇ 18.2ರಷ್ಟು ಆದಾಯ ಮಾತ್ರ ಸಿಗುತ್ತಿದೆ. ಬೇರೆ ಕ್ಷೇತ್ರಗಳಲ್ಲಿ ಉತ್ಪಾದನೆ ಹೆಚ್ಚಾದರೆ, ಉತ್ಪಾದಕನಿಗೆ ಲಾಭವಾಗುತ್ತದೆ. ಹೆಚ್ಚು ಕಾರುಗಳನ್ನು ತಯಾರಿಸಿದಷ್ಟೂ ಕಂಪನಿ ಮಾಲೀಕನ ಆದಾಯ ಹೆಚ್ಚಾಗುತ್ತದೆ. ಆದರೆ, ರೈತರ ವಿಚಾರದಲ್ಲಿ ಹಾಗಾಗುವುದಿಲ್ಲ. ಕೃಷಿ ಎನ್ನುವುದನ್ನು ಒಂದು ವಲಯವನ್ನಾಗಿ ನೋಡಲಾಗುತ್ತಿದೆಯೇ ಹೊರತು ಅಲ್ಲಿ ಮನುಷ್ಯರು ಇದ್ದಾರೆ ಎನ್ನುವುದನ್ನು ಯಾರೂ ಲಕ್ಷಿಸುತ್ತಿಲ್ಲ' ಎನ್ನುತ್ತಾರೆ ಕಮ್ಮರಡಿ.

ಕೃಷಿಯಿಂದ ಬರುವ ಆದಾಯಕ್ಕಿಂತಲೂ ಕೂಲಿಯಿಂದ ಬರುವ ಆದಾಯ ಹೆಚ್ಚಿದೆ. ಕೂಲಿ ಆದಾಯ ಕೃಷಿ ಆದಾಯಕ್ಕಿಂತ ಮೂರು ಪಟ್ಟು ವೇಗದಲ್ಲಿ ಹೆಚ್ಚುತ್ತಿದೆ. ಇಂಥ ಸ್ಥಿತಿಯಲ್ಲಿ ಗ್ರಾಮೀಣ ಭಾರತದ ಮಟ್ಟಿಗೆ ಹೈನುಗಾರಿಕೆಯೊಂದೇ ಆಸರೆಯಾಗಿದ್ದು, ಇದರ ಆದಾಯದಲ್ಲಿ ವಾರ್ಷಿಕವಾಗಿ ಶೇ 12.9ರಷ್ಟು ಹೆಚ್ಚಳವಾಗುತ್ತಿದೆ. ಆದರೆ, ಕೃಷಿ ಆದಾಯದಲ್ಲಿ ಇದರ ಪಾಲು ಅರ್ಧಕ್ಕಿಂತಲೂ ಕಡಿಮೆ ಇದೆ. ಹೈನುಗಾರಿಕೆ ಹೆಚ್ಚು ಉತ್ಪಾದನಾ ವೆಚ್ಚ ಬೇಡುತ್ತದೆ. ಆದರೆ, ಗ್ರಾಮೀಣ ಕೃಷಿ ಕುಟುಂಬಗಳು ಹಣಕಾಸಿನ ಮುಗ್ಗಟ್ಟಿನ, ಸಾಲಗಾರ ಕುಟುಂಬಗಳಾಗಿದ್ದು, ವರ್ಷದಿಂದ ವರ್ಷಕ್ಕೆ ಅವುಗಳ ಸಾಲ ಬೆಳೆಯುತ್ತಲೇ ಇದೆ ಎನ್ನುವುದನ್ನು ಅಂಕಿಅಂಶಗಳು ತೋರುತ್ತಿವೆ.

ಕೆಲವು ನೀತಿ ನಿರೂಪಕರು ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಉತ್ಪಾದಕತೆಯು ಕಡಿಮೆ ಇರುವುದರಿಂದ ಹೆಚ್ಚು ಮಂದಿ ಕೃಷಿ ಕ್ಷೇತ್ರದಿಂದ ಬೇರೆ ಕ್ಷೇತ್ರಗಳಿಗೆ ವಲಸೆ ಹೋಗುವುದೇ ಪರಿಹಾರ ಎಂದು ಹೇಳುತ್ತಾರೆ. ಆದರೆ, ನಗರ ಪ್ರದೇಶಗಳಲ್ಲಿ ಇರುವವರಿಗೇ ಅಗತ್ಯ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿಲ್ಲ ಎನ್ನುವುದನ್ನು ಅಂಕಿಅಂಶ ತೋರುತ್ತಿವೆ. ಭಾರತದ ಕಾರ್ಮಿಕ ಬಲದಲ್ಲಿ ಯುವಕರ (15–29 ವರ್ಷದ) ಪಾಲು ಶೇ 42.1 ಆಗಿದೆ (2022–23ರ ಅಂಕಿಅಂಶ). ಕೋವಿಡ್ ಸಾಂಕ್ರಾಮಿಕದ ನಂತರ ದೇಶದಲ್ಲಿ 4 ಕೋಟಿ ಮಂದಿ ಹಳ್ಳಿಗಳಿಗೆ ಹಿಂದಿರುಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೃಷಿ ಆದಾಯವನ್ನು ಹೆಚ್ಚಿಸುವುದೊಂದೇ ಹಳ್ಳಿಗಳನ್ನು, ಅಲ್ಲಿರುವ ದೊಡ್ಡ ಜನಸಮೂಹವನ್ನು ಉಳಿಸುವ ಮಾರ್ಗವಾಗಿದೆ ಎನ್ನುವುದು ಕೃಷಿ ಆರ್ಥಿಕ ತಜ್ಞರ ಅಭಿಮತ.

'ನಮ್ಮಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚು ಜನ ಬೇಕಿಲ್ಲ, ಬೇರೆ ಕ್ಷೇತ್ರಗಳಿಗೆ ವಲಸೆ ಹೋಗಿ ಎನ್ನಲಾಗುತ್ತಿದೆ. ಆದರೆ, ಪಶ್ಚಿಮದ ದೇಶಗಳಲ್ಲಿ ಜನರನ್ನು ಕೃಷಿಯಲ್ಲಿ ಉಳಿಸಿಕೊಳ್ಳಲು ಸರ್ಕಾರಗಳು ಕಸರತ್ತು ನಡೆಸುತ್ತಿವೆ. ಅದಕ್ಕಾಗಿ ಭಾರಿ ಸಬ್ಸಿಡಿ, ಸಹಾಯಧನ ನೀಡಲಾಗುತ್ತಿದೆ. ಬೆಲೆ ಕಡಿಮೆ ಆದಾಗಲೂ, ಏನೂ ಬೆಳೆಯದೇ ಇದ್ದರೂ ಸಬ್ಸಿಡಿ ನೀಡುವ ಮೂಲಕ ಸರ್ಕಾರಗಳು ರೈತರ ನೆರವಿಗೆ ನಿಲ್ಲುತ್ತಿವೆ' ಎನ್ನುವ ಪ್ರಕಾಶ್ ಕಮ್ಮರಡಿ ಅವರು, 'ಭಾರತದಲ್ಲೂ ಸರ್ಕಾರಗಳು ಕೃಷಿಗೆ ಹೆಚ್ಚು ಹಣ ವಿನಿಯೋಗಿಸಬೇಕು, ರೈತರ ನೆರವಿಗೆ ಬರಬೇಕು' ಎನ್ನುತ್ತಾರೆ.

ಇದ್ದೂ ಇಲ್ಲದಂತಿರುವ ಎಂಎಸ್‌ಪಿ: ಎಂಎಸ್‌ಪಿ ರೈತನ ಬೆಳೆಗಳ ಬೆಲೆ ಸ್ಥಿರತೆಯನ್ನು ಕಾಪಾಡುತ್ತದೆ. ರೈತರ ಬಗ್ಗೆ ಸರ್ಕಾರ ರಚಿಸಿರುವ ಬಹುತೇಕ ಎಲ್ಲ ಆಯೋಗ, ಸಮಿತಿಗಳೂ ಎಂಎಸ್‌ಪಿ ಪರವಾಗಿ ಶಿಫಾರಸು ಮಾಡಿವೆ. ಆದರೆ, ಒಟ್ಟು 22 ಬೆಳೆಗಳಿಗೆ ಮಾತ್ರ ಬೆಂಬಲ ಬೆಲೆ ನೀಡಲಾಗುತ್ತಿದೆ. ಇದನ್ನು ಹೆಚ್ಚು ಬೆಳೆಗಳಿಗೆ ವಿಸ್ತರಿಸಬೇಕು ಮತ್ತು ಅದಕ್ಕೆ ಕಾನೂನು ಖಾತರಿ ನೀಡಬೇಕು ಎನ್ನುವುದನ್ನು ಸಮಿತಿಗಳು ಹೇಳಿವೆ. ರೈತರ ಬೇಡಿಕೆ ಕೂಡ ಇದೇ ಆಗಿದೆ.


ಎಂಎಸ್‌ಪಿ ವೈಜ್ಞಾನಿಕವಾಗಿ ನಿರ್ಧಾರವಾಗುತ್ತಿಲ್ಲ ಎನ್ನುವುದು ರೈತರ ದೊಡ್ಡ ತಕರಾರು. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಪ್ರತಿಯೊಂದು ಬೆಲೆಯ ಎಂಎಸ್‌ಪಿ ಅಂದಾಜು ಮಾಡುತ್ತದೆ. ಆದರೆ, ಕೇಂದ್ರ ಸರ್ಕಾರ ಈಗ ನೀಡುತ್ತಿರುವ ಎಂಎಸ್‌ಪಿಯು ಉತ್ಪಾದನಾ ವೆಚ್ಚಗಳದ ಹೆಚ್ಚಳವನ್ನು ಸರಿದೂ-ಗಿಸುತ್ತಿಲ್ಲ, ಸಾಮಾನ್ಯ ಹಣದುಬ್ಬರಕ್ಕೆ ತಕ್ಕಂತೆಯೂ ಇಲ್ಲ ಮತ್ತು ಅದು ಬೆಳೆಗಾರರ ಬದುಕಿನ ಮಟ್ಟವನ್ನು ಎತ್ತರಿಸುವಂತೆಯೂ ಇಲ್ಲ ಎನ್ನುವುದು ರೈತರ ವಾದವಾಗಿದೆ.

ಕೃಷಿ ಕ್ಷೇತ್ರವನ್ನು ಸರ್ಕಾರ ನಿರ್ಲಕ್ಷಿಸಿದ್ದು, ರೈತರ ಆದಾಯ ಏರಿಕೆ ಆಗದೇ ಇರುವುದು ದೇಶದ ಒಟ್ಟಾರೆ ಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿದೆ. ಭಾರತವು ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆ ಆಗಿದ್ದರೂ ತಲಾದಾಯದ ದೃಷ್ಟಿಯಿಂದ ಜಾಗತಿಕ ರಾಷ್ಟ್ರಗಳ ಪಟ್ಟಿಯಲ್ಲಿ ದೇಶವು 143ನೇ ಸ್ಥಾನದಲ್ಲಿದೆ.

ರೈತರ ಆದಾಯ ಹೆಚ್ಚಿಸುವುದು ಹಲವು ಹಂತಗಳಲ್ಲಿ ನಡೆಯಬೇಕಾದ ಪ್ರಕ್ರಿಯೆಯಾಗಿದೆ. ಹೆಚ್ಚು ಇಳುವರಿ ಬರುವ ಬೆಳೆ, ತಳಿ ಸಂಬಂಧ ಹೆಚ್ಚು ಸಂಶೋಧನೆ, ನಿಖರವಾದ ಹವಾಮಾನ ಮುನ್ಸೂಚನೆ, ಮಾಹಿತಿ ಪೂರೈಕೆ, ಸಾಗಣೆ ವ್ಯವಸ್ಥೆ, ದಾಸ್ತಾನು ವ್ಯವಸ್ಥೆ, ಪೂರೈಕೆ ಸರಪಳಿಗಳನ್ನು, ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸುವ ಕೆಲಸ ಆಗಬೇಕಿದೆ ಎನ್ನುವುದನ್ನು ಹಲವು ಸಮಿತಿಗಳು ತಮ್ಮ ವರದಿಗಳಲ್ಲಿ ಹೇಳಿವೆ.

ಒಂದು ಅರ್ಥ ವ್ಯವಸ್ಥೆಯಲ್ಲಿ ಎಲ್ಲ ಉತ್ಪನ್ನಗಳನ್ನು ತಯಾರಿಸುವವರು, ಸೇವೆಗಳನ್ನು ನೀಡುವವರು ಅದರ ಬೆಲೆಯನ್ನು ಅವರೇ ನಿಗದಿ ಮಾಡುತ್ತಾರೆ. ಆದರೆ ರೈತರು ಕೊಟ್ಟದ್ದನ್ನು ಮಾತ್ರ ಪಡೆಯುತ್ತಿದ್ದಾರೆ. ಈ ಕಾರಣದಿಂದಾಗಿಯೇ, ವೇತನ ಆಯೋಗದ ರೀತಿಯಲ್ಲಿ ರೈತ ಆದಾಯ ಆಯೋಗವನ್ನು ಮಾಡಬೇಕು ಎನ್ನುವುದು ಕೃಷಿ ತಜ್ಞರ ಸಲಹೆ. ತನ್ನ ಉತ್ಪನ್ನಕ್ಕೆ ತಾನೇ ಬೆಲೆ ನಿಗದಿ ಮಾಡಿ ಮಾರುಕಟ್ಟೆ ನಿಯಂತ್ರಿಸುವ ಅಧಿಕಾರ ರೈತರಿಗೆ ಬಂದಾಗ ಮಾತ್ರ ಅನ್ನದಾತರ ಬದುಕು ಹಸನಾಗಬಹುದು. ❖

ತರಕಾರಿಗೆ ಗ್ರಾಹಕ ನೀಡುವ ಹಣದಲ್ಲಿ ರೈತನ ಪಾಲು ಎಷ್ಟು?





ಕಲಬುರಗಿಯ ಹೊರವಲಯದ ಜಮೀನಿನಲ್ಲಿ ಬೆಳೆದಿರುವ ಈರುಳ್ಳಿ ಹಸನು ಮಾಡಲು ತೊಡಗಿರುವ ರೈತ ಕುಟುಂಬ –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ರೈತರ ಆದಾಯ ಮತ್ತು ಸಾಲ

54.0% 2019ರ ರಾಷ್ಟ್ರೀಯ ಮಾದರಿ ಸಮೀಕ್ಷೆ–77ರ ಪ್ರಕಾರ, ಹಳ್ಳಿಗಳಲ್ಲಿರುವ ಕೃಷಿ ಕುಟುಂಬಗಳ ಸಂಖ್ಯೆ

50.2% ಸಾಲಗಾರರಾಗಿರುವ ಕೃಷಿ ಕುಟುಂಬಗಳ ಪ್ರಮಾಣ

₹74,121 ಪ್ರತಿ ಕೃಷಿ ಕುಟುಂಬದ ಬಾಕಿ ಇರುವ ಸರಾಸರಿ ಸಾಲದ ಮೊತ್ತ

₹10,218 ಕೃಷಿ ಕುಟುಂಬದ ಮಾಸಿಕ ಆದಾಯ (ಎಲ್ಲ ಮೂಲಗಳಿಂದ) (2018–19ರ ಸಮೀಕ್ಷೆ). ಇದು ರಾಷ್ಟ್ರದ ಪ್ರತಿ ಕುಟುಂಬದ ಸರಾಸರಿ ಆದಾಯದ ಶೇ 20ಕ್ಕಿಂತಲೂ ಕಡಿಮೆ

● 2016–17ರಿಂದ 2021–22ರ ಅವಧಿಯಲ್ಲಿ ಕುಟುಂಬಗಳ ಮಾಸಿಕ ವೆಚ್ಚ ₹6,646ರಿಂದ ₹12,698ಕ್ಕೆ ಏರಿಕೆ; ರೈತ ಕುಟುಂಬಗಳ ಆರ್ಥಿಕ ಸಂಕಷ್ಟ ಹೆಚ್ಚಳ (ನಬಾರ್ಡ್ ವರದಿ)





ಹಾಲು ಸಂಗ್ರಹದ ಮಾದರಿ ಅನುಸರಿಸಿ

ಟೊಮೆಟೊ, ಈರುಳ್ಳಿ, ಆಲೂಗಡ್ಡೆ ಅಷ್ಟೇ ಅಲ್ಲ, ಎಲ್ಲ ಕೃಷಿ ಉತ್ಪನ್ನಗಳಲ್ಲೂ ರೈತರ ಶ್ರಮದ ಶೇ 50ಕ್ಕಿಂತಲೂ ಹೆಚ್ಚಿನ ಪಾಲು ಮಧ್ಯವರ್ತಿಗಳ ಪಾಲಾಗುತ್ತಿದೆ. ಕೃಷಿಕರಿಗೆ ಸಿಗುತ್ತಿರುವುದು ಅಲ್ಪ. ಎಪಿಎಂಸಿಗಳಲ್ಲಿ ದಲ್ಲಾಳಿಗಳು ರೈತರಿಂದ ಶೇ 10ರಷ್ಟು ಕಮಿಷನ್ ವಸೂಲಿ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕಠಿಣ ಕಾನೂನು ಜಾರಿಗೊಳಿಸಬೇಕು. ಹಾಲು ಸಂಗ್ರಹದ ಮಾದರಿಯಲ್ಲಿಯೇ ತರಕಾರಿ ಖರೀದಿಸಲು ಕ್ರಮ ಕೈಗೊಂಡರೆ ಮಧ್ಯವರ್ತಿಗಳ ಹಾವಳಿ ನಿಯಂತ್ರಿಸಬಹುದು

ಕುರುಬೂರು ಶಾಂತಕುಮಾರ್, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ

ತಂತ್ರಜ್ಞಾನ ಬಳಸಿ ನೇರವಾಗಿ ಮಾರಾಟ ಮಾಡಿ

ಸರ್ಕಾರಗಳಿಗೆ ರೈತರ ಪರ ಕಾಳಜಿ ಇದ್ದರೆ, ತಂತ್ರಜ್ಞಾನ ಬಳಸಿಕೊಂಡು ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ರೂಪಿಸಬೇಕು. ಇದು ಸರ್ಕಾರದ ಹೊಣೆಯಷ್ಟೇ ಅಲ್ಲ, ಸಾಫ್ಟ್‌ವೇರ್ ಕ್ಷೇತ್ರದಲ್ಲಿರುವ ರೈತರ ಮಕ್ಕಳ ಹೊಣೆಯೂ ಆಗಿದೆ. ಹೊಸ ಆ್ಯಪ್‌ಗಳನ್ನು ರೂಪಿಸಿ, ರೈತರು ಹಾಗೂ ಗ್ರಾಹಕರ ಮಧ್ಯೆ ನೇರ ಮಾರಾಟ ವ್ಯವಸ್ಥೆ ನಿರ್ಮಿಸಬೇಕು. ಅದಕ್ಕಾಗಿ ಸಣ್ಣ ಸರಕು ಸಾಗಣೆ ವಾಹನಗಳ ಮಾಲೀಕರನ್ನೂ ಬಳಸಿಕೊಂಡರೆ ಅವರಿಗೂ ಉದ್ಯೋಗ ದೊರೆಯಲಿದೆ. ಗ್ರಾಹಕರಿಗೆ ಸ್ಪರ್ಧಾತ್ಮಕ ದರಗಳಲ್ಲಿ ಆಹಾರ ಪದಾರ್ಥಗಳು ಸಿಕ್ಕರೆ, ರೈತರಿಗೆ ಗರಿಷ್ಠ ಬೆಲೆ ಸಿಗಲಿದೆ

ಪಚ್ಚೆ ನಂಜುಂಡಸ್ವಾಮಿ, ರೈತ ಮುಖಂಡ

ಬೆಲೆ ಕುಸಿದರೆ ಬಂಡವಾಳವೂ ಸಿಗಲ್ಲ

ಎರಡು ಎಕರೆಯಲ್ಲಿ ಟೊಮೆಟೊ ನಾಟಿ ಮಾಡಲು ₹ 6 ಲಕ್ಷ ಬಂಡವಾಳ ಹೂಡುತ್ತಿದ್ದೇನೆ. ಉಳುಮೆ, ಗೊಬ್ಬರ, ಮಲ್ಚಿಂಗ್ ಪೇಪರ್, ನಾರು (ಸಸಿ), ಕೀಟನಾಶಕ, ಹನಿ ನೀರಾವರಿ ವ್ಯವಸ್ಥೆ, ಕೂಲಿಗೆ ಇಷ್ಟು ಖರ್ಚಾಗುತ್ತದೆ. ಹಣ್ಣು ಬಿಡಲು 65 ದಿನ ಕಾಯಬೇಕು, ಎಕರೆಗೆ 30 ಟನ್ ಟೊಮೆಟೊ ಸಿಗುತ್ತದೆ. ಪ್ರಕೃತಿ ವಿಕೋಪ, ದರ ಕುಸಿತದಂಥ ತೊಂದರೆಗಳೇನೂ ಆಗದಿದ್ದರೆ ಎಕರೆಗೆ ₹ 5 ಲಕ್ಷದವರೆಗೆ ಸಿಗುತ್ತದೆ. ₹ 3 ಲಕ್ಷ ಬಂಡವಾಳ ಕಳೆದರೆ ₹ 2 ಲಕ್ಷ ಸಿಗುತ್ತದೆ. ಬೆಲೆ ಕುಸಿತ ಮತ್ತಿತರ ಸಮಸ್ಯೆಯಾದರೆ ಹಾಕಿದ ಬಂಡವಾಳವೂ ಬರಲ್ಲ

ಸತೀಶ್, ಕೋಲಾರದ ರೈತ

ತರಕಾರಿ ಬಿಟ್ಟು ಹೈನುಗಾರಿಕೆಗೆ ಮೊರೆ

ಎರಡು ಎಕರೆಯಲ್ಲಿ ಟೊಮೆಟೊ ಬೆಳೆದು ಎರಡು ವರ್ಷದಲ್ಲಿ ₹ 6 ಲಕ್ಷ ನಷ್ಟವಾಯಿತು. ಹೀಗಾಗಿ, ಟೊಮೆಟೊ ಬಿಟ್ಟು ಹೈನುಗಾರಿಕೆಯಲ್ಲಿ ತೊಡಗಿದ್ದೇನೆ. ಜಿಲ್ಲೆಯಲ್ಲಿ ಟೊಮೆಟೊಗೆ ರೋಗ ಹೆಚ್ಚುತ್ತಿದೆ, ಅಕಾಲಿಕ ಮಳೆ, ಬಿಸಿಲು ಹೆಚ್ಚಿದ್ದು, ಸರಿಯಾದ ಬೆಲೆಯೂ ಸಿಗುತ್ತಿಲ್ಲ

ಮುರಳಿ, ರೈತ



ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ಮಾಡುತ್ತಿರುವ ರೈತರು.

ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸುಗಳು

- ಕೇಂದ್ರ ಸರ್ಕಾರವು ಕೃಷಿ ಇಲಾಖೆಗೆ ನೀಡುವ ಅನುದಾನ ಹೆಚ್ಚಿಸಬೇಕು
- ಪಿಎಂ ಕಿಸಾನ್ ಮೊತ್ತವನ್ನು ವಾರ್ಷಿಕ 12,000 ನಿಗದಿ-ಪಡಿಸಬೇಕು
- ಋತುಮಾನಕ್ಕೆ ತಕ್ಕಂತೆ ರೈತರಿಗೆ ನೀಡುವ ಪರಿಹಾರವನ್ನು ಗುತ್ತಿಗೆ ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೂ ವಿಸ್ತರಿಸಬೇಕು
- ಎಂಎಸ್‌ಪಿಗೆ ಕಾನೂನು ಖಾತರಿ ನೀಡುವ ಮೂಲಕ ಅದನ್ನು ಸದೃಢಗೊಳಿಸಿದರೆ, ಮಾರುಕಟ್ಟೆಯ ಏರಿಳಿತದಿಂದ ರೈತರನ್ನು ಪಾರು ಮಾಡಿ, ರೈತರ ಆತ್ಮಹ-ತ್ಯೆಗಳನ್ನು ತಡೆಯಲು ಸಹಾಯವಾಗುತ್ತದೆ
- ದೇಶದ ನಾಗರಿಕರಿಗೆ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂಜೆಎವೈ) ಅಡಿ ಆರೋಗ್ಯ ವಿಮೆ ನೀಡಿದಂತೆ ಎರಡು ಹೆಕ್ಟೇರ್‌ವರೆಗಿನ ಜಮೀನು ಹೊಂದಿರುವ ಸಣ್ಣ ರೈತರಿಗೆ ಕಡ್ಡಾಯ ಸಾರ್ವತ್ರಿಕ ಬೆಳೆ ವಿಮೆ ನೀಡಬೇಕು
- ಕೃಷಿ ಬಿಕ್ಕಟ್ಟಿನಿಂದ ಪಾರಾಗಲು ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಾಲ ಮನ್ನಾ ಯೋಜನೆ ಜಾರಿಗೊಳಿಸಬೇಕು
- ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಸಿಗುವಂತೆ ಮಾಡುವ ದಿಸೆಯಲ್ಲಿ ರಾಷ್ಟ್ರೀಯ ಆಯೋಗವೊಂದನ್ನು ರಚಿಸಬೇಕು

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 22-12-1999

● **ಹೊಸ ಆಹಾರ ನೀತಿಯಡಿ 3 ವಿಧದ ಪಡಿತರ ಚೀಟಿ**

ಬೆಂಗಳೂರು, ಡಿ.21– ಮೂರು ವಿಧದ ಪಡಿತರ ಚೀಟಿ ವಿತರಣೆ ಸೇರಿದಂತೆ ಸಮಗ್ರ ಆಹಾರ ನೀತಿಯನ್ನು ಸರ್ಕಾರ ಶೀಘ್ರದಲ್ಲೇ ರೂಪಿಸಿ ಜಾರಿಗೆ ತರಲಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ರಾಜ್ಯ ಸಚಿವ ಡಿ.ಬಿ.ಇನಾಂದಾರ್ ಇಂದು ಇಲ್ಲಿ ತಿಳಿಸಿದರು.

ಆಹಾರ ಪದಾರ್ಥಗಳ ಅಗತ್ಯವಿಲ್ಲದವರಿಗೆ ಗುರುತಿಗೋಸ್ಕರ, ಬಡತನ ರೇಖೆಗಿಂತ ಮೇಲಿರುವವರಿಗೆ ಹಾಗೂ ಬಡತನ ರೇಖೆಗಿಂತ ಕೆಳಗಿರುವವರಿಗೆ ಪ್ರತ್ಯೇಕವಾದ, ಕಂಪ್ಯೂಟರ್‌ನಲ್ಲಿ ಪತ್ತೆಹಚ್ಚಬಹುದಾದ ಪಡಿತರ ಚೀಟಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದೂ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 22-12-1974

● **ಇಂದಿರಾ ಇಂಗಿತ | ಹಠಾತ್ ಚುನಾವಣೆಗೆ ಮತ್ತಷ್ಟು ಪುಷ್ಟಿ**

ನವದೆಹಲಿ, ಡಿ.21– ಇಂದು ಬೆಳಿಗ್ಗೆ ಜರುಗಿದ ಸಂಸತ್ ಕಾಂಗ್ರೆಸ್ ಪಕ್ಷದ ಸಮಾರೋಪ ಸಭೆಯಲ್ಲಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಬರೂವಾ ಅವರು ಒತ್ತಿ ಹೇಳಿದ ಮಾತುಗಳು ಲೋಕ ಸಭೆಗೆ ಹಠಾತ್ ಚುನಾವಣೆ ಅಸಂಭವವಲ್ಲ ಎಂಬ ಊಹಾಪೋಹಗಳನ್ನು ಮತ್ತಷ್ಟು ಹೆಚ್ಚಿಸಿವೆ.

ಸಂಸತ್ ಕಾಂಗ್ರೆಸ್ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವ್ಯವಸ್ಥಿತ ಪ್ರಚಾರದಲ್ಲಿ ತೊಡಗಿಕೊಳ್ಳಬೇಕೆಂದು ಪ್ರಧಾನಿ ಮತ್ತು ಕಾಂಗ್ರೆಸ್ ಅಧ್ಯಕ್ಷರು ಇಂದು ಬೆಳಿಗ್ಗೆ ಒತ್ತಿ ಹೇಳಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಡಿಸೆಂಬರ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಸಪ್ತಮಿ ಗಂ. 14-32 ನಕ್ಷತ್ರ: ಉತ್ತರಫಲ್ಗುನಿ ಅಹೋರಾತ್ರ, ಯೋಗ: ಆಯುಷ್ಮಾನ್ ಗಂ. 19-00 ಕರಣ: ಬವ ಗಂ. 14-32, ಧನು ಮಾಸದ 06 ನೇ ದಿನ, ಮಳೆನಕ್ಷತ್ರ: ಮೂಲ 3.

ರಾಹುಕಾಲ: ಸಾಯಂಕಾಲ 04-30 – 06-00

ಸೂರ್ಯೋದಯ: 06-53 ಸೂರ್ಯಾಸ್ತ: 06-06

ಮುಸ್ಲಿಂ ದಿನಾಂಕ: 19 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 7, 9

ಮೇಷ: ಧಾರ್ಮಿಕ ವ್ಯಕ್ತಿಗಳ ಸಾಮಾಜಿಕ ಕಳಕಳಿಯ ಮಾತುಗಳಿಗೆ ಆಕರ್ಷಿತರಾಗಿ, ಸಾಮಾಜಿಕ ಸೇವೆಯನ್ನು ಮಾಡುವ ನಿರ್ಧಾರವನ್ನು ಕೈಗೊಳ್ಳುವಿರಿ. ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಲಿದ್ದೀರಿ.

ವೃಷಭ: ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗುವುದು. ವಾದ ಪ್ರತಿವಾದಗಳಿಂದ ನಿಕಟವಾದ ಸ್ನೇಹವನ್ನು ಕಳೆದುಕೊಳ್ಳುವ ಅಪಾಯವಿದ್ದು, ಎಚ್ಚರವಹಿಸಿ. ವ್ಯವಹಾರಗಳಲ್ಲಿ ಹಿಡಿತ ಸಾಧಿಸಿರಿ.

ಮಿಥುನ: ಸ್ವಂತ ಆಸ್ತಿ ಮರಳಿ ಪಡೆಯಲು ಪ್ರಯತ್ನ ಹಾಗೂ ತಂತ್ರಗಾರಿಕೆ ಹೆಚ್ಚು ಅವಶ್ಯ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಬಾಕಿ ಕೆಲಸ ಪೂರ್ಣಗೊಳಿಸುವ ಸಂಕಲ್ಪ ಮಾಡಿರಿ.

ಕರ್ಕಾಟಕ: ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಳ್ಳುವಿರಿ. ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಟ್ಟು, ಕುಟುಂಬದವರೊಂದಿಗೆ ಸಮಯ ಕಳೆಯುವಿರಿ.

ಸಿಂಹ: ಯಾವುದೇ ಅಡೆತಡೆಗಳಿಂದಾಗಿ ಮನಸ್ಸು ಚಂಚಲಕ್ಕೊಳಗಾಗದಂತೆ ಜಾಗ್ರತೆ ವಹಿಸಿ. ಕೆಲವು ಸೂಕ್ಷ್ಮ ವಿಚಾರಗಳನ್ನು ರಹಸ್ಯವಾಗಿಟ್ಟ ಪರಿಣಾಮ, ಹಿನ್ನಡೆ ಅನುಭವಿಸಬೇಕಾಗಲಿದೆ. ಕುಟುಂಬದಲ್ಲಿ ನೆಮ್ಮದಿ ಮೂಡಲಿದೆ.

ಕನ್ಯಾ: ಅಸಹಾಯಕರಿಗೆ ಸಹಾಯ ಮಾಡಿದ ಆತ್ಮತೃಪ್ತಿ ನಿಮ್ಮದಾಗುವುದು. ಸೌಂದರ್ಯಪ್ರಜ್ಞೆಯು ಇತರರಿಗೂ ಮುದ ಕೊಡುವಂತಿರಲಿ. ಮನೆಯಲ್ಲಿ ಎಳ್ಳೆಣ್ಣೆ ದೀಪ ಹಚ್ಚುವುದರಿಂದ ಪಾಪ ಪರಿಹಾರವಾಗಲಿದೆ.

ತುಲಾ: ಹಳೆಯ ದಾಸ್ತಾನನ್ನು ಖಾಲಿ ಮಾಡಲು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಯೋಚನೆ ಮಾಡುವಿರಿ. ಕೆಲಸ ಕಾರ್ಯಗಳನ್ನು ಶೀಘ್ರವಾಗಿ ಪೂರ್ತಿಗೊಳಿಸುವ ನಿರ್ಧಾರ ಮಾಡಿ.

ವೃಶ್ಚಿಕ: ಹಿರಿಯರ ಸಲಹೆಯಂತೆ, ಮನೆಯಲ್ಲಿ ದೇವತಾ ಕಾರ್ಯ ಆಯೋಜಿಸಲು ಮುಂದಾಗುವಿರಿ. ನಿರೀಕ್ಷೆಗೆ ತಕ್ಕಂತೆ ಶುಭ ಕಾಲ ಕೂಡಿಬರಲಿದೆ. ನಿಮ್ಮ ನಡವಳಿಕೆಯು ಎಲ್ಲರ ಗಮನ ಸೆಳೆಯಲಿದೆ.

ಧನು: ಈಗಾಗಲೇ ಗಡುವು ಮೀರಿದ್ದರೂ, ಈವರೆಗೆ ಪೂರ್ಣಗೊಳಿಸದ ಕೆಲಸಗಳನ್ನು ಪೂರೈಸುವ ಬಗ್ಗೆ ಗಮನಹರಿಸಿ. ಕನಸುಗಳು ನನಸಾಗುವ ಎಲ್ಲ ಲಕ್ಷಣಗಳೂ ಕಂಡು ಬರುಲಿವೆ. ಸಂಜೆ ಧನ ಲಾಭವಾಗುವ ಯೋಗವಿದೆ.

ಮಕರ: ರಕ್ತಸಂಬಂಧಿ ಕಾಯಿಲೆ ಹೊಂದಿರುವವರು ತುಸು ಚೇತರಿಸಿಕೊಳ್ಳುವಿರಿ. ಎಣ್ಣೆಯಲ್ಲಿ ಕರಿದ ವಸ್ತುಗಳ ವ್ಯಾಪಾರಿಗಳಿಗೆ ವ್ಯವಹಾರ ವಿಸ್ತಾರಿಸುವ ಅವಕಾಶ ದೊರೆಯಲಿವೆ. ನೀರಿನಿಂದ ಸಣ್ಣ ಅಪಾಯ ಸಂಭವಿಸಬಹುದು.

ಕುಂಭ: ಇತರರು ನಿಮ್ಮ ವಿಶ್ವಾಸವನ್ನು ದುರ್ಬಳಕೆ ಮಾಡಿಕೊಳ್ಳದಂತೆ ಜಾಗ್ರತೆ ವಹಿಸಿ. ಪುಸ್ತಕ ವ್ಯಾಪಾರಿಗಳಿಗೆ ಅಥವಾ ಪ್ರಕಾಶಕರಿಗೆ ನಿರೀಕ್ಷಿತ ಲಾಭ ದೊರೆಯುವುದು. ಸಗಟು ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಇರುತ್ತದೆ.

ಮೀನ: ರೇಷ್ಮೆ ವ್ಯವಹಾರದಲ್ಲಿ ಹೆಚ್ಚಿನ ಆದಾಯವಿದ್ದು, ವ್ಯವಹಾರವನ್ನು ವಿಸ್ತರಿಸುವ ಬಗ್ಗೆ ಯೋಚಿಸುವಿರಿ. ಕೆಲಸ ಕಾರ್ಯಗಳನ್ನು ಮುಂದೂಡುವ ಪ್ರವೃತ್ತಿ ಸರಿಯಲ್ಲ. ಆರೋಗ್ಯದ ಬಗ್ಗೆ ಕಾಳಜಿಯು ಕಡಿಮೆಯಾಗುವುದು.

ಪದಬಂಧ 5899


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರಗತಿಶೀಲ ಸ್ವಭಾವದವನು (4)
4.ಸಂತತಿಯಲ್ಲಿರುವ ಸಾಧು ಕಾಣಿಸಿದನೇ (2)
5.ಸ್ವರಕ್ಕೆ ಸ್ವರ ಪರವಾಗಿ ಆಗುವ ವ್ಯಾಕರಣ ಪ್ರಕ್ರಿಯೆ (4)
7.ಹತ್ತು ವರ್ಷಗಳ ಅವಧಿ (3)
9.ಸೊಳ್ಳೆ ಇಲ್ಲಿದೆ (3)
11.ದನಿ ಕೇಳಿಸಿದ ಜಾಗದಲ್ಲಿರುವ ಆನೆ (3)
12.ತುಂಬ ಕಡಿಮೆಯು ಉಲ್ಟಾ ಆಗಿಬಿಟ್ಟಿದೆ (3)
14.ರಾಜನ ಗೃಹ (4)
16.ಬಣ್ಣನೆಯಲ್ಲಿರುವ ವರ್ಣ (2)
17.ಕಡಲ ತೀರದ ಕಾಶ್ಮೀರ ಎಂದು ಪ್ರಸಿದ್ಧಿಪಡೆದಿರುವ ಈ ನಗರ ಉತ್ತರಕನ್ನಡ ಜಿಲ್ಲೆಯಲ್ಲಿದೆ (4)

ಮೇಲಿಂದ ಕೆಳಕ್ಕೆ

1.ಮರಳಿ ಬರುವಿಕೆ (6)
2.ದೂರವನ್ನು ಅಳೆಯುವ ಒಂದು ಪ್ರಮಾಣ (3)
3.ತಲೆಗೂದಲನ್ನು ತೆಗೆಯುವುದು (2)
4.ಸಂದಿಗ್ಧ ಪರಿಸ್ಥಿತಿಯಲ್ಲಿನ ಒಪ್ಪಂದ! (2)
5.ತನ್ನದೇ ಆದ ಊಹೆ (7)
6.ಹನ್ನೆರಡು ತಿಂಗಳುಗಳ ಅವಧಿ (4)
8.ಕೋಲಾರ ಜಿಲ್ಲೆಯಲ್ಲಿರುವ ಮಾವಿನಹಣ್ಣಿನ ನಗರ (6)
10.ಕರದಲ್ಲಿರುವ ಕೆಂಪು ಕಣಗಲೆ (4)
13.ಸುರನ ಹತ್ತಿರ ರಾಕ್ಷಸನಿದ್ದಾನಲ್ಲಾ! (3)
14.ಈತ ಹಿರಿಯ ಸಹೋದರ (2)
15.ಮಲಗುವಾಗ ಕಾಣಿಸಿದ ಕೂಸು (2)



5898ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಾರ್ಗದರ್ಶಕ 4.ಸಶಸ್ತ್ರ
5.ನಕುಲ 6.ದಶಕ
7.ಗವಸು 9.ಸಾಂದ್ರತೆ
10.ಸಮಿತಿ 13.ಸಿತಗ
15.ಉಲೂಕ 16.ಮಾಮರ
17.ಸಿಂಗಾರ 18.ಗರಡಿಮನೆ

ಮೇಲಿಂದ ಕೆಳಕ್ಕೆ:
1.ಮಾಶಾಸನ 2.ದಟ್ಟದರಿದ್ರ
3.ಕನಕ 4.ಸಲಗ
8.ವಸತಿ 9.ಸಾಂಪ್ರತ
11.ಮಿಟಕಲಾಡಿ 12.ಸೆರೆಮನೆ
14.ಗಮಾರ 15.ಉರಗ

ಸುಡೊಕು 6284

	9				5		6	
2	7	6	4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6283 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜಧಾನಿ ಬೆಂಗಳೂರಿನಲ್ಲೇ ಹೆಚ್ಚು; ಆರೋಪಿಗಳಿಗೆ ಆಗದ ಶಿಕ್ಷೆ

ಪೋಕ್ಸೊ ಪ್ರಕರಣಗಳು ಹೆಚ್ಚಳ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ರಾಜ್ಯದಲ್ಲಿ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಾಯ್ದೆಯಡಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಸಾಕ್ಷ್ಯಗಳ ಕೊರತೆಯಿಂದ ಒಂದೆಡೆ ಆರೋಪಿಗಳಿಗೆ ಶಿಕ್ಷೆ ಆಗುತ್ತಿಲ್ಲ, ಇನ್ನೊಂದೆಡೆ ತನಿಖೆಗೆ ಸಂತ್ರಸ್ತರು ಮತ್ತು ಅವರ ಕುಟುಂಬದವರಿಂದ ಸಹಕಾರ ಸಿಗುತ್ತಿಲ್ಲ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ತಡೆಯಲು ಸರ್ಕಾರ ಹಲವು ಜಾಗೃತಿ ಕಾರ್ಯಕ್ರಮ ಕೈಗೊಳ್ಳುತ್ತಿದೆ. ಆದರೆ, ಪೂರಕ ಸ್ಪಂದನೆ ಸಿಗುತ್ತಿಲ್ಲ.

ಕಳೆದ 35 ತಿಂಗಳಲ್ಲಿ (2022ರ ಜನವರಿ 1ರಿಂದ 2024ರ ನವೆಂಬರ್ 30ರವರೆಗೆ) ರಾಜ್ಯದಲ್ಲಿ ಪೋಕ್ಸೊ ಕಾಯ್ದೆ ಅಡಿ 10,247 ಪ್ರಕರಣ ದಾಖಲಾಗಿವೆ. ಬೆಂಗಳೂರು ನಗರದಲ್ಲೇ 1,521 ಪ್ರಕರಣ ವರದಿಯಾಗಿವೆ. ನಂತರದ ಸ್ಥಾನದಲ್ಲಿ ಮೈಸೂರು (585), ಶಿವಮೊಗ್ಗ (556), ಚಿಕ್ಕಬಳ್ಳಾಪುರ (466), ಹಾಸನ (449), ಬೆಳಗಾವಿ (426) ಇದೆ.

ಪೋಕ್ಸೊ ಪ್ರಕರಣಗಳಲ್ಲಿ 179 ಮಂದಿಗೆ ಮಾತ್ರ ಶಿಕ್ಷೆಯಾಗಿದೆ. 2,179 ಪ್ರಕರಣ ಖುಲಾಸೆಗೊಂಡಿದ್ದರೆ, 6,945 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. 661 ಪ್ರಕರಣಗಳು ತನಿಖಾ ಹಂತದಲ್ಲಿವೆ. 147 ಸುಳ್ಳು ಪ್ರಕರಣಗಳಿವೆ.

ಭವಿಷ್ಯದ ಭೀತಿ: 'ಕೆಲ ಪ್ರಕರಣಗಳಲ್ಲಿ ತಾನು ಪ್ರೀತಿಸುತ್ತಿದ್ದ ಯುವಕನೇ ಬಾಲಕಿ ಮೇಲೆ ಅತ್ಯಾಚಾರ ಮಾಡಿರುತ್ತಾನೆ. ಇನ್ನೂ ಕೆಲ ಪ್ರಕರಣಗಳಲ್ಲಿ ಅತ್ಯಾಚಾರ ಮಾಡಿದವನು ಪ್ರಬಲ ಆಗಿರುತ್ತಾನೆ. ಅವರೊಂದಿಗೆ ತಂಟೆ- ತಕರಾರು, ನ್ಯಾಯಾಲಯಕ್ಕೆ ಅಲೆದಾಡುವುದು ಬೇಡವೆಂದು ಸಂತ್ರಸ್ತೆ ಪಾಲಕರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮಗಳ ಭವಿಷ್ಯಕ್ಕಾಗಿ ಹೆದರಿ, ನ್ಯಾಯಾಲಯದಲ್ಲಿ ಸರಿಯಾಗಿ ಹೇಳಿಕೆ ಕೊಡುತ್ತಿಲ್ಲ. ಪ್ರಕರಣಗಳು ನಿಯಂತ್ರಣಕ್ಕೆ ಬಾರದಿರಲು ಇದು ಕೂಡ ಪ್ರಮುಖ ಕಾರಣ' ಎಂದು ಇಲ್ಲಿನ ಸ್ಪಂದನಾ ಸಂಸ್ಥೆಯ ನಿರ್ದೇಶಕಿ ವಿ.ಸುಶೀಲಾ 'ಪ್ರಜಾವಾಣಿ'ಗೆ ತಿಳಿಸಿದರು.

'ಪಾಲಕರು ಮತ್ತು ಕೆಲ ಒತ್ತಡದಿಂದ ಸಂತ್ರಸ್ತೆಯೂ ನ್ಯಾಯಾಲಯದಲ್ಲಿ ತನ್ನ ಮೇಲಾದ ದೌರ್ಜನ್ಯ ವಿವರಿಸಲ್ಲ. ಇದರಿಂದ ಆರೋಪಿಗಳು ಪಾರಾಗುತ್ತಾರೆ. ಪೋಕ್ಸೊ ಕಾಯ್ದೆಯಡಿ ದಾಖಲಾದ ಹೆಚ್ಚಿನ ಪ್ರಕರಣಗಳಲ್ಲಿ ಪರಿಚಯಸ್ಥರು ಮತ್ತು ನೆರೆ- ಹೊರೆ ಮನೆಯವರೇ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಕಂಡುಬಂದಿದೆ' ಎಂದು ಬೆಳಗಾವಿಯ ಮಹಿಳಾ ಕಲ್ಯಾಣ ಸಂಸ್ಥೆಯ ಸುರೇಖಾ ಪಾಟೀಲ ತಿಳಿಸಿದರು.



ಆರೋಪಿಗಳಿಗೆ ಕಠಿಣ ಶಿಕ್ಷೆಯಾಗದ ಕಾರಣ ಬಾಲಕಿಯರ ಮೇಲೆ ಅತ್ಯಾಚಾರ ಹೆಚ್ಚುತ್ತಿವೆ. ಸರ್ಕಾರ ಕ್ರಮ ವಹಿಸಿ, ಇದಕ್ಕೆ ಕಡಿವಾಣ ಹಾಕಬೇಕು. ಆರೋಪಿಗಳಿಗೆ ಶಿಕ್ಷೆ ಆಗಬೇಕು

ಶಶಿಧರ ಕೋಸಂಬೆ, ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ



ಅತ್ಯಾಚಾರ ಪ್ರಕರಣಗಳಲ್ಲಿ ನಾವು ಎಷ್ಟೇ ತಿಳಿ ಹೇಳಿದರೂ ಬಾಲಕಿ ಹಾಗೂ ಆಕೆಯ ಕುಟುಂಬ ತನಿಖೆಗೆ ಪೊಲೀಸರಿಗೆ ಸಹಕರಿಸಲ್ಲ. ಸಂತ್ರಸ್ತೆ ವೈದ್ಯಕೀಯ ಪರೀಕ್ಷೆಗೆ ಹಾಜರಾಗುವುದಿಲ್ಲ

ಸುರೇಖಾ ಪಾಟೀಲ, ಮಕ್ಕಳ ಕಲ್ಯಾಣ ಸಂಸ್ಥೆ, ಬೆಳಗಾವಿ

ಪೋಕ್ಸೊ ಕಾಯ್ದೆಯಡಿ ದಾಖಲಾದ ಪ್ರಕರಣಗಳು

2022	2023	2024 (ನ.30ರವರೆಗೆ)
3,110	3,718	3,419

ಟೂಲ್ ಆಗಿ ಸಂವಿಧಾನ ಬಳಸಲು ಬಿಡೆವು

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕೆಲವು ಶಕ್ತಿಗಳಿಗೆ ಸಂವಿಧಾನ ಒಂದು ಟೂಲ್ (ಸಾಧನ) ಆಗಿ ಬಿಟ್ಟಿದೆ. ಸಂವಿಧಾನವನ್ನು ಟೂಲ್ ತರಹ ಬಳಸುವುದಕ್ಕೆ ನಾವು ಬಿಡುವುದಿಲ್ಲ' ಎಂದು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.


ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ವತಿಯಿಂದ ಶನಿವಾರ ಇಲ್ಲಿ ಏರ್ಪಡಿಸಿದ್ದ 'ಸಂವಿಧಾನ ಸನ್ಮಾನ' ಕಾರ್ಯಕ್ರಮದಲ್ಲಿ, ವಿಖ್ಯಾತ್ ಪಿ. ಅವರು ರಚಿಸಿರುವ 'ಸಂವಿಧಾನವನ್ನು ಬದಲಾಯಿಸಿದ್ದು ಯಾರು?' ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ಸಂವಿಧಾನ ತಾಯಿ ಇದ್ದಂತೆ. ತಾಯಿಗೂ ಮಗುವಿಗೂ ದೈವಿಕ ಸಂಬಂಧ ಇದೆ. ಮಗುವಿಗೆ ತಾಯಿ ಯಾವತ್ತೂ ಒಂದು ಸಾಧನ ಆಗಬಾರದು. ಮಗ ತಾಯಿಯನ್ನು ಟೂಲ್ ತರ ಬಳಸಿದರೆ ದೇವರೂ ಕ್ಷಮಿಸುವುದಿಲ್ಲ. ಹಿಂದೆಲ್ಲ ಸಂವಿಧಾನವನ್ನು ಟೂಲ್ ಆಗಿ ಬಳಸಿ ಕೆಲವರು ಲಾಭ ಪಡೆದಿದ್ದರು. ಈಗ ಜನರಿಗೆ ಆ ರೀತಿ ಮೋಸ ಮಾಡಲು ಸಾಧ್ಯವಿಲ್ಲ. ಈಗಿನ ಮಾಧ್ಯಮ, ಸಾಮಾಜಿಕ ಮಾಧ್ಯಮ, ಜನರ ಮನಃಸ್ಥಿತಿ ಅದಕ್ಕೆ ಅವಕಾಶ ಕೊಡುವುದಿಲ್ಲ' ಎಂದರು.

'ದೇಶದ ಸಂವಿಧಾನವನ್ನೇ ಚುನಾವಣಾ ಸರಕನ್ನಾಗಿ ಮಾಡಿದ್ದು ಶೋಚನೀಯ. ಬಿಜೆಪಿಯವರು ಸಂವಿಧಾನವನ್ನು ಬದಲಾಯಿಸುತ್ತಾರೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ನಿಜಕ್ಕೂ ಅದನ್ನು ಬದಲಾಯಿಸಿದ್ದು ಯಾರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸಂವಿಧಾನಕ್ಕೆ 106 ಸಲ ತಿದ್ದುಪಡಿ ತರಲಾಗಿದೆ. ಅದರಲ್ಲಿ 75 ಸಲ ತಿದ್ದುಪಡಿ ತಂದಿದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರಗಳು. ಅಂಬೇಡ್ಕರ ಆಶಯಗಳನ್ನು ಎತ್ತಿಹಿಡಿಯಲು ತಿದ್ದುಪಡಿ ತಂದಿದ್ದು ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮಾತ್ರ' ಎಂದರು.

'ಸಂವಿಧಾನಕ್ಕೆ ಮೂಲ ರಚನೆಯೇ ಇಲ್ಲ ಎಂದು ಕಾಂಗ್ರೆಸ್ ಪ್ರತಿಪಾದಿಸಿತ್ತು. ಸಂವಿಧಾನದ ಮೇಲೆ ಕಾಂಗ್ರೆಸ್ ಅತಿಕ್ರಮಣ ಮಾಡಿತ್ತು ಎಂಬ ಶಬ್ದವನ್ನು ಕೆಲವರು ಬಳಸುತ್ತಾರೆ. ಆದರೆ, ಸಂವಿಧಾನದ ಮೇಲೆ ಅತ್ಯಾಚಾರವನ್ನೇ ಮಾಡಿತ್ತು ಎಂಬ ಶಬ್ದವನ್ನು ಉಪಯೋಗಿಸುವುದೇ ಸೂಕ್ತ' ಎಂದರು.

ಕೆ.ಎಸ್ ಹೆಗ್ಡೆ ವೈದ್ಯಕೀಯ ಅಕಾಡೆಮಿಯ ವಿಭಾಗ ಮುಖ್ಯಸ್ಥ ಹೃಷಿಕೇಶ್ ಅಮೀನ್, ಕೃತಿಯ ಲೇಖಕ ವಿಕಾಸ್ ಪಿ. ಹಾಗೂ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರಾಜೀವ ಪಿ. ಮಾತನಾಡಿದರು.



ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ವತಿಯಿಂದ ಮಂಗಳೂರಿನಲ್ಲಿ ಶನಿವಾರ ಏರ್ಪಡಿಸಿದ್ದ ಸಂವಿಧಾನ ಸನ್ಮಾನ ಕಾರ್ಯಕ್ರಮದಲ್ಲಿ, ವಿಖ್ಯಾತ್ ಪಿ. ರಚಿಸಿರುವ 'ಸಂವಿಧಾನವನ್ನು ಬದಲಾಯಿಸಿದ್ದು ಯಾರು?' ಕೃತಿಯನ್ನು ಬಿ.ಎಲ್.ಸಂತೋಷ್ ಓದಿದರು ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಸಂವಿಧಾನವನ್ನೇ ಚುನಾವಣಾ ಸರಕನ್ನಾಗಿ ಮಾಡಿದ್ದು ಶೋಚನೀಯ
- ಬಿಜೆಪಿಯವರು ಸಂವಿಧಾನ ಬದಲಿಸುತ್ತಾರೆಂಬುದು ಅಪಪ್ರಚಾರ: ಸಂತೋಷ್

ಕುಂಭಮೇಳ: ವಿಶೇಷ ಏಕಮುಖ ರೈಲು

ಹುಬ್ಬಳ್ಳಿ: ಕುಂಭಮೇಳದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿವಾರಿಸಲು ನೈರುತ್ಯ ರೈಲ್ವೆಯು ಮೈಸೂರಿನಿಂದ ಪ್ರಯಾಗ್‌ರಾಜ್‌ಗೆ ವಿಶೇಷ ಏಕಮುಖ ಎಕ್ಸ್‌ಪ್ರೆಸ್ ರೈಲು (06215) ಓಡಿಸಲಿದೆ.

ಮೈಸೂರು- ಪ್ರಯಾಗ್‌ರಾಜ್ ಒನ್-ವೇ ಕುಂಭ ವಿಶೇಷ ಏಕಮುಖ ಎಕ್ಸ್‌ಪ್ರೆಸ್ ರೈಲು (06215) ಡಿ.23ರಂದು ಮಧ್ಯರಾತ್ರಿ 12:30 ಗಂಟೆಗೆ ಮೈಸೂರಿನಿಂದ ಹೊರಟು, ಡಿಸೆಂಬರ್ 25ರಂದು 3 ಗಂಟೆಗೆ ಪ್ರಯಾಗ್ ರಾಜ್ ಜಂಕ್ಷನ್ ತಲುಪಲಿದೆ.

ಮಂಡ್ಯ, ಕೆಎಸ್‌ಆರ್, ಬೆಂಗಳೂರು, ಯಶವಂತಪುರ, ತುಮಕೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಘಟಪ್ರಭಾ, ಮಿರಜ್, ಸಾಂಗ್ಲಿ, ಕರಾಡ್, ಪುಣೆ, ದೌಂಡ್ ಚರ್ಡ್‌ಲೈನ್, ಅಹಮದ್‌ನಗರ, ಮನ್ಮಡ, ಭುಸಾವಲ್, ಖಾಂಡ್ವಾ, ತಲ್ವಾಡಿಯಾ, ಛಾನೆರಾ, ಖಿರ್ಕಿಯಾ, ಬನಪುರ, ಪಿಪರಿಯಾ, ನರಸಿಂಗಪುರ, ಕಟ್ನಿ, ಮೈಹಾರ್, ಸತ್ನಾ ಮತ್ತು ಮಾಣಿಕ್ಪುರ ನಿಲ್ದಾಣಗಳಲ್ಲಿ ನಿಲ್ಲಲಿದೆ.

ರೈಲಿನ ಆಗಮನ ಮತ್ತು ನಿರ್ಗಮನದ ಮಾಹಿತಿ ತಿಳಿಯಲು ಪ್ರಯಾಣಿಕರು ಜಾಲತಾಣ: www.enquiry.indianrail.gov.in ಸಂಪರ್ಕಿಸಬಹುದು. ಸಹಾಯವಾಣಿ 139ಗೆ ಕರೆ ಮಾಡಬಹುದು.

ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿ ಸಾವು ಪ್ರಕರಣ

ಆರು ಶಿಕ್ಷಕರ ಅಮಾನತು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಶೈಕ್ಷಣಿಕ ಪ್ರವಾಸದ ವೇಳೆ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಗಾಣದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಮೃತಪಟ್ಟ ಹಿನ್ನೆಲೆಯಲ್ಲಿ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಸೇರಿ ಆರು ಜನ ಶಿಕ್ಷಕರನ್ನು ಅಮಾನತು ಮಾಡಿ ಡಿಡಿಪಿಐ ಶ್ರೀಶೈಲ ಬಿರಾದಾರ ಆದೇಶ ಹೊರಡಿಸಿದ್ದಾರೆ.

ಈ ಶಾಲೆಯ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದಾಗ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ನಿರುಪಾದಿ ಹರಿಜನ ಎನ್ನುವ ವಿದ್ಯಾರ್ಥಿ ಬಾವಿಯಲ್ಲಿ ಕಾಲು ಜಾರಿ ಬಿದ್ದು ಮೃತಪಟ್ಟಿದ್ದ.

ಘಟನೆಗೆ ಶಿಕ್ಷಕರ ನಿರ್ಲಕ್ಷವೇ ಕಾರಣ ಎಂದು ಪ್ರಭಾರ ಮುಖ್ಯ ಶಿಕ್ಷಕ ಹನುಮೇಶ ಬೆಲ್ಲದ, ಸಹ ಶಿಕ್ಷಕರಾದ ಶಿವಕುಮಾರ ಅವಸಂಗರದ, ನಾಗರಾಜ ಶೆಟ್ಟರ್, ಅಮರೇಶ ಬಳ್ಳಾರಿ, ಈರಮ್ಮ ಬಡಿಗೇರ ಮತ್ತು ಪದ್ಮಾವತಿ ಪವಾರ ಅವರನ್ನು ಅಮಾನತು ಮಾಡಲಾಗಿದೆ.

ಮೃತ ಬಾಲಕನ ಕುಟುಂಬದವರಿಗೆ ಸರ್ಕಾರದ ವತಿಯಿಂದ ₹5 ಲಕ್ಷ ಪರಿಹಾರ ನೀಡಲಾಗಿದೆ.

ಕೈಮರ: ಶಾಲಾ ಮಕ್ಕಳಿದ್ದ ಜೀಪ್ ಪಲ್ಟಿ

ಚಿಕ್ಕಮಗಳೂರು: ಶಾಲಾ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ ಜೀಪು ತಾಲ್ಲೂಕಿನ ಕೈಮರ ಚೆಕ್‌ಪೋಸ್ಟ್ ಬಳಿ ಪಲ್ಟಿಯಾಗಿದ್ದು, ಐವರು ಮಕ್ಕಳು ಗಾಯಗೊಂಡಿದ್ದಾರೆ.

ಮೈಸೂರಿನ ಗೋಪಾಲಸ್ವಾಮಿ ಸರ್ಕಾರಿ ಶಾಲೆಯ ಮಕ್ಕಳು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಚಿಕ್ಕಮಗಳೂರಿನ ಮುಳ್ಳಯ್ಯನ ಗಿರಿ ಪ್ರವಾಸಕ್ಕೆ ಬಂದಿದ್ದರು. ಗಿರಿ ಏರಲು ಜೀಪ್ (ಟ್ರ್ಯಾಕ್ಸ್) ಬಾಡಿಗೆಗೆ ಪಡೆದಿದ್ದ ಶಿಕ್ಷಕರು, ಮಕ್ಕಳನ್ನು ಕರೆದೊಯ್ಯುತ್ತಿದ್ದರು.

12 ಮಕ್ಕಳಿದ್ದ ಜೀಪಿನ ಟೈರ್ ಕೈಮರ ಚೆಕ್‌ಪೋಸ್ಟ್ ಬಳಿ ಬಂದಾಗ ಸಿಡಿದು ಜೀಪ್ ಪಲ್ಟಿಯಾಗಿದೆ. ಐವರು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಉಳಿದವರು ಸುರಕ್ಷಿತವಾಗಿದ್ದಾರೆ. ಮಕ್ಕಳನ್ನು ಬೇರೆ ವಾಹನದಲ್ಲಿ ಶಿಕ್ಷಕರು ಕರೆದೊಯ್ದರು.

ಮುಳ್ಳಯ್ಯನಗಿರಿ ಪ್ರದೇಶದಲ್ಲಿ ಟೈರ್ ಸಿಡಿದಿದ್ದರೆ ಹೆಚ್ಚಿನ ಅನಾಹುತ ಆಗುತ್ತಿತ್ತು. ಕೈಮರ ಚೆಕ್‌ಪೋಸ್ಟ್ ಬಳಿಯೇ ಸಿಡಿದಿದ್ದರಿಂದ ಹೆಚ್ಚಿನ ಅನಾಹುವಾಗಿಲ್ಲ ಎಂದು ಸ್ಥಳೀಯರು ಹೇಳಿದರು.



ಕೈಮರ ಚೆಕ್‌ಪೋಸ್ಟ್ ಬಳಿ ಜೀಪ್ ಪಲ್ಟಿಯಾಗಿದೆ

'ಅಮಿತ್ ಶಾ ಹೇಳಿಕೆ ಖಂಡನೀಯ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಿ.ಆರ್. ಅಂಬೇಡ್ಕರ್ ಹಾಗೂ ಬಸವ ತತ್ವ ಹೆಚ್ಚಾದಷ್ಟು ಆರ್‌ಎಸ್‌ಎಸ್ ತತ್ವಗಳು ಕುಸಿಯುತ್ತವೆ. ಹೀಗಾಗಿ, ಅಂಬೇಡ್ಕರ್ ಬಗೆಗಿನ ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸುತ್ತೇನೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ದೇವರ ಹೆಸರು ಸಾವಿರ ಬಾರಿ ಜಪ ಮಾಡಿದರೆ ಮುಂದಿನ ಏಳು ಜನ್ಮಕ್ಕೆ ಸ್ವರ್ಗ ಸಿಗುತ್ತದೆಯೋ ಗೊತ್ತಿಲ್ಲ. ಆದರೆ, ಅಂಬೇಡ್ಕರ್ ಅವರ ಜಪ ಮಾಡಿದರೆ ಈ ಜನ್ಮದಲ್ಲಿ ನಮಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆ, ಸ್ವಾಭಿಮಾನದ ಬದುಕು ಸಿಗುತ್ತದೆ' ಎಂದರು.

'ಅಂಬೇಡ್ಕರ್ ಅವರ ಜಪವನ್ನು ನಾವು ಸಾವಿರ ಬಾರಿ ಮಾಡುತ್ತೇವೆ. ಅವರ (ಬಿಜೆಪಿ) ಆಲೋಚನೆಯಲ್ಲಿ ಅಂಬೇಡ್ಕರ್ ಮತ್ತು ಸಮಾನತೆ ಇಲ್ಲ. ಅವರ ತತ್ವ ಮತ್ತು ದೃಷ್ಟಿಕೋನದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇರಬಾರದು ಎಂಬುದು ಇದೆ' ಎಂದು ಟೀಕಿಸಿದರು.

'ಸಿ.ಟಿ. ರವಿ ಅವರ ಆ ಪದ ಬಳಕೆಯಿಂದಾಗಿ ಬಿಜೆಪಿಯ ಎಲ್ಲರೂ ಒಂದಾಗಿದ್ದಾರೆ. ಅವರೆಲ್ಲರೂ ಹಾಳು ಬುದ್ಧಿಯವರು. ಹೆಣ್ಣು ಮಗಳಿಗೆ ಅನ್ಯಾಯ ಆಗಿದ್ದನ್ನು ಖಂಡಿಸದೆ ಇರುವುದು ಮನುಸ್ಮೃತಿ ಹಾಗೂ ಆರ್‌ಎಸ್‌ಎಸ್ ಚಿಂತನೆಯನ್ನು ತೋರಿಸುತ್ತದೆ' ಎಂದರು.



ಪ್ರಿಯಾಂಕ್ ಖರ್ಗೆ

'ಭಾರತ ಜೋಡೊ ಯಾತ್ರೆ: ನಕ್ಸಲ್ ನಂಟಿದ್ದ ಸಂಘಟನೆಗಳು ಭಾಗಿ'

ನಾಗ್ಪುರ (ಪಿಟಿಐ): 'ಯುಪಿಎ ಸರ್ಕಾರವೇ ಪಟ್ಟಿ ಮಾಡಿದ್ದ ನಕ್ಸಲ್ ಚಳವಳಿಯಲ್ಲಿ ಗುರುತಿಸಿಕೊಂಡಿರುವ ಕೆಲವು ಮುಂಚೂಣಿ ಸಂಘಟನೆಗಳು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೈಗೊಂಡ ಭಾರತ ಜೋಡೊ ಯಾತ್ರೆಯಲ್ಲಿ ಭಾಗವಹಿಸಿದ್ದವು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ಪುನರುಚ್ಚರಿಸಿದ್ದಾರೆ.

ಒಂದು ವಾರ ನಡೆದ ಮಹಾರಾಷ್ಟ್ರದ ಚಳಿಗಾಲದ ಅಧಿವೇಶನ ಪೂರ್ಣಗೊಂಡ ಸಲುವಾಗಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಇದನ್ನು ನಾನು ಹೇಳುತ್ತಿಲ್ಲ. ಬದಲಿಗೆ ಇದನ್ನು ಯುಪಿಎ ಸರ್ಕಾರವೇ 2014ಕ್ಕೂ ಮೊದಲು ಸಿದ್ಧಪಡಿಸಿದ್ದ ವರದಿಗಳು ಹೇಳುತ್ತಿವೆ. ಆ ಸರ್ಕಾರ ಪಟ್ಟಿ ಮಾಡಿದ್ದ 180 ಮುಂಚೂಣಿ ಸಂಘಟನೆಗಳ ಪೈಕಿ 40 ಸಂಘಟನೆಗಳು ಯಾತ್ರೆಯಲ್ಲಿ ಭಾಗವಹಿಸಿದ್ದವು' ಎಂದಿದ್ದಾರೆ. ಕಲಾಪದ ವೇಳೆಯೂ ದೇವೇಂದ್ರ ಫಡಣವೀಸ್ ಅವರು ಇದೇ ಹೇಳಿಕೆ ನೀಡಿದ್ದರು.

ಫಡಣವೀಸ್ ಅವರ ಆರೋಪದ ಬಗ್ಗೆ, ಭಾರತ ಜೋಡೊ ಯಾತ್ರೆ ಸಂಚಾಲಕರಾಗಿದ್ದ ಯೋಗೇಂದ್ರ ಯಾದವ್ ಅವರು ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಪ್ರತಿಕ್ರಿಯಿಸಿದ್ದು, 'ನಮ್ಮ 'ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ನಕ್ಸಲ್ ಚಳವಳಿಯ ಮುಂಚೂಣಿ ಸಂಘಟನೆಗಳ ಹೆಸರನ್ನು ಬಹಿರಂಗಪಡಿಸಿ' ಎಂದು ಸವಾಲೆಸೆದರು.



ದೇವೇಂದ್ರ ಫಡಣವೀಸ್



ನಾವು ಮಹಾತ್ಮ ಗಾಂಧಿ ಅವರ ಅನುಯಾಯಿಗಳು. ನಮಗೆ ಹೇಗೆ ನಕ್ಸಲರು ಎಂದು ಹಣೆಪಟ್ಟಿ ಕಟ್ಟುತ್ತೀರಿ?

ಯೋಗೇಂದ್ರ ಯಾದವ್ ಭಾರತ ಜೋಡೊ ಯಾತ್ರೆ ಸಂಚಾಲಕ

ಹೆದ್ದಾರಿಯಲ್ಲಿ ಕಂಟೇನರ್ ರೂಪದಲ್ಲಿ ಬಂದ ಜವರಾಯ • ಎರಡು ತಿಂಗಳ ಹಿಂದೆಯಷ್ಟೇ ಖರೀದಿಸಿದ್ದ ಕಾರು

ಸ್ವಂತ ಸಾಫ್ಟ್‌ವೇರ್ ಕಂಪನಿ ಕಟ್ಟಿದ್ದ ಉದ್ಯಮಿ

ಪ್ರಜಾವಾಣಿ ವಾರ್ತೆ



ಅಪಘಾತದಲ್ಲಿ ಮೃತಪಟ್ಟ ಚಂದ್ರಮ್ ಏಗಪ್ಪಗೋಳ ಅವರ ಕುಟುಂಬ



ಕಂಟೇನರ್ ಬಿದ್ದು ಕಾರು ನಜ್ಜುಗುಜ್ಜಾಗಿರುವುದು

ಬೆಂಗಳೂರು: ತಿಪ್ಪಗೊಂಡನಹಳ್ಳಿ-ತಾಳೆಕೆರೆ ಮಧ್ಯೆ ಕಂಟೇನರ್ ರೂಪದಲ್ಲಿ ಬಂದ 'ಜವರಾಯ' ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಕುಗ್ರಾಮವೊಂದರಲ್ಲಿ ಹುಟ್ಟಿ ಸಾಫ್ಟ್‌ವೇರ್ ಉದ್ಯಮದಲ್ಲಿ ಯಶಸ್ವಿಯಾಗಿ ಹೆಜ್ಜೆ ಇಡುತ್ತಿದ್ದ ಯುವ ಉದ್ಯಮಿ ಚಂದ್ರಮ್ ಏಗಪ್ಪಗೋಳ ಅವರ ಇಡೀ ಕುಟುಂಬವನ್ನೇ ಬಲಿ ಪಡೆದಿದ್ದಾನೆ.

ಅಪಘಾತದಲ್ಲಿ ಮೃತಪಟ್ಟ ಚಂದ್ರಮ್ ಏಗಪ್ಪಗೋಳ ಅವರು ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎನ್‌ಐಟಿ-ಕೆ) ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ಪಡೆದುಕೊಂಡಿದ್ದರು. ಕೆಲವು ವರ್ಷ ವಿದೇಶದಲ್ಲೂ ಕೆಲಸ ಮಾಡಿದ್ದರು.

2015ರ ಸುಮಾರಿಗೆ ನಗರಕ್ಕೆ ಬಂದಿದ್ದ ಅವರು, ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡಿದ್ದರು. ನಂತರ, 2018ರಲ್ಲಿ [illegible] ಪಾಲುದಾರಿಕೆಯಲ್ಲಿ ಐಎಎಸ್‌ಟಿ ಸಾಫ್ಟ್‌ವೇರ್ ಸೊಲ್ಯೂಷನ್ ಸಂಸ್ಥೆ ಆರಂಭಿಸಿದ್ದರು. ಕಂಪನಿಯಲ್ಲಿ 120ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಕೆಲಸಗಳನ್ನು ಈ ಕಂಪನಿಯಲ್ಲಿ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

> ಸ್ಥಳೀಯರೂ ಕಾರ್ಯಾಚರಣೆಗೆ ನೆರವಾದರು. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ. ತಪ್ಪಿತಸ್ಥ ಕಂಟೇನರ್ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಲಾಗುವುದು
> **ಸಿ.ಕೆ.ಬಾಬಾ**, ಎಸ್‌ಪಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಳ್ಳಂದೂರಿನ ಸ್ವಂತ ಮನೆಯಲ್ಲಿ ಚಂದ್ರಮ್ ಅವರು ನೆಲಸಿದ್ದರು. ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಮೊರಬಗಿ ಗ್ರಾಮದಲ್ಲಿ ವಯಸ್ಸಾದ ತಂದೆ ಹಾಗೂ ತಾಯಿ ಇದ್ದರು. ಕೆಲವು ದಿನಗಳಿಂದ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದರು. ಮಕ್ಕಳಿಗೂ ಕ್ರಿಸ್ಮಸ್ ರಜೆಯಿದ್ದ ಕಾರಣಕ್ಕೆ ಪೋಷಕರನ್ನು ನೋಡಲು ಕುಟುಂಬಸ್ಥರ ಜತೆಗೆ ಮಹಾರಾಷ್ಟ್ರಕ್ಕೆ ತೆರಳುತ್ತಿದ್ದರು. ಎರಡು ತಿಂಗಳ ಹಿಂದೆ ₹1 ಕೋಟಿಗೂ ಅಧಿಕ ಮೊತ್ತ ನೀಡಿ ಖರೀದಿಸಿದ್ದ ಕಾರಿನಲ್ಲಿ ಹೊರಟಿದ್ದ ಅವರು, ಮಾರ್ಗ ಮಧ್ಯದಲ್ಲಿ ಕೆಲವು ಸ್ಥಳಗಳ ವೀಕ್ಷಣೆಗೂ ಯೋಜನೆ ರೂಪಿಸಿಕೊಂಡಿದ್ದರು. ಎಲ್ಲರೂ ಖುಷಿಯಾಗಿ ತೆರಳುತ್ತಿದ್ದರು. ಆದರೆ, ಆ ಸಂಭ್ರಮ ಹೆಚ್ಚು ಸಮಯ ಉಳಿಯಲಿಲ್ಲ. ಹೆದ್ದಾರಿಯಲ್ಲಿ ಯಮಸ್ವರೂಪಿಯಾಗಿ ಬಂದ ಕಂಟೇನರ್ ಆರು ಮಂದಿಯ ಜೀವ ತೆಗೆದಿದೆ. ಕಾರಿನಲ್ಲಿದ್ದ ಮಕ್ಕಳ ಪುಸ್ತಕಗಳು ಘಟನಾ ಸ್ಥಳದಲ್ಲಿ ಚೆಲ್ಲಾ-ಪಿಲ್ಲಿಯಾಗಿ ಬಿದ್ದಿದ್ದವು. ಅಪಘಾತದ ಭೀಕರ ದೃಶ್ಯ ಕಂಡು ಹಲವರು ಕಣ್ಣೀರು ಹಾಕಿದರು. ಈ ರೀತಿ ಘಟನೆಗೆ ಯಾರನ್ನು ಹೊಣೆ ಮಾಡುವುದು ಎಂದು ಪ್ರಶ್ನಿಸಿದರು.

ಹೊಸ ಕಚೇರಿ ತೆರೆಯುವ ಆಲೋಚನೆ

'ಚಂದ್ರಮ್ ಅವರು ಮತ್ತೊಂದು ಕಚೇರಿ ಆರಂಭಿಸಲು ನಿರ್ಧರಿಸಿದ್ದರು. ಆ ಸಂಬಂಧ ಕೆಲಸಗಳೂ ನಡೆಯುತ್ತಿದ್ದವು. ಶನಿವಾರ ರಾತ್ರಿಯೂ ಕಚೇರಿಯಲ್ಲಿ ಸಭೆ ನಡೆಸಿದ್ದರು. 'ಊರಿಗೆ ತೆರಳುತ್ತಿದ್ದೇನೆ, ಕೆಲವು ದಿನ ಕಚೇರಿಗೆ ಬರುವುದಿಲ್ಲ' ಎಂದು ಹೇಳಿದ್ದರು. ಆದರೆ, ವಿಧಿಯಾಟವೇ ಬೇರೆ ಆಗಿತ್ತು' ಎಂದು ಸಿಬ್ಬಂದಿ ಕಣ್ಣೀರು ಹಾಕಿದರು.

ಅಪಘಾತದ ಮಾಹಿತಿ ತಿಳಿದು ಶನಿವಾರ ಮಧ್ಯಾಹ್ನದ ಬಳಿಕ ಕಂಪನಿಯ ಉದ್ಯೋಗಿಗಳು ಕೆಲಸ ಸ್ಥಗಿತಗೊಳಿಸಿದರು.

'ಸಂಸ್ಥೆಯನ್ನು ಕಟ್ಟಿ ಬೆಳೆಸುತ್ತಿದ್ದ ಮಾಲೀಕರು ದುರಂತವಾಗಿ ಮೃತಪಟ್ಟಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಕಂಪನಿ ಕಟ್ಟಿದ್ದರು. ಅವರಿಗೆ ಸಾಕಷ್ಟು ಕನಸುಗಳಿದ್ದವು. ನಿತ್ಯ ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಿದ್ದರು' ಎಂದು ಕಂಪನಿ ಸಿಬ್ಬಂದಿ ಶ್ರೀನಿವಾಸ್ ಕಣ್ಣೀರು ಹಾಕಿದರು.

'ಕಾರಿನ ಮೇಲೆ ಕಂಟೇನರ್ ಬಲವಾಗಿ ಬಿದ್ದಿದ್ದರಿಂದ ತಕ್ಷಣವೇ ಕಾರ್ಯಾಚರಣೆ ನಡೆಸಲು ಸಾಧ್ಯವಾಗಲಿಲ್ಲ. ಹೆದ್ದಾರಿಯ ಅಲ್ಲಲ್ಲಿ ಆಂಬುಲೆನ್ಸ್ ಹಾಗೂ ಕ್ರೇನ್‌ಗಳನ್ನು ನಿಲುಗಡೆ ಮಾಡಬೇಕು. ಇದರಿಂದ ಅಪಘಾತ ಸಂಭವಿಸಿದ ಸಂದರ್ಭಗಳಲ್ಲಿ ಜೀವ ಉಳಿಸಲು ಸಾಧ್ಯವಾಗಲಿದೆ' ಎಂದು ಪ್ರತ್ಯಕ್ಷದರ್ಶಿ ರವಿಕುಮಾರ್ ತಿಳಿಸಿದರು.

ಕಾರಿನ ಮೇಲೆ ಕಂಟೇನರ್ ಬಿದ್ದು ಆರು ಸಾವು

ಒಂದನೇ ಪುಟದಿಂದ...

ಬೆಳಿಗ್ಗೆ 11ರ ಸುಮಾರಿಗೆ ಕುಟುಂಬದ ಸದಸ್ಯರ ಜತೆಗೆ ಚಂದ್ರಮ್ ಅವರು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ತ ತಾಲ್ಲೂಕಿನ ಮೊರಬಗಿ ಗ್ರಾಮಕ್ಕೆ ತೆರಳುತ್ತಿದ್ದರು. ಬೆಳಿಗ್ಗೆ 11.30ರ ಸುಮಾರಿಗೆ ಕಾರು ತಾಳೆಕೆರೆ ಬಳಿ ಚಲಿಸುತ್ತಿತ್ತು. ಅದೇ ವೇಳೆ ತುಮಕೂರು ಕಡೆಯಿಂದ ಬೆಂಗಳೂರಿನತ್ತ ಚಲಿಸುತ್ತಿದ್ದ ಕಂಟೇನರ್‌ನ ಮುಂಭಾಗದಲ್ಲಿದ್ದ ಕಾರೊಂದರ ಚಾಲಕ ದಿಢೀರ್ ವೇಗ ತಗ್ಗಿಸಿದ್ದಾರೆ. ಆಗ ಎದುರಿಗಿದ್ದ ಕಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಪ್ರಯತ್ನದಲ್ಲಿ ಕಂಟೇನರ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಆಗಿದೆ. ಬಳಿಕ ಬೆಂಗಳೂರಿನಿಂದ ತುಮಕೂರಿನ ಕಡೆಗೆ ಚಲಿಸುತ್ತಿದ್ದ ನಂದಿನಿ ಹಾಲಿನ ಟೆಂಪೋಗೆ ಡಿಕ್ಕಿಯಾಗಿ, ವೋಲ್ವೊ ಕಾರಿನ ಮೇಲೆ ಬಿದ್ದಿದೆ. ಇದರಿಂದ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮೃತರ ಮಕ್ಕಳು ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕಂಟೇನರ್‌ನಲ್ಲಿ ಕಬ್ಬಿಣ ಹಾಗೂ ಉಕ್ಕಿನ ವಸ್ತುಗಳನ್ನು ತುಂಬಲಾಗಿತ್ತು. ವೋಲ್ವೊ ಕಾರಿನ ಮೇಲೆ ಬಿದ್ದ ಪರಿಣಾಮ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಇದರಿಂದ ಕಂಟೇನರ್ ತೆರವು ಮಾಡಲು ಕಷ್ಟವಾಗಿತ್ತು. ಐದು ಕ್ರೇನ್‌ಗಳನ್ನು ತರಿಸಿ ಮೃತದೇಹಗಳನ್ನು ಹೊರಕ್ಕೆ ತೆಗೆಯಲಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಹಿಂದೆ ಬರುತ್ತಿದ್ದ ಕಾರುಗಳು: ವೋಲ್ವೊ ಕಾರಿನ ಹಿಂದೆಯೇ ಎರಡು ಕಾರು ಹಾಗೂ ದ್ವಿಚಕ್ರ ವಾಹನಗಳು ಬರುತ್ತಿದ್ದವು. ಕಂಟೇನರ್ ರಸ್ತೆ ವಿಭಜಕದ ಮೇಲೆ ಏರುತ್ತಿರುವುದನ್ನು ಗಮನಿಸಿದ್ದ ಚಾಲಕರು ಬ್ರೇಕ್ ಹಾಕಿ ನಿಲ್ಲಿಸಿದ್ದರಿಂದ ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಅಪಘಾತದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೂರು ತಾಸು ಸಂಚಾರ ವ್ಯತ್ಯಯವಾಗಿತ್ತು. ಕಂಟೇನರ್ ಚಾಲಕನಿಗೂ ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತದೇಹಗಳು ಸಂಪೂರ್ಣ ಛಿದ್ರವಾಗಿದ್ದವು. ನೆಲಮಂಗಲದ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಕಂಟೇನರ್ ಚಾಲಕನ ನಿರ್ಲಕ್ಷ್ಯ ಹಾಗೂ ಅಜಾಗರೂಕತೆಯಿಂದಲೇ ಅನಾಹುತ ಸಂಭವಿಸಿದ್ದು, ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕೇಂದ್ರ ವಲಯ ಐಜಿಪಿ ಲಾಬೂರಾಮ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾಗರಾಜು ಭೇಟಿ ನೀಡಿ ಪರಿಶೀಲಿಸಿದರು.


ಕಂಟೇನರ್ ಚಾಲಕ ಆರೀಫ್ ಅನ್ಸಾರಿ ವಿರುದ್ಧ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನೆಲಮಂಗಲ ಡಿವೈಎಸ್‌ಪಿಯನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ.

ಪ್ರತ್ಯೇಕ ಅಪಘಾತ: ಐವರು ಸಾವು

ಮಳವಳ್ಳಿ/ಮೇಲುಕೋಟೆ: ಮಂಡ್ಯ ಜಿಲ್ಲೆಯಲ್ಲಿ ಶನಿವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತದಲ್ಲಿ ಒಟ್ಟು ಐವರು ಮೃತಪಟ್ಟಿದ್ದಾರೆ.

ಮಳವಳ್ಳಿ ತಾಲ್ಲೂಕಿನ ನಾಗೇಗೌಡನದೊಡ್ಡಿ ಗೇಟ್ ಬಳಿ ಶನಿವಾರ ಮಧ್ಯಾಹ್ನ ಕಾರಿಗೆ ಲಾರಿ ಡಿಕ್ಕಿಯಾಗಿ ಬೆಂಗಳೂರಿನ ದಿಬಿಟ ಕಾಲೇಜಿನ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಪ್ರಣವ್ (22), ಅರ್ಣವ್ (23) ಹಾಗೂ ಅರ್ಜುನ್ (22) ಮೃತಪಟ್ಟವರು. ಮತ್ತೊಬ್ಬ ವಿದ್ಯಾರ್ಥಿ ಹೃತಿಕ್ ಗಾಯಗೊಂಡಿದ್ದು, ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರು ಬೆಂಗಳೂರಿನಿಂದ ತಲಕಾಡಿಗೆ ತೆರಳುತ್ತಿದ್ದರು.

ಮೇಲುಕೋಟೆ ಹೋಬಳಿಯ ಮಡಕೇಶ್ವರಪುರ ಬಳಿ ಶನಿವಾರ ಬೆಳಿಗ್ಗೆ ಸ್ಕೂಟರ್‌ಗೆ ಲಾರಿ ಡಿಕ್ಕಿಯಾಗಿ ನೀಲನಹಳ್ಳಿ ಗ್ರಾಮದ ಶಿಲ್ಪಾ (35) ಮತ್ತು ಸಂಧ್ಯಾ (19) ಸ್ಥಳದಲ್ಲೇ ಮೃತಪಟ್ಟರು. ಶ್ವೇತಾ ಎನ್ನುವವರು ತೀವ್ರ ಗಾಯಗೊಂಡಿದ್ದಾರೆ. ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ವೇತಾ ಮತ್ತು ಅವರ ಮಗಳು ಸಂಧ್ಯಾ ತವರಿಗೆ ತೆರಳಲು ಸ್ನೇಹಿತೆ ಶಿಲ್ಪಾ ಅವರಿಂದ ಡ್ರಾಪ್ ತೆಗೆದುಕೊಳ್ಳುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.



ಸುದ್ದಿ 2 ನಿಮಿಷ

ಲೋಕಾಯುಕ್ತ ದಾಳಿ ವೇಳೆ ನೋಟು ನುಂಗಿದ ಉಪನಿಬಂಧಕ

ಕೊಪ್ಪಳ: ಇಲ್ಲಿನ ಸಹಕಾರಿ ಸಂಘಗಳ ಉಪ ನಿಬಂಧಕ ದಸ್ತಗೀರ ಅಲಿ ಶನಿವಾರ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದು, ಲಂಚ ಪಡೆದ ಹಣವನ್ನು ನುಂಗಿದ್ದರಿಂದ ಅಧಿಕಾರಿಗಳು ಪೇಚಿಗೆ ಸಿಲುಕಿದರು.

ಭೀಮನಗೌಡ ಎಂಬುವರು ಸಹಕಾರ ಸಂಘ ನೋಂದಣಿಗೆ ಅರ್ಜಿ ಸಲ್ಲಿಸಿದ್ದು, ₹2 ಸಾವಿರ ಲಂಚ ನೀಡುವಂತೆ ದಸ್ತಗೀರ ಅಲಿ ಬೇಡಿಕೆ ಇಟ್ಟಿದ್ದರು. ಇದರಿಂದ ಬೇಸತ್ತ ಭೀಮನಗೌಡ ದೂರು ನೀಡಿದ್ದರು. ಶನಿವಾರ ಜಿಲ್ಲಾಡಳಿತ ಭವನದಲ್ಲಿರುವ ಸಹಕಾರಿ ಇಲಾಖೆ ಕಚೇರಿಯಲ್ಲಿಯೇ ಹಣ ಪಡೆಯುವಾಗ ಅಧಿಕಾರಿ ಮೇಲೆ ದಾಳಿ ನಡೆಸಿದರು.

ದಾಳಿಯಿಂದಾಗಿ ಬೆದರಿದ ದಸ್ತಗೀರ ಅಲಿ ₹ 500ರ ನಾಲ್ಕು ನೋಟುಗಳನ್ನು ನುಂಗಿದ್ದು ಗಂಟಲಲ್ಲಿ ಸಿಲುಕಿಕೊಂಡಿತು. ತಕ್ಷಣವೇ ಎಚ್ಚೆತ್ತ ಪೊಲೀಸರು ಎಲ್ಲವನ್ನೂ ವಿಡಿಯೊ ಚಿತ್ರೀಕರಣ ಮಾಡಿಕೊಂಡು ಗಂಟಲಲ್ಲಿ ಕೈ ಹಾಕಿ ಹಣ ತೆಗೆದಿದ್ದಾರೆ. ಬಳಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ಪರೀಕ್ಷೆ ನಡೆಸಿ ವಶಕ್ಕೆ ಪಡೆದುಕೊಂಡರು. ರಾಯಚೂರು ಲೋಕಾಯುಕ್ತ ಎಸ್‌ಪಿ ಶಶಿಧರ ಮಾರ್ಗದರ್ಶನದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ನಾಗರತ್ನ ಅವರ ತಂಡ ದಾಳಿ ನಡೆಸಿತ್ತು.

ಕ್ರಸ್ಟ್ ಗೇಟ್‌ಗಳ ಮಾದರಿ ಸಂಗ್ರಹ, ಪರೀಕ್ಷೆಗೆ ರವಾನೆ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಗೆ ಹೊಸ ಕ್ರಸ್ಟ್ ಗೇಟ್‌ಗಳನ್ನು ತುರ್ತಾಗಿ ಅಳವಡಿಸಬೇಕೆ ಅಥವಾ ಬೇಡವೇ ಎಂಬುದನ್ನು ತಿಳಿದುಕೊಳ್ಳಲು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯ (ಸಿಎಸ್‌ಐಆರ್) ಸ್ಟ್ರಕ್ಚರಲ್ ಎಂಜಿನಿಯರಿಂಗ್ ಸಂಶೋಧನಾ ವಿಭಾಗದ ಐವರು ತಜ್ಞರು ಶನಿವಾರ ಇಲ್ಲಿ ಪರಿಶೀಲಿಸಿದರು.

ಜೆಮ್‌ಶೆಡ್‌ಪುರದ ಮೆಟೀರಿಯಲ್ ಎಂಜಿನಿಯರಿಂಗ್ ಪ್ರಯೋಗಾಲಯದ ಹೇಮೇಂದ್ರನಾಥ್ ನೇತೃತ್ವದಲ್ಲಿ ಎರಡು ಗಂಟೆ 33 ಗೇಟ್‌ಗಳನ್ನು ಪರಿಶೀಲಿಸಿದ ತಂಡ, ಪ್ರತಿಯೊಂದು ಗೇಟ್‌ನಲ್ಲಿ ಬಳಸಲಾದ ಸಾಮಗ್ರಿಗಳ ಮಾದರಿ ಸಂಗ್ರಹಿಸಿತು.

'ಈ ಮಾದರಿಗಳನ್ನು ನಾವು ಕೂಲಂಕಷ ಪರಿಶೀಲನೆಗೆ ಒಳಪಡಿಸಲಿದ್ದೇವೆ. ಗೇಟ್‌ಗಳ ಗುಣಮಟ್ಟ, ಬಾಳಿಕೆ, ತುರ್ತಾಗಿ ಬದಲಿಸುವ ಅಗತ್ಯ ಇದೆಯೇ ಎಂಬುದಕ್ಕೆ ಪರೀಕ್ಷೆಯಿಂದ ಉತ್ತರ ಸಿಗುವ ನಿರೀಕ್ಷೆ ಇದೆ. ನಂತರ ಹೊಸ ಗೇಟ್ ಅಳವಡಿಕೆ ಕುರಿತ ಪ್ರಕ್ರಿಯೆ ಆರಂಭವಾಗಲಿವೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು. ಡಿಸೆಂಬರ್ 8ರಂದು ಅಣೆಕಟ್ಟೆಗೆ ಬಂದಿದ್ದ ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದ ತಜ್ಞರು ಅಣೆಕಟ್ಟು ಸಾಮರ್ಥ್ಯ ಪರೀಕ್ಷೆ ನಡೆಸುವಂತೆ ತಿಳಿಸಿದ್ದರು.

ದಕ್ಷಿಣ ಭಾರತದ ಪಾರಂಪರಿಕ ಸ್ಥಳಗಳನ್ನು ಸಂಪರ್ಕಿಸಲಿರುವ ಸುವರ್ಣರಥ

'ಗೋಲ್ಡನ್ ಚಾರಿಯಟ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮತ್ತು ದಕ್ಷಿಣ ಭಾರತದ ಐತಿಹಾಸಿಕ, ಪಾರಂಪರಿಕ ಸ್ಥಳಗಳನ್ನು ಸಂಪರ್ಕಿಸಲಿರುವ ಗೋಲ್ಡನ್ ಚಾರಿಯಟ್ ರೈಲು ಭಾರತದ ಹಿರಿಮೆಯನ್ನು ಪ್ರವಾಸಿಗರ ಅನುಭವಕ್ಕೆ ತಂದುಕೊಡಲಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಯಶವಂತಪುರ ರೈಲು ನಿಲ್ದಾಣದ ಪ್ಲ್ಯಾಟ್‌ಫಾರಂ 6ರಲ್ಲಿ ಗೋಲ್ಡನ್ ಚಾರಿಯಟ್ (ಸುವರ್ಣ ರಥ) ಐಷಾರಾಮಿ ರೈಲಿಗೆ ಶನಿವಾರ ಚಾಲನೆ ನೀಡಿದ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ರಾಜ್ಯದ ಮೈಸೂರು, ನಂಜನಗೂಡು, ಹಂಪಿ ಅಲ್ಲದೇ ಕೇರಳ, ತಮಿಳುನಾಡಿನ ಐತಿಹಾಸಿಕ ಪ್ರದೇಶಗಳಿಗೆ ರೈಲು ಸಂಚಾರ ಇರಲಿದೆ. ಐದು ರಾತ್ರಿ ಆರು ಹಗಲುಗಳ ಈ ಪ್ರವಾಸ ಜನರಿಗೆ ವಿಶೇಷ ಅನುಭವವನ್ನು ನೀಡಲಿದೆ. ವಿವಿಧ ಕಾರಣಗಳಿಂದ 2018ರಲ್ಲಿ ಸ್ಥಗಿತವಾಗಿದ್ದ ಈ ರೈಲು ಮತ್ತೆ ಆರಂಭವಾಗಿರುವುದು ಪ್ರಯಾಣಿಕರಿಗೆ ಸಂತಸ ತಂದಿದೆ ಎಂದರು.

ರೈಲಿನ ವಿವರ: ರೈಲಿನ ಒಳಾಂಗಣವನ್ನು ಕಲಾತ್ಮಕವಾಗಿ ನಿರ್ಮಿಸಲಾಗಿದೆ. 18 ಕೋಚ್‌ಗಳಲ್ಲಿ ಕರ್ನಾಟಕವನ್ನು ಆಳಿದ ಕದಂಬ, ಹೊಯ್ಸಳ, ವಿಜಯನಗರದ ಅರಸರು, ಚಾಲುಕ್ಯರ ಹೆಸರನ್ನು ಇಡಲಾಗಿದೆ. ಗೋಲ್ಡನ್ ಚಾರಿಯಟ್, ವಿಶ್ವದ ಪ್ರಸಿದ್ಧ ಪರಂಪರೆಯ ತಾಣಗಳ ಜೊತೆಗೆ ಪಶ್ಚಿಮ ಘಟ್ಟಗಳು, ಪ್ರಾಚೀನ ಕಡಲ ತೀರಗಳು, ಸಾಂಸ್ಕೃತಿಕ ತಾಣಗಳಿಗೆ ಪ್ರವಾಸಿಗರನ್ನು ಕರೆದೊಯ್ಯುತ್ತದೆ.

44 ಸುಸಜ್ಜಿತ ಕ್ಯಾಬಿನ್‌ಗಳು, ಎನ್–ಸೂಟ್ ಸ್ನಾನಗೃಹ, ವೈಫೈ ವ್ಯವಸ್ಥೆಯನ್ನು ಒಳಗೊಂಡಿದೆ. ರುಚಿ ಮತ್ತು ನಳಪಾಕ ಹೆಸರಿನ ಎರಡು ಹೋಟೆಲ್‌ಗಳಲ್ಲಿ ಭಾರತೀಯ ಮತ್ತು ಅಂತರರಾಷ್ಟ್ರೀಯ ಪಾಕಪದ್ಧತಿ ಇರಲಿದೆ. ಲಾಂಜ್ ಬಾರ್, ಫಿಟ್‌ನೆಸ್ ಸೆಂಟರ್ ಸೌಕರ್ಯಗಳಿವೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಸಲ್ಮಾ ಕೆ. ಫಾಹಿಮ್, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಉಪಸ್ಥಿತರಿದ್ದರು.



ಯಶವಂತಪುರ ರೈಲು ನಿಲ್ದಾಣದಿಂದ ಶನಿವಾರ ಹೊರಟ ಗೋಲ್ಡನ್ ಚಾರಿಯಟ್ (ಸುವರ್ಣ ರಥ) ಐಷಾರಾಮಿ ರೈಲಿನಲ್ಲಿ ಪ್ರವಾಸಿಗರು
– ಚಿತ್ರ: ಬಿ.ಕೆ. ಜನಾರ್ದನ್

ಎಲ್ಲೆಲ್ಲಿ ಪ್ರವಾಸ

ಜೂವೆಲ್ ಆಫ್ ಸೌತ್ ಪ್ರವಾಸ ಡಿ.21 ರಿಂದ 26ರ ವರೆಗೆ ಇರಲಿದೆ. ಬೆಂಗಳೂರಿನಿಂದ ಆರಂಭಗೊಂಡು ಮೈಸೂರು, ಕಾಂಚೀಪುರಂ, ಮಹಾಬಲಿಪುರಂ, ತಂಜಾವೂರು, ಕೊಚ್ಚಿನ್, ಮರಾರಿಕುಲಂಗೆ ತೆರಳಿ ಬೆಂಗಳೂರಿಗೆ ಹಿಂದಿರುಗಲಿದೆ. ಒಬ್ಬರಿಗೆ ₹ 4.07 ಲಕ್ಷ ವೆಚ್ಚವಾಗಲಿದೆ.

ಪ್ರೈಡ್ ಆಫ್ ಕರ್ನಾಟಕ ಪ್ರವಾಸವು ಜ.1ರಿಂದ 6ರವರೆಗೆ ಇರಲಿದೆ. ಬೆಂಗಳೂರಿನಿಂದ ನಂಜನಗೂಡು, ಮೈಸೂರು, ಹಳೆಬೀಡು, ಚಿಕ್ಕಮಗಳೂರು, ಹೊಸಪೇಟೆ, ಗೋವಾಕ್ಕೆ ತೆರಳಿ ಬೆಂಗಳೂರಿಗೆ ವಾಪಸ್ಸಾಗಲಿದೆ. ಈ ಪ್ರವಾಸಕ್ಕೆ ಒಬ್ಬರಿಗೆ ₹ 2.81 ಲಕ್ಷ ವೆಚ್ಚ ಇರಲಿದೆ. ಸೋಜರ್ನ್ ಆಫ್ ಸೌತ್ ಚಾರ್ಟರ್ಡ್ ಪ್ರವಾಸವನ್ನು ಡಿ. 29ರಿಂದ ಜ.12ರವರೆಗೆ ಆಯೋಜಿಸಲಾಗಿದೆ ಎಂದು ಪ್ರವಾಸೋದ್ಯಮ ಅಧಿಕಾರಿಗಳು ತಿಳಿಸಿದ್ದಾರೆ.

'ಬೆಳಗಾವಿಯಲ್ಲಿ ಆತ್ಮಸ್ಥೈರ್ಯ ಅಭಿಯಾನ ನಾಳೆ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿಗಾಗಿ ನಡೆದ ಹೋರಾಟದಲ್ಲಿ ಪೊಲೀಸರ ಲಾಠಿ ಪ್ರಹಾರದಿಂದ ಗಾಯಗೊಂಡವರ ಮನೆಗೆ ತೆರಳಿ ಆತ್ಮಸ್ಥೈರ್ಯ ತುಂಬುವ ಅಭಿಯಾನ ಡಿಸೆಂಬರ್ 23ರಂದು ಬೆಳಗಾವಿಯಲ್ಲಿ ಆರಂಭಿಸಲಾಗುವುದು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

'ಬೆಳಗಾವಿಯಿಂದ ಅಭಿಯಾನ ಆರಂಭಿಸಿ ವಿವಿಧ ಜಿಲ್ಲೆ, ತಾಲ್ಲೂಕುಗಳಲ್ಲಿ ಗಾಯಾಳುಗಳ ಮನೆಗೆ ಭೇಟಿ ನೀಡಿ ಆತ್ಮಸ್ಥೈರ್ಯ ತುಂಬಲಾಗುವುದು. ಸಮುದಾಯದವರಿಂದ ಧನ ಸಂಗ್ರಹಿಸಿ ಗಾಯಾಳುಗಳಿಗೆ ಆರ್ಥಿಕ ಸಹಾಯ ನೀಡಲಾಗುವುದು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಬೆಳಗಾವಿಯಲ್ಲಿ ವಿಕಾಸಸೌಧಕ್ಕೆ ಮುಂದಾದ ಹೋರಾಟಗಾರರಿಗೆ ಪೊಲೀಸರು ತೀವ್ರವಾಗಿ ಹೊಡೆದಿದ್ದಾರೆ. ಕೆಲವರಿಗೆ ತಲೆಗೆ ಪೆಟ್ಟಾಗಿದೆ, ಕೈ ಮುರಿದಿದೆ. ಸಂಕ್ರಾಂತಿ ನಂತರ ಪ್ರತಿ ಹಳ್ಳಿಗೆ ಹೋಗಿ ಸಮುದಾಯದವರೊಂದಿಗೆ ಸಂವಾದ ನಡೆಸುತ್ತೇನೆ. ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ನೀಡಲು ಸರ್ಕಾರ ತೋರಿದ ಅಲಕ್ಷ್ಯವನ್ನು ತಿಳಿಸುತ್ತೇನೆ' ಎಂದರು.

ವಕೀಲ ಸಿದ್ದು ಹೆಬ್ಬಳ್ಳಿ, ಶಿವಾನಂದ ಮಾಳಶೆಟ್ಟಿ ಸುದ್ದಿಗೋಷ್ಠಿಯಲ್ಲಿದ್ದರು.

ಪರಮಶಿವಮೂರ್ತಿಗೆ ಸಿದ್ಧರಾಮ ಸಾಹಿತ್ಯ ಪ್ರಶಸ್ತಿ



ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಗುರು ಸಿದ್ಧರಾಮೇಶ್ವರ ಮಹೋತ್ಸವ ಸಮಿತಿಯು ಅರಸೀಕೆರೆಯ ಸಿದ್ಧರಾಮಯ್ಯ ಮತ್ತು ಗಂಗಮ್ಮ ಸ್ಮಾರಕ ದತ್ತಿ ರೂಪದಲ್ಲಿ ನೀಡುವ ಸಿದ್ಧರಾಮ ಸಾಹಿತ್ಯ ಪ್ರಶಸ್ತಿಗೆ ಹಂಪಿ ಕನ್ನಡ ವಿ.ವಿ.ಯ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಆಯ್ಕೆಯಾಗಿದ್ದಾರೆ.

'ಬೆಂಗಳೂರಿನಲ್ಲಿ ಜನವರಿ 14ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ₹10 ಸಾವಿರ ನಗದು ಒಳಗೊಂಡಿದೆ. ಪರಮಶಿವಮೂರ್ತಿ ಅವರು ಪ್ರೌಢದೇವರಾಯ ಮತ್ತು ಕೃಷ್ಣದೇವರಾಯನ ಶಾಸನ ಸಂಪುಟ ಕೃತಿಗಳನ್ನು ಹೊರತಂದಿದ್ದಾರೆ. ನೊಳಂಬರ ಶಾಸನಗಳು ಕೃತಿಯನ್ನು 2019ರಲ್ಲಿ ಹೊರತಂದಿದ್ದಾರೆ' ಎಂದು ಕರ್ನಾಟಕ ರಾಜ್ಯ ನೊಳಂಬ ಲಿಂಗಾಯತ ಸಂಘದ ಪ್ರಕಟಣೆ ತಿಳಿಸಿದೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಿಂದ ಈ ರೀತಿಯ ನಡೆಯನ್ನು ನಿರೀಕ್ಷೆ ಮಾಡಿರಲಿಲ್ಲ'

ನ್ಯಾಯಾಂಗ ತನಿಖೆಗೆ ಸಿ.ಟಿ. ರವಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ನಿಂದಿಸಿದ್ದೇನೆ ಎಂಬ ಆರೋಪದಡಿ ನನ್ನನ್ನು ಬಂಧನ ಮಾಡಿರುವುದು ಮತ್ತು ನಂತರದಲ್ಲಿ ನಿಗೂಢವಾಗಿ ನಡೆದುಕೊಂಡಿರುವ ಪೊಲೀಸರ ನಡವಳಿಕೆ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಆಗ್ರಹಿಸಿದರು.

ಹೈಕೋರ್ಟ್ ಆದೇಶದಂತೆ ಶುಕ್ರವಾರ ರಾತ್ರಿ ಪೊಲೀಸರ ಬಂಧನದಿಂದ ಬಿಡುಗಡೆಯಾದ ಬಳಿಕ ಬೆಂಗಳೂರಿಗೆ ಬಂದಿದ್ದ ಅವರು ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.


'ಸದನದ ಒಳಗೆ ನಡೆದಿರುವ ಘಟನೆಗೆ ಸಂಬಂಧಿಸಿದಂತೆ ಸಭಾಪತಿಯವರ ಅನುಮತಿ ಇಲ್ಲದೇ ಪ್ರಕರಣ ದಾಖಲಿಸಿರುವುದು ಮತ್ತು ಬಂಧಿಸಿರುವುದು ಅಪರಾಧ. ಬಂಧನದ ಬಳಿಕ 15 ಗಂಟೆ ಪೊಲೀಸರು ನನ್ನನ್ನು ಸುತ್ತಾಡಿಸಿದರು. ಮೂತ್ರ ವಿಸರ್ಜನೆಗೂ ಅವಕಾಶ ನೀಡಲಿಲ್ಲ. ಕಬ್ಬಿನ ಗದ್ದೆಯ ಬಳಿ ಕರೆದೊಯ್ದು ಭಯ ಹುಟ್ಟಿಸಿದರು. ಆ ಸಂದರ್ಭದಲ್ಲಿ ಅವರು ನಿಗೂಢವಾಗಿ ನಡೆದುಕೊಂಡರು. ಪ್ರಭಾವಿ ವ್ಯಕ್ತಿಗಳು ಪೊಲೀಸರಿಗೆ ಕರೆಮಾಡಿ ನಿರ್ದೇಶನ ನೀಡುತ್ತಿದ್ದರು. ನನ್ನ ಪ್ರಾಣಕ್ಕೆ ಅಪಾಯ ಉಂಟಾಗಬಹುದು ಎಂಬ ಅನುಮಾನ ಮೂಡಿತ್ತು' ಎಂದರು.

'ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಿಂದ ಈ ರೀತಿಯ ವರ್ತನೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಗೃಹ ಇಲಾಖೆ ಯಾರ ಹಿಡಿತದಲ್ಲಿದೆ ಎಂಬ ಅನುಮಾನ ಮೂಡುತ್ತಿದೆ. ಈ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಉತ್ತರ ನೀಡಬೇಕು' ಎಂದು ಆಗ್ರಹಿಸಿದರು.

ದೂರವಾಣಿ ಕದ್ದಾಲಿಕೆ ಆರೋಪ: 'ನನ್ನ ದೂರವಾಣಿ ಕರೆಗಳನ್ನು ಕದ್ದಾಲಿಕೆ ಮಾಡುತ್ತಿರುವ ಅನುಮಾನ ಇದೆ. ಈ ಬಗ್ಗೆಯೂ ತನಿಖೆ ನಡೆಸಬೇಕು' ಎಂದು ರವಿ ಒತ್ತಾಯಿಸಿದರು.

'ಬೆಳಗಾವಿ ಲಕ್ಷ್ಮೀ ಅವರ ಪ್ರದೇಶ. ಅಲ್ಲಿಂದ ರವಿ ಬದುಕಿ ಬಂದದ್ದೇ ಅದೃಷ್ಟ ಎಂಬಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಬೆಳಗಾವಿ ಮತ್ತು ಕನಕಪುರಗಳು ಬನಾನಾ ರಿಪಬ್ಲಿಕ್‌ಗಳಾ' ಎಂದು ಪ್ರಶ್ನಿಸಿದರು.

'ನನ್ನ ಸಂಸ್ಕೃತಿಯ ಬಗ್ಗೆ ಶಿವಕುಮಾರ್ ಮಾತನಾಡಿದ್ದಾರೆ. ನಮ್ಮ ಮತ್ತು ಅವರ ಸಂಸ್ಕೃತಿ ಜನರಿಗೆ ಗೊತ್ತು. ಜನರೇ ನಿರ್ಧಾರ ಮಾಡುತ್ತಾರೆ. ಆ ಬಗ್ಗೆ ಹೆಚ್ಚೇನೂ ಹೇಳುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.





ಬೆಳಗಾವಿಯಲ್ಲಿ ಶನಿವಾರ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಅಭಿಮಾನಿಗಳು ಸಿ.ಟಿ.ರವಿ ಅವರ ಅಣಕು ಶವಯಾತ್ರೆ ಮಾಡಿದರು ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಕಾರ್ಯಕರ್ತರಿಂದ ಪ್ರತಿಭಟನೆ

ಬೆಳಗಾವಿ: ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅವಾಚ್ಯ ಪದದಿಂದ ನಿಂದಿಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಅಮಾನತು ಮಾಡುವಂತೆ ಆಗ್ರಹಿಸಿ, ಲಕ್ಷ್ಮೀ ಹೆಬ್ಬಾಳಕರ ಅವರ ಅಪಾರ ಸಂಖ್ಯೆಯ ಅಭಿಮಾನಿಗಳು ಶನಿವಾರ ಪ್ರತಿಭಟನೆ ನಡೆಸಿದರು. ರವಿ ಅವರ ಅಣಕು ಶವಯಾತ್ರೆ ಮಾಡಿ, ಪ್ರತಿಕೃತಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ಸಿಪಿ.ಇಡಿ ಮೈದಾನದಲ್ಲಿ ಜಮಾವಣೆಗೊಂಡ ಅಭಿಮಾನಿಗಳು ಜಿಲ್ಲಾಧಿಕಾರಿ ಕಚೇರಿವರೆಗೂ (2 ಕಿ.ಮೀ) ಅಣಕು ಶವಯಾತ್ರೆ ಮಾಡಿದರು. ಮಾರ್ಗದುದ್ದಕ್ಕೂ ಶೋಕಗೀತೆ ಹಾಡಿ, ಹಲಗೆ ನಾದಕ್ಕೆ ಹೆಜ್ಜೆ ಹಾಕಿದರು. ಮಹಿಳೆಯರು ಬಾಯಿ ಬಡಿದುಕೊಂಡರು. ರಾಣಿ ಚನ್ನಮ್ಮ ವೃತ್ತದಲ್ಲಿ ಒಂದು ಗಂಟೆ ಮಾನವ ಸರಪಳಿ ನಿರ್ಮಿಸಿ ಸಂಚಾರ ಬಂದ್ ಮಾಡಿದರು. ಅಲ್ಲಿಯೇ ಪ್ರತಿಕೃತಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

'ಲಕ್ಷ್ಮೀ ಹೆಬ್ಬಾಳಕರ ಅವರಿಗೆ 'ಆ' ಕೆಟ್ಟ ಪದ ಬಳಸಿರುವ ಸಿ.ಟಿ.ರವಿ ಭಾರತ ಮಾತೆಗೆ ಅವಮಾನಿಸಿದ್ದಾರೆ. ಇದು ಬಿಜೆಪಿಯ ಸಂಸ್ಕೃತಿಯೇ ಎಂದು ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ, ತಕ್ಷಣ ಆರೋಪಿಯನ್ನು ಪಕ್ಷದಿಂದ ಹೊರಹಾಕಬೇಕು. ಪರಿಷತ್‌ನಿಂದಲೂ ಅಮಾನತು ಮಾಡಬೇಕು. ಎರಡನ್ನೂ ಮಾಡದಿದ್ದರೆ 'ಭಾರತ ಮಾತೆಗೆ ಜೈ' ಎನ್ನುವ ಹಕ್ಕು ನಿಮಗೆ ಇಲ್ಲ' ಎಂದು ಪ್ರತಿಭಟನಕಾರರು ಹೇಳಿದರು.

'ಆರೋಪಿಗೆ ಜಾಮೀನು ಸಿಕ್ಕ ನಂತರ ಬಿಜೆಪಿಯ ನಾಯಕರು ವಿಜಯೋತ್ಸವ ಆಚರಿಸಿದ್ದಾರೆ. ಮಹಿಳೆಯರೂ ಅದರಲ್ಲಿ ಪಾಲ್ಗೊಂಡಿದ್ದು ದುರಂತ. 'ಆ' ಪದ ಬಳಕೆ ಸರಿ ಎಂದು ಬಿಜೆಪಿಯ ಎಲ್ಲ ಮಹಿಳಾ ಸದಸ್ಯರು ಒಪ್ಪಿಕೊಳ್ಳುತ್ತೀರಾ? ಒಪ್ಪದಿದ್ದರೆ, ರವಿ ಅವರನ್ನು ಪಕ್ಷದಿಂದ ಹೊರಹಾಕಿ. ಪಕ್ಷಾತೀತವಾಗಿ ಘಟನೆ ಖಂಡಿಸಿ. ಇಲ್ಲದಿದ್ದರೆ ರಾಷ್ಟ್ರ ಮಟ್ಟದಲ್ಲಿ ಹೆಣ್ಣುಮಕ್ಕಳ ಗೌರವ ಮಣ್ಣುಪಾಲಾಗುತ್ತದೆ' ಎಂದು ಹೇಳಿದರು.

ಉನ್ನತಮಟ್ಟದ ತನಿಖೆಗೆ ಮಹಿಳಾ ಆಯೋಗ ಮನವಿ

ಬೆಂಗಳೂರು: 'ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ವಿಧಾನ ಪರಿಷತ್ ಕಲಾಪದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅವಾಚ್ಯ ಮತ್ತು ಅಸಾಂವಿಧಾನಿಕ ಪದ ಬಳಕೆ ಮಾಡಿ ಅಪಮಾನಿಸಿರುವ ಪರಿಷತ್ತಿನ ಸದಸ್ಯರಾದ ಸಿ.ಟಿ. ರವಿ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಬೇಕು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಪತ್ರ ಬರೆದಿದ್ದಾರೆ.

'ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಸಿ.ಟಿ. ರವಿ ಅಪಮಾನಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಮಾಜಿ ಸಚಿವರಾಗಿ, ಹೆಣ್ಣು ಮಕ್ಕಳ ಬಗ್ಗೆ ಅಪಾರ ಕಾಳಜಿ, ಗೌರವ ಹೊಂದಿರಬೇಕಾದ, ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿಯೇ ಸದನದಲ್ಲಿ ಮಹಿಳಾ ಮಂತ್ರಿಯೊಬ್ಬರ ವಿರುದ್ಧ ಅತೀ ಕೀಳುಮಟ್ಟದ ಅಸಾಂವಿಧಾನಿಕ ಪದ ಪ್ರಯೋಗ ಮಾಡಿದ್ದಾರೆ. ಇದು ನಾಡಿನ ಹೆಣ್ಣು ಕುಲಕ್ಕೆ, ಅವರ ಭಾವನೆಗಳಿಗೆ, ಘನತೆಗೆ ಉಂಟು ಮಾಡಿರುವ ಅಪಮಾನವಾಗಿದೆ. ನೀವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು' ಎಂದು ಪತ್ರದಲ್ಲಿ ಅವರು ಮನವಿ ಮಾಡಿದ್ದಾರೆ.




ನಾಗಲಕ್ಷ್ಮೀ ಚೌಧರಿ

ಸಿಬಿಐ ತನಿಖೆಗೆ ವಹಿಸಲಿ: ಆರ್. ಅಶೋಕ

ಬೆಂಗಳೂರು: ನಕ್ಸಲರಿಂದ ಬೆದರಿಕೆ ಎದುರಿಸುತ್ತಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಪೊಲೀಸರು ಯಾವ ಉದ್ದೇಶಕ್ಕಾಗಿ ರಾತ್ರಿ ವೇಳೆ ಕಬ್ಬಿನ ಗದ್ದೆಗಳಲ್ಲಿ ಓಡಾಡಿಸಿದ್ದರು? ಪೊಲೀಸರ ನಡವಳಿಕೆ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುರಕ್ಷತಾ ದೃಷ್ಟಿಯಿಂದ ರವಿ ಅವರನ್ನು ಕಬ್ಬಿನ ಗದ್ದೆಗೆ ಕರೆದೊಯ್ಯಲಾಗಿತ್ತು ಎಂದು ಪೊಲೀಸರು ಹೇಳುತ್ತಿದ್ದಾರೆ. ನಕ್ಸಲರು ಬಂದು ಗುಂಡು ಹೊಡೆಯಲಿ ಎಂದು ಕರೆದೊಯ್ದಿದ್ದರೆ? ಸುರಕ್ಷತೆಗಾಗಿ ಮುಖ್ಯಮಂತ್ರಿ ಮತ್ತು ಮಂತ್ರಿಗಳನ್ನೂ ಹೀಗೆ ಕಬ್ಬಿನ ಗದ್ದೆ, ಕಲ್ಲು ಕ್ವಾರಿಗಳಿಗೆ ಕರೆದುಕೊಂಡು ಹೋಗುತ್ತಾರಾ' ಎಂದು ಪ್ರಶ್ನಿಸಿದರು.




'ಪೊಲೀಸರ ನಡವಳಿಕೆ ಅಮಾನವೀಯ'

ಬೆಂಗಳೂರು: 'ವಿಧಾನ ಪರಿಷತ್‌ನಲ್ಲಿ ನಡೆದಿದೆ ಎನ್ನಲಾದ ಘಟನೆ ಕುರಿತು ಕಾನೂನು ಪ್ರಕಾರ ತನಿಖೆ ನಡೆಸಬೇಕಾದ ಪೊಲೀಸರೇ ಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಅಮಾನವೀಯವಾಗಿ ನಡೆಸಿಕೊಂಡಿದ್ದಾರೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ದೂರಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತಾವು ಅವಾಚ್ಯ ಶಬ್ದ ಬಳಸಿಲ್ಲ ಎಂದು ರವಿ ಸ್ಪಷ್ಟನೆ ನೀಡಿದ್ದಾರೆ. ಪ್ರಕರಣದ ಕುರಿತು ತನಿಖೆ ನಡೆಸುವುದು ಬೇಡ ಎನ್ನುವುದಿಲ್ಲ. ಸತ್ಯಶೋಧನೆ, ತನಿಖೆ ಆಗದೇ ಅಂತಿಮ ನಿರ್ಧಾರಕ್ಕೆ ಬರುವುದು ತಪ್ಪು' ಎಂದರು.

'ಹಿಂದೆ ವಿಧಾನಮಂಡಲದಲ್ಲಿ ಇಂತಹ ಪ್ರಕರಣಗಳು ನಡೆದಾಗ ಏಕಾಏಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುತ್ತಿರಲಿಲ್ಲ. ವಿಧಾನ ಮಂಡಲ ಸಮಿತಿ ರಚಿಸಿ, ವರದಿ ಪಡೆಯಲಾಗುತ್ತಿತ್ತು. ಸಮಿತಿಯ ವರದಿ ಆಧಾರದಲ್ಲಿ ಕ್ರಮ ಜರುಗಿಸಲಾಗುತ್ತಿತ್ತು' ಎಂದರು.



'ಪ್ರಕರಣ ಮುಂದುವರಿಕೆ ನಿರರ್ಥಕ'

ಬೆಳಗಾವಿ: 'ಸಿ.ಟಿ.ರವಿ ಅವಾಚ್ಯ ಪದ ಬಳಕೆ ಮಾಡಿದ ಘಟನೆ ಆಗಿ ಹೋಗಿದೆ. ಮತ್ತೆ ಮುಂದುವರಿಸುವುದರಲ್ಲಿ ಅರ್ಥವಿಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ದೇಶದಲ್ಲಿ ಇಂಥ ಘಟನೆಗಳು ಹೊಸದಲ್ಲ. ಸಂಸತ್ತು, ವಿಧಾನಸಭೆಯಲ್ಲಿ ನಡೆದಿವೆ. ಕ್ಷಮೆ ಕೇಳಿದ ಬಳಿಕ ಮುಗಿದು ಹೋಗಿವೆ. ಈಗಲೂ ಮುಗಿಸುವುದು ಒಳ್ಳೆಯದು. ಸಾರ್ವಜನಿಕವಾಗಿ ಈ ಪ್ರಕರಣ ಮುಂದುವರಿಸುವುದು ಅನವಶ್ಯಕ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.'ಯಾರ ನಿರ್ದೇಶನದ ಮೇರೆಗೆ ಠಾಣೆಯಿಂದ ಠಾಣೆಗೆ ಸುತ್ತಾಡಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ರವಿಗೆ ತೊಂದರೆ ಆಗದಿರಲಿ ಎಂಬ ಕಾರಣಕ್ಕೆ ಇರಬಹುದು. ರಾತ್ರಿಯೇ ಕೋರ್ಟ್‌ಗೆ ಹಾಜರು ಪಡಿಸಲು ನಾನು ಪೊಲೀಸರಿಗೆ ಹೇಳಿದ್ದೆ. ಬೆಳಗಾವಿ ಪೊಲೀಸರು ಅಷ್ಟು ಮಾಡಿದ್ದರೆ ಇಷ್ಟೆಲ್ಲ ಆಗುತ್ತಿರಲಿಲ್ಲ' ಎಂದು ಹೇಳಿದರು.



'ಸಿದ್ದರಾಮಯ್ಯಗೆ 'ನಿತ್ಯ ಸುಮಂಗಲಿ' ಪದ ಬಳಸಿದ್ದ ರವಿ'

ಬೆಂಗಳೂರು: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಬಗ್ಗೆ ಮಾತ್ರ ಸಿ.ಟಿ. ರವಿ ಹೀನವಾಗಿ ಮಾತನಾಡಿಲ್ಲ. ಸಿದ್ದರಾಮಯ್ಯ ಅವರ ಬಗ್ಗೆಯೂ ಸದನದಲ್ಲಿ 'ನಿತ್ಯ ಸುಮಂಗಲಿ' ಎಂಬ ಪದ ಬಳಕೆ ಮಾಡಿದ್ದಾರೆ. ರವಿ ಅವರ ಮಾತುಗಳು ಸರಿಯೊ, ತಪ್ಪೊ ಎಂದು ಬಿಜೆಪಿ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮಹಿಳೆಯರಿಗೆ ಅಪಮಾನ, ಹೀನ ಮಾತುಗಳೇ ನಮ್ಮ ಸಂಸ್ಕೃತಿ ಎಂದು ಬಿಜೆಪಿ ಒಪ್ಪಿಕೊಳ್ಳಲಿ. ನಾವು ತಕರಾರು ಮಾಡುವುದಿಲ್ಲ' ಎಂದರು.

'ನಮ್ಮ ಪಕ್ಷದ ಯಾವುದೇ ನಾಯಕರು ಈ ರೀತಿ ಮಾತನಾಡಿದ್ದರೆ ನಾನು ಖಂಡಿಸುತ್ತಿದ್ದೆ. ಆದರೆ, ಬಿಜೆಪಿ ನಾಯಕರು ತಮ್ಮ ಪಕ್ಷದ ನಾಯಕನ ರಕ್ಷಣೆಗೆ ನಿಂತಿದ್ದಾರೆ' ಎಂದು ಕಿಡಿಕಾರಿದರು.

'ಸಿ.ಟಿ. ರವಿ ಅವರನ್ನು ಪೊಲೀಸರು ರಾತ್ರಿಯಿಡೀ ಸುತ್ತಾಡಿಸಲು ನೀವು ಕಾರಣ' ಎಂಬ ಆರೋಪ ಇದೆಯಲ್ಲವೇ' ಎಂಬ ಪ್ರಶ್ನೆಗೆ, 'ಬಿಜೆಪಿಯವರ ಮನೆಯಲ್ಲಿ, ಪಕ್ಷದಲ್ಲಿ ಏನೇ ಆದರೂ ನಾನೇ ಕಾರಣ. ನನ್ನನ್ನು ಸ್ಮರಿಸದಿದ್ದರೆ ಅವರಿಗೆ ನಿದ್ದೆ ಬರುವುದಿಲ್ಲ' ಎಂದರು.

ಆತ್ಮಸಾಕ್ಷಿ ನ್ಯಾಯ ನೀಡುತ್ತದೆ: 'ನಿಂದನೆಯ ಮಾತು ಆಡಿಯಾಗಿದೆ. ಈಗ ಸರ್ಕಾರ ಹೇಗೆ ನ್ಯಾಯ ಕೊಡಿಸಲಿದೆ' ಎಂದು ಕೇಳಿದಾಗ, 'ಆತ್ಮಸಾಕ್ಷಿಯೇ ನ್ಯಾಯ ನೀಡುತ್ತದೆ' ಎಂದರು.



ಡಿ.ಕೆ. ಶಿವಕುಮಾರ್

'ಬಂಧನ ಕಾನೂನು ಬಾಹಿರ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಅಧಿವೇಶನದ ಸಂದರ್ಭದಲ್ಲಿ ಸಭಾಪತಿ ಅನುಮತಿಯಿಲ್ಲದೆ ಶಾಸಕರನ್ನು ಬಂಧಿಸುವುದು ಕಾನೂನು ಬಾಹಿರ. ಪೊಲೀಸರ ಮೇಲೆ ಒತ್ತಡ ಹಾಕಿ ಕಾಂಗ್ರೆಸ್ ಹೈಡ್ರಾಮಾ ಸೃಷ್ಟಿಸಿದೆ' ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು.

'ಎಫ್‌ಐಆರ್ ದಾಖಲಾಗಿದೆ ಎಂದ ಮಾತ್ರಕ್ಕೆ ಬಂಧಿಸಲು ಆಗದು. ತನಿಖಾಧಿಕಾರಿ ಪ್ರಾಥಮಿಕ ತನಿಖೆ ಕೈಗೊಂಡು ಬಂಧನ ಪ್ರಕ್ರಿಯೆ ನಡೆಸಬೇಕು. ಸದನದಲ್ಲಿ ಯಾವುದೇ ಸಾಕ್ಷ್ಯಗಳು ಇಲ್ಲದಿದ್ದರೂ ಸಿ.ಟಿ. ರವಿ ಅವರನ್ನು ಬಂಧಿಸಿದ್ದು ಖಂಡನೀಯ. ತಕ್ಷಣ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಕ್ಷಮೆಯಾಚಿಸಬೇಕು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಸದನದಲ್ಲಿ ದಾಖಲೆಗಳಿಲ್ಲ. ಕ್ಯಾಮೆರಾಗಳನ್ನು ಬಂದ್ ಮಾಡಲಾಗಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ರವಿ ಅವರು ಅಸಂಸದೀಯ ಪದ ಬಳಕೆ ಮಾಡಿದ್ದರೆ, ಸಭಾಪತಿ ಅವರನ್ನು ಒತ್ತಾಯ ಮಾಡಬೇಕಿತ್ತು. ಕಡತದಿಂದ ತೆಗೆಯಲು ಸೂಚಿಸಬಹುದಿತ್ತು. ಅಲ್ಲಿಯೇ ಕ್ಷಮಾಪಣೆ ಕೇಳಿಸಬಹುದಿತ್ತು. ರಾಜಕೀಯ ಲಾಭಕ್ಕಾಗಿ, ಜನರ ಮೇಲೆ ಪ್ರಭಾವ ಬೀರಲು, ದಬ್ಬಾಳಿಕೆ ಮಾಡಲು ಕಾಂಗ್ರೆಸ್ ಪೊಲೀಸರ ಮೇಲೆ ಒತ್ತಡ ಹಾಕಿ ಕಾನೂನು ಬಾಹಿರ ಕೆಲಸ ಮಾಡಿದೆ' ಎಂದರು.



'ಮುಂದಿನ ಹೋರಾಟ ಸಿಡಬ್ಲ್ಯುಸಿ ತೀರ್ಮಾನ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮುಂದಿನ ದಿನಗಳಲ್ಲಿ ಪಕ್ಷ ರೂಪಿಸಬೇಕಾದ ಹೋರಾಟದ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ತೀರ್ಮಾನ ಮಾಡಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಹಾಗೂ ಪಕ್ಷದ ಮುಖಂಡರ ಜೊತೆ ಶನಿವಾರ ಚರ್ಚೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ಶತಮಾನೋತ್ಸವ ಆಚರಣೆ ಅಂಗವಾಗಿ ಬೆಳಗಾವಿಯಲ್ಲಿ ನಡೆಯಲಿರುವ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳ ಕುರಿತು ಸಭೆ ನಡೆಸಿದ್ದೇವೆ. ಸುವರ್ಣಸೌಧದ ಆವರಣದಲ್ಲಿ 27ರಂದು ಮಹಾತ್ಮಾ ಗಾಂಧಿ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ ಎಲ್ಲ ಶಾಸಕರಿಗೂ ಆಹ್ವಾನ ನೀಡುತ್ತೇವೆ' ಎಂದರು.

'26ರಂದು ಮಧ್ಯಾಹ್ನ 3 ಗಂಟೆಗೆ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು, ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಎಲ್ಲ ಪದಾಧಿಕಾರಿಗಳು, 150 ಸಂಸದರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. 27ರಂದು ಬೆಳಿಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಮಾವೇಶ ನಡೆಯಲಿದ್ದು, ಅನೇಕ ರಾಷ್ಟ್ರೀಯ ನಾಯಕರು ಮಾತನಾಡಲಿದ್ದಾರೆ' ಎಂದು ಹೇಳಿದರು.

'ಗಾಂಧೀಜಿ ಅವರ ಪ್ರತಿಮೆಯನ್ನು ಸುವರ್ಣ ವಿಧಾನಸೌಧದಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅನಾವರಣ ಮಾಡಲಿದ್ದಾರೆ. ಸ್ಪೀಕರ್, ಸಭಾಪತಿ, ವಿರೋಧ ಪಕ್ಷಗಳ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಕೇವಲ ಶಾಸಕರು, ಸಂಸದರು ಹಾಗೂ ಅತಿಥಿಗಳಿಗೆ ಮಾತ್ರ ಅವಕಾಶವಿದ್ದು, ಭದ್ರತೆ ಕಾರಣಕ್ಕೆ ಸಾರ್ವಜನಿಕರಿಗೆ ಅವಕಾಶವಿಲ್ಲ' ಎಂದರು.

ಕೊನೆ ಸುತ್ತಿನ ಸೀಟು ಹಂಚಿಕೆ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಯುಜಿ ಪಿಜಿ ಆಯುಷ್

ಬೆಂಗಳೂರು: ಪ್ರಸಕ್ತ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿಯ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಕೊನೆ ಸುತ್ತಿನ ಸೀಟು ಹಂಚಿಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅವಕಾಶ ಕಲ್ಪಿಸಿದ್ದು, ಅರ್ಹ ಅಭ್ಯರ್ಥಿಗಳು ಇದೇ 23ರಿಂದ ಕೋರ್ಸ್ ಶುಲ್ಕವನ್ನು ಮುಂಗಡವಾಗಿ ಪಾವತಿಸಿ ಈ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗ ಈ ಕೋರ್ಸ್‌ಗಳ ಪ್ರವೇಶಕ್ಕೆ ಇದೇ 31ರವರೆಗೆ ಸಮಯ ನೀಡಿದೆ. ಹೀಗಾಗಿ, ಹಂಚಿಕೆಯಾಗದೆ ಉಳಿದಿರುವ ಸೀಟುಗಳನ್ನು ಕೊನೆ ಸುತ್ತಿನಲ್ಲಿ ಹಂಚಿಕೆ ಮಾಡಲಾಗುವುದು ಎಂದು ಕೆಇಎ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಸದ್ಯ ಯುಜಿ ಆಯುಷ್‌ನಲ್ಲಿ 436 ಹಾಗೂ ಪಿಜಿ ಆಯುಷ್‌ನಲ್ಲಿ 201 ಸೀಟು ಹಂಚಿಕೆಗೆ ಲಭ್ಯ ಇವೆ. ಇನ್ನೂ ಕೆಲವರು ಕಾಲೇಜುಗಳಿಗೆ ವರದಿ ಮಾಡಿಕೊಳ್ಳದಿದ್ದರೆ ಅಂಥವರ ಸೀಟುಗಳನ್ನೂ ಹಂಚಿಕೆಗೆ ಪರಿಗಣಿಸಲಾಗುವುದು ಎಂದರು.

ವೇಳಾಪಟ್ಟಿ: 'ಕೋರ್ಸ್ ಶುಲ್ಕ ಪಾವತಿಗೆ ಡಿ 26ರವರೆಗೆ ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸಿದವರು ಡಿ. 24ರಿಂದ 26ರವರೆಗೆ ಆಪ್ಷನ್ಸ್ ದಾಖಲಿಸಬೇಕು. ಡಿ. 26ರಂದು ಸಂಜೆ 6ಕ್ಕೆ ತಾತ್ಕಾಲಿಕ ಹಾಗೂ 27ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು. ಡಿ.27ರಿಂದ 29ರವರೆಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು, 30ರೊಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು. ಹೆಚ್ಚಿನ ವಿವರಗಳು ವೆಬ್ ಸೈಟ್‌ನಲ್ಲಿ ಲಭ್ಯವಿದೆ' ಎಂದೂ ಅವರು ತಿಳಿಸಿದ್ದಾರೆ.

ರಾಯಚೂರು ವಿ.ವಿ ನೇಮಕಾತಿ: ಅಂಕ ಪಟ್ಟಿ ರವಾನೆ ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಡೆದ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಅಂತಿಮ ಪಟ್ಟಿಯನ್ನು ಕೆಇಎ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ.

'ನ. 24ರಂದು ಪರೀಕ್ಷೆ ನಡೆದಿತ್ತು. ಕೇವಲ 19 ದಿನಗಳಲ್ಲೇ ಅಭ್ಯರ್ಥಿಗಳು ಪಡೆದಿರುವ ಅಂಕಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿತ್ತು. ಇದಕ್ಕೆ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಅಂಕಪಟ್ಟಿ ಪ್ರಕಟಿಸಿ, ವಿಶ್ವವಿದ್ಯಾಲಯಕ್ಕೆ ರವಾನಿಸಲಾಗಿದೆ' ಎಂದು ಎಚ್. ಪ್ರಸನ್ನ ತಿಳಿಸಿದ್ದಾರೆ.


ವಿಶ್ವ ಹವ್ಯಕ ತೃತೀಯ ಸಮ್ಮೇಳನ 27ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾ ಇದೇ 27 ರಿಂದ 29ರವರೆಗೆ ಅರಮನೆ ಮೈದಾನದ (ಗೇಟ್ ಸಂಖ್ಯೆ 6) ರಾಯಲ್ ಸೆನೆಟ್ ಹಾಗೂ ಗ್ರ್ಯಾಂಡ್ ಕ್ಯಾಸಲ್‌ನಲ್ಲಿ ತೃತೀಯ ವಿಶ್ವ ಹವ್ಯಕ ಸಮ್ಮೇಳನ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭೆ ಅಧ್ಯಕ್ಷ ಡಾ. ಗಿರಿಧರ ಕಜೆ, 'ಸಮ್ಮೇಳನದ ಮೂರೂ ದಿನಗಳು ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ವಿವಿಧ ಕಾರ್ಯಕ್ರಮ ಗಳು ನಡೆಯಲಿವೆ. ಕೃಷಿ, ಶಿಕ್ಷಣ, ಸಮಾಜಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಮುದಾಯದ 567 ಮಂದಿಯನ್ನು ಗೌರವಿಸಲಾಗುತ್ತದೆ. ಇದರಲ್ಲಿ 81 ಹವ್ಯಕ ಯೋಧರೂ ಸೇರಿದ್ದಾರೆ. 'ಹವ್ಯಕ ಸಾಧಕ ರತ್ನ, 'ಹವ್ಯಕ ಕೃಷಿ ರತ್ನ', 'ಹವ್ಯಕ ಶಿಕ್ಷಕ ರತ್ನ' ಸೇರಿ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಯಕ್ಷಗಾನ, ಸುಗಮ ಸಂಗೀತ, ಭಕ್ತಿ ಭಜನೆ, ನಾಟಕ ಪ್ರದರ್ಶನ ಸೇರಿ ಸಾಂಸ್ಕೃತಿಕ ಕಾರ್ಯಕ್ರಮ ಗಳು ನಡೆಯಲಿದ್ದು, 300ಕ್ಕೂ ಅಧಿಕ ಕಲಾವಿದರು ಪಾಲ್ಗೊಳ್ಳುತ್ತಾರೆ' ಎಂದು ತಿಳಿಸಿದರು.

'ಉದ್ಘಾಟನಾ ಸಮಾರಂಭ 27ರ ಬೆಳಿಗ್ಗೆ 9ಕ್ಕೆ ನಡೆಯಲಿದೆ. ವಿವಿಧ ಮಠಾಧೀಶರು ಸಮಾರಂಭದಲ್ಲಿ ಸಾನ್ನಿಧ್ಯ ವಹಿಸುತ್ತಾರೆ. ಡಿ.28ರಂದು ಬೆಳಿಗ್ಗೆ 9ಕ್ಕೆ ಸಾಕ್ಷಾತ್ಕಾರ ಸಭಾ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಸಾಕ್ಷಾತ್ಕಾರ' ಕೃತಿ ಬಿಡುಗಡೆ ಮಾಡುತ್ತಾರೆ. ಮೂರು ದಿನಗಳ ಸಮ್ಮೇಳನದಲ್ಲಿ ವಿವಿಧ ಮಠಾಧೀಶರು, ಕೇಂದ್ರ ಹಾಗೂ ರಾಜ್ಯ ಸಚಿವರು, ವಿವಿಧ ಕ್ಷೇತ್ರಗಳ ಪ್ರಮುಖರು ಪಾಲ್ಗೊಳ್ಳುತ್ತಾರೆ' ಎಂದರು.



ಡಾ.ಗಿರಿಧರ ಕಜೆ

1.50 ಲಕ್ಷ ಜನ: 'ಹವ್ಯಕರ ಜೀವನಶೈಲಿ, ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಕೆ, ನವೋದ್ಯಮ ಸೇರಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಎಂಟು ಗೋಷ್ಠಿಗಳು ನಡೆಯಲಿವೆ. 'ಸಹಸ್ರಚಂದ್ರ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಗುತ್ತದೆ. ಹಳ್ಳಿ ಸೊಗಡಿನ ಆಲೆಮನೆ, ವಾಣಿಜ್ಯ, ಕರಕುಶಲ ಹಾಗೂ ಹವ್ಯಕ ಖಾದ್ಯಗಳ ಮಳಿಗೆಗಳು ಸಮ್ಮೇಳನದಲ್ಲಿ ಇರಲಿವೆ. 6,000 ಹವ್ಯಕ ಪುಸ್ತಕಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಸಮ್ಮೇಳನ ದಲ್ಲಿ 1.50 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದು ತಿಳಿಸಿದರು.

ಮಹಾಸಭೆ ಉಪಾಧ್ಯಕ್ಷ ಶ್ರೀಧರ ಜೆ. ಭಟ್ಟ ಕೆಕ್ಕಾರು, ಪ್ರಧಾನ ಕಾರ್ಯದರ್ಶಿ ವೇಣುವಿಘ್ನೇಶ ಸಂಪ, ಕಾರ್ಯದರ್ಶಿ ಪ್ರಶಾಂತ ಭಟ್ಟ ಹಾಗೂ ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್ ಉಪಸ್ಥಿತರಿದ್ದರು.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹175

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹222-655
ದ್ವಿತಳಿ (ಬಿ.ವಿ)	₹200-715

ಪಾಲಿಕೆ ಚುನಾವಣೆ ಶಿವಸೇನಾ ಏಕಾಂಗಿ ಸ್ಪರ್ಧೆ: ರಾವುತ್

ಮುಂಬೈ (ಪಿಟಿಐ): 'ಮಹಾವಿಕಾಸ ಆಘಾಡಿ'ಯಿಂದ ಹೊರಬರದೇ, ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಶಿವಸೇನಾದ(ಯುಬಿಟಿ) ನಾಯಕ ಸಂಜಯ್ ರಾವುತ್ ಅವರು ಶನಿವಾರ ಸುಳಿವು ನೀಡಿದ್ದಾರೆ.

'ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗಿಂತ ಹೆಚ್ಚು ಆಕಾಂಕ್ಷಿಗಳು ಇರುವುದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಬೇಕು ಎಂದು ಪಕ್ಷದ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ. ಈ ಬಗ್ಗೆ ಉದ್ಧವ್ ಠಾಕ್ರೆ ಮತ್ತು ಇತರ ಪಕ್ಷದ ನಾಯಕರು ಮಾತುಕತೆ ನಡೆಸುತ್ತಿದ್ದಾರೆ' ಎಂದು ರಾವುತ್ ಸುದ್ದಿಗಾರರಿಗೆ ಹೇಳಿದ್ದಾರೆ.

'ಮುಂಬೈನಲ್ಲಿ ನಮ್ಮ ಗೆಲುವಿನ ಅಗತ್ಯವಿದೆ. ಇಲ್ಲದಿದ್ದರೆ ಮುಂಬೈ ನಗರ ಮಹಾರಾಷ್ಟ್ರದಿಂದ ಪ್ರತ್ಯೇಕವಾಗಲಿದೆ' ಎಂದು ಹೇಳಿದ್ದಾರೆ.

'ಬಿಜೆಪಿಯೊಂದಿಗಿದ್ದ ಅವಿಭಜಿತ ಶಿವಸೇನಾವು ಬಿಎಂಸಿ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುತ್ತಿತ್ತು.

ಜಿಎಸ್‌ಟಿ ಮಂಡಳಿ ಸಭೆ: ಮಂಡನೆಯಾಗದ ದರ ಸರಳೀಕರಣ ವರದಿ

ವಿಮೆ ಕಂತಿಗೆ ತೆರಿಗೆ ಕಡಿತ ಮುಂದೂಡಿಕೆ

ಜೈಸಲ್ಮೇರ್ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ 55ನೇ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆಯು, ಆರೋಗ್ಯ ಮತ್ತು ಜೀವ ವಿಮೆ ಕಂತಿನ ಮೇಲಿನ ಜಿಎಸ್‌ಟಿ ಕಡಿತಗೊಳಿಸುವ ಕುರಿತ ನಿರ್ಧಾರವನ್ನು ಮುಂದೂಡಿದೆ.

ವಿಮಾ ಕಂತಿನ ಮೇಲಿನ ತೆರಿಗೆ ಪರಿಷ್ಕರಣೆ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಮೊದಲು ಹೆಚ್ಚಿನ ಚರ್ಚೆ ಹಾಗೂ ಪರಾಮರ್ಶೆ ನಡೆಸುವ ಅಗತ್ಯವಿದೆ ಎಂದು ಮಂಡಳಿ ಹೇಳಿದೆ.

ಮತ್ತೊಂದೆಡೆ ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ನೇತೃತ್ವದ ಸಚಿವರ ಸಮಿತಿಯು ಗುಂಪು, ವೈಯಕ್ತಿಕ ಹಾಗೂ ಹಿರಿಯ ನಾಗರಿಕರ ಪಾಲಿಸಿಗಳಿಗೆ ಸಂಬಂಧಿಸಿದ ತೆರಿಗೆ ಬಗ್ಗೆ ಮತ್ತೊಂದು ಸುತ್ತಿನ ಚರ್ಚೆ ನಡೆಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ. ಹಾಗಾಗಿ, ಈ ಕುರಿತ ನಿರ್ಧಾರವನ್ನು ಮುಂದೂಡಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಚೌಧರಿ ಅವರು, 'ಸಮಿತಿಯ ಸದಸ್ಯರು ತೆರಿಗೆ ಕಡಿತ ಕುರಿತು ಹೆಚ್ಚಿನ ಚರ್ಚೆ ನಡೆಸಬೇಕಿದೆ ಎಂದು ಪ್ರಸ್ತಾಪಿಸಿದ್ದಾರೆ. ಹಾಗಾಗಿ, ಜನವರಿಯಲ್ಲಿ ಸಭೆ ಕರೆದು ಚರ್ಚಿಸಲಾಗುವುದು' ಎಂದು ತಿಳಿಸಿದರು.

ದರ ಸರಳೀಕರಣ ವರದಿ ಮಂಡನೆ ಇಲ್ಲ: ಜಿಎಸ್‌ಟಿ ದರ ಸರಳೀಕರಣ ಕುರಿತು ರಚಿಸಿದ್ದ ಸಚಿವರ ಸಮಿತಿಯು 148 ವಸ್ತುಗಳ ಮೇಲಿನ ತೆರಿಗೆ ಪರಿಷ್ಕರಣೆ ಕುರಿತ ಶಿಫಾರಸು ವರದಿಯನ್ನು ಸಭೆಯ ಮುಂದೆ ಮಂಡಿಸಿಲ್ಲ.

ದರ ಸರಳೀಕರಣ ಕುರಿತು ಸಾಮ್ರಾಟ್ ಚೌಧರಿ ಅಧ್ಯಕ್ಷತೆಯಲ್ಲಿ ಆರು ಸಚಿವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಸಭೆಯಲ್ಲಿ ವರದಿ ಮಂಡಿಸಲಿದೆ ಎಂದು ಹೇಳಲಾಗಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಚೌಧರಿ, 'ಮುಂದಿನ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ವರದಿ ಮಂಡಿಸಲಾಗುವುದು' ಎಂದರು.

ಈ ತಿಂಗಳ ಆರಂಭದಲ್ಲಿ ಸಭೆ ನಡೆಸಿದ್ದ ಸಮಿತಿಯು 148 ವಸ್ತುಗಳ ಮೇಲೆ ಜಿಎಸ್‌ಟಿ ಪರಿಷ್ಕರಣೆಗೆ ಒಮ್ಮತ ಸೂಚಿಸಿತ್ತು. ಬಾಟಲಿಯಲ್ಲಿರುವ ಪಾನೀಯಗಳು, ತಂಬಾಕು ಹಾಗೂ ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ಮೇಲೆ ಈಗಿರುವ ತೆರಿಗೆಯನ್ನು ಶೇ 28ರಿಂದ ಶೇ 35ಕ್ಕೆ ಹೆಚ್ಚಿಸುವ ಬಗ್ಗೆ ಶಿಫಾರಸು ಮಾಡಲು ನಿರ್ಧರಿಸಿತ್ತು.

ತೆರಿಗೆ ಇಳಿಕೆ ಸದ್ಯಕ್ಕಿಲ್ಲ: ಸ್ವಿಗ್ಗಿ ಮತ್ತು ಜೊಮಾಟೊದ ಆಹಾರ ವಿತರಣೆ ಮೇಲೆ ಸದ್ಯ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದನ್ನು ಶೇ 5ಕ್ಕೆ ಕಡಿತಗೊಳಿಸುವ ಬಗ್ಗೆ ಸಭೆಯು ಅಂತಿಮ ತೀರ್ಮಾನ ಪ್ರಕಟಿಸುವ ನಿರೀಕ್ಷೆಯಿತ್ತು. ಸದ್ಯ ಇದನ್ನೂ ಮುಂದೂಡಿಸಲಾಗಿದೆ.

ವಿನಾಯಿತಿ: ಸಾಲದ ನಿಯಮ ಪಾಲನೆ ಮಾಡದ ಸಾಲಗಾರರಿಗೆ, ಸಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು ವಿಧಿಸುವ ಮತ್ತು ಸಂಗ್ರಹಿಸುವ ದಂಡ ಶುಲ್ಕದ ಮೇಲೆ ಜಿಎಸ್‌ಟಿ ವಿನಾಯಿತಿ ನೀಡಲಾಗಿದೆ.



ಜೈಸಲ್ಮೇರ್‌ನಲ್ಲಿ ಶನಿವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆ ನಡೆಯಿತು —ಪಿಟಿಐ ಚಿತ್ರ

- ರೈತರು ಪೂರೈಸುವ ಕರಿಮೆಣಸು ಮತ್ತು ಒಣದ್ರಾಕ್ಷಿಗೆ ಜಿಎಸ್‌ಟಿ ಅನ್ವಯ ಇಲ್ಲ
- ಜಿಎಸ್‌ಟಿ ದರ ಸರಳೀಕರಣದ ವರದಿ ಇನ್ನೂ ಅಂತಿಮಗೊಂಡಿಲ್ಲ
- ಜಿಎಸ್‌ಟಿ ಪರಿಹಾರ ಸೆಸ್ ಕುರಿತ ವರದಿ ಸಲ್ಲಿಕೆಗೆ ಅವಧಿ ವಿಸ್ತರಣೆ
- ಪ್ರಾಕೃತಿಕ ವಿಕೋಪಕ್ಕೆ ತುತ್ತಾದ ರಾಜ್ಯಗಳು ಆರ್ಥಿಕ ಸಂಕಷ್ಟದಿಂದ ಹೊರಬರಲು ಅನುವಾಗುವಂತೆ ಜಿಎಸ್‌ಟಿ ಅಡಿ ಸೆಸ್ ವಿಧಿಸುವ ಬಗ್ಗೆ ವರದಿ ಸಲ್ಲಿಸಲು ಸಚಿವರ ಸಮಿತಿ ರಚನೆಗೆ ಮಂಡಳಿ ಒಪ್ಪಿಗೆ

ಕಾರು ಮಾರಾಟದ ತೆರಿಗೆ ಲೆಕ್ಕಾಚಾರ

ದೇಶದಲ್ಲಿ ವಿದ್ಯುತ್‌ಚಾಲಿತ ಹೊಸ ಕಾರುಗಳ ಬಳಕೆಗೆ ಉತ್ತೇಜನ ನೀಡಲು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಸಚಿವೆ ನಿರ್ಮಲಾ ಹೇಳಿದ್ದಾರೆ.

ವಿದ್ಯುತ್‌ಚಾಲಿತ ಹೊಸ ಕಾರುಗಳಿಗೆ ಶೇ 5ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಆದರೆ, ಸೆಕೆಂಡ್ ಹ್ಯಾಂಡ್ ಇ.ವಿ ಕಾರನ್ನು ಅದರ ಮಾಲೀಕ ನೇರವಾಗಿ ಮಾರಾಟ ಮಾಡಿದರೆ ಜಿಎಸ್‌ಟಿ ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ.

ಯಾವುದಾದರು ಕಂಪನಿಯು ಸೆಕೆಂಡ್ ಹ್ಯಾಂಡ್ ಇ.ವಿ ಕಾರು ಮಾರಿದರೆ ಅಥವಾ ಮಾರಾಟಗಾರರು, ಮರು ಮಾರಾಟಕ್ಕಾಗಿ ಸೆಕೆಂಡ್ ಹ್ಯಾಂಡ್ ಇ.ವಿ ಕಾರನ್ನು ಮಾರ್ಪಡಿಸಿ ಮಾರಾಟ ಮಾಡಿದರೆ ಶೇ 18ರಷ್ಟು ಜಿಎಸ್‌ಟಿ ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾರು ಖರೀದಿ ವೇಳೆಯಲ್ಲಿದ್ದ ದರ ಮತ್ತು ಮಾರಾಟ ದರದ ನಡುವಿನ ಮೌಲ್ಯ ಆಧರಿಸಿ ತೆರಿಗೆ ವಿಧಿಸಲಾಗುತ್ತಿದೆ. ಸೆಕೆಂಡ್ ಹ್ಯಾಂಡ್ ಇ.ವಿ ಕಾರುಗಳ ಮಾರಾಟದ ಮೇಲೆ ಏಕಾಏಕಿ ತೆರಿಗೆ ಏರಿಕೆ ಮಾಡಿಲ್ಲ. ಆರಂಭದಲ್ಲಿ ಶೇ 5ರಷ್ಟು ತೆರಿಗೆ ವಿಧಿಸಲು ನಿರ್ಧರಿಸಲಾಗಿತ್ತು. ಸುದೀರ್ಘ ಚರ್ಚೆ ಬಳಿಕ ಇದನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

> ಜಿಎಸ್‌ಟಿ ವ್ಯಾಪ್ತಿಗೆ ವಿಮಾನ ಇಂಧನ (ಎಟಿಎಫ್) ತರುವ ಬಗ್ಗೆ ರಾಜ್ಯಗಳು ಒಪ್ಪಲು ಸಿದ್ಧವಿಲ್ಲ. ಕೇಂದ್ರ ಸರ್ಕಾರವೊಂದೇ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ
>
> **ನಿರ್ಮಲಾ ಸೀತಾರಾಮನ್**, ಕೇಂದ್ರ ಹಣಕಾಸು ಸಚಿವೆ

ಕಾಶ್ಮೀರಿ ಶಾಲುಗೆ ಜಿಎಸ್‌ಟಿ ಹೆಚ್ಚಳಕ್ಕೆ ವಿರೋಧ

ಶ್ರೀನಗರ (ಪಿಟಿಐ): ಕಾಶ್ಮೀರಿ ಶಾಲುಗಳ ಮೇಲೆ ಜಿಎಸ್‌ಟಿ ಹೆಚ್ಚಳಕ್ಕೆ ಪ್ರಸ್ತಾಪಿಸಲಾಗಿದೆ. ಇದರಿಂದ ಕಾಶ್ಮೀರದ ಕರಕುಶಲ ಕಲೆಗೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಜನರು ಪ್ರವಾಸೋದ್ಯಮವನ್ನಷ್ಟೇ ನಂಬಿಕೊಂಡು ಜೀವನ ನಿರ್ವಹಣೆ ಮಾಡಲಿ ಎಂದು ಕೇಂದ್ರ ಸರ್ಕಾರ ಇಚ್ಛಿಸಿದಂತಿದೆ. ಈ ಬಗ್ಗೆ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕಿದೆ ಎಂದು ಹೇಳಿದ್ದಾರೆ.

ಕಾಶ್ಮೀರಿ ಶಾಲು ಇಲ್ಲಿನ ಜನಜೀವನದ ಭಾಗವಷ್ಟೇ ಆಗಿಲ್ಲ. ಜಮ್ಮು ಮತ್ತು ಕಾಶ್ಮೀರದ ಹೆಗ್ಗುರುತಾಗಿದೆ. ಇದರ ಮಾರಾಟದ ಮೇಲಿನ ಜಿಎಸ್‌ಟಿಯನ್ನು ಶೇ 28ಕ್ಕೆ ಹೆಚ್ಚಿಸಿದರೆ ಇಲ್ಲಿನ ಕರಕುಶಲತೆಯು ನಾಶವಾಗಲಿದೆ ಎಂದು ಹೇಳಿದ್ದಾರೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22700
ಎಸಿ	₹11745
ಆರ್‌ಪಿ	₹20000
ಆರ್‌ಸಿ	₹10600

ಪಾಕ್: 16 ಯೋಧರು ಬಲಿ

ಪೆಶಾವರ (ಪಿಟಿಐ/ ರಾಯಿಟರ್ಸ್): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಅಫ್ಗಾನಿಸ್ತಾನದ ಗಡಿ ಸಮೀಪ ಉಗ್ರರು ನಡೆಸಿದ ದಾಳಿಯಲ್ಲಿ 16 ಯೋಧರು ಬಲಿಯಾಗಿದ್ದು, ಇತರ ಎಂಟು ಮಂದಿ ಗಾಯಗೊಂಡಿದ್ದಾರೆ.

'ಅಫ್ಗಾನಿಸ್ತಾನ ಗಡಿಗೆ ಹೊಂದಿಕೊಂಡಿರುವ ದಕ್ಷಿಣ ವಜೀರಿಸ್ತಾನ ಜಿಲ್ಲೆಯ ಮಕೀನ್ ಎಂಬಲ್ಲಿರುವ ಚೆಕ್‌ಪೋಸ್ಟ್ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ' ಎಂದು ಭದ್ರತಾ ಪಡೆಯ ಮೂಲಗಳು ತಿಳಿಸಿವೆ. ಶನಿವಾರ ನಸುಕಿನ ವೇಳೆ ನಡೆದಿರುವ ಈ ಘಟನೆ, ಕಳೆದ ಕೆಲ ತಿಂಗಳುಗಳಲ್ಲಿ ಭದ್ರತಾ ಪಡೆಯನ್ನು ಗುರಿಯಾಗಿಸಿ ನಡೆದ ಅತಿದೊಡ್ಡ ದಾಳಿ ಎನಿಸಿದೆ.

ತೆಹ್ರೀಕ್- ಎ- ಪಾಕಿಸ್ತಾನ (ಟಿಟಿಪಿ) ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿದೆ. 'ದಾಳಿಯಲ್ಲಿ 35 ಸೈನಿಕರು ಬಲಿಯಾಗಿದ್ದು, 15 ಮಂದಿ ಗಾಯಗೊಂಡಿದ್ದಾರೆ' ಎಂದು ಸಂಘಟನೆಯು ಹೇಳಿಕೊಂಡಿದೆ.

'ಉಗ್ರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ದಾಳಿ ನಡೆಸಿದ್ದಾರೆ. ಅವರ ಪತ್ತೆಗೆ ವ್ಯಾಪಕ ಶೋಧ ನಡೆಸಲಾಗಿದೆ' ಎಂದು ಪಾಕಿಸ್ತಾನ ಸೇನೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಒಂಟೆ ಸಂತತಿ ಕುಸಿತ: ಆತಂಕ

ನವದೆಹಲಿ (ಪಿಟಿಐ): 'ದೇಶದಲ್ಲಿ ಒಂಟೆ ಸಂತತಿ ತೀವ್ರವಾಗಿ ಕುಸಿಯುತ್ತಿದೆ. ಹಾಗಾಗಿ, ಇವುಗಳ ಸಾಕಣೆಯಲ್ಲಿ ತೊಡಗಿರುವ ಸಮುದಾಯಗಳ ಜೀವನೋಪಾಯಕ್ಕೆ ನೆರವು ನೀಡುವ ಅಗತ್ಯವಿದೆ' ಎಂದು ಪಶುಪಾಲನಾ ಮತ್ತು ಹೈನುಗಾರಿಕೆ ಇಲಾಖೆಯ ಕಾರ್ಯದರ್ಶಿ ಅಲ್ಕಾ ಉಪಾಧ್ಯಾಯ ಹೇಳಿದ್ದಾರೆ.

ರಾಜಸ್ಥಾನದ ಬಿಕಾನೇರ್‌ನಲ್ಲಿ ಶುಕ್ರವಾರ ನಡೆದ ಒಂಟೆ ಹಾಲು ಉತ್ಪಾದನೆ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಜಾನುವಾರು ಮಿಷನ್‌ನಡಿ ಹುಲ್ಲುಗಾವಲುಗಳ ಸಂರಕ್ಷಣೆ ಮತ್ತು ಒಂಟೆ ಸಾಕಣೆದಾರರಿಗೆ ಪ್ರೋತ್ಸಾಹ ನೀಡಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.



ಒಂಟೆ ಸಾಕಣೆದಾರರು ಹಾಗೂ ಹೈನುಗಾರಿಕೆ ವಲಯದ 150ಕ್ಕೂ ಹೆಚ್ಚು ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ದೇಶದಲ್ಲಿ ಒಂಟೆ ಹಾಲಿನ ವಲಯವನ್ನು ಸದೃಢಗೊಳಿಸಲು ನಿರ್ಣಯ ಕೈಗೊಳ್ಳಲಾಯಿತು. 2024ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಒಂಟೆಗಳ ವರ್ಷವೆಂದು ಘೋಷಿಸಿದೆ.

ದೇಶದಲ್ಲಿ ಹಸುವಿನ ಹಾಲು ಹೊರತಾಗಿ ಒಂಟೆ ಸೇರಿ ಇತರೆ ಪ್ರಾಣಿಗಳ ಹಾಲಿನ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ಗುರಿ ಹೊಂದಲಾಗಿದೆ. ಈ ಹಾಲಿನಲ್ಲಿ ಅಧಿಕ ಪೌಷ್ಟಿಕಾಂಶವಿದೆ. ರೋಗಗಳನ್ನು ವಾಸಿ ಮಾಡುವ ಗುಣವಿದೆ. ಹಾಗಾಗಿ, ಈ ಹಾಲಿನ ಸುಸ್ಥಿರ ಉತ್ಪಾದನೆಗೆ ಒತ್ತು ನೀಡುವ ಮೂಲಕ ಜನರ ಜೀವನಮಟ್ಟದ ಸುಧಾರಣೆಗೆ ಕ್ರಮವಹಿಸಲು ನಿರ್ಧರಿಸಲಾಗಿದೆ ಎಂದು ಆಹಾರ ಮತ್ತು ಕೃಷಿ ಸಂಘಟನೆಯ ಪ್ರತಿನಿಧಿ ಟಕಾಯುಕಿ ಹಗಿವಾರ ತಿಳಿಸಿದ್ದಾರೆ.

'ಎನ್‌ಪಿಎಸ್ ಸಂಪತ್ತು ₹15 ಲಕ್ಷ ಕೋಟಿ ತಲುಪುವ ನಿರೀಕ್ಷೆ'

ಮುಂಬೈ (ಪಿಟಿಐ): 'ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ (ಎನ್‌ಪಿಎಸ್) ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ ₹15 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆಯಿದೆ' ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಅಧ್ಯಕ್ಷ ದೀಪಕ್ ಮೊಹಂತಿ ಹೇಳಿದ್ದಾರೆ.

ಶನಿವಾರ ನಡೆದ ಎನ್‌ಪಿಎಸ್ ಮಧ್ಯಸ್ಥಿಕೆದಾರರ ಸಂಘದ ಉದ್ಘಾಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾರ್ಪೊರೇಟ್ ವಲಯದ ಉದ್ಯೋಗಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಎನ್‌ಪಿಎಸ್ ಅಡಿ ಸೇರ್ಪಡೆಗೊಳಿಸುವುದು ಇಂದಿಗೂ ಸವಾಲಾಗಿದೆ' ಎಂದರು.

ದೇಶದ ಪಿಂಚಣಿ ವಲಯದಲ್ಲಿ 8 ಕೋಟಿ ಚಂದಾದಾರರಿದ್ದಾರೆ. ಈ ಪೈಕಿ 6.4 ಕೋಟಿ ಅಟಲ್ ಪಿಂಚಣಿ ಯೋಜನೆಯ ಸದಸ್ಯರಿದ್ದಾರೆ. ಎನ್‌ಪಿಎಸ್ ಚಂದಾದಾರರ ಸಂಖ್ಯೆ 1.6 ಕೋಟಿ ಇದೆ. ಸದ್ಯ ಈ ಎಲ್ಲಾ ಚಂದಾದಾರರ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು ₹14 ಲಕ್ಷ ಕೋಟಿ ಇದೆ ಎಂದು ವಿವರಿಸಿದರು.

'ಅಂಬೇಡ್ಕರ್ ಸಮ್ಮಾನ ಸಪ್ತಾಹ' ಆಯೋಜನೆ: ಕಾಂಗ್ರೆಸ್ ಹೇಳಿಕೆ

ನವದೆಹಲಿ: ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಆಡಿದ ಮಾತಿನ ವಿರುದ್ಧ ತನ್ನ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಲು ಕಾಂಗ್ರೆಸ್ ನಿರ್ಧರಿಸಿದೆ.

'ಡಾ. ಅಂಬೇಡ್ಕರ್ ಸಮ್ಮಾನ ಸಪ್ತಾಹ'ವನ್ನಾಗಿ ಆಚರಿಸಲು ಪಕ್ಷ ಮುಂದಾಗಿದೆ. 1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಈಗ ಈ ಅಧಿವೇಶನ ನಡೆದು ನೂರು ವರ್ಷ ತುಂಬಿದೆ. ಈ ಬಗ್ಗೆ ಡಿ.26ರಂದು ದೊಡ್ಡ ಮಟ್ಟದ ಕಾರ್ಯಕ್ರಮವನ್ನೂ ದೊಡ್ಡ ರ‍್ಯಾಲಿಯನ್ನೂ ಆಯೋಜಿಸಲು ಕಾಂಗ್ರೆಸ್ ನಿರ್ಧರಿಸಿದೆ' ಎಂದು ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಈ ಬಳಿಕ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸಭೆಯೂ ನಡೆಯಲಿದ್ದು, ಮುಂದಿನ ಕಾರ್ಯಯೋಜನೆಗಳು, ಅಮಿತ್ ಶಾ ಮಾತಿನ ಸಂಬಂಧ ಪಕ್ಷವು ಏನೆಲ್ಲಾ ಕಾರ್ಯತಂತ್ರಗಳನ್ನು ಕೈಗೊಳ್ಳಬೇಕು ಎನ್ನುವ ಕುರಿತು ಚರ್ಚೆ ನಡೆಯಲಿದೆ' ಎಂದರು.

ಕಜಾನ್ ಮೇಲೆ ಡ್ರೋನ್ ದಾಳಿ

ಮಾಸ್ಕೊ (ಎಎಫ್‌ಪಿ): ತನ್ನ ಗಡಿಯಿಂದ ಒಂದು ಸಾವಿರ ಕಿ.ಮೀ. ದೂರದಲ್ಲಿರುವ ರಷ್ಯಾದ ಕಜಾನ್ ನಗರದ ಮೇಲೆ ಉಕ್ರೇನ್ ಶನಿವಾರ ಡ್ರೋನ್ ದಾಳಿ ನಡೆಸಿದೆ. ಬಹುಮಹಡಿ ಕಟ್ಟಡವೊಂದಕ್ಕೆ ಡ್ರೋನ್ ಅಪ್ಪಳಿಸುವ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ರಷ್ಯನ್ ಪಡೆಗಳು ಪೂರ್ವ ಉಕ್ರೇನ್‌ನಲ್ಲಿರುವ ಗಡಿ ಗ್ರಾಮವೊಂದನ್ನು ವಶಪಡಿಸಿಕೊಂಡಿದ್ದಕ್ಕೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ ಎನ್ನಲಾಗಿದೆ.

ಡ್ರೋನ್ ದಾಳಿಯಿಂದ ಟಾರ್ಟಾಸ್ತಾನ್ ಗಣರಾಜ್ಯದ ರಾಜಧಾನಿಯಾಗಿರುವ ಕಜಾನ್‌ನಲ್ಲಿನ ಕಟ್ಟಡಗಳಿಗೆ ಹಾನಿಯಾಗಿದ್ದು, ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

'ಕುವೈತ್ ಚಿತ್ರಭಿತ್ತಿಗೆ ಭಾರತೀಯ ಬಣ್ಣ'

ಭಾರತೀಯರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗಿ

ಕುವೈತ್ ಸಿಟಿ (ಪಿಟಿಐ): 'ಕುವೈತ್‌ನ ಚಿತ್ರಭಿತ್ತಿಗೆ ಇಲ್ಲಿ ನೆಲಸಿರುವ ಭಾರತೀಯರು ಬಣ್ಣ ತುಂಬಿದ್ದಾರೆ. ಭಾರತದಲ್ಲಿನ ಮಾನವಶಕ್ತಿ, ಕೌಶಲ ಹಾಗೂ ತಂತ್ರಜ್ಞಾನವು ನಿಮ್ಮ 'ಹೊಸ ಕುವೈತ್' ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಶನಿವಾರ ಕುವೈತ್‌ಗೆ ಬಂದಿಳಿದರು. ಕುವೈತ್‌ನ ರಾಜ ಶೇಕ್ ಮಿಶಾಲ್ ಅಲ್ ಅಹಮದ್ ಅಲ್ ಜಾಬೆರ್ ಸಬಾ ಅವರ ಆಮಂತ್ರಣದ ಮೇರೆಗೆ ಪ್ರಧಾನಿ, ಕುವೈತ್‌ಗೆ ಬಂದಿದ್ದಾರೆ. ಇಲ್ಲಿನ ಭಾರತೀಯರ ಸಮುದಾಯದವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೋದಿ ಅವರನ್ನು ಕುವೈತ್‌ನ ಉಪ ಪ್ರಧಾನಿ ಶೇಕ್ ಫಹಾದ್ ಯೂಸೆಫ್ ಸಾದ್ ಅಲ್ ಸಬಾ ಅವರು ಬರಮಾಡಿಕೊಂಡರು. 43 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಕುವೈತ್‌ಗೆ ಭೇಟಿ ನೀಡಿದ್ದಾರೆ. 1981ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಇಲ್ಲಿಗೆ ಭೇಟಿ ನೀಡಿದ್ದರು.

'ಭಾರತದಿಂದ ಇಲ್ಲಿಗೆ ಬರಲು ನಾಲ್ಕು ಗಂಟೆಗಳು ಬೇಕು. ಆದರೆ, ಭಾರತದ ಪ್ರಧಾನಿಯೊಬ್ಬರು ಇಲ್ಲಿಗೆ ಬರಲು ನಾಲ್ಕು ದಶಕಗಳೇ ಬೇಕಾದವು. ಭಾರತದ ಮೂಲೆ ಮೂಲೆಗಳಿಂದ ನೀವು ಇಲ್ಲಿಗೆ ಬಂದು ನೆಲಸಿದ್ದೀರಿ. ಆದರೆ, ಈಗ ನಿಮ್ಮನ್ನು ಇಲ್ಲಿ ಒಟ್ಟಿಗೆ ನೋಡಿದರೆ ಮಿನಿ ಭಾರತವೇ ಸಮಾವೇಶಗೊಂಡಂತಿದೆ. ನೀವು ಕುವೈತ್ ಸಮಾಜಕ್ಕೆ ಭಾರತೀಯ ಸ್ಪರ್ಶ ನೀಡಿದ್ದೀರಿ' ಎಂದು ಹರ್ಷ ವ್ಯಕ್ತಪಡಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಭಾರತ–ಕುವೈತ್ ಸ್ನೇಹ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವ ಕುರಿತು ಕುವೈತ್‌ನ ನಾಯಕರೊಂದಿಗೆ ಪ್ರಧಾನಿ ಅವರು ಮಾತುಕತೆ ನಡೆಸಲಿದ್ದಾರೆ. ಕುವೈತ್‌ನ ಒಟ್ಟು ಜನಸಂಖ್ಯೆಯಲ್ಲಿ ಶೇ 21ರಷ್ಟು ಜನರು ಭಾರತೀಯರಾಗಿದ್ದಾರೆ.

'ರಾಮಾಯಣ' ಹಾಗೂ 'ಮಹಾಭಾರತ' ಮಹಾಕಾವ್ಯವನ್ನು ಅರೇಬಿಕ್ ಭಾಷೆಗೆ ಅನುದಾನ ಮಾಡಿದ ಅಬ್ದುಲ್ಲಾ ಅಲ್ ಬರೌನ್ ಹಾಗೂ ಅಬ್ದುಲ್ ಲತೀಫ್ ಅಲ್ ನಿಸೀಫ್ ಅವರನ್ನು ಮೋದಿ ಶನಿವಾರ ಭೇಟಿ ಮಾಡಿದರು. ಅನುವಾದಿತ ಪುಸ್ತಕಗಳನ್ನು ಈ ಇಬ್ಬರೇ ಪ್ರಕಾಶನ ಕೂಡ ಮಾಡಿದ್ದಾರೆ. ಇದೇ ಅಕ್ಟೋಬರ್‌ನ ತಮ್ಮ 'ಮನದ ಮಾತು' ಕಾರ್ಯಕ್ರಮದಲ್ಲಿ ಮೋದಿ, ಈ ಇಬ್ಬರ ಕುರಿತು ಉಲ್ಲೇಖ ಮಾಡಿದ್ದರು.

ಪ್ರವಾಸ ತೆರಳುವ ಮುನ್ನ ಮೋದಿ ಅವರು ಹೇಳಿಕೆ ಬಿಡುಗಡೆ ಮಾಡಿದ್ದು, 'ಕುವೈತ್‌ನೊಂದಿಗೆ ನಮಗೆ ಚಾರಿತ್ರಿಕವಾದ ಸಂಬಂಧವಿದೆ. ಈ ಸಂಬಂಧವು ಹಲವು ಪೀಳಿಗೆಗಳಿಂದಲೂ ನಡೆದುಕೊಂಡು ಬಂದಿದೆ. ಇಂಧನ, ವ್ಯಾಪಾರಗಳಿಗಷ್ಟೇ ನಮ್ಮ ಸಂಬಂಧ ಸೀಮಿತಗೊಂಡಿಲ್ಲ. ಶಾಂತಿ, ಭದ್ರತೆ, ಸ್ಥಿರತೆ ಹಾಗೂ ಸಮೃದ್ಧಿಯನ್ನೂ ಪರಸ್ಪರ ಹಂಚಿಕೊಂಡಿದ್ದೇವೆ' ಎಂದರು.



ಕುವೈತ್‌ನಲ್ಲಿ ನೆಲಸಿರುವ ಭಾರತೀಯ ವಿದೇಶ ಸೇವೆ (ಐಎಫ್‌ಎಸ್) ಅಧಿಕಾರಿ ಮಂಗಲ್ ಸೇನ್ ಹಂಡಾ ಅವರನ್ನು ಪ್ರಧಾನಿ ಮೋದಿ ಅವರು ಶನಿವಾರ ಭೇಟಿ ಮಾಡಿದರು —ಪಿಟಿಐ ಚಿತ್ರ

ಟ್ರುಡೊ ಸರ್ಕಾರಕ್ಕೆ ಸಂಕಷ್ಟ



ಒಟ್ಟಾವ (ಪಿಟಿಐ): ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ನೇತೃತ್ವದ ಸರ್ಕಾರದ ವಿರುದ್ಧ ಮುಂದಿನ ವರ್ಷ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಮಿತ್ರ ಪಕ್ಷವಾದ ನ್ಯೂ ಡೆಮಾಕ್ರೆಟಿಕ್ ಪಾರ್ಟಿ (ಎನ್‌ಡಿಪಿ) ಹೇಳಿದೆ.

ಎನ್‌ಡಿಪಿ ಪಕ್ಷದ ನಾಯಕ, ಭಾರತ ಮೂಲದ ಸಂಸದ ಜಗ್‌ಮೀತ್ ಸಿಂಗ್ ಅವರು ಪ್ರಧಾನಿಗೆ ಬರೆದ ಬಹಿರಂಗ ಪತ್ರದಲ್ಲಿ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ಇದರಿಂದ ಟ್ರುಡೊ ಸರ್ಕಾರದ ಭವಿಷ್ಯ ತೂಗುಯ್ಯಾಲೆಯಲ್ಲಿ ನಿಂತಿದೆ.

ಎನ್‌ಡಿಪಿಯು ಅವಿಶ್ವಾಸ ನಿರ್ಣಯ ಮಂಡಿಸಿದಾಗ, ಇತರ ವಿರೋಧ ಪಕ್ಷಗಳು ಅದನ್ನು ಬೆಂಬಲಿಸಿದರೆ ಟ್ರುಡೊ ಸರ್ಕಾರ ಉರುಳಲಿದೆ. ಹಾಗಾದಲ್ಲಿ, ಕೆನಡಾದಲ್ಲಿ ಅವಧಿಗೆ ಮುನ್ನವೇ ಚುನಾವಣೆ ನಡೆಯಲಿದೆ. ನಿಗದಿತ ವೇಳಾಪಟ್ಟಿಯಂತೆ ಸಾರ್ವತ್ರಿಕ ಚುನಾವಣೆ ಮುಂದಿನ ವರ್ಷ ಅಕ್ಟೋಬರ್‌ನಲ್ಲಿ ನಡೆಯಬೇಕು.

'ಲಿಬರಲ್ ಪಕ್ಷದವರು ಮತ್ತೊಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯಲು ಅರ್ಹರಲ್ಲ. ಅದಕ್ಕಾಗಿಯೇ ಈ ಸರ್ಕಾರವನ್ನು ಉರುಳಿಸಲು ಮುಂದಿನ ಅಧಿವೇಶನದಲ್ಲಿ ನಾವು ಅವಿಶ್ವಾಸ ನಿರ್ಣಯವನ್ನು ಮಂಡಿಸುತ್ತೇವೆ. ಕೆನಡಾದ ಜನರಿಗೆ ಅವರ ಪರವಾಗಿ ಕೆಲಸ ಮಾಡುವ ಸರ್ಕಾರವನ್ನು ಆಯ್ಕೆ ಮಾಡುವ ಅವಕಾಶವನ್ನು ನೀಡುತ್ತೇವೆ' ಎಂದು ಜಗ್‌ಮೀತ್ ಪತ್ರದಲ್ಲಿ ತಿಳಿಸಿದ್ದಾರೆ.

2019ರ ಅಕ್ಟೋಬರ್‌ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಎನ್‌ಡಿಪಿ, 'ಕಿಂಗ್ ಮೇಕರ್' ಆಗಿ ಹೊರಹೊಮ್ಮಿತ್ತು. ಟ್ರುಡೊ ಅವರ ಲಿಬರಲ್ ಪಕ್ಷ ಅಧಿಕಾರಕ್ಕೆ ಬರಲು ಎನ್‌ಡಿಪಿ ಬೆಂಬಲ ನೀಡಿತ್ತು.

ಸಿಂಗ್ ಕೈಗೊಂಡ ನಿರ್ಧಾರವು, ಟ್ರುಡೊ ಅವರು ಈ ವಾರ ಅನುಭವಿಸಿದ ರಾಜಕೀಯ ಹಿನ್ನಡೆಗಳ ಸರಣಿಗೆ ಮತ್ತೊಂದು ಸೇರ್ಪಡೆಯಾಗಿದೆ. ಉಪ ಪ್ರಧಾನಿ ಮತ್ತು ಹಣಕಾಸು ಸಚಿವೆ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರು ಸೋಮವಾರ ದಿಢೀರ್ ರಾಜೀನಾಮೆ ನೀಡಿದ್ದರು. ಟ್ರುಡೊ ಜತೆಗಿನ ಭಿನ್ನಾಭಿಪ್ರಾಯದಿಂದ ಅವರು ಈ ನಿರ್ಧಾರ ತೆಗೆದುಕೊಂಡಿದ್ದರು.

ವಿಶ್ವಸಂಸ್ಥೆಯಲ್ಲಿ ಪ್ರಥಮ ವಿಶ್ವ ಧ್ಯಾನ ದಿನಾಚರಣೆ

'ಧ್ಯಾನವು ಧರ್ಮಕ್ಕೆ ಅತೀತ'

ವಿಶ್ವಸಂಸ್ಥೆ (ಪಿಟಿಐ): 'ಇಂದು ಧ್ಯಾನವು ಐಷಾರಾಮ ಅಲ್ಲ; ಅದು ಒಂದು ಅಗತ್ಯ' ಎಂದು ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ಅವರು ವಿಶ್ವಸಂಸ್ಥೆಯಲ್ಲಿ ನಡೆದ ಪ್ರಥಮ 'ವಿಶ್ವ ಧ್ಯಾನ ದಿನಾಚರಣೆ'ಯಲ್ಲಿ ಹೇಳಿದರು.

ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಕಚೇರಿಯು 'ವಿಶ್ವ ಧ್ಯಾನ ದಿನಾಚರಣೆ'ಯ ಅಂಗವಾಗಿ 'ಜಾಗತಿಕ ಶಾಂತಿ ಮತ್ತು ಸೌಹಾರ್ದಕ್ಕಾಗಿ ಧ್ಯಾನ' ಹೆಸರಿನ ಕಾರ್ಯಕ್ರಮ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ರವಿಶಂಕರ್ ಅವರು ದಿಕ್ಸೂಚಿ ಭಾಷಣ ಮಾಡಿದರು.

'ಧ್ಯಾನವನ್ನು ಯಾವುದೇ ವ್ಯಕ್ತಿ ಯಾವುದೇ ಸ್ಥಳದಲ್ಲಿ ಹಾಗೂ ಎಲ್ಲೆಡೆಯೂ ಮಾಡಬಹುದು...' ಎಂದು ಅವರು ಹೇಳಿದರು. ಧ್ಯಾನ ಎಂಬ ಪದವನ್ನು ಕೇಳಿದಾಕ್ಷಣವು ಕೆಲವರು, ಇದು ಯಾವುದೋ ಒಂದು ಧರ್ಮಕ್ಕೆ ಸೇರಿರಬೇಕು ಅಥವಾ ತಮ್ಮ ಧರ್ಮದಲ್ಲಿ ಇದನ್ನು ಹೇಳಿಕೊಟ್ಟಿಲ್ಲ ಎಂದು ಭಾವಿಸಬಹುದು. ಆದರೆ ಧ್ಯಾನವು ಎಲ್ಲ ಧರ್ಮಗಳನ್ನು, ಭೌತಿಕ ಗಡಿಗಳನ್ನು ಮತ್ತು ವಯೋಮಾನಗಳನ್ನು ಮೀರಿದೆ ಎಂದರು.



ಶ್ರೀ ಶ್ರೀ ರವಿಶಂಕರ್

ವಿಶ್ವದಾಖಲೆ: ಶ್ರೀ ಶ್ರೀ ರವಿಶಂಕರ್ ಜೊತೆಗಿನ ಧ್ಯಾನ ಕಾರ್ಯಕ್ರಮವು ಗಿನ್ನಿಸ್ ದಾಖಲೆ ಪುಸ್ತಕದಲ್ಲಿ, ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಮತ್ತು ವರ್ಲ್ಡ್ ರೆಕಾರ್ಡ್ಸ್ ಯೂನಿಯನ್‌ನಲ್ಲಿ ಸ್ಥಾನ ಪಡೆದಿದೆ ಎಂದು ಆರ್ಟ್ ಆಫ್ ಲಿವಿಂಗ್‌ನ ಪ್ರಕಟಣೆ ತಿಳಿಸಿದೆ.

ವಿಶ್ವ ಧ್ಯಾನ ದಿನಾಚರಣೆಯ ಉದ್ಘಾಟನೆ ನಂತರ ಶ್ರೀ ಶ್ರೀ ರವಿಶಂಕರ್ ಅವರು ಧ್ಯಾನ ಕುರಿತು ಕಾರ್ಯಾಗಾರ ನಡೆಸಿಕೊಟ್ಟರು. ಇದನ್ನು ಯೂಟ್ಯೂಬ್‌ನಲ್ಲಿ ನೇರಪ್ರಸಾರ ಮಾಡಲಾಯಿತು. ಯೂಟ್ಯೂಬ್‌ನಲ್ಲಿ ಮಾರ್ಗದರ್ಶನದ ಮೂಲಕ ಧ್ಯಾನ ಹೇಳಿಕೊಟ್ಟ ಕಾರ್ಯಕ್ರಮವನ್ನು ಅತಿಹೆಚ್ಚಿನ ಜನ ವೀಕ್ಷಿಸಿದ್ದಕ್ಕೆ, ಈ ರೀತಿಯ ಕಾರ್ಯಕ್ರಮದಲ್ಲಿ ಅತಿಹೆಚ್ಚು ದೇಶಗಳ ಜನ ಭಾಗಿಯಾಗಿದ್ದಕ್ಕೆ ಹಾಗೂ ಭಾರತದ ಎಲ್ಲ ರಾಜ್ಯಗಳಿಂದ ಅತ್ಯಂತ ಹೆಚ್ಚು ಜನ ಭಾಗಿಯಾಗಿದ್ದಕ್ಕೆ, 24 ತಾಸುಗಳ ಅವಧಿಯಲ್ಲಿ ಈ ಬಗೆಯ ಕಾರ್ಯಕ್ರಮವು ಯೂಟ್ಯೂಬ್‌ನಲ್ಲಿ ಅತಿಹೆಚ್ಚು ವೀಕ್ಷಣೆ ಪಡೆದಿದ್ದಕ್ಕೆ ಈ ದಾಖಲೆ ಪುಸ್ತಕಗಳಲ್ಲಿ ಸ್ಥಾನ ಪಡೆದಿದೆ ಎಂದು ಪ್ರಕಟಣೆ ಹೇಳಿದೆ.

ಜರ್ಮನಿ: ಕಾರು ನುಗ್ಗಿಸಿ ಐವರ ಹತ್ಯೆ

ಬರ್ಲಿನ್ (ರಾಯಿಟರ್ಸ್): ಜರ್ಮನಿಯ ಮ್ಯಾಗ್ಡೆಬರ್ಗ್ ನಗರದ ಮಾರುಕಟ್ಟೆಯೊಂದಕ್ಕೆ ವ್ಯಕ್ತಿಯೊಬ್ಬ ಕಾರು ನುಗ್ಗಿಸಿದ ಘಟನೆಯಲ್ಲಿ ಐವರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಕಾರು ಚಲಾಯಿಸಿದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಶುಕ್ರವಾರ ಸಂಜೆ ಜನರು ಕ್ರಿಸ್‌ಮಸ್ ಹಬ್ಬದ ಖರೀದಿಗೆ ಕಿಕ್ಕಿರಿದಿದ್ದ ಸಮಯದಲ್ಲಿ ಕಾರು ನುಗ್ಗಿಸಲಾಗಿದೆ. ಮೃತರಲ್ಲಿ ಒಬ್ಬ ಬಾಲಕನೂ ಸೇರಿದ್ದಾನೆ. ಗಾಯಗೊಂಡವರಲ್ಲಿ 41 ಮಂದಿಯ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಆತಂಕವಿದೆ' ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸೌದಿ ಅರೇಬಿಯಾ ಮೂಲದ 50 ವರ್ಷದ ವೈದ್ಯನನ್ನು ಪೊಲೀಸರು ಬಂಧಿಸಿದ್ದಾರೆ. ಈ ಕೃತ್ಯದ ಹಿಂದಿನ ಉದ್ದೇಶ ಏನೆಂಬುದು ಸ್ಪಷ್ಟವಾಗಿಲ್ಲ. ಪೊಲೀಸರು ಆರೋಪಿಯ ಹೆಸರನ್ನು ಬಹಿರಂಗಪಡಿಸಿಲ್ಲವಾದರೂ, ಸ್ಥಳೀಯ ಮಾಧ್ಯಮಗಳು ಆತನನ್ನು ತಾಲಿಬ್ ಎ. ಎಂದು ಗುರುತಿಸಿದೆ. ಈತ 2006ರಿಂದಲೂ ಜರ್ಮನಿಯಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದ ಎಂದು ವರದಿ ಮಾಡಿವೆ.

ಇಸ್ರೇಲ್ ಮೇಲೆ ಹೂಥಿ ದಾಳಿ

ಟೆಲ್ ಅವೀವ್ (ಎಪಿ): ಇಸ್ರೇಲ್‌ನ ಟೆಲ್ ಅವೀವ್ ನಗರದ ಮೇಲೆ ಯೆಮನ್ ಕಡೆಯಿಂದ ರಾಕೆಟ್ ದಾಳಿ ನಡೆದಿದ್ದು, 16 ಮಂದಿ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಶನಿವಾರ ಮುಂಜಾನೆ 4ರ ಸುಮಾರಿಗೆ ಟೆಲ್ ಅವೀವ್‌ಗೆ ರಾಕೆಟ್ ಅಪ್ಪಳಿಸುವ ಮುನ್ನ ಎಚ್ಚರಿಕೆಯ ಸೈರನ್ ಮೊಳಗಿದೆ. ಈ ವೇಳೆ ಅನೇಕರು ಬಾಂಬ್ ನಿರೋಧಕ ಅಡಗು ತಾಣಗಳನ್ನು ಸೇರಿಕೊಂಡರು. ರಾಕೆಟ್ ಅಪ್ಪಳಿಸಿದಾಗ ಕಿಟಕಿಯ ಗಾಜುಗಳು ಒಡೆದ ಕಾರಣ 16 ಜನರಿಗೆ ಗಾಯಗಳಾಗಿವೆ. ಅಡಗು ತಾಣದತ್ತ ಧಾವಿಸುವಾಗ ಬಿದ್ದು ಇತರ 14 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಹೇಳಿದೆ.

'ಇಸ್ರೇಲ್– ಹಮಾಸ್ ಯುದ್ಧ ಆರಂಭವಾದ ಬಳಿಕ ಇರಾನ್ ಬೆಂಬಲಿತ ಹೂಥಿ ಬಂಡುಕೋರರು 200ಕ್ಕೂ ಹೆಚ್ಚು ಕ್ಷಿಪಣಿ ಹಾಗೂ ಡ್ರೋನ್‌ಗಳಿಂದ ದಾಳಿ ನಡೆಸಿದ್ದಾರೆ. ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿಯಲ್ಲಿ ಹಡಗುಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಗಾಜಾದಲ್ಲಿ ಕದನ ವಿರಾಮ ಘೋಷಿಸುವವರೆಗೂ ದಾಳಿ ನಿಲ್ಲುವುದಿಲ್ಲ ಎಂದು ಹೂಥಿ ಬಂಡುಕೋರರು ಹೇಳಿದ್ದಾರೆ' ಎಂದು ಇಸ್ರೇಲ್ ತಿಳಿಸಿದೆ.

ಇಸ್ರೇಲ್ ಸೇನೆ ಗುರುವಾರ ನಡೆಸಿದ ದಾಳಿಯಿಂದಾಗಿ ಕೆಂಪು ಸಮುದ್ರದಲ್ಲಿ ಹೂಥಿ ನಿಯಂತ್ರಣದಲ್ಲಿರುವ ಕೆಲವು ಬಂದರುಗಳಿಗೆ ತೀವ್ರ ಹಾನಿಯಾಗಿದೆ. ಈ ದಾಳಿಯು ಬಂದರಿನ ಸಾಮರ್ಥ್ಯವನ್ನು ಗಣನೀಯವಾಗಿ ತಗ್ಗಿಸಿದೆ ಎಂದು ವಿಶ್ವಸಂಸ್ಥೆಯ ವಕ್ತಾರ ಸ್ಟೀಫನ್ ಡುಜಾರಿಕ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪರಿಶೀಲನಾ ಅರ್ಜಿ ವಜಾ

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಹಣ ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರಿಗೆ ಜಾಮೀನು ಮಂಜೂರು ಮಾಡಿದ ಕ್ರಮವನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಡಿಸೆಂಬರ್ 17ರಂದು ಈ ತೀರ್ಮಾನ ಕೈಗೊಂಡಿದೆ. ಪೀಠದ ತೀರ್ಮಾನವನ್ನು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಲಾಗಿದೆ.

ಜಾಮೀನು ಆದೇಶ ಹಿಂಪಡೆಯುವಂತೆ ಕೋರಿರುವ ಅರ್ಜಿಯೊಂದು ವಿಚಾರಣೆಯ ಹಂತದಲ್ಲಿ ಇದೆ ಎಂದು ಪೀಠ ಹೇಳಿದೆ.

ಸಂಭಲ್ ದೇಗುಲ ಎಎಸ್‌ಐ ಸಮೀಕ್ಷೆ

ಲಖನೌ: ಸಂಭಲ್‌ನ ಪ್ರಸಿದ್ಧ ಜಾಮಾ ಮಸೀದಿಗೆ ಒಂದು ಕಿ.ಮೀ ದೂರದಲ್ಲಿ ಇತ್ತೀಚೆಗೆ ಪತ್ತೆ ಮಾಡಲಾಗಿದ್ದ 'ಕಲ್ಕಿ ವಿಷ್ಣು ದೇವಾಲಯ'ದ ಸುತ್ತಮುತ್ತ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಶನಿವಾರ ಸಮೀಕ್ಷೆ ನಡೆಸಿದೆ.

ದೇವಾಲಯ ಹಾಗೂ ಅದರ ಆವರಣದಲ್ಲಿರುವ 19 'ಕೃಷ್ಣ ಕೂಪ' (ಬಾವಿ) ಹಾಗೂ ಐದು 'ತೀರ್ಥ'ಗಳಲ್ಲಿ ಇಲಾಖೆಯ ನಾಲ್ವರ ತಂಡವು ಸಮೀಕ್ಷೆ ನಡೆಸಿದೆ.

ದೇವಾಲಯದಲ್ಲಿ ಪತ್ತೆಯಾದ ವಸ್ತುಗಳ ಮಾದರಿಗಳನ್ನು ತಂಡ ಸಂಗ್ರಹಿಸಿದ್ದು, ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಇವುಗಳನ್ನು ಒಳಪಡಿಸಲಾಗುತ್ತದೆ. ಸಮೀಕ್ಷೆ ನಡೆಸುವಂತೆ ಸಂಭಲ್‌ನ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದ್ರ ಪೆಂಸಿಯಾ ಅವರು ಇಲಾಖೆಗೆ ಪತ್ರ ಬರೆದಿದ್ದರು.

ಶಬರಿಮಲೆಯಲ್ಲಿ ಭಕ್ತರ ಸಂಖ್ಯೆ ನಿಯಂತ್ರಿಸಲು ಕ್ರಮ

ಶಬರಿಮಲೆ (ಪಿಟಿಐ): ಅಯ್ಯಪ್ಪ ದೇವಾಲಯದ ಪ್ರಮುಖ ಪೂಜಾವಿಧಿ ವಿಧಾನ ನಡೆಯುವ ಡಿ.25 ಹಾಗೂ 26ರಂದು ಇಲ್ಲಿಗೆ ಭೇಟಿ ನೀಡುವ ಭಕ್ತರ ಸಂಖ್ಯೆಯನ್ನು ನಿಯಂತ್ರಿಸುವ ಸಲುವಾಗಿ ವರ್ಚುಯಲ್ ಮತ್ತು ಸ್ಪಾಟ್ ಬುಕ್ಕಿಂಗ್ ವ್ಯವಸ್ಥೆಯನ್ನು ಬಿಗಿಗೊಳಿಸಲು ಟಿಡಿಪಿ ನಿರ್ಧರಿಸಿದೆ.

'ಡಿ. 25ರಂದು 50 ಸಾವಿರ ಹಾಗೂ ಡಿ.26ರಂದು 60 ಸಾವಿರ ಭಕ್ತರಿಗಷ್ಟೇ ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗುವುದು. ಈ ಎರಡೂ ದಿನಗಳಲ್ಲಿ ಸ್ಪಾಟ್ ಬುಕ್ಕಿಂಗ್ ವ್ಯವಸ್ಥೆಯಲ್ಲಿ ಕೇವಲ 5 ಸಾವಿರ ಭಕ್ತರಿಗಷ್ಟೇ ಅವಕಾಶ ನೀಡಲಾಗುವುದು' ಎಂದು ಟಿಡಿಪಿ ಹೇಳಿದೆ. ಈ ಬಾರಿಯ ಯಾತ್ರಾ ಅವಧಿಯಲ್ಲಿ ವರ್ಚುಯಲ್ ಬುಕ್ಕಿಂಗ್ ವ್ಯವಸ್ಥೆಯಲ್ಲಿ ಪ್ರತಿ ದಿನ 70 ಸಾವಿ ಭಕ್ತರಿಗಷ್ಟೇ ಅವಕಾಶ ಮಾಡಿಕೊಡಲಾಗಿದೆ.

ಶ್ರೀನಗರ: ಮೂರು ದಶಕದಲ್ಲೇ ಅತಿ ಹೆಚ್ಚು ಚಳಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಶನಿವಾರ ಮುಂಜಾನೆ ಮೈನಸ್ 8.5 ಡಿ.ಸೆ. ಕನಿಷ್ಠ ತಾಪಮಾನ ದಾಖಲಾಗಿದ್ದು, ಇದು ಕಳೆದ ಮೂರು ದಶಕಗಳಲ್ಲಿ ಡಿಸೆಂಬರ್‌ನಲ್ಲಿ ದಾಖಲಾದ ಅತಿ ಕಡಿಮೆ ತಾಪಮಾನವಾಗಿದೆ.

'ಶ್ರೀನಗರದಲ್ಲಿ 1990ರ ಬಳಿಕ, ಡಿಸೆಂಬರ್ ತಿಂಗಳಿನಲ್ಲಿ ದಾಖಲಾದ ಅತಿ ಕನಿಷ್ಠ ಹಾಗೂ ಕಳೆದ 133 ವರ್ಷಗಳಲ್ಲಿ ದಾಖಲಾಗಿರುವ ಮೂರನೇ ಅತಿ ಕಡಿಮೆ ತಾಪಮಾನ ಇದಾಗಿದೆ. 1934ರ ಡಿಸೆಂಬರ್ 13ರಂದು ಮೈನಸ್ 12.8 ಡಿ.ಸೆ. ಕನಿಷ್ಠ ತಾಪಮಾನ ದಾಖಲಾಗಿದ್ದು, ಸಾರ್ವಕಾಲಿಕ ದಾಖಲೆಯಾಗಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆಯೋಗದ ಶಿಫಾರಸಿನ ಮೇರೆಗೆ ಚುನಾವಣಾ ನಿಯಮಗಳಿಗೆ ತಿದ್ದುಪಡಿ ಮಾಡಿದ ಕೇಂದ್ರ

ಕೆಲ ದಾಖಲೆ ಪರಿಶೀಲನೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಚುನಾವಣೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಹಿಂದೆ ಲಭ್ಯವಿದ್ದ ಕೆಲ ದಾಖಲೆಗಳ ಪರಿಶೀಲನೆಯನ್ನು ನಿರ್ಬಂಧಿಸಿ ಕಾನೂನು ಮತ್ತು ನ್ಯಾಯ ಸಚಿವಾಲಯವು ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿದೆ.

1961ರ ಚುನಾವಣಾ ನಿಯಮದಲ್ಲಿ 93 (2)(ಎ) ಚುನಾವಣೆಗೆ ಸಂಬಂಧಿಸಿದ ಎಲ್ಲ ದಾಖಲೆಗಳು ಸಾರ್ವಜನಿಕ ತಪಾಸಣೆಗೆ ಮುಕ್ತವಾಗಿರುತ್ತವೆ ಎಂದು ಹೇಳಲಾಗಿತ್ತು. ಅದಕ್ಕೀಗ ತಿದ್ದುಪಡಿ ತರಲಾಗಿದ್ದು, ಅದರ ಪ್ರಕಾರ, ಚುನಾವಣೆಗೆ ಸಂಬಂಧಿಸಿದಂತೆ 'ನಿರ್ದಿಷ್ಟ' ದಾಖಲೆ, ಕಡತಗಳು ಮಾತ್ರ ಸಾರ್ವಜನಿಕರ ತಪಾಸಣೆಗೆ ಲಭ್ಯವಿರುತ್ತವೆ.

ಸಿಸಿಟಿವಿ ಕ್ಯಾಮೆರಾ, ವೆಬ್‌ಕಾಸ್ಟಿಂಗ್ ದೃಶ್ಯಾವಳಿಗಳು ಮತ್ತು ಅಭ್ಯರ್ಥಿಗಳ ವಿಡಿಯೊ ರೆಕಾರ್ಡಿಂಗ್‌ಗಳಂತಹ ಎಲೆಕ್ಟ್ರಾನಿಕ್ ದಾಖಲೆಗಳನ್ನು ಸಾರ್ವಜನಿಕರ ತಪಾಸಣೆಯಿಂದ ಹೊರಗಿಡಲಾಗಿದೆ. ದುರುಪಯೋಗ ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. ಚುನಾವಣಾ ಆಯೋಗದ ಶಿಫಾರಸಿನ ಮೇರೆಗೆ ಈ ತಿದ್ದುಪಡಿಗಳನ್ನು ಮಾಡಲಾಗಿದೆ.

ಯಾವುದು ಲಭ್ಯ, ಅಲಭ್ಯ?: ಅಭ್ಯರ್ಥಿಗಳ ನಾಮಪತ್ರಗಳು, ಚುನಾವಣಾ ಏಜೆಂಟರ ನೇಮಕ, ಫಲಿತಾಂಶ ಮತ್ತು ಚುನಾವಣಾ ಖರ್ಚು ವೆಚ್ಚದ ಮಾಹಿತಿಯು ತಿದ್ದುಪಡಿ ನಿಯಮದಲ್ಲಿ ಉಲ್ಲೇಖಿಸಲಾಗಿದ್ದು, ಅವುಗಳನ್ನು ಸಾರ್ವಜನಿಕರು ಪರಿಶೀಲಿಸಬಹುದಾಗಿದೆ. ಆದರೆ, ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು, ವೆಬ್‌ಕಾಸ್ಟಿಂಗ್ ದೃಶ್ಯಾವಳಿ ಮತ್ತು ಮಾದರಿ ನೀತಿ ಸಂಹಿತೆ ಅವಧಿಯಲ್ಲಿ ಅಭ್ಯರ್ಥಿಗಳ ವಿಡಿಯೊ ರೆಕಾರ್ಡಿಂಗ್‌ನಂತಹ ಎಲೆಕ್ಟ್ರಾನಿಕ್ ದಾಖಲೆಗಳನ್ನು ನಿಯಮಗಳಲ್ಲಿ ಉಲ್ಲೇಖಿಸಲಾಗಿಲ್ಲ. ಹೀಗಾಗಿ ಇವುಗಳ ಪರಿಶೀಲನೆಗೆ ನಿರ್ಬಂಧ ಇರುತ್ತದೆ ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮತಗಟ್ಟೆಗಳ ಒಳಗಿನ ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ದುರ್ಬಳಕೆ ಆಗಬಹುದು. ಅದರಿಂದ ಮತದಾರರ ಗೋಪ್ಯತೆಗೆ ಧಕ್ಕೆ ಆಗಬಹುದು. ಅಲ್ಲದೆ ಎಐ ತಂತ್ರಜ್ಞಾನ ಬಳಸಿಕೊಂಡು ದೃಶ್ಯಾವಳಿಗಳ ನಕಲಿ ತುಣುಕುಗಳನ್ನು ಸಿದ್ಧಪಡಿಸುವ ಸಾಧ್ಯತೆಯೂ ಇರುತ್ತದೆ. ಈ ರೀತಿಯ ದುರುಪಯೋಗಗಳನ್ನು ತಡೆಯುವುದು ಆಯೋಗದ ಉದ್ದೇಶ ಎಂದು ಅವರು ವಿವರಿಸಿದರು.

ಆದರೆ, ವಿಡಿಯೊ ದೃಶ್ಯಾವಳಿಗಳೂ ಸೇರಿದಂತೆ ಎಲ್ಲ ದಾಖಲೆಗಳು ಅಭ್ಯರ್ಥಿಗಳ ಪರಿಶೀಲನೆಗೆ ಲಭ್ಯವಿರುತ್ತವೆ. ಸಾರ್ವಜನಿಕರಿಗೆ ಎಲೆಕ್ಟ್ರಾನಿಕ್ ದಾಖಲೆಗಳ ಅಗತ್ಯವಿದ್ದರೆ ನ್ಯಾಯಾಲಯಗಳನ್ನು ಸಂಪರ್ಕಿಸಬಹುದು ಎಂದು ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

'ಚುನಾವಣಾ ಅಧಿಕಾರಿಗಳು ಸಿದ್ಧಪಡಿಸಿದ ದಾಖಲೆಗಳು, ಕ್ಷೇತ್ರಗಳ ಮ್ಯಾಪಿಂಗ್ ಮತ್ತು ವಿದ್ಯುನ್ಮಾನ ಮತಯಂತ್ರಗಳ ಚಲನೆ, ದೋಷಪೂರಿತ ಇವಿಎಂಗಳ ಬದಲಾವಣೆ, ಪೊಲೀಸರ, ಚುನಾವಣಾ ವೆಚ್ಚ ವೀಕ್ಷಕ ಅಧಿಕಾರಿಗಳ, ಚುನಾವಣಾ ಅಧಿಕಾರಿಗಳ ಮತ್ತು ಮುಖ್ಯ ಚುನಾವಣಾ ಅಧಿಕಾರಿಗಳ ವರದಿಗಳನ್ನು ನಿಯಮದಲ್ಲಿ ಪ್ರಸ್ತಾಪಿಸಿಲ್ಲ' ಎಂದು ಆರ್‌ಟಿಐ ಕಾರ್ಯಕರ್ತ ವೆಂಕಟೇಶ್ ನಾಯಕ್ ತಿಳಿಸಿದರು.

ಚುನಾವಣೆಗಳು ನ್ಯಾಯೋಚಿತವಾಗಿ ನಡೆದಿವೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಈ ದಾಖಲೆಗಳು ಅತ್ಯಾವಶ್ಯಕ ಎಂದು ಅವರು ಪ್ರತಿಕ್ರಿಯಿಸಿದರು.

ತಿದ್ದುಪಡಿಗೆ ತರಾತುರಿ ಏಕೆ: ಹರಿಯಾಣದ ವಿಧಾನಸಭಾ ಚುನಾವಣೆ ಕುರಿತ ಅಗತ್ಯ ದಾಖಲೆಗಳ ಪ್ರತಿಗಳನ್ನು ಸಂಬಂಧಿಸಿದ ವಕೀಲರಿಗೆ ನೀಡುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಇತ್ತೀಚೆಗೆ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿತ್ತು. ಅದರ ಬೆನ್ನಲ್ಲೇ ಈ ತಿದ್ದುಪಡಿ ಆಗಿದೆ.

ವಕೀಲ ಮೆಹಮೂದ್ ಪ್ರಾಚಾ ಅವರು, ಹರಿಯಾಣ ಚುನಾವಣೆಗೆ ಸಂಬಂಧಿಸಿದ ವಿಡಿಯೊ ಚಿತ್ರೀಕರಣ, ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ಸೇರಿದಂತೆ ಕೆಲ ಮಾಹಿತಿಗಳನ್ನು ಕೋರಿದ್ದರು.

'ಪಾರದರ್ಶಕ ವ್ಯವಸ್ಥೆಗೆ ಏಕೆ ಹೆದರಿಕೆ'



'ಚುನಾವಣಾ ಆಯೋಗ ಪಾರದರ್ಶಕ ವ್ಯವಸ್ಥೆಗೆ ಏಕೆ ಹೆದರಿಕೆ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

'ತಿದ್ದುಪಡಿ ವಿರುದ್ಧ ಕಾನೂನುಬದ್ಧ ಹೋರಾಟ ನಡೆಸುತ್ತೇವೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಬೈಕ್ ಸವಾರನ ಮೃತದೇಹ 30 ಕಿ.ಮೀ ಎಳೆದೊಯ್ದ ವಾಹನ

ತಹಶೀಲ್ದಾರ್ ವಾಹನ–ಬೈಕ್ ಡಿಕ್ಕಿ

ಬಹರಾಯಿಚ್ (ಪಿಟಿಐ): ಉತ್ತರ ಪ್ರದೇಶದ ನಾನ್ಪಾರಾದ ತಹಶೀಲ್ದಾರ್ ಅವರ ಸರ್ಕಾರಿ ವಾಹನವು ಬೈಕ್ ಸವಾರನಿಗೆ ಡಿಕ್ಕಿ ಹೊಡೆದು, ಆತನ ಮೃತ ದೇಹವನ್ನು 30 ಕಿ.ಮೀವರೆಗೂ ಎಳೆದುಕೊಂಡು ಹೋಗಿರುವ ಘಟನೆ ನಡೆದಿದೆ.

ಮೃತಪಟ್ಟ ವ್ಯಕ್ತಿಯನ್ನು ಪಯಾಗ್‌ಪುರದ ನಿವಾಸಿ ನರೇಂದ್ರ ಕುಮಾರ್ ಹಲ್ದಾರ್ (35) ಎಂದು ಗುರುತಿಸಲಾಗಿದೆ. ನಾನ್ಪಾರಾ– ಬಹರಾಯಿಚ್ ರಸ್ತೆಯಲ್ಲಿ ಗುರುವಾರ ಸಂಜೆ ಈ ಅಪಘಾತ ಸಂಭವಿಸಿದೆ.

'ಅಪಘಾತದ ವೇಳೆ ತಹಶೀಲ್ದಾರ್ ವಾಹನಕ್ಕೆ ಹಲ್ದಾರ್ ಅವರ ಮೃತ ದೇಹ ಸಿಲುಕಿಕೊಂಡಿತ್ತು. ವಾಹನವು ಸುಮಾರು 30 ಕಿ.ಮೀವರೆಗೆ ದೇಹವನ್ನು ಎಳೆದುಕೊಂಡು ಹೋಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ವೃಂದಾ ಶುಕ್ಲಾ ತಿಳಿಸಿದ್ದಾರೆ.

ತಹಶೀಲ್ದಾರ್ ಅಮಾನತಿಗೆ ಶಿಫಾರಸು: ಅಪಘಾತ ಸಂಭವಿಸಿದಾಗ ವಾಹನದಲ್ಲಿದ್ದರು ಎಂದು ಹೇಳಲಾಗುವ ತಹಶೀಲ್ದಾರ್ ಶೈಲೇಶ್ ಕುಮಾರ್ ಅವಸ್ತಿ ಅವರನ್ನು ಅಮಾತುಗೊಳಿಸುವಂತೆ ಜಿಲ್ಲಾಧಿಕಾರಿ ಮೋನಿಕಾ ರಾಣಿ ಶಿಫಾರಸು ಮಾಡಿದ್ದಾರೆ. ವಾಹನದ ಚಾಲಕ ಮೆರಾಜ್ ಅಹ್ಮದ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಸಮಗ್ರ ತನಿಖೆ: 'ಅಪಘಾತಕ್ಕೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಯುತ್ತಿದ್ದು, ಹೇಗೆ ಅಪಘಾತ ಸಂಭವಿಸಿರಬಹುದು ಎಂಬುದನ್ನು ಪರಿಶೀಲಿಸಲಾಗುತ್ತಿದೆ. 30 ಕಿ.ಮೀ ರಸ್ತೆ ಮಾರ್ಗದಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ಅಪಘಾತದಲ್ಲಿ ಮೃತಪಟ್ಟಿರುವ ನರೇಂದ್ರ ಕುಮಾರ್ ಹಲ್ದಾರ್ ಅವರ ಕುಟುಂಬದ ಸಂಬಂಧಿಗಳು ದಾಖಲಿಸಿರುವ ದೂರಿನಲ್ಲಿ, ತಹಶೀಲ್ದಾರ್ ವಾಹನವನ್ನು ಉಲ್ಲೇಖಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಅಲ್ಲು ಅರ್ಜುನ್‌ಗೆ ಅನುಮತಿ ನೀಡಿರಲಿಲ್ಲ'

ಸಾವಿನಂತಹ ದುರ್ಘಟನೆ ಸಂಭವಿಸಿದಾಗ ವಿನಾಯಿತಿ ಇರಲ್ಲ; ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ/ ಪಿಟಿಐ



ರೇವಂತ ರೆಡ್ಡಿ

ಹೈದರಾಬಾದ್: 'ಪೊಲೀಸರು ಅನುಮತಿ ನಿರಾಕರಿಸಿದ್ದರೂ ನಟ ಅಲ್ಲು ಅರ್ಜುನ್ ಅವರು ಡಿ.4ರಂದು ಪುಷ್ಪ–2 ಸಿನಿಮಾವನ್ನು ವೀಕ್ಷಿಸಲು ಇಲ್ಲಿನ ಚಿತ್ರಮಂದಿರಕ್ಕೆ ಬಂದಿದ್ದರು' ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ವಿಧಾನಸಭೆಯಲ್ಲಿ ಶನಿವಾರ ತಿಳಿಸಿದರು.

'ಅಭಿಮಾನಿಗಳ ನೂಕುನುಗ್ಗಲಿನಿಂದ ಉಂಟಾದ ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟ ನಂತರವೂ ಥಿಯೇಟರ್‌ನಿಂದ ಅವರು ಹೊರ ಹೋಗಲಿಲ್ಲ. ಸಿನಿಮಾ ವೀಕ್ಷಿಸುವುದನ್ನು ಮುಂದುವರಿಸಿದ್ದರು. ಪೊಲೀಸರು ಠಾಣೆಗೆ ಕರೆದೊಯ್ಯುವುದಾಗಿ ಎಚ್ಚರಿಕೆ ನೀಡಿದ ಬಳಿಕವಷ್ಟೇ ಅಲ್ಲಿಂದ ಹೊರಟರು' ಎಂದು ಹೇಳಿದರು.

ಎಐಎಂಐಎಂ ಶಾಸಕ ಅಕ್ಬರುದ್ದೀನ್ ಓವೈಸಿ ಈ ವಿಷಯವನ್ನು ಪ್ರಸ್ತಾಪಿಸಿದಕ್ಕೆ ಪ್ರತಿಕ್ರಿಯಿಸಿದ ಅವರು, 'ಅಲ್ಲು ಅರ್ಜುನ್ ರೋಡ್ ಷೋ ನಡೆಸಿದ್ದರಿಂದಲೇ ಜನದಟ್ಟಣೆ ಉಂಟಾಗಿದೆ. ವಿಡಿಯೊಗಳಲ್ಲಿ ಚಿತ್ರನಟನ ಲೋಪವು ದಾಖಲಾಗಿದೆ' ಎಂದರು.

'ಚಲನಚಿತ್ರೋದ್ಯಮದ ಉತ್ತೇಜನಕ್ಕಾಗಿ ಸರ್ಕಾರವು ವಿಶೇಷ ಪ್ರದರ್ಶನಗಳಿಗೆ ಅನುಮತಿ ನೀಡುತ್ತದೆ. ಆದರೆ ಜನರು ಜೀವ ಕಳೆದುಕೊಂಡರೆ, ಅದನ್ನು ನಿರ್ಲಕ್ಷಿಸಬೇಕೇ? ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ನಾವು ಅನುಸರಿಸುತ್ತೇವೆ. ಅಧಿಕಾರದಲ್ಲಿ ಇರುವವರೆಗೂ ಇಂತಹ ಘಟನೆಗಳನ್ನು ನಿರ್ಲಕ್ಷಿಸಲ್ಲ. ಕಾಲ್ತುಳಿತದಿಂದ ಸಾವಿನಂದಾಗ ಯಾವುದೇ ವಿಶೇಷ ಸವಲತ್ತುಗಳು ಇರುವುದಿಲ್ಲ' ಎಂದು ಹೇಳಿದರು.

'ನಟನ ಬಂಧನದ ನಂತರ ಅವರ ಭೇಟಿಗಾಗಿ ಚಿತ್ರರಂಗದ ಗಣ್ಯರು ಸರದಿಯಲ್ಲಿ ಹೋಗುತ್ತಿದ್ದಾರೆ. ಆದರೆ ಕಾಲ್ತುಳಿತದಲ್ಲಿ ಮೃತಪಟ್ಟ ಮಹಿಳೆಯ ಪುತ್ರ ಗಾಯಗೊಂಡು ಆಸ್ಪತ್ರೆಯಲ್ಲಿದ್ದರೂ, ಆತನ ಭೇಟಿಗೆ ಸಹಾನುಭೂತಿ ತೋರುತ್ತಿಲ್ಲ' ಎಂದು ಟೀಕಿಸಿರುವ ಮುಖ್ಯಮಂತ್ರಿ, 'ಅಮಾನವೀಯರಾಗಬೇಡಿ ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುವೆ' ಎಂದಿದ್ದಾರೆ.

ನನ್ನ ವಿರುದ್ಧ ಸುಳ್ಳು ಆರೋಪ: ಅಲ್ಲು ಅರ್ಜುನ್



ಅಲ್ಲು ಅರ್ಜುನ್

ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಮಾಡಿರುವ ಆರೋಪಗಳನ್ನು ನಟ ಅಲ್ಲು ಅರ್ಜುನ್ ತಳ್ಳಿ ಹಾಕಿದ್ದಾರೆ.

'ತಪ್ಪು ಮಾಹಿತಿಯನ್ನು ನೀಡಲಾಗುತ್ತಿದೆ. ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ. ಈ ರೀತಿಯ ಹೇಳಿಕೆಗಳಿಂದ ಚಾರಿತ್ರ್ಯವಧೆಯಾಗುತ್ತದೆ' ಎಂದಿರುವ ಅಲ್ಲು, 'ಮಹಿಳೆ ಸಾವಿಗೀಡಾಗಿರುವುದು ದುರದೃಷ್ಟಕರ ಘಟನೆ' ಎಂದಿದ್ದಾರೆ.



ಪಂಜಾಬ್‌ನ ಮೊಹಾಲಿ ಜಿಲ್ಲೆ ಸೊಹಾನಾ ಗ್ರಾಮದಲ್ಲಿ ಕಟ್ಟಡವೊಂದು ಶನಿವಾರ ಕುಸಿದಿದ್ದು, 20 ವರ್ಷ ವಯಸ್ಸಿನ ಯುವತಿ ಮೃತಪಟ್ಟರು. ಅವಶೇಷಗಳಡಿ ಐವರು ಸಿಲುಕಿದ್ದು, ತಡರಾತ್ರಿವರೆಗೂ ರಕ್ಷಣಾ ಕಾರ್ಯ ನಡೆದಿತ್ತು ಪಿಟಿಐ ಚಿತ್ರ

ಪಶ್ಚಿಮಘಟ್ಟದಲ್ಲಿ ಭಾರಿ ಅರಣ್ಯ ನಾಶ

ಒಂದನೇ ಪುಟದಿಂದ...

ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಪ್ರಮುಖ ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಇದೇ ವೇಳೆ ನಡೆದ ಸಮಾರಂಭದಲ್ಲಿ ಐಎಸ್‌ಎಫ್‌ನ ದ್ವೈವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿದರು.

ಭಾರತದ ಅರಣ್ಯ ಮತ್ತು ಮರಗಳ ವ್ಯಾಪ್ತಿಯನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡುವ ಈ ವರದಿಯು ಕಳೆದ ಎರಡು ವರ್ಷಗಳಲ್ಲಿ (2021-23) ಅರಣ್ಯ ಮತ್ತು ಮರಗಳ ವ್ಯಾಪ್ತಿಯಲ್ಲಿ 1,445 ಚದರ ಕಿಲೋಮೀಟರ್ ಹೆಚ್ಚಳವಾಗಿದೆ. ಇದರಲ್ಲಿ 156 ಚದರ ಕಿ.ಮೀ ಅರಣ್ಯ ಪ್ರದೇಶ ಮತ್ತು ಮರಗಳಿಂದ ಕೂಡಿದ ಪ್ರದೇಶದಲ್ಲಿ 1,289 ಚ.ಕಿ.ಮೀ ಹೆಚ್ಚಳ ಸೇರಿದೆ ಎಂದು ಹೇಳಿದೆ.

ಆದರೆ ಇದೇ ಸಮಯದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಅರಣ್ಯದ ಬೆಳವಣಿಗೆಯು ಕೇವಲ 156 ಚದರ ಕಿಲೋಮೀಟರ್ ಎಂದು ಬೊಟ್ಟು ಮಾಡಿದೆ. 2019-21ರ ನಡುವೆ 1,540 ಚದರ ಕಿಲೋಮೀಟರ್ ಬೆಳವಣಿಗೆಗೆ ಹೋಲಿಸಿದರೆ ಹತ್ತು ಪಟ್ಟು ಕುಸಿತವಾಗಿದೆ. ಆದರೆ, ಈ ಕುಸಿತದ ಹಿಂದಿನ ಕಾರಣಗಳನ್ನು ವರದಿಯಲ್ಲಿ ವಿವರಿಸಿಲ್ಲ.

'ಹಲವಾರು ರಾಜ್ಯಗಳಲ್ಲಿ ಅರಣ್ಯ ನಾಶವಾಗಿದೆ. ಈ ಪಟ್ಟಿಯಲ್ಲಿ ಮಧ್ಯಪ್ರದೇಶವು ಅಗ್ರಸ್ಥಾನದಲ್ಲಿದೆ' ಎಂದು ಕೇಂದ್ರ ಪರಿಸರ ಸಚಿವಾಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

2021 ಮತ್ತು 2023ರ ನಡುವೆ, ಗುಜರಾತಿನಲ್ಲಿ (36 ಚದರ ಕಿಮೀ) ಗರಿಷ್ಠ ನಷ್ಟದೊಂದಿಗೆ ಮ್ಯಾಂಗ್ರೋವ್ ವ್ಯಾಪ್ತಿ ಸುಮಾರು 7.5 ಚದರ ಕಿಲೋಮೀಟರ್ ಕಡಿಮೆಯಾಗಿದೆ ಮತ್ತು ಆಂಧ್ರಪ್ರದೇಶ (13) ಮಹಾರಾಷ್ಟ್ರದಲ್ಲಿ (12) ಮ್ಯಾಂಗ್ರೋವ್ ಅರಣ್ಯ ಹೆಚ್ಚಳವಾಗಿದೆ. ದೇಶದ ಗುಡ್ಡಗಾಡು ಜಿಲ್ಲೆಗಳಲ್ಲಿ 234.14 ಚ.ಕಿ.ಮೀ ಅರಣ್ಯ ಪ್ರದೇಶ ಹೆಚ್ಚಳವಾಗಿದೆ. ಆದರೆ, ಈಶಾನ್ಯ ಪ್ರದೇಶದಲ್ಲಿ, ಅರಣ್ಯ ಪ್ರದೇಶ 327.30 ಚದರ ಕಿಲೋಮೀಟರ್‌ನಷ್ಟು ಕಡಿಮೆಯಾಗಿದೆ.

ಸಂಯೋಜಿತ ಅರಣ್ಯ, ಮರಗಳಿಂದ ಕೂಡಿದ ಪ್ರದೇಶದಲ್ಲಿ ಅತ್ಯಧಿಕ ಹೆಚ್ಚಳ ದಾಖಲಿಸಿದ ರಾಜ್ಯಗಳು
ಛತ್ತೀಸಗಢ (684 ಚ.ಕಿ.ಮೀ)
ಉತ್ತರ ಪ್ರದೇಶ (559 ಚ.ಕಿ.ಮೀ)
ಒಡಿಶಾ (559 ಚ.ಕಿ.ಮೀ.)
ರಾಜಸ್ಥಾನ (394 ಚ.ಕಿ.ಮೀ)

ಸಂಯೋಜಿತ ಅರಣ್ಯ, ಮರಗಳಿಂದ ಕೂಡಿದ ಪ್ರದೇಶ ಭಾರಿ ಪ್ರಮಾಣದಲ್ಲಿ ಕ್ಷೀಣಿಸಿರುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ
ಮಧ್ಯಪ್ರದೇಶ (612.41 ಚದರ ಕಿ.ಮೀ)
ಕರ್ನಾಟಕ (459.36 ಚದರ ಕಿ.ಮೀ)
ಲಡಾಖ್ (159.26 ಚದರ ಕಿ.ಮೀ)
ನಾಗಾಲ್ಯಾಂಡ್ (125.22 ಚದರ ಕಿ.ಮೀ)

ಮೀಸಲು ಅರಣ್ಯ ವ್ಯಾಪ್ತಿಯ ಒಳಗೆ ಅತಿ ಹೆಚ್ಚು ಅರಣ್ಯ ಬೆಳವಣಿಗೆ ಕಂಡಿರುವ ರಾಜ್ಯಗಳು
ಮಿಜೋರಾಂ (192.92 ಚದರ ಕಿ.ಮೀ.)
ಒಡಿಶಾ (118.17 ಚದರ ಕಿ.ಮೀ)
ಕರ್ನಾಟಕ (93.14 ಚದರ ಕಿ.ಮೀ)
ಪಶ್ಚಿಮ ಬಂಗಾಳ (64.79 ಚದರ ಕಿ.ಮೀ)
ಜಾರ್ಖಂಡ್ (52.72 ಚದರ ಕಿ.ಮೀ)

ಇಂಗಾಲ ತಗ್ಗಿಸುವಲ್ಲಿ ಸಾಧನೆ

2005ರ ಮಟ್ಟಕ್ಕೆ ಹೋಲಿಸಿದರೆ, ಅರಣ್ಯ ಪ್ರದೇಶ ಹೆಚ್ಚಿಸುವ ಮೂಲಕ ದೇಶವು 229 ಕೋಟಿ ಟನ್‌ಗಳಷ್ಟು ಹೆಚ್ಚುವರಿ ಇಂಗಾಲವನ್ನು ವಾತಾವರಣದಿಂದ ಹೀರಿಕೊಂಡ ಸಾಧನೆ ಮಾಡಿದೆ ಎಂದು ವರದಿ ಹೇಳಿದೆ.

ಪ್ಯಾರಿಸ್ ಒಪ್ಪಂದದ ಗುರಿಗಳನ್ನು ಸಾಧಿಸಲು, ಒಪ್ಪಂದದಡಿಯ ಹವಾಮಾನ ಯೋಜನೆಗಳು ಅಥವಾ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳ (ಎನ್‌ಡಿಸಿ) ಭಾಗವಾಗಿ, 2030ರ ವೇಳೆಗೆ ಹೆಚ್ಚುವರಿ ಅರಣ್ಯ ಮತ್ತು ಮರಗಳ ಹೊದಿಕೆಯ ಮೂಲಕ 25 ಕೋಟಿಯಿಂದ 30 ಕೋಟಿ ಟನ್‌ಗಳಷ್ಟು ಹೆಚ್ಚುವರಿ ಇಂಗಾಲವನ್ನು ಹೀರಿಕೊಳ್ಳುವ ಗುರಿ ಸಾಧಿಸಲು ದೇಶವು ಬದ್ಧವಾಗಿದೆ ಎಂದು ಅದು ಹೇಳಿದೆ. ಭಾರತವು 2030ರ ವೇಳೆಗೆ ಅರಣ್ಯ ಮತ್ತು ಮರಗಳ ಹೊದಿಕೆಯಿಂದ 3171 ಕೋಟಿ ಟನ್ ಇಂಗಾಲವನ್ನು ಹೀರಿಕೊಳ್ಳಲಿದೆ ಎಂದು ಅಂದಾಜಿಸಲಾಗಿದೆ.



ಚಳಿ... ಜಮ್ಮು ಮತ್ತು ಕಾಶ್ಮೀರದ ದಾಲ್ ಸರೋವರವು ಭಾಗಶಃ ಹೆಪ್ಪುಗಟ್ಟಿದ್ದು, ವಲಸೆ ಹಕ್ಕಿಗಳು ಘನೀಕೃತ ನೀರಿನ ಮೇಲೆ ಆಹಾರ ಅರಸಿ ಶನಿವಾರ ಅಲೆದಾಡಿದವು ಪಿಟಿಐ ಚಿತ್ರ

ವಿಶ್ವಸಂಸ್ಥೆಯ 'ಇಂಟರ್ನಲ್ ಜಸ್ಟೀಸ್ ಕೌನ್ಸಿಲ್' ಮುಖ್ಯಸ್ಥರಾಗಿ ನ್ಯಾ.ಲೋಕೂರ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಭೀಮರಾವ್ ಲೋಕೂರ್ ಅವರನ್ನು ವಿಶ್ವಸಂಸ್ಥೆಯ 'ಇಂಟರ್ನಲ್ ಜಸ್ಟೀಸ್ ಕೌನ್ಸಿಲ್' ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ಲೋಕುರ್ ಅವರ ಕಾರ್ಯಾವಧಿಯು 2028ರ ನವೆಂಬರ್ 12ರವರೆಗೆ ಇರಲಿದೆ.

'ಇಂಟರ್‌ನಲ್ ಜಸ್ಟೀಸ್ ಕೌನ್ಸಿಲ್‌ನ ಮುಖ್ಯಸ್ಥರನ್ನಾಗಿ ನೇಮಿಸಲು ಅತೀವ ಸಂತಸವಾಗುತ್ತಿದೆ. ತಕ್ಷಣದಿಂದಲೇ ಜಾರಿಯಾಗುವಂತೆ ನೇಮಕ ಮಾಡಲಾಗಿದೆ' ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು ಲೋಕೂರ್‌ಗೆ ಡಿ.19ರಂದು ಬರೆದ ಪತ್ರದಲ್ಲಿ ಹೇಳಿದ್ದಾರೆ.

'ಉರುಗ್ವೆ, ಆಸ್ಟ್ರೇಲಿಯಾ, ಆಸ್ಟ್ರಿಯಾ, ಅಮೆರಿಕ ದೇಶಗಳ ನ್ಯಾಯಮೂರ್ತಿಗಳೂ ಈ ಕೌನ್ಸಿನಲ್ಲಿ ಇರಲಿದ್ದಾರೆ' ಎಂದೂ ಉಲ್ಲೇಖಿಸಿದ್ದಾರೆ.

ಲೋಕೂರ್ ಅವರು 1953ರಲ್ಲಿ ಜನಿಸಿದವರು. 2012ರಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

2018ರಲ್ಲಿ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ವಿರುದ್ಧ ಸುಪ್ರೀಂ ಕೋರ್ಟ್‌ನ ಪತ್ರಿಕಾಗೋಷ್ಠಿ ನಡೆಸಿದ ನ್ಯಾಯಮೂರ್ತಿಗಳ ಪೈಕಿ ಲೋಕುರ್ ಅವರೂ ಒಬ್ಬರಾಗಿದ್ದರು.

ತಮಿಳುನಾಡು: ಕುಲಪತಿ ನೇಮಕಕ್ಕೆ ಶೋಧ ಸಮಿತಿ

ರಾಜ್ಯಪಾಲರು, ಸರ್ಕಾರದ ಸಂಘರ್ಷ

● ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: ರಾಜ್ಯ ಸರ್ಕಾರದ ನಾಲ್ಕು ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವ ವಿಚಾರವಾಗಿ ಡಿಎಂಕೆ ನೇತೃತ್ವದ ಸರ್ಕಾರ ಹಾಗೂ ರಾಜ್ಯಪಾಲ ಆರ್.ಎನ್. ರವಿ ಅವರ ನಡುವೆ ಹೊಸದಾಗಿ ಸಂಘರ್ಷ ಮೂಡಿದೆ.

ಕುಲಪತಿ ನೇಮಕಕ್ಕೆ ರಚಿಸುವ ಶೋಧ ಸಮಿತಿಯಲ್ಲಿ ವಿಶ್ವವಿದ್ಯಾಲಯಗಳ ಅನುದಾನ ಆಯೋಗದಿಂದ (ಯುಜಿಸಿ) ನಾಮನಿರ್ದೇಶಿತರಾಗುವ ಒಬ್ಬರು ಸೇರಿದಂತೆ ಒಟ್ಟು ನಾಲ್ಕು ಮಂದಿ ಸದಸ್ಯರಿರಬೇಕು ಎಂಬುದು ರಾಜ್ಯಪಾಲರ ನಿಲುವು. ಆದರೆ, ನಾಲ್ಕು ಸದಸ್ಯರ ಅಗತ್ಯ ಇಲ್ಲ, ಮೂವರು ಸದಸ್ಯರು ಸಾಕು ಎಂದು ಸರ್ಕಾರ ಪ್ರತಿಪಾದಿಸುತ್ತಿದೆ.

ಅಣ್ಣಾಮಲೈ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕಕ್ಕೆ ಯುಜಿಸಿಯಿಂದ ನಾಮನಿರ್ದೇಶಿರಾದ ಸದಸ್ಯ ಇಲ್ಲದೆ ರಚಿಸಿರುವ ಶೋಧ ಸಮಿತಿಯನ್ನು ರದ್ದುಪಡಿಸಬೇಕು ಎಂದು ರಾಜ್ಯಪಾಲರು ಈಚೆಗೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಅಣ್ಣಾ ವಿಶ್ವವಿದ್ಯಾಲಯ, ಭಾರತಿದಾಸನ್ ವಿಶ್ವವಿದ್ಯಾಲಯ ಮತ್ತು ಪೆರಿಯಾರ್ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕಕ್ಕೆ ಶೋಧ ಸಮಿತಿಯನ್ನು ಅಧಿಸೂಚನೆಯಲ್ಲಿ ಪ್ರಕಟಿಸಬೇಕು ಎಂದು ರವಿ ಅವರು ಸರ್ಕಾರಕ್ಕೆ ಹೇಳಿದ್ದಾರೆ.

'ಯುಜಿಸಿ ಅಧ್ಯಕ್ಷರು ನಾಮನಿರ್ದೇಶನ ಮಾಡುವ ವ್ಯಕ್ತಿಯನ್ನು ಈ ವಿಶ್ವವಿದ್ಯಾಲಯಗಳಿಗಾಗಿ ರಚಿಸುವ ಶೋಧ ಸಮಿತಿಯಲ್ಲಿ ಸೇರಿಸಬೇಕಿರುವುದು ಕಡ್ಡಾಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕುಲಾಧಿಪತಿಯವರು ಸಂವಿಧಾನ ಮತ್ತು ಕಾನೂನಿನ ವ್ಯಾಪ್ತಿಯಲ್ಲಿ ಶೋಧ ಸಮಿತಿಯನ್ನು ರಚಿಸಿದ್ದಾರೆ. ಕುಲಪತಿಯ ನೇಮಕವು ನ್ಯಾಯಸಮ್ಮತವಾಗಿ, ನಿಷ್ಪಕ್ಷಪಾತಿಯಾಗಿ ಇರಬೇಕು ಎಂಬುದು ಇದರ ಉದ್ದೇಶ' ಎಂದು ರಾಜಭವನ ಹೇಳಿದೆ.

ಚೆನ್ನೈ: ಭಕ್ತನ ಕೋರಿಕೆ ತಿರಸ್ಕರಿಸಿದ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ

ಹುಂಡಿಗೆ ಬಿದ್ದ ಐಫೋನ್: ಕಾಣಿಕೆ ಎಂದ ಸಚಿವ



ಚೆನ್ನೈ (ಪಿಟಿಐ): ಭಕ್ತನೊಬ್ಬ ಇಲ್ಲಿನ ದೇವಸ್ಥಾನವೊಂದರ ಹುಂಡಿಗೆ ಆಕಸ್ಮಿಕವಾಗಿ ತನ್ನ ಐಫೋನ್ ಬೀಳಿಸಿಕೊಂಡಿದ್ದು, ಈಗ ಅದು ಆತನಿಗೆ ಮರಳಿ ಸಿಗದಂತಾಗಿದೆ. ಭಕ್ತ ಐಫೋನ್ ಮರಳಿಸುವಂತೆ ಇಟ್ಟಿರುವ ಕೋರಿಕೆಯನ್ನು ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯು ನಯವಾಗಿ ತಿರಸ್ಕರಿಸಿದೆ. ಅದು ಈಗ ದೇವಾಲಯದ ಸ್ವತ್ತು ಎಂದು ಪ್ರತಿಪಾದಿಸಿದೆ.

ಅಂದಹಾಗೆ, ಈ ಘಟನೆ ನಡೆದಿರುವುದು ಚೆನ್ನೈ ಸಮೀಪದ ತಿರುಪೋರೂರಿನ ಅರುಲ್ಮಿಗು ಕಂದಸ್ವಾಮಿ ದೇವಸ್ಥಾನದಲ್ಲಿ.

ಕುಟುಂಬದೊಂದಿಗೆ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಭಕ್ತ ದಿನೇಶ್ ಎಂಬಾತ, ದೇವರ ಹುಂಡಿಗೆ ಕಾಣಿಕೆ ಅರ್ಪಿಸಲು ಅಂಗಿಯ ಜೇಬಿನಿಂದ ಹಣ ತೆಗೆದಾಗ ಐಫೋನ್ ಕೂಡ ಆಕಸ್ಮಿಕವಾಗಿ ಜಾರಿ ಹುಂಡಿಯೊಳಗೆ ಬಿದ್ದಿದೆ. ತಕ್ಷಣ ಎಚ್ಚೆತ್ತುಕೊಂಡ ದಿನೇಶ್, ದೇವಸ್ಥಾನದ ಅಧಿಕಾರಿಗಳನ್ನು ಸಂಪರ್ಕಿಸಿ, ಮೊಬೈಲ್ ಹಿಂದಿರುಗಿಸುವಂತೆ ಕೋರಿಕೊಂಡಿದ್ದಾನೆ. ಆಡಳಿತ ಮಂಡಳಿಯವರು ಶುಕ್ರವಾರ ಹುಂಡಿ ತೆರೆದಾಗ ಮೊಬೈಲ್ ಪತ್ತೆ ಆಗಿದೆ. ಆದರೆ, ಮೊಬೈಲ್ ಈಗ ದೇವರಿಗೆ ಅರ್ಪಿಸಿರುವ ಕಾಣಿಕೆ ಆಗಿರುವುದರಿಂದ ಮೊಬೈಲ್ ಹಿಂದಿರುಗಿಸಲಾಗದು. ಮೊಬೈಲ್‌ನಲ್ಲಿರುವ ದತ್ತಾಂಶ ಮತ್ತು ಸಿಮ್ ಕಾರ್ಡ್ ಮಾತ್ರ ಹಿಂಪಡೆಯಬಹುದು ಎಂದು ಹೇಳಿದ್ದಾರೆ. ಆದರೆ, ಇದಕ್ಕೆ ಒಪ್ಪದ ದಿನೇಶ್, ಮೊಬೈಲ್ ಫೋನ್ ಹಿಂತಿರುಗಿಸುವಂತೆ ಒತ್ತಾಯಿಸಿದ್ದಾರೆ.

ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಪ್ರತಿಕ್ರಿಯಿಸಿರುವ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಸಚಿವ ಪಿ.ಕೆ. ಶೇಖರ್ ಬಾಬು, 'ದೇವರ ಹುಂಡಿಗೆ ಹಾಕಿದ ಯಾವುದೇ ವಸ್ತು ದೇವರಿಗೆ ಸೇರಿದ್ದಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ದೇವಾಲಯಗಳಲ್ಲಿನ ಆಚರಣೆಗಳು ಮತ್ತು ಸಂಪ್ರದಾಯಗಳ ಪ್ರಕಾರ, ಹುಂಡಿಯಲ್ಲಿ ಅರ್ಪಿಸಿದ ಯಾವುದೇ ಕಾಣಿಕೆಯು ನೇರವಾಗಿ ಆ ದೇವಾಲಯದ ದೇವರ ಖಾತೆಗೆ ಸಲ್ಲುತ್ತದೆ. ಭಕ್ತರಿಗೆ ಕಾಣಿಕೆಯನ್ನು ವಾಪಸ್ ನೀಡಲು ಆಡಳಿತ ಮಂಡಳಿಗೆ ನಿಯಮಗಳಲ್ಲಿ ಅವಕಾಶವಿಲ್ಲ' ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಭಕ್ತನಿಗೆ ಪರಿಹಾರ ನೀಡಲು ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಸಚಿವರು ತಿಳಿಸಿದರು.

ರಾಜ್ಯದಲ್ಲಿ ಇಂತಹ ಘಟನೆ ನಡೆದಿರುವುದು ಇದೇ ಮೊದಲಲ್ಲ. ಪಳನಿಯ ಶ್ರೀ ಧಂಡಾಯುದಪಾಣಿ ಸ್ವಾಮಿ ದೇಗುಲದಲ್ಲಿ 2023ರ ಮೇನಲ್ಲಿ ಭಕ್ತೆ ಎಸ್. ಸಂಗೀತ ಎಂಬವರು ತಮ್ಮ ಚಿನ್ನದ ಸರವನ್ನು ಆಕಸ್ಮಿಕವಾಗಿ ಹುಂಡಿಗೆ ಬೀಳಿಸಿಕೊಂಡಿದ್ದರು. ಅವರು ದೇವರಿಗೆ ನೈವೇದ್ಯ ಮಾಡಲು, ಕೊರಳಿನಲ್ಲಿದ್ದ ತುಳಸಿ ಮಾಲೆ ತೆಗೆದಾಗ ಚಿನ್ನದ ಸರ ಜಾರಿ ಹುಂಡಿಗೆ ಬಿದ್ದಿತ್ತು. ಇದನ್ನು ಸಿಸಿಟಿವಿ ದೃಶ್ಯಾವಳಿಗಳಿಂದ ಖಚಿತಪಡಿಸಿಕೊಂಡ ನಂತರ, ಆಕೆಯ ಆರ್ಥಿಕ ಪರಿಸ್ಥಿತಿ ಪರಿಗಣಿಸಿ, ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರು ತಮ್ಮ ಸ್ವಂತ ವೆಚ್ಚದಲ್ಲಿ ಅಷ್ಟೇ ಮೌಲ್ಯದ ಹೊಸ ಚಿನ್ನದ ಸರ ಖರೀದಿಸಿ ನೀಡಿದ್ದರು ಎಂದು ಧಾರ್ಮಿಕ ದತ್ತಿ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

1975 ರ ಹುಂಡಿ ನಿಯಮಗಳು, ಸುರಕ್ಷತೆ ಮತ್ತು ಲೆಕ್ಕಪತ್ರದ ಪ್ರಕಾರ, ದೇವಾಲಯಕ್ಕೆ ಸೇರಿದ ಯಾವುದೇ ಕಾಣಿಕೆಗಳನ್ನು ಯಾವುದೇ ಸಮಯದಲ್ಲಿ ಅದನ್ನು ಅರ್ಪಿಸಿದವರಿಗೆ ಹಿಂತಿರುಗಿಸಲು ಅವಕಾಶವಿಲ್ಲ ಎಂದು ಅಧಿಕಾರಿ ವಿವರಿಸಿದರು.

ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದಿ ಅರಬ್ಬೀ ಸಮುದ್ರ ಸೇರುವ ಅಳಿವೆಗೆ ರಾಮ್‌ಸಾರ್ ತಾಣ ಎಂಬ ಜಾಗತಿಕ ಮನ್ನಣೆ ದೊರೆತಿದೆ. ಇದು ಜೀವವೈವಿಧ್ಯದ ದೃಷ್ಟಿಯಿಂದ ತುಂಬಾ ಮಹತ್ವದ್ದು. ಹಾಗೆಯೇ ಕರ್ನಾಟಕದಲ್ಲಿ ಇಂಥ ಮನ್ನಣೆಗೆ ಪಾತ್ರವಾಗುವಂತಹ ತಾಣಗಳು ಇನ್ನೂ ಇವೆ.

ಅಘನಾಶಿನಿಗೆ ರಾಮ್‌ಸಾರ್ ಕಿರೀಟ


ಅಘನಾಶಿನಿ ಹಿನ್ನೀರು ಗಝನಿಯಲ್ಲಿ ಸಿಗುವ ಕಗಳಸಿ ಮೀನು
ಚಿತ್ರ : ಎಂ ಜಿ ನಾಯ್ಕ

ನಾಗೇಶ ಹೆಗಡೆ/ಎಂ.ಜಿ. ನಾಯ್ಕ

ಅಘನಾಶಿನಿ ನದಿಯ ವಿಶೇಷ ಏನು ಗೊತ್ತೆ? ಅದು ನಮ್ಮ ನಾಡಿನ ಅತ್ಯಂತ ಪರಿಶುದ್ಧ ನದಿ. ಅದಕ್ಕೆ ಯಾವುದೇ ಕಾರ್ಖಾನೆಯ ಕೊಳಚೆ ಸೇರುವುದಿಲ್ಲ. ಯಾವ ನಗರದ ಕೊಳಚೆ ವಸ್ತು ಸೇರುವುದಿಲ್ಲ. ಯಾವುದೇ ಅಣೆಕಟ್ಟಿನ ಅಡೆತಡೆ ಕೂಡ ಅದಕ್ಕಿಲ್ಲ. ತನ್ನ 115 ಕಿಲೊಮೀಟರ್ ಉದ್ದಕ್ಕೂ ಪಾವಿತ್ರ್ಯವನ್ನು ಉಳಿಸಿಕೊಂಡ ಏಕೈಕ ನದಿ ಇದು. 'ಅಘ' ಎಂದರೆ 'ಪಾಪ ನಾಶ ಮಾಡುವ ನದಿ' ಎಂಬ ಹೆಸರಿದ್ದರೂ ಆಧುನಿಕ ಬದುಕಿನ ಯಾವ ಪಾಪವೂ ಇದಕ್ಕೆ ಸೇರುತ್ತಿಲ್ಲ!.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಶಂಕರ ಹೊಂಡ ಮತ್ತು ಮಂಜಗುಣಿಯಲ್ಲಿ ಉಗಮವಾಗಿ ಉಂಚಳ್ಳಿಯಲ್ಲಿ ಸುಂದರ ಜಲಪಾತವನ್ನು ಸೃಷ್ಟಿಸಿ ಈ ನದಿ ಮುಂದೆ ಸಮುದ್ರವನ್ನು ಸೇರುವ ಭಾಗದ ಅಳಿವೆಗೆ ಈಗ 'ರಾಮ್‌ಸಾರ್ ತಾಣ' ಎಂಬ ಜಾಗತಿಕ ಮಾನ್ಯತೆ ಸಿಕ್ಕಿದೆ.

ಅರಬ್ಬೀ ಸಮುದ್ರದ ಉಪ್ಪು ನೀರು ಮತ್ತು ಅಘನಾಶಿನಿಯ ಸಿಹಿನೀರು ಒಂದೆಡೆ ಸೇರುವ ಈ ಸಂಗಮದಲ್ಲಿ ಒಂದು ವಿಶಿಷ್ಟ ಜೀವಲೋಕ ಅನಾದಿ ಕಾಲದಿಂದಲೂ ವಿಕಾಸವಾಗಿದೆ. ಮೊದಲನೆಯದಾಗಿ ಪಶ್ಚಿಮ ಘಟ್ಟದಿಂದ ನಮ್ಮ ಕರಾವಳಿಗೆ ಹರಿದು ಬರುವ ಕಾಳಿ, ಗಂಗಾವಳಿ, ಶರಾವತಿ, ನೇತ್ರಾವತಿ ಈ ಯಾವುದಕ್ಕೂ ಇಲ್ಲದಷ್ಟು ವಿಶಾಲ ಹಿನ್ನೀರಿನ ಪ್ರದೇಶ ಅಘನಾಶಿನಿಗೆ ಇದೆ. ಅದರ ವಿಸ್ತಾರ 48 ಚದರ ಕಿಲೊಮೀಟರ್ -ಅಂದರೆ 4800 ಹೆಕ್ಟೇರ್.

ಜಗತ್ತಿನ ಜೌಗು ಪ್ರದೇಶಗಳನ್ನು ಸಂರಕ್ಷಿಸಿ ಅಲ್ಲಿಯ ಪಕ್ಷಿ, ಪ್ರಾಣಿ, ಜಲಚರ ಸಂತತಿ ವೃದ್ಧಿಗೆ ಅನುಕೂಲ ಕಲ್ಪಿಸುವ ಬಗ್ಗೆ ಯುನೆಸ್ಕೋ ನೇತೃತ್ವದಲ್ಲಿ ಜಗತ್ತಿನ 172 ದೇಶಗಳ ಒಪ್ಪಂದ ಏರ್ಪಟ್ಟಿತು. ಒಂದು ಪ್ರದೇಶ 'ರಾಮ್‌ಸಾರ್' ಗುರುತು (ಸರ್ಟಿಫಿಕೇಟ್) ಪಡೆಯಲು ಅದರದೇ ಆದ ಮಾನದಂಡಗಳಿವೆ. ಎಷ್ಟು ಜೀವಿಗಳಿರಬೇಕು, ಎಷ್ಟು ನೀರಿರಬೇಕು, ಬೇಟೆಯ ನಿರ್ಬಂಧ ಮತ್ತು ಮಾಲಿನ್ಯ ನಿಯಂತ್ರಣ ಹೇಗಿರಬೇಕು ಇತ್ಯಾದಿ. ವಿಶೇಷವೆಂದರೆ ಅಘನಾಶಿನಿ ಆ ಎಲ್ಲ ಮಾನದಂಡಗಳನ್ನು ಸುಲಭವಾಗಿ ಪೂರೈಸಿ ರಾಮ್‌ಸಾರ್ ಗುರುತು ಪಡೆದ ರಾಜ್ಯದ ಏಕೈಕ ಕರಾವಳಿ ನದಿಯಾಗಿದೆ.

ಪಶ್ಚಿಮ ಘಟ್ಟಗಳಿಂದ ಸಮೃದ್ಧ ಪೋಷಕಾಂಶಗಳನ್ನು ಸಾಗಿಸಿ ತರುವ ಅಘನಾಶಿನಿ ಇಲ್ಲಿ ಸಮುದ್ರ ಸೇರುವ ಮುನ್ನ 13 ಪ್ರಭೇದಗಳಿಗೆ ಸೇರಿದ ಕಾಂಡ್ಲಾ ಕಾಡುಗಳನ್ನು ನಿರ್ಮಿಸಿಕೊಂಡಿದೆ. ನೀರಿನಲ್ಲಿ ಅರೆಬರೆ ಮುಳುಗಿರುವ ಈ ಪೊದೆಗಳು ಸುಮಾರು 45 ಜಾತಿಯ ಪಕ್ಷಿಗಳ ಕಾಯಂ ಆವಾಸ ಸ್ಥಾನವಾಗಿವೆ. ಅದರ ಹೊರತಾಗಿ ಸೈಬೇರಿಯಾ, ಅಂಟಾರ್ಕ್ಟಿಕ್, ಆರ್ಕ್ಟಿಕ್, ಯುರೋಪ್ ದೇಶಗಳಿಂದ ಸುಮಾರು 120 ಬಗೆಯ ವಲಸೆ ಪಕ್ಷಿಗಳು ಪ್ರತೀ ವರ್ಷ ಬರುತ್ತವೆ. ರಾಮ್‌ಸಾರ್ ಮಾನ್ಯತೆ ಸಿಗಲು ಒಂದು ಜೌಗು ಪ್ರದೇಶಕ್ಕೆ 20 ಸಾವಿರ ಪಕ್ಷಿಗಳು ಬರಬೇಕು ಎಂಬ ಮಾನದಂಡವಿದೆ. ಆದರೆ ಅಘನಾಶಿನಿ ಹಿನ್ನೀರು ಪ್ರದೇಶಕ್ಕೆ ಪ್ರತೀ ವರ್ಷ ಸುಮಾರು 45 ಸಾವಿರ ಪಕ್ಷಿಗಳು ಬರುತ್ತವೆ.


ಅಘನಾಶಿನಿ ನದಿ ಸಮುದ್ರ ಸೇರುವ ಸ್ಥಳ ಡ್ರೋನ್
ಚಿತ್ರಗಳು:ಯೋಗೇಶ್ ಮಡಿವಾಳ


ಅಳಿವೆಯಲ್ಲಿ ದೊರೆಯುವ ಅಡ್ಡ ಬೆಳಚು

ವಲಸೆ ಹಕ್ಕಿಗಳ ಸ್ವರ್ಗ...

ಇಷ್ಟೆಲ್ಲ ಪಕ್ಷಿಗಳು ಇಲ್ಲಿಗೆ ಬರಲು ಕಾರಣವಿಷ್ಟೆ: ಸಮುದ್ರದಿಂದ ನಾನಾ ಬಗೆಯ ಏಡಿ, ಸೀಗಡಿ, ಮೀನುಗಳು ಇಲ್ಲಿಗೆ ವಲಸೆ ಬಂದು ಕಾಂಡ್ಲಾ ಕಾಡಿನ ಬೇರು ಬೊಗಟೆಗಳ ನಡುವಣ ಕೆಸರಿನಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಉತ್ತರ ಕನ್ನಡ ಜಿಲ್ಲಾ ನಾಡ ದೋಣಿ ಹಾಗೂ ಸಂಪ್ರದಾಯಿಕ ಮೀನುಗಾರರ ಸಂಘದ ಅಧ್ಯಕ್ಷ ಸದಾನಂದ ಹರಿಕಂತ್ರ ಅವರನ್ನು ಕೇಳಿದರೆ ಅವುಗಳ ಉದ್ದ ಪಟ್ಟಿಯನ್ನೇ ಹೀಗೆ ಕೊಡುತ್ತಾರೆ: ನುಕ್ಕೇಸಡಿ, ಕಲ್ಲೆಸಡಿ, ಜಾಲಿ, ಹೋಂಟ, ಬಿಳಿ ಶೆಟ್ಲಿ, ಕಾಯಿ ಶೆಟ್ಲಿ, ಕೆಂಪು ಶೆಟ್ಲಿ, ಕೋಳೆ ಶೆಟ್ಲಿ, ವಿವಿಧ ಮೀನುಗಳಾದ ತರ್ಕೆ (ಗಿಟಾರ್ ಫಿಶ್) ಕುರಡೆ, ಕೆಂಸ, ಮಡ್ಲೆ, ಕಾಂಡಿ, ಹಾಲು ಕೊಕ್ಕರ, ಹಾಲು ಗುರಕಾ, ಮುಳ್ಳು ಗುರಕ, ನೋಗಲಾ, ಬೈಗೆ, ಹೂವಿನ ಸೆಳಕಾ, ಮುಳ್ಳು ಸೆಳಕಾ, ಒಡತಿ, ನೆಪ್ಪೆ, ಕಾಗಳಸಿ, ಒಣ ಕಾಂಡಿ...


ಅಲ್ಲಿನ ಉಪ್ಪು-ಸಿಹಿನೀರಿನಲ್ಲಿ ಹಗಲೂ ರಾತ್ರಿ ಅಳಿವು-ಉಳಿವಿನ ನಾಟಕ ನಡೆಯುತ್ತಿರುತ್ತದೆ. ಜಾಳಿಗೆಯಂತೆ ಒತ್ತೊತ್ತಾದ ಕಾಂಡ್ಲಾ ಬೇರುಗಳ ನಡುವೆ ಮೀನು, ಏಡಿ, ಸೀಗಡಿಗಳು ಅವಿತಿರುತ್ತವೆ. ಅವನ್ನು ಹೊಂಚು ಹಾಕಿ ಬೇಟೆಯಾಡಲೆಂದು ಪಕ್ಷಿಗಳು, ನೀರಹಾವುಗಳು ಮತ್ತು ಮನುಷ್ಯರು ಬರುತ್ತಿರುತ್ತಾರೆ. ಅವುಗಳಿಂದ ತಪ್ಪಿಸಿಕೊಂಡು ಕೆಸರಿನೊಳಕ್ಕೋ ಬೇರುಗಳ ನಡುವೆಯೊ ಜಲಚರಗಳು ಮರೆಯಾಗುತ್ತವೆ. ಅದೇ ವೇಳೆಗೆ ಕಾಂಡ್ಲಾ ಗಿಡಗಳ ಮೇಲೆ ಕೂತ ಪಕ್ಷಿಗಳು ನೀರಿಗೆ ಹಿಕ್ಕೆ ಹಾಕುತ್ತವೆ. ಅದನ್ನು ತಿನ್ನಲೆಂದು ಮೀನು, ಏಡಿಗಳು ಧಾವಿಸುತ್ತವೆ. ಬೇಟೆಗೆ ಬಂದವರಿಗೆ ಅವು ಸಿಕ್ಕಿಬೀಳುತ್ತವೆ. ಸಿಗದೇ ಬದುಕುಳಿದ ಜೀವಿಗಳು ಬೆಳೆದು ಸಮುದ್ರಕ್ಕೆ ಹೋಗುತ್ತವೆ. ಋತು ಬದಲಾದಾಗ ಮತ್ತೆ ಮೊಟ್ಟೆ ಇಡಲೆಂದು ಮರಳಿ ಬರುತ್ತವೆ.

ಅಘನಾಶಿನಿಯ ಇನ್ನೊಂದು ವಿಶೇಷ ಏನೆಂದರೆ ಇಲ್ಲಿನ ಉಬ್ಬರ ಇಳಿತಗಳ ನಡುವಣ ಕೆಸರು ಭೂಮಿಯಲ್ಲಿ 'ಗಝನಿ' ಭತ್ತವನ್ನು ರೈತರು ಬೆಳೆಯುತ್ತಾರೆ. ಬೆಳೆಯುತ್ತಾರೆ ಎಂದರೆ ಮತ್ತೇನಲ್ಲ; ಭತ್ತವನ್ನು ಚೆಲ್ಲಿ ಹೋಗುತ್ತಾರೆ. ಪೈರು ಬೆಳೆದಾಗ ದೋಣಿಯಲ್ಲಿ ಬಂದು ಕೊಯ್ಲು ಮಾಡಿಕೊಂಡು ಹೋಗುತ್ತಾರೆ. ದಿನಕ್ಕೆರಡು ಬಾರಿ ಉಬ್ಬರ ಬಂದಾಗ ಮೀನು ಸೀಗಡಿಗಳೂ ಅಲ್ಲಿಗೆ ತೇವಳಿ ಬರುತ್ತವೆ. ಭತ್ತದ ಪೈರುಗಳ ನಡುವೆಯೇ ರೈತರಿಗೆ ನಸೀಬಿದ್ದಾಗ ಅಪರೂಪದ ಮೀನುಗಳೂ ಸಿಗುತ್ತವೆ. ರಾಣಿ ಮೀನು, ಗೊಬ್ಬರ ಮೀನು, ಪೇಡಿ, ಇಶೋಣ, ದೆಣಸಿ, ಪಾಂಫ್ರೆಟ್, ಬೆಳ್ಳಂಜಿ, ಬಣಗು-ಹೀಗೆ ಅವುಗಳ ಹೆಸರುಗಳನ್ನು ಹೇಳುತ್ತ, ಮೀನಿನ ರುಚಿ ಕಂಡ ಪ್ರವಾಸಿಗರ ಬಾಯಲ್ಲಿ ನೀರೂರಿಸುತ್ತ ಮೀನುಗಾರ ರೈತ ಮಹಿಳೆಯರು ಬುಟ್ಟಿ ಹಿಡಿದು ಅಘನಾಶಿನಿ, ಕುಮಟಾ ಸಂತೆಯಲ್ಲಿ ಸಂಭ್ರಮಿಸುವುದನ್ನು ನೋಡುವುದೇ ಒಂದು ಸೊಗಸು.

12ನೇ ಪುಟಕ್ಕೆ...

'ರಾಮ್‌ಸಾರ್ ಮಾನ್ಯತೆ' ಎಂದರೇನು?

ಜಗತ್ತಿನ ಒದ್ದೆ ಭೂಮಿಗಳ ಜೀವಲೋಕವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಇರಾನಿನ ರಾಮ್‌ಸಾರ್ ಸರೋವರದ ದಡದಲ್ಲಿ 1971ರಲ್ಲಿ ಅಂತರರಾಷ್ಟ್ರೀಯ ಸಮಾವೇಶ ನಡೆಯಿತು. ಜೀವಿವೈವಿಧ್ಯದ ದೃಷ್ಟಿಯಿಂದ ಅತಿ ಮಹತ್ವದ ಕೆರೆ, ಸರೋವರ, ಜಲಾಶಯ, ಅಳಿವೆಗಳು ಯಾವುದೇ ದೇಶದಲ್ಲಿದ್ದರೂ ಅವನ್ನು ಗುರುತಿಸಿ ಅಂಥವಕ್ಕೆ 'ರಾಮ್‌ಸಾರ್ ತಾಣ' ಹೆಸರಿನಲ್ಲೇ ಅಂತರರಾಷ್ಟ್ರೀಯ ಮಾನ್ಯತೆ, ಗೌರವ ಮತ್ತು ಭದ್ರತೆ ನೀಡಬೇಕೆಂದು ಅಲ್ಲಿ ನಿರ್ಧರಿಸಲಾಯಿತು. ಹಾಗೆ ಗುರುತಿಸಲೆಂದೇ ತಜ್ಞರ ಸಮಿತಿಯೊಂದಿದ್ದು ಅದು ಕಟ್ಟುನಿಟ್ಟಿನ ಮಾನದಂಡಗಳನ್ನು ಅನುಸರಿಸುತ್ತದೆ. ಇಂಗ್ಲೆಂಡಿನಂಥ ಪುಟ್ಟ ದೇಶದ 175 ಜಲಧಾಮಗಳು ಅಂಥ ಮಾನ್ಯತೆ ಪಡೆದಿವೆ. ಮೆಕ್ಸಿಕೊದಲ್ಲಿ 142 ಇದ್ದರೆ ಭಾರತದಲ್ಲಿ 2014ರವರೆಗೆ ಕೇವಲ 26 ರಾಮ್‌ಸಾರ್ ತಾಣಗಳಿದ್ದವು. ಅರಣ್ಯ ಇಲಾಖೆ, ಕಂದಾಯ ಇಲಾಖೆಯ ಜಡ ಕಡತಗಳಿಗೆ ಚಾಲನೆ ನೀಡುವುದೇ ನಮ್ಮ ದೇಶದ ವನ್ಯಪ್ರೇಮಿಗಳಿಗೆ ಸವಾಲಾಗಿತ್ತು. ಅಂತೂ ಹಠ ತೊಟ್ಟು, ಸ್ವಾತಂತ್ರ್ಯ ಗಳಿಸಿದ 75ನೇ ವರ್ಷಕ್ಕೆ 75 ತಾಣಗಳಿಗೆ ಮಾನ್ಯತೆ ದೊರಕಿಸಲೇಬೇಕೆಂದು ನಿಶ್ಚಯಿಸಿದ್ದರಿಂದ ಕಳೆದ ನಾಲ್ಕಾರು ವರ್ಷಗಳಲ್ಲಿ 59 ಜಲಧಾಮಗಳಿಗೆ ಆ ಮಾನ್ಯತೆ ಸಿಕ್ಕಿದೆ. ತಮಿಳುನಾಡಿನಲ್ಲಿ ಎಲ್ಲಕ್ಕಿಂತ ಹೆಚ್ಚು 18 ತಾಣಗಳಿವೆ. ನಮ್ಮಲ್ಲಿ ಒಂದೇ ಇತ್ತು, ಈ ವರ್ಷ ನಾಲ್ಕಕ್ಕೇರಿದೆ.


ಅಘನಾಶಿನಿ ಅಳಿವೆಯಲ್ಲಿರುವ ಕಾಂಡ್ಲಾ ಕಾಡು

ಶಿಕ್ಷಕಿಯೂ... ಶಾಲಾ ವಾಹನ ಚಾಲಕಿಯೂ...!


ಜಲಜಾಕ್ಷಿ ಕೆ.ಡಿ.

ಮಕ್ಕಳು ಶಾಲೆಗೆ ಬರಲು ಸಾರಿಗೆಯದ್ದೇ ತೊಂದರೆ ಎನ್ನುವುದನ್ನು ಅರಿತ ಎಸ್‌ಡಿಎಂಸಿ, ವಾಹನವನ್ನು ಖರೀದಿಸಿತು. ಶಾಲಾ ಶಿಕ್ಷಕಿ ಜಲಜಾಕ್ಷಿ ಸಾರಥಿಯಾದರು. ಮಕ್ಕಳ ಸಂಖ್ಯೆಯೂ ಹೆಚ್ಚಿತು. ಸರ್ಕಾರಿ ಶಾಲೆಯೊಂದರ ಸಹಭಾಗಿತ್ವದ ಯಶಸ್ವಿ ಕಥೆ ಇದು.

ಗಣೇಶ ಚಂದನಶಿವ

ಆಗ ಸಮಯ ಬೆಳಿಗ್ಗೆ ಎಂಟೂವರೆ. ಜಲಜಾಕ್ಷಿ ಟೀಚರ್ ಶಾಲಾ ವಾಹನವನ್ನು ಚಾಲನೆ ಮಾಡುತ್ತಾ ಸುಳ್ಯದಿಂದ ಸ್ವಲ್ಪ ಮುಂದೆ ಬಂದರು. ಅಲ್ಲಿ ರಸ್ತೆ ಬದಿಯಲ್ಲಿ ನಿಂತಿದ್ದ ಮಕ್ಕಳು 'ಗುಡ್ ಮಾರ್ನಿಂಗ್ ಟೀಚರ್' ಎನ್ನುತ್ತಾ ವಾಹನ ಏರಿ ಕುಳಿತರು. ಮಾರ್ಗಮಧ್ಯೆ ಮತ್ತೆ ಹೀಗೆ ನಾಲ್ಕು ಕಡೆ ನಿಲುಗಡೆ ಇತ್ತು. ಮಕ್ಕಳಿಂದ ಭರ್ತಿಯಾದ ಆ ವಾಹನ ತಲುಪಿದ್ದು ಕೋಲ್ಚಾರು ಸರ್ಕಾರಿ ಶಾಲೆಗೆ.

'ಅಕ್ಷರ ವಾಹಿನಿ' ಹೆಸರಿನ ಈ ವಾಹನಕ್ಕೆ ಜಲಜಾಕ್ಷಿ ಅವರೇ ಚಾಲಕಿ. ಮಕ್ಕಳ ಸಂಖ್ಯೆ ಹೆಚ್ಚಿಸಲು ಎಸ್‌ಡಿಎಂಸಿ ಈ ವಾಹನ ಖರೀದಿಸಿದ್ದರೆ, ಪಾಠದ ಜೊತೆಗೆ ವಾಹನ ಚಾಲನೆ ಮತ್ತು ನಿರ್ವಹಣೆಯ ಹೊಣೆ ಹೊತ್ತಿದ್ದಾರೆ ಈ ಶಿಕ್ಷಕಿ.

ಕೋಲ್ಚಾರು, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಕೇಂದ್ರದಿಂದ 12 ಕಿ.ಮೀ. ದೂರದಲ್ಲಿ, ಕೇರಳದ ಗಡಿಯಲ್ಲಿ ಕಾನನದ ಮಧ್ಯೆ ಇದೆ. ಇಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯು 6.20 ಎಕರೆಯಲ್ಲಿ ಹರಡಿಕೊಂಡಿದೆ. 1.50 ಎಕರೆಯಲ್ಲಿ ಶಾಲಾ ಸಂಕೀರ್ಣ ಇದ್ದರೆ, ಉಳಿದ ಜಾಗದಲ್ಲಿ ಶಾಲೆಯ ಆದಾಯಕ್ಕಾಗಿ 250 ಗೇರುಮರ ಬೆಳೆಸಲಾಗಿದೆ. ಸುಸಜ್ಜಿತ ಸಭಾಭವನ, ಮುಖ್ಯ ಶಿಕ್ಷಕರ ಕೊಠಡಿ, ಎಂಟು ಬೋಧನಾ ಕೊಠಡಿ, ಶೌಚಾಲಯ, ಎರಡು ನೀರು ಶುದ್ಧೀಕರಣ ಯಂತ್ರ... ಹೀಗೆ ಸಕಲೆಂಟು ಸೌಕರ್ಯಗಳಿಂದ ಕೂಡಿದೆ. ಜಲಜಾಕ್ಷಿ ಹಾಗೂ ಇತರೆ ಶಿಕ್ಷಕರ ಜೊತೆಗೆ ಸಮುದಾಯವೂ ಕೈಜೋಡಿಸಿದ್ದರಿಂದ ಶಾಲೆಯ ಚಹರೆಯೇ ಬದಲಾಗಿದೆ.

'99' ಮತ್ತು ಶಾಲಾ ವಾಹನ!

'ಸರ್ಕಾರಿ ಶಾಲೆ ಸ್ವಂತ ವಾಹನ ಹೊಂದಿದ್ದಾದರೂ ಹೇಗೆ' ಎಂದು ಕೇಳಿದರೆ, ಎಲ್ಲರೂ ಹೇಳುವುದು '99' ಕತೆಯನ್ನು!
ಸರ್ಕಾರಿ ಶಾಲೆಯಲ್ಲಿ ನೂರಕ್ಕಿಂತ ಕಡಿಮೆ ಮಕ್ಕಳು ಇದ್ದರೆ ಇಬ್ಬರು ಅಡುಗೆ ಸಿಬ್ಬಂದಿ ನೇಮಕಕ್ಕೆ ಮಾತ್ರ ಅವಕಾಶ ಇದೆ. ಬಿಸಿಯೂಟಕ್ಕೆ ದೊರೆಯುವ ಅನುದಾನ ₹25 ಸಾವಿರ ಮಾತ್ರ. ನೂರಕ್ಕಿಂತ ಹೆಚ್ಚು ಮಕ್ಕಳು ಇದ್ದರೆ ಮೂವರು ಅಡುಗೆಯವರನ್ನು ನೇಮಿಸಿಕೊಳ್ಳಲು ಅವಕಾಶ ಇದೆ. ₹50 ಸಾವಿರ ಅನುದಾನ ಬರುತ್ತದೆ. ಈ ಶಾಲೆಯಲ್ಲಿ 99 ಮಕ್ಕಳು ಇದ್ದರು. ಶಾಲೆಯ ಅಭಿವೃದ್ಧಿಗಾಗಿ ದಾನಿಗಳ ಬಳಿ ನೆರವು ಕೇಳಲು ಹೋದರೆ 'ನಿಮ್ಮಲ್ಲಿ ಮಕ್ಕಳು ಎಷ್ಟಿದ್ದಾರೆ' ಎಂದು ಕೇಳುತ್ತಿದ್ದರು. ಹೆಚ್ಚು ಮಕ್ಕಳಿದ್ದರೆ ನೆರವು ನೀಡಲು ಅವರಿಗೂ ಮನಸ್ಸು ಬರುತ್ತದೆ ಎಂಬ ಕಾರಣಕ್ಕಾಗಿ ತಮ್ಮ ಶಾಲೆಯ ಮಕ್ಕಳ ಸಂಖ್ಯೆಯನ್ನು ನೂರರ ಗಡಿ ದಾಟಿಸಲು ಶಾಲೆಯವರು ಪಣತೊಟ್ಟರು.

ಈ ಶಾಲೆಗೆ ಐವರು ವಿದ್ಯಾರ್ಥಿಗಳು 5 ಕಿ.ಮೀ. ದೂರದಿಂದ ಬರುತ್ತಿದ್ದರು. ಸುಳ್ಯದಿಂದ ಬೆಳಿಗ್ಗೆ ಇರುವುದು ಒಂದೇ ಬಸ್. 7.30ಕ್ಕೆ ಹೊರಡುವ ಬಸ್ 8.45ಕ್ಕೆ ಕೋಲ್ಚಾರು ತಲುಪುತ್ತದೆ. ಈ ಬಸ್‌ಗೆ ಬರಲು ಮಕ್ಕಳು 7.45ಕ್ಕೇ ಬಂದು ನಿಲ್ಲಬೇಕಿತ್ತು. ವಾಹನ ಸೌಲಭ್ಯ ಕಲ್ಪಿಸಿದರೆ ಮಕ್ಕಳ ಸಂಖ್ಯೆ ಹೆಚ್ಚಬಹುದು ಎಂಬುದನ್ನು ಶಿಕ್ಷಕರು, ಎಸ್‌ಡಿಎಂಸಿಯವರು ಮನಗಂಡರು.

ಶಾಲೆಗೆ ಬರುತ್ತಿದ್ದ ಐವರು ಮಕ್ಕಳಲ್ಲಿ ಒಬ್ಬರ ಪಾಲಕರದ್ದು ಆಟೊ ಇತ್ತು. ಬೆಳಿಗ್ಗೆ ತಮ್ಮ ಮಗುವಿನೊಂದಿಗೆ ಉಳಿದ ಮಕ್ಕಳನ್ನೂ ಕರೆದುಕೊಂಡು ಬರುತ್ತಿದ್ದರು. ಸಂಜೆ ಬಾಡಿಗೆ ಬಿಟ್ಟು ಶಾಲೆಗೆ ಬರುವುದು ಅವರಿಗೂ ಕಷ್ಟವಾಗುತ್ತಿತ್ತು. ಹೀಗಾಗಿ ಪ್ರತಿ ಮಗುವಿಗೆ ತಿಂಗಳಿಗೆ ₹1500 ಬಾಡಿಗೆ ಪಡೆಯುತ್ತಿದ್ದರು. ಆದರೆ, ಇಷ್ಟೊಂದು ಬಾಡಿಗೆ ಕೊಡುವುದು ಪಾಲಕರಿಗೆ ಹೊರೆಯಾಗಿತ್ತು. ಶಾಲೆಯಿಂದಲೇ ಕಾರು ಖರೀದಿಸಿದರೆ ಹೇಗೆ ಎಂದು ಶಿಕ್ಷಕರು, ಎಸ್‌ಡಿಎಂಸಿಯವರು ಚರ್ಚಿಸಿದರು.

ಕಾರು ಚಾಲನೆ ಗೊತ್ತಿರುವ ಎಸ್‌ಡಿಎಂಸಿ ಅಧ್ಯಕ್ಷ ಸುದರ್ಶನ ಪಾತಿಕಲ್ಲು, ಊರಿನಲ್ಲಿ ಒಬ್ಬರ ಕಾರು ಪಡೆದು ಕೆಲ ದಿನ ಮಕ್ಕಳನ್ನು ಶಾಲೆಗೆ ಕರೆತಂದು–ಮನೆಗೆ ಬಿಡಲು ಆರಂಭಿಸಿದರು. ವಾಹನ ಸೌಲಭ್ಯ ಕಲ್ಪಿಸಿದರೆ ಸುತ್ತಲಿನ ಮಕ್ಕಳಿಗೆ ಅನುಕೂಲವಾಗುತ್ತದೆ ಎಂಬುದು ಖಚಿತವಾದಾಗ, ಎಸ್‌ಡಿಎಂಸಿಯವರೇ ವಾಹನ ಖರೀದಿಸಿದರು. ಆ ವಾಹನಕ್ಕೆ ಸಾರಥಿಯಾಗಿದ್ದು ಜಲಜಾಕ್ಷಿ ಟೀಚರ್.

ಚಾಲಕಿ ಕಂ ಶಿಕ್ಷಕಿಯ ಪಾತ್ರ ನಿರ್ವಹಣೆ ಬಗ್ಗೆ ಜಲಜಾಕ್ಷಿ ಹೇಳುವುದು ಹೀಗೆ... 'ನನಗೆ ಕಾರು ಚಾಲನೆ ಗೊತ್ತಿತ್ತು. ಶಾಲೆಗೆ ವ್ಯಾನ್ ಖರೀದಿಸಿದರೆ ನಾನೇ ಚಾಲನೆ ಮಾಡುತ್ತೇನೆ ಎಂದು ಹೇಳಿದೆ. ನಂತರ ಎಸ್‌ಡಿಎಂಸಿಯವರು ಮನಸು ಮಾಡಿದರು.

12ನೇ ಪುಟಕ್ಕೆ...


ಜಲಜಾಕ್ಷಿಯವರೇ ಈ ಮಕ್ಕಳ ಸಾರಥಿಯೂ ಶಿಕ್ಷಕಿಯೂ...
ಚಿತ್ರಗಳು : ಫಕ್ರುದ್ದೀನ್ ಎಚ್

ಸುಸಜ್ಜಿತ ಸಭಾಭವನ

ಸರ್ಕಾರದ ಅನುದಾನದ ಜೊತೆಗೆ ದಾನಿಗಳ ನೆರವು ಪಡೆದು ₹15 ಲಕ್ಷ ವೆಚ್ಚದಲ್ಲಿ ಸಭಾಭವನ ನಿರ್ಮಿಸಲಾಗಿದೆ. ಊರಿನವರು, ಸುತ್ತಲಿನ ಶಾಲಾ–ಕಾಲೇಜು ವಿದ್ಯಾರ್ಥಿಗಳು ಶ್ರಮದಾನ ಮಾಡಿದ್ದರಿಂದ ಕಡಿಮೆ ಖರ್ಚಿನಲ್ಲಿ ಸುಂದರ ಸಭಾಭವನ ತಲೆ ಎತ್ತಿದೆ. ಸುಸಜ್ಜಿತ ಶೌಚಾಲಯ ನಿರ್ಮಿಸಲಾಗಿದೆ. ಮಂಗಳೂರು ರಿಫೈನರಿ ಮತ್ತು ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ನವರು ₹25 ಲಕ್ಷ ವೆಚ್ಚದಲ್ಲಿ ಇನ್ನೊಂದು ಕಟ್ಟಡ ನಿರ್ಮಿಸುತ್ತಿದ್ದಾರೆ. ಶಾಲೆಗೆ ಮಹಾದ್ವಾರ ನಿರ್ಮಿಸಲು ಸಿದ್ಧತೆ ನಡೆದಿದೆ.

ಕಲೆ: ಯೋಗಾನಂದ ಎಲ್.



ಈ ಶತಮಾನದ ಶಬರಿ ತುಳಸಿಗೌಡ


ಅ.ನ. ಯಲ್ಲಪ್ಪ ರೆಡ್ಡಿ

ಮೂರು ದಶಕಗಳ ಹಿಂದೆ 'ಸುಧಾ' ವಾರಪತ್ರಿಕೆಯಲ್ಲಿ ನನ್ನ ಅನುಭವ ಕಥನ 'ಹಸಿರುಹಾದಿ' ಧಾರಾವಾಹಿಯಾಗಿ ಪ್ರಕಟವಾಯಿತು. ಅದರಲ್ಲಿ 'ದೆಹಲಿಗೆ ಹೊರಟ ವನದೇವತೆ' ಎಂಬ ಬರಹವೂ ತುಳಸಿಗೌಡ ಕುರಿತಾದದ್ದು. ಅದೊಂದು ಬಗೆಯಲ್ಲಿ ಪ್ರೇರಣಾದಾಯಕವಾಗಿಯೂ ಹೊರಹೊಮ್ಮಿತು.

ನನ್ನ ಅಧೀನದಲ್ಲಿದ್ದ ಅರಣ್ಯ ಇಲಾಖೆಯ ವಿಭಾಗದಲ್ಲಿ ತುಳಸಿಗೌಡ ದಿನಗೂಲಿ ನೌಕರರಾಗಿದ್ದರು. ಅಂದು ಮಾಸ್ತಿಕಟ್ಟೆ ಅರಣ್ಯ ವಲಯದಲ್ಲಿ ಕೆಲಸ ಮಾಡುತ್ತಿದ್ದ ರೀತಿ, ಅವರಲ್ಲಿದ್ದ ವೈಜ್ಞಾನಿಕ ದೃಷ್ಟಿಕೋನ ಮತ್ತು ವೃತ್ತಿಪರ ಕಾಳಜಿ, ಸಾಧನೆಯನ್ನು ಗುರುತಿಸಿದ್ದ ನಾನು, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿಗೆ ಅವರ ಹೆಸರನ್ನು ಸೂಚಿಸಿದ್ದೆ. ವಾಸ್ತವವಾಗಿ ಅರಣ್ಯಾಧಿಕಾರಿಯಾಗಿದ್ದ ನಾನು ಆ ಪ್ರಶಸ್ತಿ ಸ್ವೀಕರಿಸಬೇಕಿತ್ತು. ಆದರೆ ತಳಮಟ್ಟದಲ್ಲಿ ಕೆಲಸ ಮಾಡುತ್ತಿರುವ ತುಳಸಿ ಅದಕ್ಕೆ ಅರ್ಹರು ಎಂಬುದನ್ನು ಗುರುತಿಸಿ ಅವರು ಅದನ್ನು ಪಡೆಯುವಂತೆ ಮಾಡಿದ್ದೆ. ಈಗ ಜೆನೆಟಿಕ್ ಎಂಡೋಮೆಂಟ್ ಕುರಿತಾದ ಕೆಲಸ ಕಾರ್ಯಗಳನ್ನು ಯಂತ್ರಗಳು ನಿರ್ವಹಿಸುತ್ತವೆ. ಆದರೆ ದಶಕಗಳ ಮೊದಲೇ ಅದನ್ನು ತುಳಸಿ ವ್ಯಕ್ತಿಗತವಾಗಿ ಮಾಡುತ್ತಿದ್ದರು ಎಂಬುದೇ ವಿಸ್ಮಯ. ಯಾವುದೇ ಮರದ ಬೀಜವನ್ನು ಕೈಯಲ್ಲಿ ಹಿಡಿದು ಅದರಲ್ಲಿರುವ ವಂಶವಾಹಿ ಅಂಶವನ್ನು ಗುರುತಿಸಬಲ್ಲವರಾಗಿದ್ದರು ಎಂಬುದು ಅಚ್ಚರಿ ಪಡುವಂತಹ ವಿಷಯ. ಅವರಲ್ಲಿದ್ದ ಸುಪ್ತ ಪ್ರತಿಭೆ ಸುಮ್ಮನೆ ದಕ್ಕಿದ್ದಲ್ಲ, ವರ್ಷಾನುಗಟ್ಟಲೆ ಕೆಲಸ ಮಾಡಿದ ನಂತರ ರೂಢಿಗತವಾಗಿ ದಕ್ಕಿದಂಥದ್ದು.

11ನೇ ಪುಟಕ್ಕೆ...

ಬೆಳಕಿನ ಹುಡುಕಾಟದಲ್ಲಿ ಪಾಯಲ್ ತಲ್ಲೀನ



'ಆಲ್ ವಿ ಇಮ್ಯಾಜಿನ್ ಅಸ್ ಲೈಟ್' ಚಿತ್ರದ ಪೋಸ್ಟರ್



ಪಾಯಲ್

ಮೂರು ದಶಕಗಳ ಬಳಿಕ ಭಾರತೀಯ ಚಿತ್ರವೊಂದು ಕಾನ್ ಚಲನಚಿತ್ರೋತ್ಸವದಲ್ಲಿ ಸ್ಪರ್ಧಿಸಿ ಗ್ರಾಂಡ್ ಪ್ರೀ ಪ್ರಶಸ್ತಿ ಗಳಿಸಿದೆ. ಭಾರತದ ನಿರ್ದೇಶಕಿಯೊಬ್ಬರ ಚಿತ್ರಕ್ಕೆ ಈ ಪ್ರಶಸ್ತಿ ಸಂದಿರುವುದು ಇದೇ ಮೊದಲು. ಮುಂಬೈನಲ್ಲಿ ದುಡಿಯುವವರ ಬದುಕನ್ನು ಕಟ್ಟಿಕೊಡುವ ಚಿತ್ರವಿದು.

ಪ್ರ

ಎ.ಎನ್.ಪ್ರಸನ್ನ

ಪಂಚದ ಚಲನಚಿತ್ರೋತ್ಸವಗಳಲ್ಲಿ ಅತ್ಯಂತ ಪ್ರಮುಖವಾದದ್ದು ಎಂದು ಪರಿಗಣಿಸಲಾದ ಕಾನ್ ಚಲನಚಿತ್ರೋತ್ಸವದಲ್ಲಿ ಭಾರತೀಯ ಚಿತ್ರಗಳು ಸ್ಪರ್ಧಿಸಿರುವುದು ಬಹಳ ಕಡಿಮೆಯೇ. 1994ರಲ್ಲಿ ಶಾಜಿ ಎನ್ ಕರುಣ್ ಅವರ 'ಸ್ವಾಹಂ' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿತ್ತಷ್ಟೆ. ಅದಾಗಿ ಮೂವತ್ತು ವರ್ಷಗಳ ನಂತರ ಭಾರತೀಯ ಚಿತ್ರವೊಂದು 22 ಪ್ರಖ್ಯಾತ ಚಲನಚಿತ್ರಗಳೊಂದಿಗೆ ಸ್ಪರ್ಧಿಸಿ ಗ್ರಾಂಡ್ ಪ್ರೀ ಪ್ರಶಸ್ತಿ ಗಳಿಸಿದೆ. ಇದು ಸಂಭ್ರಮಿಸಬೇಕಾದ ಸಂಗತಿ. ಮುಂಬೈ ಫಿಲ್ಮ್ ಇನ್ಸ್ಟಿಟ್ಯೂಟ್‌ನಲ್ಲಿ ಅಭ್ಯಸಿಸಿದ 38ರ ಹರೆಯದ ಪಾಯಲ್ ಕಪಾಡಿಯಾ ಅವರ 'ಆಲ್ ವಿ ಇಮ್ಯಾಜಿನ್ ಅಸ್ ಲೈಟ್' ಪ್ರಶಸ್ತಿಯನ್ನು ಪಡೆದಿದ್ದು ವಿಶೇಷ. ಭಾರತದ ನಿರ್ದೇಶಕಿಯೊಬ್ಬರ ಚಿತ್ರ ಪ್ರಶಸ್ತಿ ಗಳಿಸುತ್ತಿರುವುದು ಇದೇ ಮೊದಲು.

ಚಿತ್ರವು ಮುಂಬೈ ನಗರದಲ್ಲಿ ದುಡಿದು ಜೀವಿಸುವವರ ಅನಿಶ್ಚಿತ ಪರಿಸ್ಥಿತಿಯನ್ನು ತೆರೆದಿಡುತ್ತದೆ. ದೈನಂದಿನ ಚಟುವಟಿಕೆಯಲ್ಲಿ ಎದುರಿಸಬೇಕಾದ ಅಸಾಧ್ಯವೆನಿಸುವ ಸದ್ದು ಗದ್ದಲ, ಒತ್ತಡದ ಕೆಲಸ ಕಾರ್ಯಗಳ ನಿರ್ವಹಣೆ ಮುಂತಾದವನ್ನು ಚಿತ್ರದಲ್ಲಿ ಮೂಡಿಸಿದ್ದಾರೆ. ನಿರ್ದೇಶಕಿ ತಮ್ಮ ಪರಿಕಲ್ಪನೆಯನ್ನು ಮುಂಬೈನ ಆಸ್ಪತ್ರೆಯೊಂದರಲ್ಲಿ ನರ್ಸ್‌ಗಳಾದ ಹರೆಯ ಮುಗಿದ ಪ್ರಭಾ (ಕನು ಕಸ್ತೂರಿ), ಯುವತಿ ಅನು (ದಿವ್ಯ ಪ್ರಭಾ) ಮತ್ತು ಅಡುಗೆ ಮಾಡುವ ವೃದ್ಧೆ ಪಾರ್ವತಿ (ಛಾಯಾ ಕದಂ) ಎನ್ನುವ ಮೂರು ಪಾತ್ರಗಳ ಮೂಲಕ ಪ್ರಸ್ತುತಪಡಿಸುತ್ತಾರೆ.

ಪ್ರಭಾ ಮತ್ತು ಅನು ಒಟ್ಟಿಗೆ ವಾಸಿಸುತ್ತಾರೆ. ಪಾರ್ವತಿಯ ವಾಸ ಬೇರೆ ಕಡೆ. ಪ್ರಭಾಳಿಗೆ ಮದುವೆಯಾಗಿ ಬಹಳ ವರ್ಷಗಳಾಗಿ, ಗಂಡ ಬಹಳ ಹಿಂದೆಯೇ ಜರ್ಮನಿಗೆ ಕೆಲಸಕ್ಕೆ ಹೋಗುತ್ತಾನೆ. ಪ್ರಾರಂಭದಲ್ಲಿ ಸಂಪರ್ಕದಲ್ಲಿದ್ದ, ಈಗ ಅವನ ಬಗ್ಗೆ ಅವಳಿಗೇನೂ ತಿಳಿಯದು. ಪ್ರಭಾಳಿಗೆ ತಾನಿರುವ ಅವಸ್ಥೆ ಮಾನಸಿಕವಾಗಿ ವಿಪರೀತ ಹಿಂಸೆ ಕೊಡುತ್ತಿದ್ದರೂ ಅನಿವಾರ್ಯವಾಗಿ ಧಾರ್ಮಿಕ ದೃಷ್ಟಿಕೋನದಿಂದ ಒಪ್ಪಿಕೊಂಡಿರುವುದು ಅವಳ ನಡೆ, ನುಡಿಗಳಿಂದ ತಿಳಿಯುತ್ತದೆ. ಆದರೆ ಯುವತಿ ಅನು, ಪ್ರಭಾಗಿಂತ ಭಿನ್ನ. ಅವಳು ಇಸ್ಲಾಂ ಧರ್ಮದ ಶಿಯಾಬ್‌ನನ್ನು ಪ್ರೇಮಿಸುತ್ತಿರುತ್ತಾಳೆ. ಹೀಗಾಗಿಯೇ ಅವಳು ಒಂದರ್ಥದಲ್ಲಿ ಹಿತವಾದ ಮನಃಸ್ಥಿತಿಯಲ್ಲಿದ್ದರೂ, ಇನ್ನೊಂದು ಬಗೆಯ ಒತ್ತಡದಲ್ಲಿರುತ್ತಾಳೆ. ಪಾರ್ವತಿಗೆ ಬೇರೊಂದು ಸಮಸ್ಯೆ. ವಿಧವೆಯಾದ ಅವಳು ದಶಕಗಳಿಂದಲೂ ವಾಸಿಸುತ್ತಿರುವ ಸ್ಥಳ ತನ್ನದೆನ್ನುವುದಕ್ಕೆ ಬೇಕಾದ ಕಾಗದಪತ್ರಗಳು ಇರುವುದಿಲ್ಲ. ಇಂಥವರ ಬದುಕಿಗೆ ಬೆಳಕು ಒದಗುವ ಪರಿಯನ್ನು ನಿರ್ದೇಶಕಿ ಪಾಯಲ್ ಕಪಾಡಿಯ ವಿಶಿಷ್ಟವಾಗಿ ಕಟ್ಟಿಕೊಟ್ಟಿದ್ದಾರೆ.

ಚಿತ್ರದ ಆರಂಭದ ದೃಶ್ಯದಲ್ಲಿ ಮುಂಬೈ ಸಬ್‌ಅರ್ಬನ್ ಟ್ರೈನಿನ ಬಿರುಸಿನ ಓಟ, ಮಾರ್ಕೆಟ್ ಇತ್ಯಾದಿ ಪ್ರದೇಶಗಳಲ್ಲಿ ಜನರ ಅವಸರದ ಓಡಾಟ, ತಿಂಡಿ-ತಿನಿಸುಗಳ ಮತ್ತಿತರ ವಸ್ತುಗಳ ಅಂಗಡಿಗಳ ಸಾಲುಗಳು, ಮುಗಿಲೆತ್ತರದ ಕಟ್ಟಡಗಳ ತೀರದ ಸರದಿ, ಹೊತ್ತುಗೊತ್ತಿಲ್ಲದೆ ಸುರಿವ ಮಳೆ ಇತ್ಯಾದಿಗಳಲ್ಲಿ ಬದುಕೊಂದು ಭ್ರಮೆಯೋ, ವಾಸ್ತವೋ ಎನ್ನುವುದನ್ನು ಹಳದಿ ಬಣ್ಣದ ಚಿತ್ರಿಕೆಗಳನ್ನು ಮೂಡಿಸುತ್ತಾರೆ. ರಾತ್ರಿ ಮಲಗಿದ್ದ ಪ್ರಭಾ ಮಳೆ, ಗಾಳಿಯ ರಭಸಕ್ಕೆ ಪಟಪಟನೆ ಹೊಡೆದುಕೊಳ್ಳುತ್ತಿದ್ದ ಕಿಟಕಿಯನ್ನು ಶ್ರಮ ವಹಿಸಿ ಮುಚ್ಚುವ ಶಾಟ್‌ನಲ್ಲಿ ಕಾಣಬಹುದು. ಇಷ್ಟೇ ಅ ಲ್ಲದೆ ಇಡೀ ಕ್ರಿಯೆ ಅವಳ ಒತ್ತಡದ ಮಾನಸಿಕ ಸ್ಥಿತಿಗೂ ರೂಪಕವಾಗುತ್ತದೆ. ಈ ಎಲ್ಲ ದೃಶ್ಯಗಳಿಗೆ ವ್ಯತಿರಿಕ್ತವಾಗಿ ಚಿತ್ರದ ಇನ್ನೊಂದು ಭಾಗವನ್ನು ಸಮುದ್ರದ ಪಕ್ಕದಲ್ಲಿ ಮಧುರವಾದ ನಾದ ಮತ್ತು ನಿರ್ಮಲ ವಾತಾವರಣದಲ್ಲಿ ನಿರೂಪಿಸಲಾಗಿದೆ. ಮೂವರು ಕೆಲಸ ಮಾಡುವ ಆಸ್ಪತ್ರೆಯೊಳಗಿನ ಕ್ರಿಯೆ ಮುಂತಾದವುಗಳನ್ನು ಒಳಗೊಂಡಂತೆ ಪ್ರಾರಂಭದ ಭಾಗಗಳಲ್ಲಿ ನೀಲಿಬಣ್ಣವನ್ನು ಹೆಚ್ಚಾಗಿ ಕಾಣುತ್ತೇವೆ. ಅನಂತರದ ಭಾಗ ಕೆಂಪುಬಣ್ಣದಲ್ಲಿದ್ದರೆ, ಮುಂಬೈ ಗದ್ದಲದಿಂದ ದೂರಾದ ಸಮುದ್ರತೀರದ ಪ್ರದೇಶದಲ್ಲಿ ಜರಗುವ ಕೊನೆಯ ಭಾಗ ಹಸಿರಿನಿಂದ ಕೂಡಿದೆ. ಅಲ್ಲದೆ ಚಿತ್ರದ ಲಯದಲ್ಲಿ ಸಂದರ್ಭಕ್ಕೆ ತಕ್ಕ ಏರಿಳಿತಗಳಿವೆ.

ನಿರ್ದೇಶಕಿಯು ಪಾತ್ರಗಳನ್ನು ಪರಿಚಯಿಸಿದ ಕೆಲವೇ ಸಮಯದಲ್ಲಿ ಜರ್ಮನಿಯಿಂದ ಪ್ರಭಾಳಿಗೆ ಕುಕರ್ ಪಾರ್ಸೆಲ್ ಬರುತ್ತದೆ. ಸಾಕಷ್ಟು ಸಮಯದಿಂದ ಸುದ್ದಿಯೇ ಇರದ ಗಂಡ ಅದನ್ನು ಕಳುಹಿಸಿರಬಹುದೆಂದು ಅನುಮಾನಿಸಿ ಉದ್ವೇಗಕ್ಕೆ ಒಳಗಾಗುತ್ತಾಳೆ. ಇಂಥ ಸಮಯದಲ್ಲಿನ ಸಂಕೀರ್ಣ ಭಾವನೆಯನ್ನು ಪ್ರಭಾ ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಅವಳ ಬಗ್ಗೆ ಅನುರಾಗಗೊಂಡ ಡಾಕ್ಟರ್ ಮನೋಜ್ (ಅಜೀಜ್ ನೆಡುಮಾಂಗದ್) ಪರೋಕ್ಷವಾಗಿ ಒಲವನ್ನು ತಿಳಿಸಿದಾಗ ಅದನ್ನು ನಿರಾಕರಿಸುವುದರಲ್ಲಿ ವ್ಯಕ್ತವಾಗಿದೆ. ಇಂಥ ಅನೇಕ ದೃಶ್ಯಗಳಲ್ಲಿ ಎಲ್ಲ ಮುಖ್ಯ ಪಾತ್ರಗಳ ಆಂಗಿಕ ವರ್ತನೆಯಲ್ಲಿನ ಪಾಜ್ (ನಿಲುಗಡೆ) ಗೆ ಮಹತ್ವ ಕೊಟ್ಟು ನಿರ್ವಹಿಸಿರುವುದು ಚಿತ್ರದುದ್ದಕ್ಕೂ ಕಂಡುಬರುತ್ತದೆ. ಮುಂಬೈಯಲ್ಲಿ ತನ್ನ ಇರುವಿಕೆಗೆ ಸಮಸ್ಯೆಯಾದಾಗ ಸಮುದ್ರದ ತಡಿಯಲ್ಲಿನ ತಮ್ಮೂರಿಗೆ ಹಿಂದಿರುಗುವ ಪಾರ್ವತಿಯ ನಿರ್ಧಾರದಂತೆ ಅವಳೊಂದಿಗೆ ಪ್ರಭಾ ಮತ್ತು ಅನು ಕೂಡ ಹೋಗುತ್ತಾರೆ. ಅವರೆಲ್ಲ ಅಲ್ಲಿಗೆ ಹೋದಾಗ ಪ್ರಭಾ ಅವರಿರಬೇಕಾದ ಮನೆಯಲ್ಲಿನ ಸ್ವಿಚ್ ಒತ್ತಿದರೂ ಬಲ್ಬ್ ಹೊತ್ತಿಕೊಳ್ಳದೆ ಉಂಟಾಗುವ ಕತ್ತಲು ಅವರ ಸದ್ಯದ ಸ್ಥಿತಿಯನ್ನು ಬಿಂಬಿಸುತ್ತದೆ.

ತಾವು ಹೋದ ಊರಿನಲ್ಲಿ ಅನು ತನ್ನ ಪ್ರೇಮಿ ಶಿಯಾಬ್ ಜೊತೆಗಿರುವುದನ್ನು ಪ್ರಭಾ ಕಾಣುತ್ತಾಳೆ. ಅವಳು ಅದನ್ನು ತಪ್ಪು ಎಂದು ತಿಳಿಯುವುದಿಲ್ಲ. ಅಲ್ಲದೆ ಸಂತೋಷದಿಂದ ನಸುನಗುತ್ತಾಳೆ. ಅವಳು ಹೀಗೆ ಭಾವಿಸಿ ವರ್ತಿಸುವಷ್ಟು ತನ್ನನ್ನು ತಾನು ಬಲಾಯಿಸಿಕೊಂಡಿರುತ್ತಾಳೆ. ಇಡೀ ಚಿತ್ರದಲ್ಲಿ ಅವಳ ನಗುಮುಖ ಕಾಣುವುದು ಅದೊಂದೇ ಸಲ. ಆನಂತರ ಉಂಟಾಗುವ ಸದ್ದು ಗದ್ದಲದಲ್ಲಿ, ಅಲ್ಲಿನವರು ಸಮುದ್ರದಲ್ಲಿ ಮುಳುಗುತ್ತಿರುವನನ್ನು ಬಲೆ ಹಾಕಿ ಎಳೆದು ತರುವ ವ್ಯಕ್ತಿ ಸತ್ತು ಹೋಗಿರುವನೆಂದು ಭಾವಿಸುತ್ತಾರೆ. ಆದರೆ ನರ್ಸಾಗಿದ್ದ ಪ್ರಭಾ ಪ್ರಥಮ ಚಿಕಿತ್ಸೆ ನೀಡಿ ಬದುಕಿಸುತ್ತಾಳೆ. ನಡುವಯಸ್ಸು ದಾಟಿದ ಆ ವ್ಯಕ್ತಿ (ಆನಂದ ಸಾಮಿ)ಗೆ ಹಿಂದಿನ ನೆನಪುಗಳೆಲ್ಲ ಅಳಿಸಿ ಹೋಗಿರುತ್ತದೆ. ಅವನೀಗ ಹೊಸ ಜೀವನವನ್ನು ಎದುರು ನೋಡುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅವಳು ತನ್ನ ಭವಿಷ್ಯದ ಬಗ್ಗೆ ತೆಗೆದುಕೊಳ್ಳುವ ಧೈರ್ಯದ ನಡೆಗೆ ಈ ಮೊದಲು ಅನು ವಿಷಯದಲ್ಲಿ ಅವಳು ಆಂತರಿಕವಾಗಿ ಬದಲಾಗಿ ಬೆಳವಣಿಗೆಗೊಂಡದ್ದು ಹಿನ್ನೆಲೆ ಕಾರಣವಾಗುತ್ತದೆ.

ಇಡೀ ಚಿತ್ರದಲ್ಲಿ ಮಿಡ್ ಮತ್ತು ಕ್ಲೋಸ್‌ಅಪ್ ಶಾಟ್‌ಗಳು ಪಾತ್ರಗಳ ಮನಃಸ್ಥಿತಿಗೆ ಅನುಗುಣವಾಗಿವೆ. ಅವರ ಭವಿಷ್ಯ ದೂರದಲ್ಲಿದೆಯೆಂದು ಸೂಚಿಸುವಂತೆ ಕಡಿಮೆ ಲಾಂಗ್‌ಶಾಟ್‌ಗಳಿವೆ. ಇವುಗಳನ್ನು ಛಾಯಾಗ್ರಾಹಕರು ಉತ್ತಮವಾಗಿ ನಿರ್ವಹಿಸಿದ್ದಾರೆ. ಚಿತ್ರಕ್ಕೆ ಸಂಕಲನ ಹಾಗೂ ಹಿನ್ನೆಲೆಯ ಸಂಗೀತದ ಕೊಡುಗೆ ಅಪಾರವಾಗಿದೆ.



ನೂರು ನಡೆ ಮುಟ್ಟಿದ ಲೀಕ್ ಔಟ್

ಅಕ್ಷತಾ ಪಾಂಡವಪುರ

ಸಬಿತಾ ಬನ್ನಾಡಿ

ಅಕ್ಷತಾ ಪಾಂಡವಪುರ ಅವರ ಏಕವ್ಯಕ್ತಿ ನಾಟಕ 'ಲೀಕ್ ಔಟ್' ಈಚೆಗೆ ನೂರನೇ ಪ್ರದರ್ಶನ ಕಂಡಿತು. ಬಹು ಹಿಂದೆ ನೋಡಿದ್ದೆ. ಈಗ ನೂರನೇ ಪ್ರದರ್ಶನವನ್ನೂ ನೋಡಿದೆ. ಅಕ್ಷತಾ ನೋಡುಗರನ್ನು ಕೇಂದ್ರವಾಗಿರಿಸಿಕೊಂಡು ನಾಟಕವನ್ನು ರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಹಾಗಂತ ಅದು ಪೂರ್ತಿ ನೋಡುಗ ಕೇಂದ್ರಿತ ಎನ್ನಲಾಗದು. ಬದಲಿಗೆ, ನೋಡುಗರ ಮನಸ್ಸನ್ನು ಮೀಟಿ ಅವರನ್ನು ಅವರೇ ಪ್ರಶ್ನಿಸಿಕೊಳ್ಳುವಂತೆ ಮಾಡುವ ಉದ್ದೇಶವನ್ನು ಹೊಂದಿದೆ. ತನ್ನೊಳಗಿನ ಪ್ರಶ್ನೆ ಅವರದೂ ಹೌದೇ? ಅಥವಾ ತನ್ನೊಳಗಿನ ಪ್ರಶ್ನೆ ಅವರದೂ ಆಗಿ ಪ್ರವೇಶ ಪಡೆದೀತೇ? ಎಂಬುದು ಅವರ ಪ್ರಯತ್ನ. ಮತ್ತು ಹಾಗೆ ಆಗಬೇಕು ಎಂಬುದು ಅವರ ಆಶಯ. ಇದು ಬಹಳ ಸವಾಲಿನ ಕೆಲಸ. ಟ್ರೋಲ್ ಯುಗದಲ್ಲಿ ಹೀಗೆ ತನಗೆ ಪರಿಚಯವೇ ಇಲ್ಲದ ಪ್ರೇಕ್ಷಕರ ನಡುವೆ ಆತ್ಮವಿಶ್ವಾಸದಿಂದ ಮುನ್ನುಗ್ಗುವುದು ಮತ್ತು ಊಹಾತೀತ ಪ್ರತಿಕ್ರಿಯೆಗಳನ್ನು ತನ್ನೊಡನೆ ಕ್ಯಾರಿ ಮಾಡ್ಕೊಂಡು ತಾನು ಏನು ಹೇಳ ಹೊರಟಿದ್ದೇನೋ ಅದನ್ನು ತಲುಪಿಸಲು ಮುನ್ನಡೆಯುವುದು ಇಲ್ಲಿನ ಕ್ರಿಯೆಯಾಗಿದೆ. ಇದನ್ನವರು ಪ್ರೇಕ್ಷಕರನ್ನೇ ಪಾತ್ರಧಾರಿಗಳನ್ನಾಗಿಸಿಕೊಂಡು ಮಾಡುತ್ತಾರೆ. ಪ್ರೇಕ್ಷಕ ಪಾತ್ರಧಾರಿಗಳು ಕೆಲವೊಮ್ಮೆ ಸಂಕೋಚ, ಗಾಬರಿ, ಮುಜುಗರ, ಅಯ್ಯೋ ಸಿಕಾಕಿಕೊಂಡೆನೇ ಎಂಬ ಭಾವಕ್ಕೆ ಒಳಗಾಗುವ ಸಂಭವ ಹೆಚ್ಚು. ಅಪರೂಪಕ್ಕೆ ಆತ್ಮವಿಶ್ವಾಸದಿಂದ ಪ್ರತಿಕ್ರಿಯಿಸುವುದೂ ನಡೆಯಬಹುದು. ಇನ್ನೂ ಹಲವು ಸಂದರ್ಭಗಳಲ್ಲಿ ಪ್ರತಿವಾದಿಸುವುದು ಅಸಂಭವವಲ್ಲ. ಹೀಗಾಗಿ ಇದೊಂಥರ ಪಾಠ ಮಾಡುತ್ತಲೇ ವಿದ್ಯಾರ್ಥಿಗಳನ್ನು ಕಣ್ಣಳತೆಯಲ್ಲಿ ಕಾಯುತ್ತಲೇ ಇರಬೇಕಾದ, ಸ್ಪಂದಿಸಬೇಕಾದ ಶಿಕ್ಷಕಿಯ ಶ್ರಮವನ್ನು ಮತ್ತು ಅದರೊಂದಿಗೇ ಅದೊಂದು ಕಲಾಕೃತಿ ಎಂಬುದು ಮರೆತು ಹೋಗದಂತೆ ಅಭಿನಯಿಸುತ್ತಾ, ನಾಟಕದ ಮಾಹೋಲ್ ಅನ್ನು ಕಾಪಿಟ್ಟುಕೊಳ್ಳುತ್ತಾ ಎಲ್ಲವನ್ನೂ ನಿಭಾಯಿಸುವ ಹೆಚ್ಚಿನ ಶ್ರಮ ಬೇಡುವ ಪ್ರದರ್ಶನ ಆಗಿದೆ.

ಈ ಮಾದರಿಯನ್ನು ಆಯ್ಕೆ ಮಾಡಿಕೊಂಡಿರುವ ಅಕ್ಷತಾ, ಇದರ ಹಿಂದೆ ಒಂದು ಗುರಿಯನ್ನು ಇಟ್ಟುಕೊಂಡಿರುವುದು ಸ್ಪಷ್ಟ. ಯಾಕೆಂದರೆ, ಸಿನಿಮಾ, ಟಿ.ವಿ ಮಾಧ್ಯಮದಲ್ಲೂ ಪರಿಚಿತರಾಗಿರುವ ಅವರು ವೈಯಕ್ತಿಕ ಏಳ್ಗೆಯನ್ನು ಅಲ್ಲಿ ಹೆಚ್ಚು ಅನ್ವೇಷಿಸಬಹುದಾದ ಅವಕಾಶ ಉಳ್ಳವರು. ರಂಗಭೂಮಿ ತನ್ನ ಬೇರು ಮತ್ತು ಅಂಗಳ ಎಂಬ ಗಾಢ ನಂಬಿಕೆಯಲ್ಲಿ ತನ್ನ ನೆಲೆಯನ್ನು ರೂಪಿಸಿಕೊಳ್ಳುತ್ತಿದ್ದಾರೆ. ಜೊತೆ ಜೊತೆಗೇ ಕಲೆಯ ಸಾಧ್ಯತೆಗಳನ್ನು ವಿಸ್ತರಿಸಲು ಬಯಸುತ್ತಿದ್ದಾರೆ. ಆ ಸಾಧ್ಯತೆಯೆಂದರೆ ಮನಸ್ಥಿತಿಯನ್ನು ರೂಪಿಸುವುದು. ತಾವು ಕಳೆದುಕೊಳ್ಳುತ್ತಿರುವುದು ಏನು ಎಂಬುದನ್ನು ಹೆಣ್ಣು ಗಂಡುಗಳಿಬ್ಬರಿಗೂ ಅರುಹುವುದು.



ಇಷ್ಟೆಲ್ಲಾ ಹೇಳಿದ ಮೇಲೂ ಇದೊಂದು ನಾಟಕ ಎಂದು ನೋಡುವ ಪ್ರೇಕ್ಷಕರು ಅಲ್ಲಿ ನಾಟಕವನ್ನು ಅರಸುತ್ತಿರುತ್ತಾರೆ ಎಂಬುದನ್ನು ಮರೆಯುವಂತಿಲ್ಲ. ಈ ನಾಟಕವು ಪ್ರದರ್ಶನವಾಗುವ ಪ್ರದೇಶ, ಪ್ರೇಕ್ಷಕರ ವೈವಿಧ್ಯ ಇತ್ಯಾದಿಗಳಿಗೆ ತಕ್ಕಂತೆ ಪರಿಣಾಮವನ್ನು ಬೀರುತ್ತದೆ. ಹೀಗಾಗಿ ಕೆಲವೆಡೆ ಇದು ಭಾವನೆಗಳನ್ನು ಮೀಟಬಹುದು, ಕೆಲವೊಮ್ಮೆ ಸ್ಪರ್ಶಿಸಿ ದಾಟಬಹುದು, ಒಮ್ಮೊಮ್ಮೆ ಇನ್ನೇನೋ ನಿರೀಕ್ಷೆಯನ್ನು ಮುಟ್ಟಿಲ್ಲ ಅನ್ನಿಸಬಹುದು. ಹೀಗೆಲ್ಲಾ ಅನ್ನಿಸಿದರೆ ಅದು ಸಹಜ.

ಈ ನಾಟಕದೊಳಗೆ ಬರುವ ಹಲವು ಕತೆಗಳ ಪಾತ್ರಧಾರಿಗಳಾಗುವ ಪ್ರೇಕ್ಷಕರನ್ನು ಬಳಸುವಾಗ ಆಗುವ ಶಿಫ್ಟ್‌ಗಳು ಕೂಡಾ ಪ್ರೇಕ್ಷಕರನ್ನು ನಾಟಕದೊಳಕ್ಕೆ ಎಳೆದು ತರುವ ತಂತ್ರವಾಗಿದೆ. ಇದರಲ್ಲಿ ಅಕ್ಷತಾ ಸಫಲರಾಗುತ್ತಾರೆ. ಇದರ ಜೊತೆಗೇ ಇನ್ನೊಂದು ಶಿಫ್ಟನ್ನು ಮಾಡಬಹುದೇ ಎಂಬೊಂದು ಮಂಥನ ನನ್ನೊಳಗೆ ನಡೆಯಿತು. ಅದೆಂದರೆ, ನಾಟಕದ ನಟ್ಟನಡು ಸಮಯದಲ್ಲಿ ನಟಿಯೇ ಸುಮಾರು 20 ನಿಮಿಷವಾದರೂ ತೆರಪಿಲ್ಲದೆ ತಾನೇ ಪಾತ್ರವಾಗಿ ತೀವ್ರವಾಗಿ ತೊಡಗಿಸಿಕೊಂಡು ಪ್ರೇಕ್ಷಕರನ್ನು ಭಾವತೀವ್ರತೆಯ ಮಟ್ಟಕ್ಕೆ ಕರೆದೊಯ್ಯಬೇಕು. ಆನಂತರ ನಿಧಾನವಾಗಿ ಮತ್ತೆ ಪ್ರೇಕ್ಷಕರನ್ನು ಸಂವಾದದಲ್ಲಿ ಜೊತೆಗೂಡಿಸಿಕೊಳ್ಳಬೇಕು. ಹೀಗೆ ಮಾಡಿದಾಗ ನಾಟಕ ಪ್ರೇಕ್ಷಕರಿಗೆ ನೀಡುವ ಕಲಾನುಭವದ ಅನುಭವವೂ ಆಗಿ ಹೃದಯ ಸಂವಾದ ಚುರುಕುಗೊಳ್ಳಲು ಪೂರಕವಾಗಬಹುದೇನೋ ಎಂಬುದು.

ಈ ನಾಟಕವು ಎತ್ತುವ ಕೆಲವು ಪ್ರಶ್ನೆಗಳು ಗುನುಗುನಿಸುತ್ತವೆ. ಹಾಗೆಯೇ ಪ್ರಶ್ನೆಯನ್ನು ಮುನ್ನೆಲೆಗೆ ತಂದಿತು. ಇರುವ ಚೌಕಟ್ಟಿನೊಳಗೆ ಅಲ್ಲಿಷ್ಟು ಇಲ್ಲಿಷ್ಟು ಸ್ಪಂದನೆ, ಕರುಣೆ, ಸರಿ ತಪ್ಪುಗಳ ವಿಶ್ಲೇಷಣೆಗಳೋ ಅಥವಾ ಇಡೀ ಚೌಕಟ್ಟು ಬದಲಾಗಬೇಕಾದ ಅನಿವಾರ್ಯತೆಯೋ? ಅವಳು ಅಂತವಳಲ್ಲ, ಅವನು ಅಂತವನಲ್ಲ ಎಂದು ಹೇಳುವುದರಲ್ಲೇ ಆಯಾಸ ಪಡುವುದೋ? ನಾನು ವಿವರಿಸುವುದಿಲ್ಲ, ಬದುಕುತ್ತೇನೆ ಎಂಬ ದಿಟ್ಟ ನಿಲುವಿಗೆ ಬಂದು ನಿಲ್ಲುವುದೋ? ಪಾತ್ರಧಾರಿ ಮಂಜುಳಾ ಕೊನೆಗೆ ತಾನೇ ಬಂದು ನೀವು ನನ್ನ ಬಗ್ಗೆ ಏನೇನೋ ಮಾತಾಡಿದ್ರಿ, ಆದರೆ ನಾನೇನು ಮಾಡಬೇಕು ಅನ್ನುವುದನ್ನು ನಾನೇ ನಿರ್ಧರಿಸ್ತೀನಿ, ನೀವು ಒಪ್ಪದಿದ್ರೆ 'ಐ ಡೋಂಟ್ ಕೇರ್' ಎಂದು ನಗುತ್ತಾ ಹೇಳಿದರೆ . .?

ಥೇಟ್ ಪಾಂಡವಪುರ ಅಕ್ಷತಾಳ ಹಾಗೇ - ಕಾರಲ್ಲಿ ಪ್ರಾಪರ್ಟಿ ಪೇರಿಸಿಕೊಂಡು ಹಳ್ಳಿಯ ಕೊರಕಲುಗಳೊಳಗೆ ಡ್ರೈವ್ ಮಾಡುತ್ತಾ, ತನ್ನದೇ ದಾರಿ ತಾನೇ ನಿರ್ಮಿಸಿಕೊಳ್ಳುತ್ತಾ, ಜೊತೆಗೂಡಿದವರ ಕೈಗೆ ಕೈ ಜೋಡಿಸುತ್ತಾ . .

ಈ ಶತಮಾನದ ಶಬರಿ ತುಳಸಿಗೌಡ

10ನೇ ಪುಟದಿಂದ...

ಹತ್ತಾರು ವರ್ಷಗಳ ಹಿಂದೆಯೇ ಮರಗಳ ಮಹತ್ವವನ್ನು ಅರಿತು, ಗ್ರಹಿಸಿ, ವನದುರ್ಗೆ ಹೇಗೆ ಜೀವರಾಶಿಗಳನ್ನು ಪೊರೆಯುತ್ತಾಳೆ ಎಂಬುದರ ಸಮಗ್ರ ಮಾಹಿತಿಯನ್ನು ತುಳಸಿ ಹೊಂದಿದ್ದರು. ಪರಿಸರ ಮತ್ತು ಆರ್ಥಿಕತೆಯನ್ನು ಸೂಕ್ಷ್ಮವಾಗಿ ಅರಿತು ಗಿಡಮರಗಳನ್ನು ಬೆಳೆಸುವಲ್ಲಿ ಹೇಗೆ ಕೆಲಸ ಮಾಡಿದ್ದರು ಎಂಬುದನ್ನು ಗಮನಿಸಿದಾಗ ಬೆರಗಾಗುತ್ತದೆ. ಅವರು ಇಂದಿನ ಯುಗದ ಶಬರಿ. ಶಬರಿ ಕೂಡ ತಮ್ಮ ಆಶ್ರಮದಲ್ಲಿ ಪ್ರತಿಯೊಂದು ಗಿಡಕ್ಕೆ ಸೃಷ್ಟಿಕರ್ತನ ಕೈಚಳಕವನ್ನು ಪರಿಚಯಿಸುತ್ತಿದ್ದರು. ನನ್ನ ಗ್ರಹಿಕೆಯ ಪ್ರಕಾರ ತುಳಸಿಗೂ ಅದೇ ತೆರನಾದ ಅನುಭವ ಮತ್ತು ಗ್ರಹಿಕೆ ಇತ್ತು. ಒಬ್ಬ ಅರಣ್ಯಾಧಿಕಾರಿ ಖಾಕಿ ದಿರಿಸು ತೊಟ್ಟು ವೇಗವಾಗಿ ಅರಣ್ಯದಲ್ಲಿ ಓಡಾಡಿದಾಗ ಆತನನ್ನು ತಡೆದು ನಿಲ್ಲಿಸಿ "ಏಯ್, ನಿನ್ನ ಕಾಲಡಿಯಲ್ಲಿ ಸಾವಿರಾರು ಎಳೆಯ ಅಪರೂಪದ ಸಸ್ಯಗಳನ್ನು ತುಳಿದು ಧ್ವಂಸ ಮಾಡಿದೆಯಲ್ಲ, ನಿನಗೆ ನಾಚಿಕೆಯಾಗುವುದಿಲ್ಲವೇ" ಎಂದು ಯಾವುದೇ ಮುಲಾಜಿಲ್ಲದೆ ತರಾಟೆಗೆ ತೆಗೆದುಕೊಳ್ಳಬಲ್ಲ ಮನೋಬಲ ಮತ್ತು ದಾರ್ಷ್ಟ್ಯ ಇದ್ದದ್ದು ತುಳಸಿಗೌಡರಿಗೆ ಮಾತ್ರ ಎಂಬುದು ನನ್ನ ಸ್ಪಷ್ಟ ಅನಿಸಿಕೆ.

ಇಲ್ಲಿ ಒಂದು ಕಥೆ ನೆನಪಾಗುತ್ತದೆ. ಚಕ್ರವರ್ತಿ ನೃಪತುಂಗ ಮತ್ತು ಆತನ ಗುರು ಗಣಭದ್ರಾಚಾರ್ಯರ ನಡುವೆ ನಡೆದ ಘಟನೆಯಿದು. ಒಬ್ಬ ಪ್ರಜ್ಞಾವಂತ ಸೈನ್ಯಾಧಿಕಾರಿಯನ್ನು ಆಯ್ಕೆ ಮಾಡುವುದು ಹೇಗೆ ಎಂಬುದು ಅವರಿಬ್ಬರ ನಡುವೆ ಎದ್ದ ಪ್ರಶ್ನೆಯಾಗಿತ್ತು. ಅದಕ್ಕೆ ನೃಪತುಂಗನ ಗುರುಗಳು ಒಂದು ಪರಿಹಾರವನ್ನೂ ಸೂಚಿಸಿದ್ದರು. ಅರ್ಧ ಎಕರೆ ಪ್ರದೇಶದಲ್ಲಿ ವಿವಿಧ ಬಗೆಯ ಸಸಿಗಳ ವನವನ್ನು ನಿರ್ಮಾಣ ಮಾಡಲಾಗಿತ್ತು. ಅಲ್ಲಿ ಎಲ್ಲ ಬಗೆಯ ಗೊಬ್ಬರಗಳನ್ನು ಹಾಕಿ ಕಣ್ಣಿಗೆ ಗೋಚರವಾಗುವ ಮತ್ತು ಅಗೋಚರ ರೀತಿಯಲ್ಲಿ ಹಸಿರನ್ನು ಬೆಳೆಸುವುದೆಂದು ತೀರ್ಮಾನವಾಯಿತು. ಅಲ್ಲಿ ಎರಡು ಅಡಿಯಲ್ಲಿ ಅಂಕುಡೊಂಕು ದಾರಿಯನ್ನು ನಿರ್ಮಾಣ ಮಾಡಲಾಯಿತು. ಸೇನಾಧಿಕಾರಿ ಹುದ್ದೆಗೆ ಆಯ್ಕೆಯಾಗಬೇಕಾದ ಎಲ್ಲರೂ ಆ ದಾರಿಯಲ್ಲಿ ಸಾಗಿಬರುವಂತೆ ಸೂಚಿಸಲಾಗಿತ್ತು. ಆದರೆ ಎಲ್ಲರೂ ನಿಜವಾದ ಹಸಿರುಹಾದಿಯನ್ನು ಗಮನಿಸದೇ ನಡೆದುಕೊಂಡು ಬಂದರು. ಒಬ್ಬ ಮಾತ್ರ ಹಸಿರು ಎಲ್ಲೆಲ್ಲಿ ಇದೆ ಎಂಬುದನ್ನು ಗಮನಿಸಿ ಜಾಗೃತೆಯಿಂದ ಹೆಜ್ಜೆಇಟ್ಟು ನಡೆದು ಗುರಿತಲುಪಿ ಸೈನ್ಯಾಧಿಕಾರಿಯಾಗಿ ಆಯ್ಕೆಯಾದ.



ತುಳಸಿ ಗೌಡ

ಶತ ಶತಮಾನಗಳಿಂದಲೂ ಮಾನವ ವಿಷಪೂರಿತ ಪದಾರ್ಥಗಳನ್ನು ಮಣ್ಣು, ನದಿ, ಬೆಟ್ಟ, ಸಮುದ್ರಕ್ಕೆ ಉಣಿಸಿ ಅಪರಾಧಗಳನ್ನು ಎಸಗುತ್ತಲೇ ಬಂದಿದ್ದಾನೆ. ಇದರಿಂದಾದ ದುಷ್ಪರಿಣಾಮಗಳಿಗೆ ಯಾವ ನ್ಯಾಯಾಲಯ ಶಿಕ್ಷೆ ಕೊಡಬೇಕು? ಶಿಕ್ಷೆ ಏನು? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇತ್ತೀಚೆಗೆ ಜಾಗತಿಕ ಸಮಾವೇಶದಲ್ಲಿ 13-14 ವಯೋಮಾನದ ಗ್ರೇತ್ ಥನ್‌ಬರ್ಗ್ ಎತ್ತಿದ ಪರಿಸರ ಸಂಬಂಧಿತ ಪ್ರಶ್ನೆಗಳಿಗೆ ಖ್ಯಾತನಾಮರೇ ಉತ್ತರಿಸಲಾಗದೇ ತತ್ತರಿಸಿದ್ದನ್ನು ನಾವು ಕಂಡಿದ್ದೇವೆ.

ಅದೇ ರೀತಿಯಲ್ಲಿ ಪ್ರಾಮಾಣಿಕ, ಮುಗ್ಧರೂ ಆದ ತುಳಸಿ, ತಮ್ಮ ಅಂತರಾಳದಲ್ಲಿದ್ದ ಇಚ್ಛೆಗೆ ತಕ್ಕಂತೆ ಅನುವರ್ತಿಸಿದ್ದಾರೆ. 'ಪದ್ಮಶ್ರೀ' ಪ್ರಶಸ್ತಿ ಪಡೆಯಲು ಹೋಗುವ ಮುನ್ನ ನನ್ನನ್ನು ಸಂಪರ್ಕಿಸಿದ್ದರು. 'ನಿಮ್ಮ ಎಂದಿನ ಉಡುಪು ಧರಿಸಿ ಸಹಜ ರೀತಿಯಲ್ಲಿ ಹೋಗಿ ಪ್ರಶಸ್ತಿ ಸ್ವೀಕರಿಸಿ' ಎಂದು ಸಲಹೆ ಕೊಟ್ಟಿದ್ದೆ. ಅದನ್ನ ಅವರು ಪಾಲಿಸಿದ್ದರು. ತಾವು ಧರಿಸಿ ಹೋಗಿದ್ದ ಹವಾಯಿ ಚಪ್ಪಲಿಯನ್ನು ರಾಷ್ಟ್ರಪತಿ ಭವನದ ಬಾಗಿಲಯ ಬಳಿ ಬಿಟ್ಟು, ಸ್ಥಿತಪ್ರಜ್ಞರಾಗಿ ಸಹಜ ಉಡುಪಿನಲ್ಲಿ ಪ್ರಶಸ್ತಿ ಸ್ವೀಕರಿಸಿ ವಿಶ್ವದ ಗಮನ ಸೆಳೆದಿದ್ದರು. ದಿಗ್ಗಜರೆಲ್ಲರೂ ಇವರ ನಡೆಯನ್ನು ಮೆಚ್ಚಿದ್ದರು. ಹುಟ್ಟಿದೆಂದಿನಿಂದ ಸಾಯುವವರೆಗೂ ಅವರು ನಡೆದುಬಂದ ಹಾದಿಯಲ್ಲಿ ಯಾವ ಕೃತ್ರಿಮವೂ ಇರಲಿಲ್ಲ. ಎಲ್ಲವೂ ಸಹಜವಾಗಿತ್ತು.

ಜಗದೀಶಚಂದ್ರ ಬೋಸರು ಪ್ರಕೃತಿ ಮತ್ತು ಪರಿಸರದಿಂದ ಯಾವುದೇ ಲಾಭಾಪೇಕ್ಷೆ ಇಟ್ಟುಕೊಳ್ಳಬಾರದು ಎಂದಿದ್ದರು. ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ನಡೆದ ಒಂದು ಸಂವಾದದಲ್ಲಿ ಪಾಶ್ಚಿಮಾತ್ಯರು ರವೀಂದ್ರನಾಥ ಟಾಗೋರರ ಪ್ರಶ್ನಿಸಿ 'ನಿಮ್ಮ ದೇಶದ ಜನರು ಪರಮ ಅನಾಗರಿಕರು' ಎಂದು ಜರೆದಿದ್ದರು. ಅದಕ್ಕೆ ಉತ್ತರವಾಗಿ ಟಾಗೋರರು 'ನಿಮ್ಮದು ನಗರಕೇಂದ್ರಿತ ನಾಗರಿಕತೆ, ಆದರೆ ನಮ್ಮ ನಾಗರಿಕತೆ ಹುಟ್ಟಿದ್ದೇ ಅರಣ್ಯದಲ್ಲಿ' ಎಂಬ ಸಶಕ್ತ ಉತ್ತರವನ್ನು ಕೊಟ್ಟಿದ್ದರು.

ಇದನ್ನೆಲ್ಲ ಯಾಕೆ ಹೇಳಿದೆನೆಂದರೆ, ತುಳಸಿಗೌಡ ಕೂಡ ಹುಟ್ಟಿ ಬೆಳೆದಿದ್ದು ಅರಣ್ಯ ಪರಿಸರದಲ್ಲಿ. ಅವರಿಗೆ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಸಿಗುವಂತೆ ಮಾಡಿದ್ದರ ಹಿಂದೆ ಕೆಲಸ ಮಾಡಿದ್ದೇನೆ. ಅವರಿಗೆ ಪದ್ಮಶ್ರೀ ಸಿಕ್ಕಿದ್ದು ನನಗೇ ಪ್ರಶಸ್ತಿ ಸಿಕ್ಕಷ್ಟು ಸಂತೋಷವಾಗಿತ್ತು. ಆದರೆ ಒಂದು ವಿಷಾದದ ಮಾತನ್ನು ಇಲ್ಲಿ ಉಲ್ಲೇಖಿಸಲೇಬೇಕು. ಅವರಿಗೆ ಪ್ರಶಸ್ತಿಗಳೇನೋ ಸಿಕ್ಕವು. ಆದರೆ ಆರ್ಥಿಕವಾಗಿ ಸಿಗಬೇಕಿದ್ದ ಸವಲತ್ತುಗಳು ಕೊನೆತನಕವೂ ಸಿಕ್ಕಿಲ್ಲ. ಇದು ನಮ್ಮ ವ್ಯವಸ್ಥೆಯ ವಿಪರ್ಯಾಸ.

ಮುನ್ನೋಟ 22-12-2024 ರಿಂದ 28-12-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸಂಸಾರ ಸುಖಕ್ಕಾಗಿ ಹೆಚ್ಚು ಗಮನ ಕೊಡುವಿರಿ. ಆದಾಯವು ನಿರೀಕ್ಷೆಯ ಹತ್ತಿರ ಇರುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಬೆಳ್ಳಿ ಆಭರಣ ತಯಾರಕರಿಗೆ ಬೇಡಿಕೆ ಕಡಿಮೆಯಾಗಬಹುದು. ವೃತ್ತಿಯಲ್ಲಿ ಕಷ್ಟಪಟ್ಟರೆ ಏಳಿಗೆ ಇದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮನಸ್ಸಿನ ಒಳಗೆ ಸ್ವಲ್ಪ ಗಲಿಬಿಲಿಗಳಿರುತ್ತವೆ. ಆದಾಯವು ನಿಮ್ಮ ವೆಚ್ಚವನ್ನು ಸರಿದೂಗಿಸುತ್ತದೆ. ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ ಸೆಳೆಯುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಪಡೆಯುವುದು ಕಷ್ಟವಾಗಬಹುದು. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಆದಾಯವಿರುತ್ತದೆ. ಕೆಲವೊಂದು ನಿರ್ಧಾರಗಳಲ್ಲಿ ಏರುಪೇರಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕೃಷಿಯಿಂದ ಆದಾಯವಿರುತ್ತದೆ. ಮಾತನಾಡುವಾಗ ಒರಟು ಭಾಷೆ ಬೇಡ. ಸಹೋದರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ಸಿಗುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರಗತಿ ಇರುತ್ತದೆ. ರಕ್ತ ಸಂಬಂಧಿ ದೋಷಗಳಿರುವವರು ಎಚ್ಚರ ವಹಿಸಿ. ಸಂಗಾತಿ ಕಡೆಯ ಹಿರಿಯರಿಂದ ನಿಮಗೆ ಸಾಕಷ್ಟು ಸಹಕಾರ ಸಿಗುತ್ತದೆ. ಹಿರಿಯ ರಾಜಕಾರಣಿಗಳ ಮಾರ್ಗದರ್ಶನ ಕಿರಿಯರಿಗೆ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕ್ರೀಡೆಗಳ ಬಗ್ಗೆ ಹೆಚ್ಚು ಒಲವಿರುತ್ತದೆ. ಸಂಸಾರದಲ್ಲಿ ಸುಖ ಕಾಣಬಹುದು. ಸಂಗಾತಿ ಸಹಾಯದಿಂದ ಆಸ್ತಿಗಾಗಿ ಹಣ ಒಟ್ಟುಗೂಡಿಸಬಹುದು. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿ. ಸಂಗಾತಿಯಿಂದ ಆರ್ಥಿಕ ಸಹಕಾರ ಸಿಗುವ ಸಾಧ್ಯತೆಯಿದೆ. ವಿದೇಶಿ ವ್ಯವಹಾರ ಮಾಡುವವರಿಗೆ ಸ್ವಲ್ಪಮಟ್ಟಿನ ಅಭಿವೃದ್ಧಿ ಇದೆ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಕಿರಿಕಿರಿಗಳಿರುತ್ತವೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಧರ್ಮ ಕಾರ್ಯಗಳ ಬಗ್ಗೆ ಮನಸ್ಸು ಹೆಚ್ಚು ಆಲೋಚಿಸುತ್ತದೆ. ಭಾಷಣಕಾರರಿಗೆ ಮತ್ತು ಸಂಗೀತಗಾರರಿಗೆ ಹೆಚ್ಚು ಬೇಡಿಕೆ ಇರುತ್ತದೆ. ಆದಾಯವು ನಿಮ್ಮ ಖರ್ಚನ್ನು ತೂಗಿಸುವಷ್ಟು ಇರುತ್ತದೆ. ಸರ್ಕಾರದಿಂದ, ಸಂಘ- ಸಂಸ್ಥೆಗಳಿಂದ ಆಸ್ತಿ ಪಡೆಯಬಹುದು. ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದ ವಿದ್ಯೆಯನ್ನು ಓದುತ್ತಿರುವವರಿಗೆ ಹೆಚ್ಚು ಪ್ರಗತಿ ಇರುತ್ತದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರದಿಂದಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಹಳ ಆಲಸ್ಯ ನಿಮ್ಮನ್ನು ಕಾಡುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರಿ ಆಸ್ತಿಗಳನ್ನು ಅಭಿವೃದ್ಧಿಪಡಿಸುವವರಿಗೆ ಲಾಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಪಡೆಯುವ ಯೋಗವಿದೆ. ಕೀಲು ನೋವು ಕೆಲವರನ್ನು ಕಾಡಬಹುದು. ದ್ರವರೂಪದ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ಕಡಿಮೆಯಾಗುತ್ತದೆ. ಅಧ್ಯಾಪಕರಿಗೆ ಹೆಚ್ಚಿನ ಗೌರವ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಹಳ ಕಲಾತ್ಮಕವಾಗಿ ಮಾತನಾಡಿ ಜನರನ್ನು ಮರುಳು ಮಾಡುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಸ್ನೇಹಿತರಲ್ಲಿ ಕೆಲವರು ನಿಮ್ಮ ಕಾರ್ಯವನ್ನು ವಿರೋಧಿಸುವರು. ಸಂಗಾತಿಯ ಸಂತೋಷಕ್ಕಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಮಕ್ಕಳಿಂದ ನಿರೀಕ್ಷಿತ ಗೌರವ ಇರುವುದಿಲ್ಲ. ಸಂಗಾತಿಗೆ ಪರಿಚಯಸ್ಥರ ಮೂಲಕ ಕೆಲಸ ದೊರೆಯುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವ್ಯವಹಾರ ಚತುರರಾಗಿರುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಮಹಿಳೆಯರಿಂದ ನಿಮ್ಮ ಕಾರ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ವಿದೇಶದಲ್ಲಿ ಓದಬೇಕೆಂದು ಕನಸು ಕಾಣುತ್ತಿರುವವರಿಗೆ ಅದು ನನಸಾಗುವ ಸಂದರ್ಭವಿದೆ. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚಾಗಬಹುದು. ಸಂಗಾತಿಯಿಂದ ಸಾಕಷ್ಟು ಅನುಕೂಲವಾಗುತ್ತದೆ. ತಂದೆಯ ವ್ಯವಹಾರದಲ್ಲಿ ನಿಮಗೆ ಅವಕಾಶ ಲಭಿಸುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಗಂಭೀರವಾಗಿ, ಗೌರವಯುತವಾಗಿ ನಡೆದುಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ನಿಮ್ಮ ಋಣ ಪರಿಹಾರಕ್ಕೆ ಹಿರಿಯರು ಸಹಕಾರ ನೀಡುವರು. ಸಂಗಾತಿ ವ್ಯವಹಾರದಲ್ಲಿ ನಿಮಗೆ ಪಾಲು ದೊರೆಯುತ್ತದೆ. ಮಧ್ಯವರ್ತಿ ಕೆಲಸ ಮಾಡುವವರ ಆದಾಯ ಹೆಚ್ಚಾಗುತ್ತದೆ. ವೃತ್ತಿಯಲ್ಲಿದ್ದ ತೊಂದರೆಗಳು ಕಡಿಮೆಯಾಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸಂಗೀತಗಾರರಿಗೆ ಬಹಳ ಉತ್ತಮ ಅವಕಾಶಗಳು ದೊರೆಯುತ್ತವೆ. ಆದಾಯವು ಕಡಿಮೆ ಇದ್ದರೂ ಏನು ತೊಂದರೆ ಇರುವುದಿಲ್ಲ. ನಿಮ್ಮ ಕೆಲಸಗಳಿಗೆ ಬಂಧುಗಳ ವಿರೋಧ ಇರುತ್ತದೆ. ಸಂಗಾತಿಗೆ ತವರಿನಿಂದ ಆಸ್ತಿ ದೊರೆಯುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುತ್ತದೆ. ಸಂಗಾತಿ ಕಡೆಯುವರಿಂದ ನಿಮ್ಮ ಕೆಲಸಗಳಿಗೆ ಸಹಕಾರ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶಿ ವ್ಯವಹಾರ ಮಾಡುವವರ ಲಾಭ ಹೆಚ್ಚುತ್ತದೆ. ನಿಮ್ಮ ಆಹಾರ ಪದ್ಧತಿಗಳಿಂದ ಅನಾರೋಗ್ಯ ಉಂಟಾಗಬಹುದು. ಹಿರಿಯರ ಶಿಫಾರಸ್ಸಿನಂತೆ ಕೆಲವರಿಗೆ ಉದ್ಯೋಗ ದೊರೆಯುತ್ತದೆ. ಹಿರಿಯ ಮಕ್ಕಳ ಪ್ರಗತಿಯು ಉತ್ತಮವಾಗಿರುತ್ತದೆ. ಮಾಂಸಖಂಡಗಳ ನೋವು ಕೆಲವರನ್ನು ಕಾಡಬಹುದು. ಯುವಕರು ಘರ್ಷಣೆಗೆ ಹೋಗದಿರುವುದು ಒಳ್ಳೆಯದು. ಆಭರಣ ತಯಾರಕರಿಗೆ ನಿಧಾನವಾಗಿ ಬೇಡಿಕೆ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮಾತಿನಲ್ಲಿ ಒರಟುತನ ಬೇಡ. ಹಿರಿಯರು ನಿಮ್ಮ ಒಳ್ಳೆಯ ಕೆಲಸಗಳಿಗೆ ಸಹಕಾರ ನೀಡುವವರು. ಪೂರ್ವಿಕರಿಂದ ಆಸ್ತಿ ದೊರೆಯುವ ಸಂದರ್ಭವಿದೆ. ಮಕ್ಕಳು ನಿಮ್ಮ ಬಳಿ ಕಠಿಣವಾಗಿ ವರ್ತಿಸಬಹುದು. ಶೀತ ಬಾಧೆ ಕೆಲವರನ್ನು ಬಹಳವಾಗಿ ಕಾಡಬಹುದು. ಧಾರ್ಮಿಕ ಆಚರಣೆಗಳಿಗೆ ನಿಮ್ಮ ಮನಸ್ಸು ಒಪ್ಪುವುದಿಲ್ಲ. ಕಬ್ಬಿಣದ ವ್ಯಾಪಾರಗಳಿಗೆ ಲಾಭ ಕಡಿಮೆಯಾಗಬಹುದು.

ಪದಬಂಧ 2871



ಮೇಲಿನಿಂದ ಕೆಳಕ್ಕೆ

1. ಇಡೀ ಪ್ರಪಂಚವನ್ನೇ ಆವರಿಸುವ ಶಕ್ತಿ ಉಳ್ಳದ್ದು 5
2. ಒಂಭತ್ತರ ಹುರುಪಿನಲ್ಲಿ ಹೊಸ ಹಾಡು 4
3. ಗೆಲುವನ್ನು ಮತ್ತೆ ಮತ್ತೆ ಹೇಳಿ ಇಮ್ಮಡಿಗೊಳಿಸಿ 4
4. ದಶರಥ ವಂಶಜನ ಹಸರಿನ ಪರಾಕ್ರಮಿ 4
6. ದಾನದಿಂದ ಬರುವ ರಾಕ್ಷಸೀ ಗುಣ 3
8. ಅಂತರಂಗದ ಅಧಿದೇವತೆಯೇ ಇವಳು 3
10. ವಿರಳವಾದ ಮನುಷ್ಯನ ಹುಟ್ಟು 3
12. ಸಂಪತ್ತಿನೊಡೆಯ ದೀರ್ಘ ಪಡೆದಿದ್ದಾನೆ 3
14. ಅಂತರಂಗದಲ್ಲಿ ಏಳುವ ಅಲೆ
15. ಅರಸಿಯ ಅಂತಃಪುರಕ್ಕೊಂದು ಪರ್ಯಾಯ 5
16. ಸತ್ಯಕ್ಕಾಗಿ ನಿರ್ಮಾಣವಾದ ಕಾಲ 4
17. ಕೃಷ್ಣನ ತಂದೆ ಭೂಮಿಗೆ ಒಡೆಯ 4
18. ಭರತಕ್ಕೆ ಬಂದ ಗ್ರೀಕ 3
19. ನಾಕದಲ್ಲಿ ಗರಿ ಮೂಡಿರುವ ಪೌರ 4

ಎಡದಿಂದ ಬಲಕ್ಕೆ

1. ಹೊಚ್ಚ ಹೊಸದಾದ ನಾವಿನ್ಯ 4
3. ನೃತ್ಯ, ಸಂಗೀತ, ಮೇಳಗಳಲ್ಲಿ ಜತೆಗೂಡುವ ಧ್ವನಿಮೂಲ 4
5. ಕೊಡುಗೆಯ ಕೈ ಒಂದೆಡೆ, ರಕ್ಷಣೆಯ ಕೈ ಮತ್ತೊಂದೆಡೆ 5
7. ಗಾಳಿಯನ್ನು ಅಳೆಯುವ ಮುಖ್ಯಪ್ರಾಣ 4
9. ಗತಕಾಲದಲ್ಲಿ ಚಿನ್ನ, ಮುತ್ತು ರತ್ನಗಳ ಸಾಮ್ರಾಜ್ಯವಾಗಿದ್ದ ನಮ್ಮ ಗೆಲುವಿನ ನಾಡು 6
11. ಇಂಗ್ಲೀಷರ ರೇಷ್ಮೆಗೆ ವಿರಳವಾಗಿ ಒಳಗಾಗು 3
13. ಅಂತ್ಯದಲ್ಲಿ ದೊಡ್ಡ ಹಂತಕ್ಕೇರಿರುವ ಮಹನೀಯ 3
16. ಎಡದಿಂದ ಬಲಕ್ಕೆ ಒಂಬತ್ತರಲ್ಲಿರುವ ಕನ್ನಡ ಸಾಮ್ರಜ್ಯವನ್ನಾಳಿ ಗೆಲುವಿನ ಪತಾಕೆ ಹಾರಿಸಿದ ವೀರ ಅರಸ 6
19. ಹಾವನ್ನು ಹಿಡಿತದಲ್ಲಿಟ್ಟುಕೊಳ್ಳುವ ರತ್ನವೇ ಇದು? 4
20. ಪುರಾತನ ಕಾಲದಲ್ಲಿ ಭಗವಂತನ ವಾಸ ಪಟ್ಟಣ 5
21. ಈಶ್ವರ ವ್ಯವಸ್ಥೆಯಲ್ಲಿ ಗಣಗಳ ಅಧಿದೈವ 4
22. ಮಂತ್ರೋಚ್ಚಾರಣೆಯ ಮುನ್ನ ಕೈ ಶುದ್ಧಿಯ ವಿಧಿ 4

ಪದಬಂಧ ಉತ್ತರ -2870

ಮೇಲಿಂದ ಕೆಳಕ್ಕೆ

1.ಪಠ್ಯಕ್ರಮ 2.ಕವಲು 3.ವಚನ 4.ರುದ್ರವೀಣೆ 6.ಹುಡುಕು 7.ವಕೀಲ 9.ಲೆಕ್ಕಪುಸ್ತಕ 11.ಮದ್ಯದಂಗಡಿ 13.ದುಮ್ಮಾನ 14.ಬಾಸಿಂಗ 15.ಜನನ 16.ತಿಹಾರ 17.ಮೂಕಾಂಬಿಕೆ 19.ಗತ್ಯಂತರ 21.ಗಾರುಡಿ 22.ವೀರಶ್ರೀ

ಎಡದಿಂದ ಬಲಕ್ಕೆ

1.ಪರಿವ್ರಾಜಕ 3.ವಧೂವರರು 6.ಹುಲುಮಾನವ 8.ಮಲೆನಾಡು 10.ಕೀಲಿಮಣೆ 12.ಕುದುರೆಬಾಲ 15.ಜನಪ್ರಗತಿ 17.ಮೂಕಜನ 18.ಹಾವಾಡಿಗ 20.ನಗಾರಿವೀರ 23.ಕೆಡಕುನುಡಿ 24.ಶ್ರೀಗಂಧಮರ

ಚಳವಳಿಯೇ ನನ್ನ ಮನೆ ಪಿಚ್ಚಳ್ಳಿ

ಸುಬ್ಬು ಹೊಲೆಯಾರ್

ಕಾಲಿಗೆ ಗೆಜ್ಜೆಕಟ್ಟಿ ಹೋರಾಟದ ಕಿಚ್ಚು ಹೊತ್ತಿಸಿದ ಈ ಗಾನ ಗಾರುಡಿಗ ದಲಿತ ಸಂಘರ್ಷ ಸಮಿತಿಯ ನಲವತ್ತು ವರ್ಷಗಳ ಒಡನಾಡಿ. ದಸಂಸಗೆ ಕೊರಳದನಿಯಾಗಿ ನಾಡಿನುದ್ದಕ್ಕೂ ಹೋರಾಟದ ಗೀತೆಗಳ ಮೂಲಕ ಮನೆಮಾತಾದವರು ಪಿಚ್ಚಳ್ಳಿ ಶ್ರೀನಿವಾಸ. ಈ ಸಲದ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಇವರನ್ನು ಡಿ.22ರಂದು ಕೋಲಾರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಹೋರಾಟದ ಹಾಡುಗಾರರ ಬಳಗದಿಂದ ಅಭಿನಂದಿಸಲಾಗುತ್ತಿದೆ. ಹಾಡು, ಸಂವಾದ ಕೂಡ ನಡೆಯಲಿದೆ. ಈ ನೆಪದಲ್ಲಿ ಅವರ ಸಾಂಸ್ಕೃತಿಕ, ಹೋರಾಟ ವ್ಯಕ್ತಿತ್ವ ಕುರಿತ ಮಾತುಕತೆ ಇಲ್ಲಿದೆ.

• ದಲಿತ ಸಂಘರ್ಷ ಸಮಿತಿಯು ಐವತ್ತು ವರ್ಷಗಳನ್ನು ಪೂರೈಸಿದೆ. ಹಾಡು ಜನರ ಸಂಕಷ್ಟಕ್ಕೆ ಉಸಿರಾದ ಮೊದಲ ಹೆಜ್ಜೆಯನ್ನು ನೆನಪಿಸಿಕೊಳ್ಳುವುದಾದರೆ...

ನನ್ನೂರು ಕೆಜಿಎಫ್ ತಾಲ್ಲೂಕಿನ ಪಿಚ್ಚಳ್ಳಿಯಲ್ಲಿ ರಾಮಮಂದಿರ ಇತ್ತು. ಅಲ್ಲೇ ನನ್ನ ತಂದೆ ನಡಿಪನ್ನ ಮತ್ತು ಸೋದರ ಮಾವ ಮುನಿಗುರುಪ್ಪ ಭಜನೆ ಪದ ಹಾಡೋರು. ಅಲ್ಲಿಂದಲೇ ಹಾಡಿನ ಬೇರು ನನ್ನೊಳಗೆ ಚಿಗುರಿತು. ಮತ್ತೊಂದು ಮಾತು; ನನ್ನ ತಾಯಿ ಸಿದ್ದಮ್ಮ ರಾಗಿ ಹೊಲಗಳಲ್ಲಿ ಕಳೆ ಕೀಳಲು, ಕೊಯ್ಲು ಮಾಡಲು ಕೂಲಿ ಕೆಲಸಕ್ಕೆ ಹೋಗೋರು. ಅಲ್ಲಿ ಮಧ್ಯಾಹ್ನ ರಾಗಿಮುದ್ದೆ ಊಟ ಕೊಡೋರು. ಅದನ್ನು ತಿನ್ನಲು ಶಾಲೆಗೆ ಚಕ್ಕರ್ ಹೊಡೆದು ಹೋಗುತ್ತಿದ್ದೆ. ಊಟ ಆದ ಮೇಲೆ ವಿರಾಮದ ಸಮಯದಲ್ಲಿ ಕೂಲಿ ಜನರೆಲ್ಲ ಎಲೆಯಡಿಕೆ ಜಗಿಯುತ್ತಾ ನನ್ನ ತಾಯಿ ಸಿದ್ದಮ್ಮ ಹಾಡುತ್ತಿದ್ದ ಕೈವಾರ ತಾತಯ್ಯನ ತತ್ವಪದಗಳನ್ನು ತದೇಕಚಿತ್ತದಿಂದ ಕೇಳೋರು. ಅಲ್ಲಿಂದಲೇ ಹಾಡೋದಕ್ಕೆ ಪ್ರೇರಣೆ ಸಿಕ್ಕು.

ದಲಿತ ಸಾಹಿತ್ಯವು ಚಳವಳಿಗೆ ಹೃದಯವಾಗಿದ್ದು ಹೇಗೆ ?

ಚಳವಳಿಗೆ ಮುಖ್ಯವಾಗಿ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಇಂದೂಧರ ಹೊನ್ನಾಪುರ, ಎಚ್. ಗೋವಿಂದಯ್ಯ, ಲಕ್ಷ್ಮಿಪತಿ ಕೋಲಾರ ಸೇರಿದಂತೆ ಹಲವರ ಸಾಹಿತ್ಯದ ಕೊಡುಗೆ ಅಪಾರ. ದಲಿತರ ಬದುಕನ್ನು ಸಿದ್ದಲಿಂಗಯ್ಯ ಹಾಡುಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ದೇವನೂರ ಮಹಾದೇವರ ಆದಿಯಾಗಿ ದಲಿತ ಸಾಹಿತಿಗಳು ಕಥೆ, ಕವನ, ಕಾದಂಬರಿ ಮೂಲಕ ಅನಾವರಣಗೊಳಿಸಿದ್ದಾರೆ.

• ನೀವು ದಲಿತ ಸಂಘರ್ಷ ಸಮಿತಿ ತೆಕ್ಕೆಗೆ ಬಂದದ್ದು ಹೇಗೆ?

1977–78ರ ಸಮಯ. ಎಸ್ಸೆಸ್ಸೆಲ್ಸಿಯಲ್ಲಿ ಫೇಲಾದೆ. ದನ–ಕುರಿ ಕಾಯೋಕೆ ಹೋಗುತ್ತಿದ್ದೆ. ನಿರ್ಜನ ಹೊಲಗಳ ಬಯಲು ಪ್ರದೇಶದಲ್ಲಿ ದನ–ಕರು ಮೇಯಿಸುವಾಗ ಒಬ್ಬಂಟಿಯಾಗಿರುತ್ತಿದ್ದೆ. ಆಗ ದಿಗಿಲಿನಿಂದ ಸ್ವರ ಎತ್ತಿ ಹಾಡುತ್ತಿದ್ದೆ. ಪಕ್ಕದ ಹೊಲದ ಎರನಾಗನಹಳ್ಳಿ ರಾಮಚಂದ್ರ ಅನ್ನೋರು ನಾನು ಹಾಡೋದನ್ನು ಗಮನಿಸುತ್ತಿದ್ದರು. ಅವರು ಬಿಇಎಂಎಲ್‌ನಲ್ಲಿ ಕೆಲಸ ಮಾಡುತ್ತಾ ಕಾರ್ಮಿಕ ಚಳವಳಿಯಲ್ಲಿ ಇದ್ದರು. ಅವರು ಕೋಟಿಗಾನಹಳ್ಳಿ ರಾಮಯ್ಯ ಹತ್ರ ಕರ್ಕೊಂಡು ಹೋದ್ರು. ರಾಮಯ್ಯ ಅವರು ಕೆಜಿಎಫ್ ಕೆನರಾ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು. ಸಿದ್ದಲಿಂಗಯ್ಯ ಅವರ 'ಸಾವಿರಾರು ನದಿಗಳು' ಪುಸ್ತಕ ಕೊಟ್ಟ ರಾಮಯ್ಯ, ಅದರಲ್ಲಿದ್ದ 'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು, ಕಪ್ಪುಮುಖದ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು' ಪದ್ಯ ಹಾಡಲು ಹೇಳಿದರು. ಅಲ್ಲಿಂದ ದಲಿತ ಸಂಘರ್ಷ ಸಮಿತಿ ತೆಕ್ಕೆಗೆ ಬಂದೆ. ನನ್ನ ಮೊದಲ ಹಾಡು 'ಯಾತಕೋ ಈ ಬಡವರ ಬಾಳು ದುಡಿದರೂ ಸಿಗದಲ್ಲೋ ಕೂಳು. ಹೊಲೆಯರಣ್ಣ, ಮಾದಿಗರಣ್ಣ, ವಡ್ಡರಣ್ಣ, ಕೊರಗರಣ್ಣ, ಬೇಡರಣ್ಣ, ಅಗಸರಣ್ಣ ಕುಲ ಕುಲವು ಎಂದು ಕುದಿಯುತ್ತಿರುವ ಕೂಲಿಯಣ್ಣ ದನಿಯೆತ್ತಿ ಹಾಡುತ್ತಿರುವೆ ಕಿವಿಗೊಟ್ಟು ಕೇಳಿರಣ್ಣ' ಈ ಹಾಡಿನ ಮುಖೇನ ದಲಿತ ಚಳವಳಿ ಕೂಸಾಗಿ ಬೆಳೆದೆ.

• ಹೋರಾಟದ ಹಾಡುಗಳನ್ನು ಎದೆತುಂಬಿ ಹಾಡುವಾಗ...

ಹಾಡು ಒಂದು ಮಾಧ್ಯಮ. ದಲಿತ ಸಂಘರ್ಷ ಸಮಿತಿಯಲ್ಲಿ ದಲಿತ ಕಲಾ ಮಂಡಳಿಯನ್ನು ಕಟ್ಟಿ ನೇತೃತ್ವ ವಹಿಸಿಕೊಂಡೆ. ದಸಂಸ ಹೋರಾಟದ ಹಾಡಾಗಿ ರೂಪಗೊಂಡಿದ್ದು ಹುಣಸೀಕೋಟೆ ಶೇಷಗಿರಿಯಪ್ಪನ ಕೊಲೆ ಪ್ರಕರಣದ ಅನುಸೂಯಮ್ಮ ಕುರಿತ ಹಾಡು. ಆ ಹಾಡು ಮತ್ತು ಚಳವಳಿ ದಸಂಸಗೆ ಇವತ್ತಿಗೂ ಮಾದರಿ.

• ಐವತ್ತು ವರ್ಷಗಳ ದಸಂಸ ಹೋರಾಟದ ಪಯಣದಲ್ಲಿ ಅಂಬೇಡ್ಕರ್ ಆಶಯ ಈಡೇರಿದೆಯೇ?

ದಸಂಸ ಚಳವಳಿಗಾರರು ಅಂಬೇಡ್ಕರ್ ಅವರ ತತ್ವ–ಸಿದ್ಧಾಂತ ಅನುಸರಿಸುತ್ತಿದ್ದಾರೆ. ಆದರೆ, ಬಹುತೇಕ ನೌಕರ ವರ್ಗ ಸಮುದಾಯವನ್ನು ದೂರ ಇಟ್ಟಿದೆ. ಅಂಬೇಡ್ಕರ್ ಆಶಯ ಈಡೇರಿಲ್ಲ. ಆದರೆ, ಇದು ಸಂಘಟನೆಗಳ ಸೋಲು ಅಲ್ಲ. ಕೆಲ ಅಪ್ರಾಮಾಣಿಕ ನಾಯಕರು ವೈಯಕ್ತಿಕ ಲಾಭಕ್ಕಾಗಿ ದಾರಿ ತಪ್ಪಿರಬಹುದು.

• ಹಾಡುಗಾರನಾಗಿ ಗದ್ದರ್ ಅವರೊಂದಿಗೆ ನಿಮ್ಮ ಒಡನಾಟ...

ಗದ್ದರ್ ನನಗೆ ಸಿಕ್ಕಿದ್ದು ಹಾಡುಗಳೇ ಮುಖಾಂತರವೇ ಹೊರತು; ಸೈದ್ಧಾಂತಿಕ ವಿಚಾರಗಳಿಂದ ಅಲ್ಲ. ಕೋಲಾರದ ದಲಿತ ಕಲಾ ಮಂಡಳಿ ಹಾಡುಗಾರರಿಗೆ ಒಮ್ಮೆ ಗದ್ದರ್ ಅವರೇ ಹಾಡುಗಳ ತರಬೇತಿ ಕೊಟ್ಟಿದ್ದರು. ಗದ್ದರ್ ಅವರ ಸೈದ್ಧಾಂತಿಕತೆ ಮತ್ತು ದಸಂಸ ವಿಚಾರಧಾರೆಯೇ ಬೇರೆ. ನಮ್ಮದು ಸಂವಿಧಾನ ನೆಲೆಯ ಹೋರಾಟ.

• ದಲಿತರ ಮೇಲಿನ ದೌರ್ಜನ್ಯ ನಿಂತಿಲ್ಲ. ಉಳಿದ ಸಮುದಾಯದವರು ದಲಿತರನ್ನು ನೋಡುವ ಕಣ್ಣೋಟ ಬದಲಾಗಿದೆ ಅನಿಸುತ್ತದೆಯೇ?

ಹೌದು; ದಲಿತರ ಮೇಲಿನ ದೌರ್ಜನ್ಯ ನಿಂತಿಲ್ಲ. ಉಳ್ಳೇರಹಳ್ಳಿ ಗುಜ್ಜುಗೋಲು ಪ್ರಕರಣ, ಕೊಪ್ಪಳದಲ್ಲಿ ಹೆಚ್ಚು ಅಟ್ರಾಸಿಟಿ ಪ್ರಕರಣಗಳು ದಾಖಲಾಗಿರೋದು ನಮ್ಮ ಕಣ್ಣು ಮುಂದಿದೆ. ದಲಿತರು ಆರ್ಥಿಕ, ಸಾಮಾಜಿಕವಾಗಿ ಸಬಲರಾದಷ್ಟು ಅಸಹನೆ ಹೆಚ್ಚುತ್ತಲೇ ಇದೆ. ಕೆಲವರಿಗೆ ಅಧಿಕಾರಕ್ಕಾಗಿ ಮಾತ್ರ ಸಂವಿಧಾನ ಬೇಕಾಗಿದೆ.

• ದಲಿತ ಚಳವಳಿ ಕರ್ನಾಟಕದ ಇತರ ಚಳವಳಿಗಳಿಗೆ ಪ್ರೇರಣೆ ಆಗಿದೆಯೇ?

ದಲಿತ ಚಳವಳಿ ರಾಜ್ಯದ ಇತರ ಚಳವಳಿಗಳಿಗೆ ತಾಯಿ ಇದ್ದಂತೆ. ವಿದ್ಯಾರ್ಥಿಗಳು, ಮಹಿಳೆಯರು, ರೈತರು ತಮ್ಮ ಹಕ್ಕುಗಳನ್ನು ಕೇಳಲು ಬೀದಿಗಿಳಿದು ಹೋರಾಟ ನಡೆಸಲು ದಸಂಸ ಪ್ರೇರಣೆ. ಪ್ರೊ.ಬಿ.ಕೃಷ್ಣಪ್ಪ ಅವರ ಕಾಲದಲ್ಲಿ ಚಳವಳಿ ತಾಯಿತನದಿಂದ ಕೂಡಿತ್ತು. ಈಗ ತಬ್ಬಲಿತನ ಕಾಡುತ್ತಿದೆ.

• ದಲಿತ ಚಳವಳಿಯಲ್ಲಿ ಈಗ ವಿದ್ಯಾರ್ಥಿಗಳು, ಮಹಿಳೆಯರ ಭಾಗವಹಿಸುವಿಕೆ ನಗಣ್ಯವಾಗಿದೆಯಲ್ಲ?

ವಿದ್ಯಾರ್ಥಿಗಳು ಹಾಗೂ ಮಹಿಳೆಯರ ವಿಚಾರದಲ್ಲಿ ಸಂಘಟನೆ ಸಂಪೂರ್ಣ ವೈಫಲ್ಯ ಕಂಡಿದೆ. ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ಸೋತಿದ್ದೇವೆ. ಮಹಿಳೆಯರ ವಿಚಾರದಲ್ಲೂ ಕೂಡ ಎಡವಿದ್ದೇವೆ.

• ದಲಿತರ ದೇವಸ್ಥಾನ ಪ್ರವೇಶ ಸ್ವಾಭಿಮಾನದ ಹೋರಾಟವೇ ?

ದೇವಸ್ಥಾನ ಸೇರಿದಂತೆ ಎಲ್ಲ ಸಾರ್ವಜನಿಕ ಸ್ಥಳಗಳಿಗೂ ಮುಕ್ತ ಪ್ರವೇಶ ಇರಬೇಕು. ಅದು ಸ್ವಾಭಿಮಾನ ಹೋರಾಟವೇ. ಆದರೆ, ದೇವಸ್ಥಾನಗಳಿಕ್ಕಿಂತ ನಮಗೆ ಶಾಲೆ ಮುಖ್ಯವಾಗಬೇಕು. ನಮ್ಮೂರಿನ ಶಾಲೆಗಳನ್ನು ಅತ್ಯುತ್ತಮವಾಗಿ ರೂಪಿಸುವ ಕಡೆ ನಾವೆಲ್ಲ ಗಮನ ಕೊಡಬೇಕಿದೆ.

• ಒಳಮೀಸಲಾತಿ ವಿಚಾರದ ಬೇಡಿಕೆಗೆ ನಿಮ್ಮ ಒತ್ತಡ ಏನು?

ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಲೇಬೇಕು. ಸರ್ಕಾರ ಮಾಡುತ್ತದೆ ಅನ್ನೋ ಭರವಸೆ ಇದೆ. ಆದರೆ, ಸರ್ಕಾರ ತನ್ನ ಗಡುವು ಮೀರಿದರೆ ಕಲಾವಿದನಾಗಿ ಕಾಲಿಗೆ ಗೆಜ್ಜೆ ಕಟ್ಟುತ್ತೇನೆ.

• ಜನ ಸಮುದಾಯದ ಹೋರಾಟಕ್ಕೆ ಪ್ರಬಲ ಅಸ್ತ್ರ...

ರಂಗಭೂಮಿ, ಸಿನಿಮಾ, ಜನಪದ ಕಲಾವಿದನಾಗಿ ಕಳೆದ ನಲವತ್ತು ವರ್ಷಗಳಿಂದ ದುಡಿದ, ಕಲಿತ ಅನುಭವ ಇದೆ. ಆದರೆ, ಜನ ಸಮುದಾಯದ ಹೋರಾಟಕ್ಕೆ ಚಳವಳಿಯೇ ಪ್ರಬಲ ಅಸ್ತ್ರ. ಚಳವಳಿಯೇ ನನ್ನ ಮನೆ.



ಪಿಚ್ಚಳ್ಳಿ ಶ್ರೀನಿವಾಸ



ಶಿಕ್ಷಕಿಯೂ... ಶಾಲಾ ವಾಹನ ಚಾಲಕಿಯೂ..!

10ನೇ ಪುಟದಿಂದ...

ಸೆಕೆಂಡ್ ಹ್ಯಾಡ್ ಮಾರುತಿ ವ್ಯಾನ್ ಖರೀಸಿ, ಅದನ್ನು ಎಂಟು ಸೀಟರ್ ಆಗಿ ಪರಿವರ್ತಿಸಿದೆವು. ಅದಕ್ಕೆ ಅಕ್ಷರ ವಾಹಿನಿ ಎಂದು ಹೆಸರಿಟ್ಟಿದ್ದೇವೆ'.

ಜಲಜಾಕ್ಷಿ ಪ್ರತಿದಿನ ಬೆಳಿಗ್ಗೆ 8.30ಕ್ಕೆ ಸುಳ್ಯದಿಂದ ಸ್ಕೂಟರ್‌ನಲ್ಲಿ ಶಾಲೆಗೆ ಹೋಗುತ್ತಿದ್ದರು. ಈಗಲೂ ವ್ಯಾನ್‌ನಲ್ಲಿ ಅದೇ ಸಮಯಕ್ಕೆ ಹೊರಡುತ್ತಾರೆ. ಪಾಲಕರು ಮಕ್ಕಳನ್ನು ಕರೆದುಕೊಂಡು ನಿಂತಿರುತ್ತಾರೆ. ಅವರನ್ನು ಹತ್ತಿಸಿಕೊಂಡು ಹೋಗುವ ಅವರು, ಬರುವಾಗ ಅವರವರ ಸ್ಥಳಕ್ಕೆ ಬಿಡುತ್ತಾರೆ. ಮಕ್ಕಳಿಗಾಗಿ ಕಾಯುವ ಸಮಸ್ಯೆ ಇಲ್ಲ. 17 ಮಕ್ಕಳು ಶಾಲಾ ವಾಹನದಲ್ಲಿ ಬರುತ್ತಾರೆ. ವಾಹನದ ನಿರ್ವಹಣೆ ವೆಚ್ಚವನ್ನು ಇವರೇ ಹೊಂದಿಸಿಕೊಳ್ಳಬೇಕು. 17 ಮಕ್ಕಳ ಪಾಲಕರು ತಿಂಗಳಿಗೆ ತಲಾ ₹700 ಕೊಡುತ್ತಾರೆ. ಜಲಜಾಕ್ಷಿ ಸ್ಕೂಟರ್‌ನಲ್ಲಿ ಶಾಲೆಗೆ ಹೋಗುವಾಗ ತಿಂಗಳಿಗೆ ಪೆಟ್ರೋಲ್‌ಗಾಗಿ ₹2 ಸಾವಿರ ಖರ್ಚಾಗುತ್ತಿತ್ತು. ಆ ಹಣವನ್ನು ವಾಹನಕ್ಕೆ ಕೊಡುತ್ತಾರೆ. ಈ ಮೊತ್ತವನ್ನು ಸೇರಿಸಿ, ವಾಹನದ ಪೆಟ್ರೋಲ್, ಇತರೆ ವೆಚ್ಚದ ಲೆಕ್ಕ ಬರೆದಿಡುತ್ತಾರೆ. 'ಎಲ್ಲವೂ ಸಮಯಕ್ಕೆ ಸರಿಯಾಗಿ ಆಗುತ್ತಿರುವುದರಿಂದ ಶಾಲಾ ವಾಹನ ಚಾಲನೆಯ ಕೆಲಸ ಹೊರೆ ಎನಿಸುತ್ತಿಲ್ಲ; ಪಾಠ ಪ್ರವಚನಕ್ಕೂ ತೊಂದರೆಯಾಗುತ್ತಿಲ್ಲ. ನಮ್ಮ ಶಾಲೆಯ ಇನ್ನೊಬ್ಬ ಶಿಕ್ಷಕರಿಗೆ ವಾಹನ ಚಾಲನೆ ಬರುತ್ತದೆ. ಅವರೂ ಸುಳ್ಯದಲ್ಲಿಯೇ ಮನೆ ಮಾಡಿದ್ದಾರೆ. ನಾನು ರಜೆ ಇದ್ದರೆ ಅವರು ವಾಹನ ಚಲಾಯಿಸುತ್ತಾರೆ. ಹೀಗಾಗಿ ವಾಹನ ನಿಲ್ಲುವ ಪ್ರಮೇಯವೂ ಇಲ್ಲ' ಎನ್ನುತ್ತಾರೆ ಜಲಜಾಕ್ಷಿ.

1954ರಲ್ಲಿ ಪ್ರಾರಂಭವಾದ ಈ ಶಾಲೆಯಲ್ಲಿ 1ರಿಂದ 7 ನೇ ತರಗತಿ ಇದ್ದು, 115 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಇಂಗ್ಲಿಷ್ ಶಿಕ್ಷಕರು ಸ್ಪೋಕನ್ ಇಂಗ್ಲಿಷ್ ತರಬೇತಿ ನೀಡುತ್ತಾರೆ. ಐವರು ಪೂರ್ಣಕಾಲಿಕ ಶಿಕ್ಷಕರಿದ್ದಾರೆ. ಅವರು ತಿಂಗಳಿಗೆ ತಲಾ ₹2 ಸಾವಿರ ನೀಡುತ್ತಿದ್ದು, ಆ ಹಣದಲ್ಲಿ ಒಬ್ಬರು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡಿದ್ದಾರೆ.

'ಕೋವಿಡ್ ಸಮಯದಲ್ಲಿ ಶಿಕ್ಷಕರು ಖಾಲಿ ಇದ್ದೆವು. ನಮ್ಮ ಶಾಲೆಯ ಆವರಣದಲ್ಲಿ ಒಂದು ಕೊಠಡಿ ಬಳಕೆಯಾಗುತ್ತಿರಲಿಲ್ಲ. ಅಲ್ಲಿ ಗ್ರಂಥಾಲಯ ಮಾಡುವ ಆಲೋಚನೆ ಬಂತು. ದಾನಿಗಳನ್ನು ಸಂಪರ್ಕಿಸಿದೆವು. 'ಪುಸ್ತಕ ಜೋಳಿಗೆ ' ಕಾರ್ಯಕ್ರಮ ಮಾಡಿದೆವು. ಜಿಲ್ಲಾ ಗ್ರಂಥಾಲಯದವರೂ ₹65 ಸಾವಿರ ಮೌಲ್ಯದ ಪುಸ್ತಕ ನೀಡಿದರು. ಪೀಠೋಪಕರಣ ಸಹಿತ ಸುಸಜ್ಜಿತ ಗ್ರಂಥಾಲಯ ರೂಪುಗೊಂಡಿದೆ' ಎಂದು ಗ್ರಂಥಾಲಯಕ್ಕೆ ಕೊರೆದೊಯ್ದು ಸಂಭ್ರಮಿಸಿದರು ಜಲಜಾಕ್ಷಿ, ಇತರೆ ಶಿಕ್ಷಕರು. ಇದೇ ಶಾಲೆಯ ಇನ್ನೊಬ್ಬ ಶಿಕ್ಷಕಿ ಮಮತಾ ಅವರು ತಮ್ಮ ವೇತನದಿಂದ ನಲಿಕಲಿ ಕೊಠಡಿ ನವೀಕರಣ ಮಾಡಿಸಿ, ಅದಕ್ಕೆ ಬೇಕಿರುವ ಉಪಕರಣ ಕೊಟ್ಟಿದ್ದಾರೆ.

ಎಸ್‌ಡಿಎಂಸಿ ಜೊತೆಗೆ ಶಾಲಾ ಪಾಲನಾ ಸಮಿತಿ (ಕರುಣಾಕರ ಹಾಸ್ಪಾರೆ ಇದರ ಅಧ್ಯಕ್ಷರು) ರಚಿಸಲಾಗಿದೆ. ಈ ಸಮಿತಿಯವರು, ಮುಖ್ಯ ಶಿಕ್ಷಕ ಚಿನ್ನಸ್ವಾಮಿ ಶೆಟ್ಟಿ, ಪಾಲಕರು ಅಷ್ಟೇ ಅಲ್ಲ ಇಡೀ ಊರಿನವರೇ ಶಾಲೆಯನ್ನು ಪೋಷಿಸುತ್ತಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಜಿ ಶಿಕ್ಷಣ ಸಚಿವ ಎಚ್.ಜಿ. ಗೋವಿಂದೇಗೌಡ ಅವರ ಹೆಸರಿನಲ್ಲಿ ನೀಡುವ ಅತ್ಯುತ್ತಮ ಶಾಲಾ ಪ್ರಶಸ್ತಿಯನ್ನು ಈ ಬಾರಿ ಈ ಶಾಲೆಗೆ ಲಭಿಸಿದೆ.

ಅಘನಾಶಿನಿಗೆ ರಾಮ್‌ಸಾರ್ ಕಿರೀಟ



ಅಘನಾಶಿನಿ ಹಿನ್ನೀರಿನಲ್ಲಿ ನೀರು ಕಾಗೆಗಳು. ಚಿತ್ರ:ಯೋಗೇಶ್

10ನೇ ಪುಟದಿಂದ...

ಜೀವವೈವಿಧ್ಯದ ಖಜಾನೆ

ಜಗತ್ತಿನ ಯಾವುದೇ ನದಿಯ ಅಳಿವೆಯೂ ಜೀವಿವೈವಿಧ್ಯದ ಖಜಾನೆಯೇ ಆಗಿರುತ್ತದೆ. ಅದು ವಿಜ್ಞಾನಿಗಳ ಸಂಶೋಧನೆಗೆ ಬೇಕಾದ ವಿಷಯಗಳ ಖಜಾನೆಯೂ ಆಗಿರುತ್ತದೆ. ಅಘನಾಶಿನಿ ಅಳಿವೆಯ 'ಬೆಳಚು' (ಸಿಂಪಿ)ಗಳ ವೈವಿಧ್ಯವನ್ನು ನೋಡಬೇಕು. ಭಾರತೀಯ ವಿಜ್ಞಾನ ಸಂಸ್ಥೆಯ ಮಾಧವ ಗಾಡ್ಗೀಳರು ಈ ಪ್ರದೇಶದ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ್ದರು. ಟಿ.ವಿ. ರಾಮಚಂದ್ರ ಮತ್ತು ಸ್ಥಳೀಯ ಪರಿಸರ ವಿಜ್ಞಾನ ಕೇಂದ್ರದ ಎಂ.ಡಿ ಸುಭಾಶ್ಚಂದ್ರನ್ ನೇತೃತ್ವದಲ್ಲಿ ನಡೆದ ಅಧ್ಯಯನ ಪ್ರಕಾರ ಅಘನಾಶಿನಿ ಅಳಿವೆಯಲ್ಲಿ ಒಟ್ಟೂ ಎಂಟು ಜಾತಿಯ ಬೆಳಚುಗಳಿವೆ. ಕೊಂಡಗಾ, ಅಡ್ಡಬೆಳಚು, ಬಿಳಿ ಬೆಳಚು, ಕರಿಬೆಳಚು, ನೀಲಿ ಕಲಗಾ, ದೊಡ್ಡ ಕಲಗಾ, ಸಣ್ಣ ಕಲಗಾ ಮುಂತಾದವು. ಉಪ್ಪಿನಂಶ ಎಷ್ಟಿದೆ ಎಂಬುದನ್ನು ಆಧರಿಸಿ ಯಾವುದು ಎಲ್ಲಿ ಹೆಚ್ಚಿಗೆ ಸಿಗುತ್ತವೆ ಎಂಬುದು ಸ್ಥಳೀಯರಿಗೆ ಗೊತ್ತಿರುತ್ತದೆ. ದಡದಲ್ಲಿ ಅಘನಾಶಿನಿ ಹೆಸರಿನ ಊರಿನ ಮತ್ತು ಆಸುಪಾಸಿನ ಸುಮಾರು ಮೂರು ಸಾವಿರ ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳು ಇಲ್ಲಿನ ನೀರಲ್ಲಿ ಮುಳುಗು ಹಾಕಿ, ಕೆಸರನ್ನು ಬಾಚಿ ಮೇಲೆತ್ತುತ್ತಾರೆ. ಖಾಲಿ ಚಿಪ್ಪು ಸಿಕ್ಕರೆ ಅದು ಸುಣ್ಣದ ಉದ್ಯಮಕ್ಕೆ; ಜೀವಂತ ಬೆಳಚು ಸಿಕ್ಕಿದರೆ ಒಂದು ಬೊಗಸೆಗೆ ಹತ್ತು ರೂಪಾಯಿ ಗಳಿಸುವ ಅದೃಷ್ಟ. ಬಿಳಿಬೆಳಚು, ಸೀಗಡಿ, ಪಾಂಫ್ರೆಟ್ ಎಲ್ಲ ಗೋವಾದ ಸ್ಟಾರ್ ಹೊಟೆಲ್‌ಗಳ ರಸದೂಟಕ್ಕೆ ಹೋಗುತ್ತವೆ. ವಿಜ್ಞಾನಿಗಳ ಅಂದಾಜಿನ ಪ್ರಕಾರ ಈ ಅಳಿವೆಯ ಉತ್ಪಾದಕತೆ ಪ್ರತಿ ಹೆಕ್ಟೇರಿಗೆ ಹನ್ನೊಂದು ಲಕ್ಷ ರೂಪಾಯಿಗಳಷ್ಟಿದೆ. ಪರಿಸರಕ್ಕೆ ಇಲ್ಲಿನ ಜೀವಲೋಕದ ಕೊಡುಗೆಯನ್ನು ಅಂದಾಜು ಮಾಡಿದರೆ ಅದರ ಮೌಲ್ಯ ಐವತ್ತು ಲಕ್ಷ ರೂಪಾಯಿಗಿಂತ ಹೆಚ್ಚಿಗೆ ಇದೆ.



ಬಗೆ ಬಗೆಯ ಏಡಿಗಳು

ಸಾಹಸವೇ ಸರಿ

ಇಂಥ ಅದ್ಭುತ ಪ್ರದೇಶ ಇಲ್ಲಿದೆ ಎಂದು ಜಗತ್ತಿಗೆ ಸಾರಿ ಹೇಳಿದ ವಿಜ್ಞಾನಿಗಳ, ಪಕ್ಷಿಪ್ರೇಮಿಗಳ ಸಾಹಸವೇನು ಕಡಿಮೆಯದಲ್ಲ. ಇಲ್ಲಿನ ಮಣ್ಣಿನಲ್ಲಿ, ನೀರಿನಲ್ಲಿ, ಪೊದೆಗಳಲ್ಲಿ, ಆಕಾಶದಲ್ಲಿ ಚಲಿಸುವ ಜೀವಿವೈವಿಧ್ಯವನ್ನು ಪಟ್ಟಿ ಮಾಡಿ ಅಂತರರಾಷ್ಟ್ರೀಯ ರಾಮ್‌ಸಾರ್ ಸಮಿತಿಗೆ ಸಲ್ಲಿಸಿ, ಅಲ್ಲಿನ ವೀಕ್ಷಕರು ತಪಾಸಣೆಗೆ ಬಂದಾಗಲೆಲ್ಲ ಜೊತೆಯಲ್ಲೇ ಸಂಚರಿಸಿ ಮನದಟ್ಟು ಮಾಡಿಕೊಡುವುದೆಂದರೆ ಅನೇಕ ವರ್ಷಗಳ ಶ್ರಮದ ಕೆಲಸ. ಕರ್ನಾಟಕದಲ್ಲಿ ರಂಗನತಿಟ್ಟು ಪಕ್ಷಿಧಾಮಕ್ಕೆ ಹಿಂದೆಯೇ 'ರಾಮ್‌ಸಾರ್' ಮಾನ್ಯತೆ ಸಿಕ್ಕಿತ್ತು. ಈ 2024ರಲ್ಲಿ ಗದಗದ ಮಾಗಡಿ ಕೆರೆ (54 ಹೆಕ್ಟೇರ್) ಮತ್ತು ಬಳ್ಳಾರಿಯ ಅಂಕಸಮುದ್ರಕ್ಕೂ (98 ಹೆಕ್ಟೇರ್) 'ರಾಮ್‌ಸಾರ್' ಮಾನ್ಯತೆ ಸಿಕ್ಕಿದೆ. ಅಲ್ಲೆಲ್ಲ ಸೀಮಿತ ಕ್ಷೇತ್ರದ ನಿಂತ ನೀರಲ್ಲಿ ಜಲಚರ ಮತ್ತು ಪಕ್ಷಿಗಳ ಗಣತಿ ಮಾಡುವುದು ಸುಲಭ. ಆದರೆ ನಾಲ್ಕು ಸಾವಿರ ಹೆಕ್ಟೇರ್ ವಿಶಾಲ ಅಘನಾಶಿನಿ ಅಳಿವೆಯ ಜೀವಗಣತಿ ಸದಾ ಚಲಿಸುವ ನೀರು, ಚಲಿಸುವ ಜಲಚರ, ಮಳೆಗಾಲದ ಅಬ್ಬರ, ಸಮುದ್ರದ ಉಬ್ಬ ರ ಇವೆಲ್ಲವುಗಳ ನಡುವೆ ಈ ಅಳಿವೆಯ ಮಹತಿಯನ್ನು ಸಾರಿದ್ದು ದೊಡ್ಡ ಸಾಹಸವೇ ಸರಿ.

ಇಲ್ಲಿ ತದಡಿಯಲ್ಲಿ ಬೃಹತ್ ಬಂದರು ನಿರ್ಮಾಣಕ್ಕೆ ಹಿಂದೊಮ್ಮೆ ಹುನ್ನಾರ ನಡೆದಿತ್ತು. ಪರಿಸರ ತಜ್ಞರು ದೊಡ್ಡ ದನಿಯಲ್ಲಿ ಅದನ್ನು ಪ್ರತಿಭಟಿಸಿದ್ದರು. ಏಕೆಂದರೆ ಬಂದರು ನಿರ್ಮಾಣ ಮಾಡುವುದಾದರೆ ಅಲ್ಲಿನ ಕೋಟಿಗಟ್ಟಲೆ ಟನ್ ಕೆಸರು ಮರಳನ್ನು ಬಾಚಿ ದಂಡೆಗೆ ಬಿಸಾಕಬೇಕು. ಅಭಿವೃದ್ಧಿಯ ಹೆಸರಿನ ಆ ಧ್ವಂಸ ಕಾರ್ಯಕ್ಕೆ ಜಲಚರಗಳು ಮತ್ತು ಮೀನುಗಾರರು ಬಲಿಯಾಗಬೇಕಿತ್ತು. ಈಗ 'ರಾಮ್‌ಸಾರ್' ಮಾನ್ಯತೆ ಸಿಕ್ಕ ಮೇಲೆ ಬಂದರು ನಿರ್ಮಾಣದ ಆತಂಕ ಕೊಂಚ ದೂರವಾಗಿದೆ. ಒಂದರ್ಥದಲ್ಲಿ ಇಲ್ಲಿನ ಜೀವಲೋಕವೇ ಒಗ್ಗಟ್ಟಾಗಿ ನಿಂತು ತನ್ನ ರಕ್ಷಣೆಯನ್ನು ತಾನೇ ಮಾಡಿಕೊಂಡಂತಾಗಿದೆ.

ಇಂಥ ಮಾನ್ಯತೆಯನ್ನು ಪಡೆಯಬಲ್ಲ ಇನ್ನೂ ಹತ್ತಾರು ಜಲಧಾಮಗಳು ನಮ್ಮ ನಾಡಿನಲ್ಲಿವೆ. ಅಲ್ಲಲ್ಲಿನ ವನ್ಯಪ್ರೇಮಿಗಳು, ಶಿಕ್ಷಕರು, ಛಾಯಾಗ್ರಾಹಕರು, ಜನಪ್ರತಿನಿಧಿಗಳು- ಒಟ್ಟಾರೆ ಪರಿಸರ ಪ್ರೇಮಿಗಳು ಆಸಕ್ತಿವಹಿಸಿ ವನ್ಯಜೀವ ಮಂಡಳಿಯ ಮೇಲೆ ಒತ್ತಾಯ ಹೇರಿದರೆ ಕರ್ನಾಟಕದ 'ರಾಮ್‌ಸಾರ್ ತಾಣ'ಗಳ ಸಂಖ್ಯೆ 4ರಿಂದ 14ಕ್ಕೂ 24ಕ್ಕೂ ಏರಿಸಬಹುದು. ನೆನಪಿರಲಿ, ಪ್ರತಿವರ್ಷ ಫೆಬ್ರುವರಿ 2ನೇ ದಿನಾಂಕ 'ಜಲಧಾಮಗಳ ಸಂರಕ್ಷಣಾ ದಿನ'. ರಾಮನ ಹೆಸರನ್ನು ಜಪಿಸುವ ದೇಶದಲ್ಲಿ ರಾಮ್‌ಸಾರ್ ಹೆಸರೂ ಜನಪ್ರಿಯ ಆಗಬೇಡವೆ?

ಮೊದಲ ಓದು

ಲವಲವಿಕೆಯಿಂದ ಕೂಡಿದ ಕಥೆಗಳು

ಎಲ್ಲೆಗಳ ದಾಟಿದವಳು ಕಥಾಸಂಕಲನದಲ್ಲಿ ಹಲವು ಕಥೆಗಳ ವಸ್ತುವಿಷಯ ವಿಭಿನ್ನ ಎನಿಸುತ್ತವೆ. ಕೆಲವು ಕಥೆಗಳು ಹೊಸತನದಿಂದ, ಲವಲವಿಕೆಯಿಂದ ಕೂಡಿವೆ. ಈ ಮಟ್ಟಿಗೆ ಕತೆಗಾರ್ತಿ ಶ್ರುತಿ ಬಿ. ಆರ್ ಅಭಿನಂದನಾರ್ಹರು. ಕೆಲವು ಕಥೆಗಳ ಹಲವು ಪಾತ್ರಗಳು ಸ್ತ್ರೀಕೇಂದ್ರಿತವಾಗಿದ್ದು, ಕುಶುಲೋಪರಿ ಮಾತಿಗೆ ಸಿಕ್ಕ ಹಲವು ಪಾತ್ರಗಳನ್ನು, ಇನ್ನಷ್ಟು ಆಳಕ್ಕೆ ಮಾತಿಗೆ ಎಳೆಯುವ ಸಾಧ್ಯತೆಯಿತ್ತು. ಪಾತ್ರಗಳಿಗೆ ಇನ್ನಷ್ಟು ಗಟ್ಟಿತನವನ್ನು ಒದಗಿಸಬಹುದಿತ್ತು. ಅನುಭವದ ಸಾರದೊಳಗೆ ಮೀಯ್ಯದ , ನಿರ್ಭಿಡೆಯಿಂದ ಆಳಕ್ಕಿಳಿಯದೇ ಇರುವುದರಿಂದ ಕಥಾವಸ್ತುಗಳು ನೆನಪಿನಲ್ಲಿ ಉಳಿಯುವುದಿಲ್ಲ.

ಕಥೆಗಳ ಚೌಕಟ್ಟನ್ನು ಹಿಗ್ಗಿಸಿ, ಕಥೆಯನ್ನು ಇನ್ನಷ್ಟು ಮಥಿಸುವ ಕೆಲಸವನ್ನು ಕಥೆಗಾರರು ಮಾಡಬಹುದಿತ್ತು. ದ್ಯಾವಮ್ಮನೂ, ಸತ್ಯನಾರಾಯಣನೂ ಕಥೆಯಲ್ಲಿ ಭಿನ್ನ ಆಹಾರ ಸಂಸ್ಕೃತಿಯ ಘರ್ಷಣೆಯಿದೆ. ಇವುಗಳ ನಡುವೆ ಗುಪ್ತವಾಗಿ ಹರಿಯುವ ಮಾನವೀಯ ಸೆಲೆಯೊಂದು ಓದುಗರ ನಿಟ್ಟುಸಿರಿಗೆ ಕಾರಣವಾಗುತ್ತದೆ. ಕೆಂಪಾದವೋ ಎಲ್ಲ ಕೆಂಪಾದವೋ ಕಥೆಯಲ್ಲಿ ವೈಯಕ್ತಿಕ ಸಮಸ್ಯೆಯೊಂದು ಸಾಮಾಜಿಕ ನಿಂದನೆಗಳನ್ನು ಎದುರಿಸುತ್ತಾ, ಸಾಮಾಜಿಕ ವ್ಯವಸ್ಥೆಯ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಎಲ್ಲೆಗಳ ದಾಟಿದವಳು ಕಥೆಯಲ್ಲಿ ಹೆಣ್ಣು ತನ್ನ ಅಸ್ಮಿತೆಗಾಗಿ ಧರ್ಮದ ಚೌಕಟ್ಟನ್ನು ಮೀರಿ ಮುನ್ನಡೆಯುತ್ತಾಳೆ. ಹಾಗೆ ಮೀರುವಾಗ ಅವಳ ಧೋರಣೆ ಕ್ರಾಂತಿಯ ದಿಕ್ಕಿನಲ್ಲಿದ್ದರೂ ಅದನ್ನು ವಾಚ್ಯವಾಗಿಸದೆ, ಬಹಳ ತಣ್ಣಗಿನ ದನಿಯಲ್ಲಿಯೇ ಕಟ್ಟಿಕೊಡಲು ಕಥೆಗಾರ್ತಿ ಪ್ರಯತ್ನಿಸಿದ್ದಾರೆ. ಹಾಗಾಗಿ ಇಂಥದ್ದೊಂದು ತಥಾಕಥಿತ ಸಂಗತಿಯೂ ಜಾಳು ಜಾಳಾಗದೇ, ಘೋಷಣೆಯ ಹಾದಿ ಹಿಡಿಯದೇ ಎಲ್ಲೆ ಮೀರಿದ ' ದೊಡ್ಡಮ್ಮ' ಪಾತ್ರದ ಬಗ್ಗೆ ಆತ್ಮವಿಶ್ವಾಸವೂ, ಅಂತಕರಣವೂ ಒಟ್ಟಿಗೆ ಮೂಡುತ್ತದೆ.


ಬದುಕಿನೊಳಗೆ ಹೊಕ್ಕಿರುವ ಇನ್ನಷ್ಟು ಕಥೆಗಳ ಜಾಡನ್ನು ಅರಸಿ, ಓದುಗರನ್ನು ಮುಟ್ಟುವ ಕೆಲಸ ಕಥೆಗಾರ್ತಿಯಿಂದಾಗಲಿ.



ಪು: 88 ₹110

ಎಲ್ಲೆಗಳ ದಾಟಿದವಳು
ಲೇ: ಶ್ರುತಿ ಬಿ.ಆರ್
ಪ್ರ: ಜೀರುಂಡೆ ಪ್ರಕಾಶನ
ಸಂ:9742225779

ಗಾಂಧೀಜಿ ವ್ಯಕ್ತಿತ್ವಕ್ಕೆ ಕೈಗನ್ನಡಿ



ಪು: 138 ₹150

ನಮಗೆ ತಿಳಿಯದ ಗಾಂಧೀಜಿ
ಲೇ: ಕೋಡೂರಿ ಶ್ರೀರಾಮಮೂರ್ತಿ
ಕನ್ನಡಕ್ಕೆ:ಎಸ್.ಜಗನ್ನಾಥರಾವ್ ಬಹುಳೆ
ಪ್ರ: ಸಾಧನಾ ಪಬ್ಲಿಕೇಷನ್
ಸಂ: 9480088960

ಗಾಂಧೀಜಿ ಕುರಿತು ಈಗಾಗಲೇ ಸಾಕಷ್ಟು ಕೃತಿಗಳು ಬಂದಿವೆ. ಅವರ ಬಗ್ಗೆ ಹೇಳದೆ ಉಳಿದ ವಿಷಯಗಳು ಬಹಳ ಕಡಿಮೆ. ಅವರ ಆತ್ಮಕಥೆ 'ನನ್ನ ಸತ್ಯಾನ್ವೇಷಣೆ'ಯಲ್ಲಿ ತಮ್ಮ ಬದುಕಿನ ಕುರಿತು ಸಾಕಷ್ಟು ವಿಚಾರಗಳನ್ನು ಹೇಳಿಕೊಂಡಿದ್ದಾರೆ. ಹೀಗಾಗಿ 'ನಮಗೆ ತಿಳಿಯದ ಗಾಂಧೀಜಿ' ಕೃತಿಯ ಶೀರ್ಷಿಕೆ ಸಹಜವಾಗಿ ಕುತೂಹಲ ಮೂಡಿಸುತ್ತದೆ. ಈ ವಿಚಾರವನ್ನು ಪ್ರಾರಂಭದಲ್ಲಿಯೇ ಪ್ರಸ್ತಾಪಿಸಿರುವ ಲೇಖಕ, ಎಲ್ಲಿಯೂ ದೊರೆಯದ ಒಂದಷ್ಟು ವಿಷಯಗಳನ್ನು ಈ ಕೃತಿಯಲ್ಲಿ ಹೇಳಿರುವುದಾಗಿ ಬರೆದುಕೊಂಡಿದ್ದಾರೆ.

ಕೃತಿಯಲ್ಲಿ ಒಟ್ಟು ಒಂಬತ್ತು ಲೇಖನಗಳಿವೆ. 'ಗಾಂಧೀಜಿ ಮಹಾತ್ಮರಾಗಿ ಹೇಗೆ ಬೆಳೆದರು?' ಎಂಬ ಮೊದಲ ಲೇಖನ ಗಾಂಧಿಯವರು ಬಾಲ್ಯದಿಂದ ಮಹಾತ್ಮರಾಗಿ ಬೆಳೆಯುವವರೆಗಿನ ಪಯಣವನ್ನು ವಿವರಿಸುತ್ತದೆ. ಅವರು ಏಕೆ ಉಳಿದವರಿಗಿಂತ ಭಿನ್ನರಾಗಿದ್ದರು ಎಂದು ನಿರೂಪಿಸುವ ಅವರ ಬದುಕಿನ ಒಂದಷ್ಟು ವಿಶಿಷ್ಟ ಘಟನೆಗಳು ಈ ಬರಹದಲ್ಲಿದೆ.

ಗಾಂಧಿಯವರನ್ನು ಪ್ರಭಾವಿಸಿದ ವ್ಯಕ್ತಿಗಳು, ಗ್ರಂಥಗಳ ಕುರಿತು ಒಂದು ಅಧ್ಯಾಯವಿದೆ. ಗಾಂಧಿ ಓದುತ್ತಿದ್ದ ಪುಸ್ತಕಗಳು, ಲೇಖಕರ ಬಹುತೇಕ ಮಾಹಿತಿ ಇಲ್ಲಿದೆ. ಗಾಂಧಿ ತಮ್ಮ ಮಕ್ಕಳನ್ನು ಹೇಗೆ ಬೆಳೆಸಿದರು ಎಂಬ ಒಳನೋಟ ಹೊಂದಿರುವ ಈ ಅಧ್ಯಾಯ ಗಾಂಧಿ ವಿಭಿನ್ನವಾದ ಮಾಹಿತಿಗಳನ್ನು ಒದಗಿಸುತ್ತದೆ. ತೆಲುಗು ಮೂಲದ ಕೃತಿಯನ್ನು ಭಾಷಾಂತರ ಎನ್ನಲು ಸಾಧ್ಯವಿಲ್ಲದಷ್ಟು ಸೊಗಸಾಗಿ ಭಾಷಾಂತರ ಮಾಡಿದ್ದಾರೆ ಎಸ್.ಜಗನ್ನಾಥರಾವ್ ಬಹುಳೆ. ಭಾಷೆಯೂ ಸರಳವಾಗಿದ್ದು ಒಂದೇ ಗುಕ್ಕಿನಲ್ಲಿ ಓದಿ ಮುಗಿಸಬಹುದಾದ ಕೃತಿ. ಗಾಂಧಿಯವರ ಕುರಿತಾದ ಇಲ್ಲಿನ ಕೆಲವಷ್ಟು ವಿಷಯಗಳು ಹೊಸತು. ಆದರೆ ಹಲವಷ್ಟು ಈಗಾಗಲೇ ಅಲ್ಲಲ್ಲಿ ಓದಿರುವಂತಹ ವಿಚಾರಗಳು.

ಷೇರು ಹೂಡಿಕೆದಾರರಿಗೆ ಕೈಪಿಡಿ

ಹಣಕಾಸು ವಹಿವಾಟು ಮತ್ತು ಷೇರು ಹೂಡಿಕೆ ಮಾರ್ಗದರ್ಶನದಲ್ಲಿ ಜನಪ್ರಿಯ ಹೆಸರು ಕೆ.ಜಿ. ಕೃಪಾಲ್. ಕಳೆದ ಐದು ದಶಕಗಳಿಂದ ವಿತ್ತೀಯ ಹೂಡಿಕೆಗಳಿಗೆ ಸಂಬಂಧಿತ ಸಾಕಷ್ಟು ಮಾರ್ಗದರ್ಶಿ ಕೃತಿಗಳನ್ನು ರಚಿಸಿರುವ ಇವರ ನೂತನ ಕೃತಿ 'ಷೇರು ಹೂಡಿಕೆ ಕಲಿ ತಿಳಿ ನಲಿ'. ಪುಸ್ತಕದ ಶೀರ್ಷಿಕೆಯೇ ಹೇಳುವಂತೆ ಇದು ಷೇರು ಹೂಡಿಕೆದಾರರಿಗೆ ಕೈಪಿಡಿ. ಕೋವಿಡ್ ಬಳಿಕ ಬದಲಾದ ಮಾರುಕಟ್ಟೆಯಲ್ಲಿ ಹೂಡಿಕೆ ಒಳನೋಟಗಳನ್ನು ಒದಗಿಸುತ್ತದೆ.

ಪುಸ್ತಕ ಅನೇಕ ಸಣ್ಣ, ಸಣ್ಣ ಬರಹಗಳನ್ನು ಹೊಂದಿದ್ದು ಹೂಡಿಕೆ ಕುರಿತು ಸರಳವಾದ ಭಾಷೆಯಲ್ಲಿ ಮಾಹಿತಿ ಒದಗಿಸುತ್ತ ಹೋಗುತ್ತದೆ. 'ಷೇರು ವಿನಿಮಯ ಕೇಂದ್ರಗಳ ಲಿಸ್ಟಿಂಗ್ ಅನುಕೂಲಗಳು', 'ಐಪಿಒ ಅಂದು–ಇಂದು', 'ಹೂಡಿಕೆ ವಿಧಗಳು', 'ಷೇರು ಪೇಟೆಯ ವಾಸ್ತವ ಸ್ಥಿತಿ' ಮೊದಲಾದ ಲೇಖನಗಳು ಷೇರು ಪೇಟೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿವೆ. ಹೂಡಿಕೆಯ ಇತಿಹಾಸದ ಜೊತೆಗೆ, ವರ್ತಮಾನ, ಭವಿಷ್ಯಗಳ ಒಳನೋಟವೂ ಇಲ್ಲಿ ಕಾಣಸಿಗುತ್ತದೆ.

ತೀರ ಸಾಮಾನ್ಯರು ಓದಿ ಅರ್ಥ ಮಾಡಿಕೊಳ್ಳಬಹುದಾದಷ್ಟು ಸರಳವಾಗಿದೆ. ಹೊಸತಾಗಿ ಷೇರು ವಹಿವಾಟು ಪ್ರಾರಂಭಿಸುವವರಿಗೆ ಷೇರು ಪೇಟೆಯ ಸಮಗ್ರ ಚಿತ್ರಣವನ್ನು ಒದಗಿಸುತ್ತದೆ. ಲೇಖಕ ಕ್ಲಬ್‌ಹೌಸ್ ಆ್ಯಪ್ 'ಷೇರು ಪೇಟೆ ವಿಚಾರ ಮಂಟಪ' ಕಾರ್ಯಕ್ರಮದಲ್ಲಿ ನಡೆಸಿದ ಚರ್ಚೆ, ಸಂವಾದಗಳೇ ಅಕ್ಷರರೂಪಕ್ಕೆ ಇಳಿದಿದೆ. ಹೀಗಾಗಿ ಕೃತಿಯಲ್ಲಿ ಸಾಮಾನ್ಯರ ಪ್ರಶ್ನೆ, ಅಭಿಪ್ರಾಯ, ತಜ್ಞರ ಸಲಹೆಗಳನ್ನೂ ಕಾಣಬಹುದು.

ಹೂಡಿಕೆಯನ್ನು ಹೇಗೆ ಮಾಡಬೇಕು ಎಂಬುದು, ಯಾವ ಕಂಪನಿಗಳಲ್ಲಿ ಹೂಡಿಕೆ ಸೂಕ್ತ ಎಂಬುದನ್ನು ಆಯ್ದ ಉದಾಹರಣೆಗಳ ಸಹಿತ ವಿವರಿಸಿರುವುದು ವಿಷಯವನ್ನು ಸುಲಭವಾಗಿ ಅರ್ಥ ಮಾಡಿಸುತ್ತದೆ. ಷೇರು ಪೇಟೆ ವಹಿವಾಟಿಗೆ ಹಣಕಾಸು ಕ್ಷೇತ್ರದ ತಜ್ಞರಾಗಿರಬೇಕಿಲ್ಲ, ಸಾಮಾನ್ಯರೂ ಕೂಡ ಸೂಕ್ತ ಮಾರ್ಗದರ್ಶನ, ತಿಳಿವಳಿಕೆಯೊಂದಿಗೆ ವಹಿವಾಟು ನಡೆಸಬಹುದು ಎಂಬುದನ್ನು ಲೇಖಕ ಇಲ್ಲಿ ನಿರೂಪಿಸಿದ್ದಾರೆ.



ಪು: 94 ₹100

ಷೇರು ಹೂಡಿಕೆ
ಲೇ: ಕೆ.ಜಿ.ಕೃಪಾಲ್
ಪ್ರ: ವಿಕ್ರಮ್ ಪ್ರಕಾಶನ
ಸಂ: 9740994008

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮಾನಸಾನ್ನ

ಮಾನಸ (ನಾ). ಅಂತರಂಗ; ಮನಸ್ಸು; ಚಿತ್ತ
ಅನ್ನ (ನಾ). ಆಹಾರ; ಊಟ.

'ಮಾನಸಾನ್ನ'ದ ಅರ್ಥ ಮಾನಸಿಕ ಶಕ್ತಿ. ಕುವೆಂಪು ಅವರು ಇದನ್ನು ಒಂದು ನುಡಿಗಟ್ಟಾಗಿ ಬಳಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮಾನಸ ಪದದೊಂದಿಗೆ ಬೆರೆತು ಹಲವು ಪದಗಳು ಸೃಷ್ಟಿಯಾಗಿವೆ. ಮಾನಸಪೂಜೆ, ಮಾನಸಶಾಸ್ತ್ರ, ಮಾನಸಸ್ನಾನ, ಮಾನಸಾತ್ಮಕ, ಮಾನಸಾಹಾರ, ಮಾನಸಗಂಗೋತ್ರಿ ಮುಂತಾದವುಗಳು. ಕುವೆಂಪು ಅವರು ಮಾನಸದೊಂದಿಗೆ ಅನ್ನವನ್ನು ಕೂಡಿಸಿ 'ಮಾನಸಾನ್ನ' ಎಂಬ ಪದ ನಿರ್ಮಿಸಿ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ 'ಇರ್ದುದು ಮಹೇಂದ್ರಾಚಲಂ' ಸಂಚಿಕೆಯಲ್ಲಿ ಪ್ರಯೋಗಿಸಿದ್ದಾರೆ.

ಆಂಜನೇಯನು ಸಮುದ್ರ ಲಂಘನಕ್ಕೆ ಮೊದಲು ತನ್ನಲ್ಲಿ ವಾನರರೆಲ್ಲರ ಅಭಿಪ್ಸೆ ಮೂರ್ತಿವೆತ್ತಿದೆ ಎಂದು ಅವರನ್ನುದ್ದೇಶಿಸಿ ಹೇಳುವಾಗ ಈ ಪದ ಪ್ರಯೋಗವಾಗಿದೆ.

**"ಅಣುವನಾಂ;
ನಿಮ್ಮೆಲ್ಲರಿಚ್ಛೆ ತಾಂ ಕೆಚ್ಚಿಂ ಕಟ್ಟಲು ಉದಿಸಿತೀ
ಮಹತೋ ಮಹೀಯತಾ ಗೋಪುರೋಪಮ ಮೂರ್ತಿ.
ಪ್ರಾರ್ಥನಾ ಸೃಷ್ಟನಂ ಸ್ತೋತ್ರ ಸಂಪುಷ್ಟನಂ
ಪೊರೆಯುತಿರಿಮಾ ಮಾನಸಾನ್ನದಿಂ,
ವಾರ್ಧಿಯಂ
ದಾಂಟಿ, ದೇವಿಯನರಸಿ ಪಿಂತಿರುಗಿ ನಾನಿಲ್ಲಿ
ನಿಮ್ಮೆಡೆಗೆ ಬರ್ಪನ್ನೆಗಂ ಮರೆಯದಿರಿ; ನಿಮ್ಮಾತ್ಮ
ಯೋಗಮೆ ನನಗೆ ಶಕ್ತಿ!'**

ಕುವೆಂಪು ಅವರು 'ಮಾನಸಾನ್ನ' ಪದ ಪ್ರಯೋಗ ಕುರಿತು ಹೀಗೆ ಸೋದಾಹಾರವಾಗಿ ವಿವರಿಸಿದ್ದಾರೆ:

'ಈ 'ಮಾನಸ್ನಾನ' ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಗಾಂಧೀಜಿ ಒಂದು ದೊಣ್ಣೆ ಹಿಡಿದು, ಕಾಲ್ನಡಿಗೆಯಲ್ಲಿ ಹೊರಟು ಉಪ್ಪು ತಯಾರಿಸಲು ಹೋಗಿ, ಬ್ರಿಟೀಷ್ ಚಕ್ರಾಧಿಪತ್ಯವನ್ನು ನಡುಗಿಸದನೆಂದರೆ ನಂಬುವುದು ಹೇಗೆ? ಒಬ್ಬ ಮುದುಕನ ಕೈಯಿಂದ ಸಾಧ್ಯವೇ? ಅಲ್ಲಿ ಹೋದ ವ್ಯಕ್ತಿ, ಒಬ್ಬ, ಅವನ ಹಿಂದೆ ಕೆಲವರು ಭೌತಿಕವಾಗಿ ಹಿಂಬಾಲಿಸಿರಬಹುದು. ನಾಲ್ವತ್ತು ಕೋಟಿ ಚೇತನಗಳು, ಒಂದಲ್ಲ ಒಂದು ರೀತಿಯ ಮಾನಸಾನ್ನದಿಂದ, ಆತನಲ್ಲಿ ಶಕ್ತಿಯನ್ನು ಉದ್ದೀಪಿಸಿದವು. ಆ ನಾಲ್ವತ್ತು ಕೋಟಿ ಚೇತನಗಳು ಶಕ್ತಿ ಹರಿವ ಕಾಲುವೆಯಾದರು ಗಾಂಧೀಜಿ. ಹಾಗೆಯೇ ಇಲ್ಲಿ ಆಂಜನೇಯ ವಾನರ ಚೇತನಗಳು ಸಂಘಶಕ್ತಿ. "ನಿಮ್ಮಾತ್ಮ ಯೋಗವೆ ನನಗೆ ಶಕ್ತಿ. ಆದರೂ ನಾನೇನು ಕಡಿಮೆ ಆಸಾಮಿಯಲ್ಲ".

(ಕುವೆಂಪು, ಸಮಗ್ರ ಗದ್ಯ ಸಂಪುಟ 2. ಪು.595)



ಚಿತ್ರಗಳು : ಕಣಕಾಲಮಠ

ಶೋಮ್ಯಾನ್ ಶತಮಾನೋತ್ಸವ

ವಿಶಾಖ ಎನ್.

'ಮೇರಾ ಜೂತಾ ಹೈ ಜಪಾನಿ, ಯೇ ಪತ್ಲೂನ್ ಇಂಗ್ಲಿಸ್ತಾನಿ, ಸರ್ಪೆ ಲಾಲ್ಟೋಪಿ ರೂಸಿ, ಫಿರ್ಭಿ ದಿಲ್ಹೈ ಹಿಂದೂಸ್ಥಾನಿ' (ನನ್ನ ಬೂಟು ಜಪಾನಿನದ್ದು, ಪ್ಯಾಂಟು ಇಂಗ್ಲಿಷ್ ದೇಶದ್ದು, ತಲೆ ಮೇಲಿನ ಕೆಂಪು ಟೋಪಿ ರಷ್ಯಾದ್ದು, ಇಷ್ಟಾದರೂ ಹೃದಯ ಹಿಂದೂಸ್ಥಾನದ್ದು)...

'ಶ್ರೀ 420' ಸಿನಿಮಾ ಹಾಡಿನ ಈ ಸಾಲುಗಳು ರಾಜ್ ಕಪೂರ್ ದೃಷ್ಟಿಕೋನ ಕಾಣಿಸಬಲ್ಲ ಒಂದು ಪುಟ್ಟ ಟಿಪ್ಪಣಿ ಇದ್ದಂತೆ. ಮುಕೇಶ್ ಕಂಠದ ಈ ಹಾಡನ್ನು ರಾಜ್ ಕಪೂರ್ ಕೂಡ ಪದೇಪದೇ ಉಲ್ಲೇಖಿಸುತ್ತಿದ್ದರು. ದೇಶ, ರಾಜ್ಯವನ್ನು ಅವರು ಹೇಗೆ ಪರಿಭಾವಿಸಿದ್ದರು ಎನ್ನುವುದರ ಆಂತರ್ಯವನ್ನು ಅಡಗಿಸಿಟ್ಟುಕೊಂಡ ಹಾಡು ಇದು.

ರಾಜ್ ಕಪೂರ್ ಅವರೊಳಗೆ ಸಿನಿಮಾ ಪ್ರೀತಿ ಇತ್ತು. ದೇಶಭಕ್ತಿ ಇತ್ತು. ಬದುಕು ಕಟ್ಟಿಕೊಟ್ಟ ನೋವು-ನಲಿವಿನ ಬುತ್ತಿ ಇತ್ತು. ಅವನ್ನೆಲ್ಲ ಪರದೆಯ ಮೇಲೆ ತಂದ ಕಾರಣಕ್ಕೇ ಅವರು 'ಶೋಮ್ಯಾನ್' ಆದದ್ದು. ಪೆಶಾವರದ ಕಪೂರ್ ಹವೇಲಿಯಲ್ಲಿ ಹುಟ್ಟಿದವರು ರಾಜ್ ಕಪೂರ್. ಆಮೇಲೆ ಅವರ ಕುಟುಂಬ ಬಾಂಬೆಗೆ ಸ್ಥಳಾಂತರಗೊಂಡಿತು.

ಪೃಥ್ವಿರಾಜ್ ಕಪೂರ್ ಮಗ ಎನ್ನುವ ಕಾರಣಕ್ಕೆ ರಾಜ್ ಕಪೂರ್ ಅವರಿಗೆ ಉಣ್ಣಲು ಬೆಳ್ಳಿ ತಟ್ಟೆ ಸಿಕ್ಕಿತೆನ್ನುವುದು ನಿಜ. ಆದರೆ, ಸಿನಿಮಾ ಅವಕಾಶವನ್ನು ಯಾರೂ ಬೆಳ್ಳಿತಟ್ಟೆಯಲ್ಲಿ ಇಟ್ಟು ಕೊಡಲಿಲ್ಲ.

ಮೊದಲಿಗೆ, ಬಾಂಬೆ ಟಾಕೀಸ್ ಸ್ಟುಡಿಯೊದಲ್ಲಿ 1930ರ ದಶಕದಲ್ಲಿ ಕ್ಲಾಪ್ ಬಾಯ್ ಆಗಿ ರಾಜ್ ಕಪೂರ್ ಸಿನಿಮಾ ಸೂಕ್ಷ್ಮಗಳನ್ನು ಕಲಿಯಲು ಆರಂಭಿಸಿದರು. ಮಾಗುತ್ತಾ ಹೋದಂತೆ, ನಿರ್ದೇಶಕ ಕೇದಾರ್ ಶರ್ಮ ಅವರಿಗೆ ಸಹಾಯಕರಾಗಿ ಕೆಲಸ ಶುರುಮಾಡಿದರು. ಅದೇ ನಿರ್ದೇಶಕ 1947ರಲ್ಲಿ 'ನೀಲ್ ಕಮಲ್' ಸಿನಿಮಾದಲ್ಲಿ ಅಭಿನಯಿಸುವ ಅವಕಾಶವನ್ನು ರಾಜ್ ಕಪೂರ್ ಅವರಿಗೆ ನೀಡಿದರು; ಅದೂ ನಾಯಕನಾಗಿ. ಎದುರಲ್ಲಿ ನಾಯಕಿಯಾಗಿ ಮಧುಬಾಲಾ ಇದ್ದರು. ಇಬ್ಬರಿಗೂ ಮುಖ್ಯ ಪಾತ್ರಗಳಲ್ಲಿ ಮೊದಲ ಯತ್ನ. ಸಿನಿಮಾ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಅದಕ್ಕೂ ಬಹಳ ಹಿಂದೆ, ಹತ್ತನೇ ವಯಸ್ಸಿನಲ್ಲಿಯೇ ರಾಜ್ ಕಪೂರ್, 'ಇಂಕಿಲಾಬ್' ಎಂಬ ಸಿನಿಮಾದಲ್ಲಿ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದರು.

ಆರ್.ಕೆ. ನಿರ್ಮಾಣ ಸಂಸ್ಥೆ ಕಟ್ಟಿ, ತಾವೇ ಆ ಬ್ಯಾನರ್‌ನಲ್ಲಿ ನಿರ್ಮಾಪಕರಾಗಿ 'ಆಗ್' ಹಿಂದಿ ಸಿನಿಮಾ ಮೇಲೆ ಬಂಡವಾಳ ಹೂಡಿದಾಗ, ಇಂದರ್ ರಾಜ್ ಆನಂದ್ ಎಂಬ ಬರಹಗಾರ ಅವರಿಗೆ ಸ್ಕ್ರಿಪ್ಟ್ ಮಾಡಿಕೊಟ್ಟರು. ವಕೀಲರ ಕುಟುಂಬದ ಹುಡುಗನೊಬ್ಬ ರಂಗಮೋಹಿಯಾದ ನಂತರದ ಬದುಕಿನ ಕಥನವನ್ನು ಫ್ಲ್ಯಾಷ್‌ಬ್ಯಾಕ್‌ನಲ್ಲಿ ಹೇಳುವ ಕಥೆ ಇರುವ ಸಿನಿಮಾ ಅದು. ಆ ಸಿನಿಮಾದ ನಿರ್ದೇಶಕರೂ ಆಗಿ ರಾಜ್ ಕಪೂರ್ ಸಾಣೆಗೆ ಒಟ್ಟಿಕೊಂಡರು. ಆ ಕಾಲಘಟ್ಟದಲ್ಲಿ ಅತಿ ಚಿಕ್ಕ ವಯಸ್ಸಿನಲ್ಲಿ ಸಿನಿಮಾ ನಿರ್ದೇಶಿಸಿದ ವ್ಯಕ್ತಿ ಎಂಬ ಹೆಗ್ಗಳಿಕೆಯೂ ಅವರದ್ದಾಯಿತು. ಆಗಿನ್ನೂ ಅವರಿಗೆ 24 ವರ್ಷ. ಆ ಸಿನಿಮಾ ಕೂಡ ಗೆಲ್ಲಲಿಲ್ಲ.

ರಾಜ್ ಕಪೂರ್ ಸಿನಿಮಾ ಸಾಹಸ ಟೇಕಾಫ್ ಆಗುವ ಮೊದಲೇ ಕೃಷ್ಣಾ ಮಲ್ಹೋತ್ರ ಅವರೊಟ್ಟಿಗೆ ವಿವಾಹವಾಗಿತ್ತು. ರಾಜ್ ಕಪೂರ್ ಅವರಿಗೆ ಐವರು ಮಕ್ಕಳು-ರಣಧೀರ್ ಕಪೂರ್, ರಿಶಿ ಕಪೂರ್, ರಾಜೀವ್ ಕಪೂರ್, ರಿತು ನಂದಾ ಹಾಗೂ ರಿಮಾ ಜೈನ್. ಮೂವರೂ ಪುತ್ರರು ಸಿನಿಮಾ ನಟರಾಗಿ ತಂದೆಯ ಹಾದಿಯಲ್ಲೇ ನಡೆದರು. ರಣಧೀರ್ ಕಪೂರ್ ಅವರ ಮಕ್ಕಳಾದ ಕರಿಷ್ಮಾ ಹಾಗೂ ಕರೀನಾ ಕಪೂರ್ ಕೂಡ ನಟಿಯರಾಗಿ ಹೊಳೆದವರು. ಈಗ ರಿಶಿ ಕಪೂರ್ ಮಗ ರಣಬೀರ್ ಕಪೂರ್ ಸ್ಟಾರ್ ನಟರಲ್ಲಿ ಒಬ್ಬರೆನಿಸಿಕೊಂಡಿದ್ದಾರೆ.

ರಾಜ್ ಹೀಗೆ ಕೇವಲ ವೈಯಕ್ತಿಕವಾಗಿ ಶೋಮ್ಯಾನ್ ಆಗಲಿಲ್ಲ; ಕುಟುಂಬದ ಕುಡಿಗಳಿಂದ ಸಿನಿಮಾ ಬೇರು-ಟಿಸಿಲುಗಳು ಹರಡುವಂತೆ ನೀರೆರೆಯುತ್ತಾ ಹೋದದ್ದೂ ಅಪರೂಪದ ವಿದ್ಯಮಾನ.

ಅವರ ಸಿನಿಮಾ ಇನಿಂಗ್ಸ್‌ಗಳಲ್ಲಿ ಕೆಲವು ಶತಕ, ದ್ವಿಶತಕದ ಕ್ರಿಕೆಟ್ ಆಟದ ಸುಖದಂತೆ ಕಂಡರೆ, ಹಲವು ಡಕ್ ಔಟ್ ಅನುಭವಗಳು.

'ಆಗ್' ಸಿನಿಮಾ ಸೋತ ಮೇಲೆ 1949ರಲ್ಲಿ ದಿಲೀಪ್ ಕುಮಾರ್ ಜತೆಯಲ್ಲಿ 'ಅಂದಾಜ್' ಚಿತ್ರದಲ್ಲಿ ಅಭಿನಯಿಸಿದರು. ನಟನಾಗಿ ಅವರು ಕಂಡ ಮೊದಲ ಹಿಟ್ ಚಿತ್ರ ಅದು. ಮೆಹಬೂಬ್ ಖಾನ್ ನಿರ್ದೇಶನದ ಆ ಸಿನಿಮಾದ ಮೆಲೋಡ್ರಾಮಾ, ಮುಂದೆ ರಾಜ್ ಅವರ ಸಿನಿಪಯಣಕ್ಕೆ ಪಾಠದಂತೆಯೂ ಇತ್ತು.

ಪೃಥ್ವಿರಾಜ್ ಕಪೂರ್ ಅವರನ್ನು ಕ್ಲಾಸಿಕ್ ಹೀರೊ ಎನ್ನಬಹುದಾದರೆ, ರಾಜ್ ಕಪೂರ್ ಅವರನ್ನು ಹೊಸಕಾಲಕ್ಕೆ ತಕ್ಕಹಾಗೆ ಅಭಿನಯ ಶೈಲಿ ರೂಢಿಸಿಕೊಂಡ ಜನಪ್ರಿಯ ಹೀರೊ ಎನ್ನಬೇಕು. ಸಂಗೀತ ಅವರ ಸಿನಿಮಾಗಳ ಪ್ರಮುಖ ಧಾರೆ. ಪಂಜಾಬಿ ಸಂಸ್ಕೃತಿಗೆ ದೊಡ್ಡದನಿ ಕೊಟ್ಟು, ಸಿನಿಮಾ ಪರದೆಗೆ ತಂದ ಶೈಲಿಯೂ ಅವರದ್ದೇ.

'ಆವಾರಾ' ಸಿನಿಮಾದಲ್ಲಿ ರಾಜ್ ಕಪೂರ್ ಹಾಗೂ ನರ್ಗೀಸ್ ಜೋಡಿ ಮೋಡಿ ಮಾಡಿತು. ಚಾರ್ಲಿ ಚಾಪ್ಲಿನ್ ಶೈಲಿಯನ್ನು ತಮ್ಮದಾಗಿಸಿಕೊಂಡು, ಆ ಆಂಗಿಕ ಅಭಿನಯಕ್ಕೆ ಭಾರತೀಯತೆಯ ಅಮಾಯಕನ ಒಂದು ಫಲುಕನ್ನೂ ಸೇರಿಸಿಕೊಂಡರು. ಅದು ಒಳ್ಳೆಯ ಫಲವನ್ನೇ ಕೊಟ್ಟಿತು. 'ಬರ್ಸಾತ್', 'ಶ್ರೀ 420' ಕೂಡ ಇದೇ ಜೋಡಿಯ ಪ್ರಮುಖ ಸಿನಿಮಾಗಳು.

ಖ್ವಾಜಾ ಅಹಮದ್ ಅಬ್ಬಾಸ್ ಸಂಭಾಷಣೆ, ಶಂಕರ್ ಜೈಕಿಶನ್ ಸಂಗೀತ, ಹರಜತ್ ಜೈಪುರಿ-ಶೈಲೇಂದ್ರ ಚಿತ್ರಸಾಹಿತ್ಯ, ಲತಾ ಮಂಗೇಷ್ಕರ್, ಮುಕೇಶ್ ಹಾಡುಗಾರಿಕೆ- ಇವೆಲ್ಲವನ್ನೂ ಒಂದು ಸೂತ್ರಕ್ಕೆ ತಂದು ಪೋಣಿಸಿದವರು ರಾಜ್.

ನರ್ಗೀಸ್ ಹಾಗೂ ರಾಜ್ ನಡುವೆ ಆಪ್ತ ಸಂಬಂಧವಿದೆ ಎಂಬ ಗುಸುಗುಸು ಕೂಡ ಆ ಕಾಲದಲ್ಲಿ ಇತ್ತು. ರಾಜ್ ಕಪೂರ್ ಹೇಳಿದ ಕಾರಣಕ್ಕೇ ಕೆ. ಆಸಿಫ್ ಅವರ ಮುಘಲ್-ಎ-ಆಜಮ್ ಚಿತ್ರದ ಅನಾರ್ಕಲಿ ಪಾತ್ರದಲ್ಲಿ ನಟಿಸಲು ನರ್ಗೀಸ್ ನಿರಾಕರಿಸಿದ್ದರು ಎನ್ನುವುದಂತೂ ದೊಡ್ಡ ಸುದ್ದಿಯಾಗಿತ್ತು.

> ಚಾರ್ಲಿ ಚಾಪ್ಲಿನ್ ಆಂಗಿಕ ಶೈಲಿ, ಭಾರತದ ನೆಲದ ಬಡತನ-ಭ್ರಷ್ಟಾಚಾರದ ಬಿಂಬವಾಗುವ ನಾಯಕ, ನಾಯಕಿಯರ ಸೌಂದರ್ಯ ದರ್ಶನ... ಎಲ್ಲವನ್ನೂ ಬೆಳ್ಳಿಪರದೆ ಮೇಲೆ ತಮ್ಮದೇ ಶೈಲಿಯಲ್ಲಿ ಕಟ್ಟಿಕೊಟ್ಟ ನಿರ್ಮಾಪಕ-ನಿರ್ದೇಶಕ-ನಟ ರಾಜ್ ಕಪೂರ್ ಅವರ ಜನ್ಮ ಶತಮಾನೋತ್ಸವ ಶುರುವಾಗಿದೆ. ಈ ಸಂದರ್ಭದಲ್ಲಿ ಅವರ ಸಿನಿಪಯಣದ ಪಕ್ಷಿನೋಟವಿದು...

ಒಂದು ಸೂತ್ರವನ್ನೇ ಹಿಡಿದುಕೊಂಡು 'ಬೂಟ್ಪಾಲಿಶ್', 'ಅಬ್ ದಿಲ್ಲಿ ದೂರ್ ನಹೀ', 'ಜಾಗ್ತೆ ರಹೋ' ಸಿನಿಮಾಗಳನ್ನು ರಾಜ್ ಕಪೂರ್ ಮಾಡಿದರಾದರೂ ಅವು ಅಷ್ಟೇನೂ ಯಶಸ್ವಿಯಾಗಲಿಲ್ಲ. 'ಅಬ್ ದಿಲ್ಲಿ ದೂರ್ ನಹೀ' ಅಂತೂ ಅವರ ನಿರ್ಮಾಣದ ಚಿತ್ರಗಳಲ್ಲೇ ದೊಡ್ಡ ಫ್ಲಾಪ್.

ಕಾಲ ಕ್ರಮೇಣ ನರ್ಗೀಸ್ ಹಾಗೂ ರಾಜ್ ತಂತಮ್ಮ ಭಿನ್ನ ದಾರಿಯಲ್ಲಿ ನಡೆದರು. ಆಗ ರಾಜ್ ದಕ್ಷಿಣ ಭಾರತದ ನಟಿಯರ ಕಡೆಗೆ ಕಣ್ಣು ಹೊರಳಿಸಿದರು. ಪದ್ಮಿನಿ, ವೈಜಯಂತಿ ಮಾಲಾ ಸೆಳೆಯುವ ಕಣ್ಣುಗಳು ಪರದೆಯ ಮೇಲೆ ಪ್ರೇಕ್ಷಕರು ಕಣ್ಣು ಕೀಲಿಸುವಂತೆ ಮಾಡಿದ್ದೇ ಅವರನ್ನು ರಾಜ್ ಆರಿಸಿದ ಕಾರಣದಿಂದ.

'ಜಿಸ್ ದೇಶ್ಮೇ ಗಂಗಾ ಬೆಹತಿ ಹೈ' ಪದ್ಮಿನಿ ಅವರ ಛಾಪಿಗೆ ಉದಾಹರಣೆಯಾದ ಸಿನಿಮಾ.



'ಸಂಗಮ್' ಸಿನಿಮಾದ ವೈಜಯಂತಿ ಮಾಲಾ ಅವರನ್ನಂತೂ ಮರೆಯಲು ಸಾಧ್ಯವಿಲ್ಲ. ಮುಂದೆ ನರ್ಗೀಸ್ ಅವರು ನಟ ಸುನಿಲ್ ದತ್ ಅವರನ್ನು ಮದುವೆಯಾದರು.

ಸಿನಿಮಾಗಳು ತಮ್ಮ ಆತ್ಮಕಥೆಯ ತುಣುಕುಗಳು ಎಂದೇ ರಾಜ್ ಭಾವಿಸಿದ್ದರು. ತಮ್ಮ ಚಿತ್ರದ ನಾಯಕ ಕೊಳೆಗೇರಿಯವರಿಗೂ, ಫುಟ್ಪಾತ್ ಮೇಲೆ ಮಲಗುವವರಿಗೂ 'ರಿಲೇಟ್' ಆಗಬೇಕು ಎನ್ನುವ ಉಮೇದು ಅವರಿಗೆ ಇತ್ತು. ಅದಕ್ಕೇ ನಾಟಕೀಯ ಭಂಗಿಯ ಅಮಾಯಕ ನಾಯಕನನ್ನು ಅವರು ಪದೇಪದೇ ಮುದ್ದಿಸಿದ್ದು.

'ಮೇರಾ ನಾಮ್ ಜೋಕರ್' ಅವರು ಆರು ವರ್ಷ ಉಜ್ಜಿ ಮಾಡಿದ ಸಿನಿಮಾ. ಅದು ಕೂಡ ಫ್ಲಾಪ್. ಆ ಹೊಡೆತದ ನಂತರವೂ ರಾಜ್ ಅವರು 'ಬಾಬಿ' ಸಿನಿಮಾ ನಿರ್ದೇಶಿಸಿ ಡಿಂಪಲ್ ಕಪಾಡಿಯಾ ಅವರಂಥ ಸ್ನಿಗ್ಧ ಸೌಂದರ್ಯದ ಹುಡುಗಿಯನ್ನು ಪರದೆಯ ಮೇಲೆ ತೇಲಿಬಿಟ್ಟರು. 'ಸತ್ಯಂ ಶಿವಂ ಸುಂದರಂ'ನ ಜೀನತ್ ಅಮಾನ್, 'ರಾಮ್ ತೇರಿ ಗಂಗಾ ಮೈಲಿ'ಯ ಮಂದಾಕಿನಿ ರಾಜ್ ಕಪೂರ್ 'ಸೌಂದರ್ಯ' ಪ್ರಜ್ಞೆಗೆ ಉದಾಹರಣೆಗಳು. ಬಿಚ್ಚು ನಾಯಕಿಯರನ್ನು ತೋರಿಸಿದ ಕಾರಣಕ್ಕೆ ಅವರಿಗೆ ಟೀಕೆಗಳೂ ಎದುರಾದವೆನ್ನಿ. 'ಸಿನಿಮಾ ಒಂದು ಶೋ ಮಾಧ್ಯಮ' ಎಂದಷ್ಟೆ ಅವರು ಇಂತಹ ಟೀಕೆಗಳಿಗೆ ಉತ್ತರ ಕೊಟ್ಟರು.

'ಹೆನ್ನಾ' (1991) ರಾಜ್ ನಿರ್ದೇಶಿಸಿದ ಕೊನೆಯ ಚಿತ್ರ. ಅದರ ಬಹುತೇಕ ಕೆಲಸಗಳನ್ನು ಮಗ ರಣಧೀರ್ ಕಪೂರ್ ನೋಡಿಕೊಂಡರು.

ತಂದೆ ಪೃಥ್ವಿರಾಜ್ ಕಪೂರ್ ಅವರಿಗೆ ಮರಣೋತ್ತರವಾಗಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಾಗ, ರಾಜ್ ಅವರೇ ಅದನ್ನು ಸ್ವೀಕರಿಸಿದ್ದರು. ಕೆಲವೇ ವರ್ಷಗಳ ನಂತರ ಖುದ್ದು ತಮಗೇ ಆ ಪ್ರಶಸ್ತಿ ಬಂದಾಗ ಮಗುವಿನಂತೆ ಖುಷಿಪಟ್ಟಿದ್ದರು. 1988ರಲ್ಲಿ ಆ ಪ್ರಶಸ್ತಿ ಸ್ವೀಕರಿಸಿದ ತಿಂಗಳಲ್ಲೇ ಹೃದಯಾಘಾತದಿಂದ ಅವರು ಮೃತಪಟ್ಟರು. 63 ವರ್ಷಗಳ ಅವರ ಬದುಕಿನಲ್ಲಿ ಏನಿಲ್ಲವೆಂದರೂ ನಾಲ್ಕು ದಶಕಕ್ಕೂ ಹೆಚ್ಚು ಅವಧಿ ಸಿನಿಮಾ ಕನವರಿಕೆಗೇ ಮೀಸಲಾದದ್ದು ಅವರ ತುಡಿತಕ್ಕೆ ಸಾಕ್ಷಿ.

ಹನ್ನೊಂದು ಫಿಲ್ಮ್‌ಫೇರ್ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ, ಸ್ಟುಡಿಯೊದಲ್ಲಿ ಸೆಟ್ ಹಾಕಿ ಒಂದೇ ಕ್ರಮದಲ್ಲಿ ತೆಗೆಯುತ್ತಿದ್ದ ಸಿನಿಮಾಗಳಿಗೆ 'ನಿಯೊ-ನಾಯ್ರ್' ಶೈಲಿಯನ್ನು ದಕ್ಕಿಸಿಕೊಟ್ಟು, ಸಂಗೀತದಿಂದಲೂ ಸಿನಿಮಾಗಳನ್ನು ಗೆಲ್ಲಿಸಬಹುದು ಎನ್ನುವುದನ್ನು ಹೇಳಿಕೊಟ್ಟ ರಾಜ್ ಈಗಲೂ ತಮ್ಮತನದಿಂದ ತಲೆಮಾರುಗಳನ್ನು ಕಾಡುತ್ತಿದ್ದಾರೆ.

'ಕಿಸಿ ಕಿ ಮುಸ್ಕುರಾಹಟೋಂ ಪೆ ಹೋ ನಿಸಾರ್/ ಕಿಸಿ ಕಾ ದರ್ದ್ ಮಿಲ್ ಸಕೆ ತೊ ಲೆ ಉಧಾರ್... ಜೀನಾ ಇಸೀ ಕಾ ನಾಮ್ ಹೈ' (ಯಾರದ್ದಾದರೂ ಖುಷಿಗಾಗಿ ತ್ಯಾಗ ಮಾಡು/ಯಾರದ್ದಾದರೂ ನೋವು ಸಿಕ್ಕರೆ ಸಾಲ ಪಡೆದುಕೋ... ಇದೇ ಬದುಕು) ಎಂಬ 'ಅನಾರಿ' ಸಿನಿಮಾದ ಅವರ ಹಾಡನ್ನು ರಾಜ್ ಬದುಕಿಗೂ ಅನ್ವಯಿಸಬಹುದು.


ರಾಜ್ ಸಿನಿಮಾಗಳ ಮರುದರ್ಶನ

ಡಿಸೆಂಬರ್ 14ಕ್ಕೆ ಬೆಳ್ಳಿಪರದೆಯ ಧೀಮಂತರಲ್ಲಿ ಒಬ್ಬರಾದ ರಾಜ್ ಕಪೂರ್ ಹುಟ್ಟಿ ನೂರು ವರ್ಷ. ಮುಂದಿನ ಒಂದು ಇಡೀ ವರ್ಷ ಅವರ ಶತಮಾನೋತ್ಸವ. 40 ನಗರಗಳ ಪಿವಿಆರ್-ಐನಾಕ್ಸ್, ಸಿನೆಪೊಲಿಸ್‌ನ 135 ಚಿತ್ರಮಂದಿರಗಳಲ್ಲಿ ರಾಜ್ ಕಪೂರ್ ಸಿನಿಮಾಗಳ ಪ್ರದರ್ಶನ ನಡೆಯಲಿದೆ. ದಿಗ್ಗಜ ಚಿತ್ರ ನಿರ್ಮಾಪಕ-ನಿರ್ದೇಶಕನ ಸಿನಿಮಾಗಳ ಮರುದರ್ಶನದ ಅವಕಾಶವಿದು. ಆರ್.ಕೆ. ಫಿಲ್ಮ್ ಹೆರಿಟೇಜ್ ಫೌಂಡೇಶನ್ ಹಾಗೂ ಎನ್‌ಎಫ್‌ಡಿಸಿ-ನ್ಯಾಷನಲ್ ಫಿಲ್ಮ್ ಆರ್ಕೈವ್ ಆಫ್ ಇಂಡಿಯಾ ಈ ಪ್ರದರ್ಶನ ಆಯೋಜಿಸಿವೆ. ದಶಕಗಳ ನಂತರ ಹಳೆಯ ಸೃಷ್ಟಿಕಾರ್ಯವನ್ನು ನೋಡಿ, ಈ ಕಾಲಕ್ಕೆ ಒಗ್ಗಿಸಿ ನೋಡುವ ಸದವಕಾಶ ಇದೆನ್ನುವುದೂ ನಿಜ.

ಇವತ್ತು ನಾವು ಪ್ಯಾನ್-ಇಂಡಿಯಾ, ಉತ್ತರ ಹಾಗೂ ದಕ್ಷಿಣ ಭಾರತೀಯ ಚಿತ್ರೋದ್ಯಮಗಳ ಧ್ರುವೀಕರಣ ತತ್ತ್ವಗಳ ಕುರಿತು ಏನೆಲ್ಲ ಚರ್ಚೆ ನಡೆಸುತ್ತಿದ್ದೇವೆಯೋ, ಅಂತಹುದೇ ಸಾಹಸವನ್ನು ರಾಜ್ ಕಪೂರ್1950ರ ದಶಕದಲ್ಲೇ ಮಾಡಿದ್ದರು. ಅವರ ಸಿನಿಮಾಗಳಿಗೂ ಪ್ಯಾನ್-ಇಂಡಿಯಾ ಚಹರೆ ಇತ್ತು. ಅಷ್ಟೇ ಏಕೆ, ಭಾರತದ ಗಡಿ ದಾಟಿ ರಷ್ಯಾ, ಕೇಂದ್ರ ಏಷ್ಯಾ ಭಾಗದಲ್ಲಿಯೂ ಅವರ ಸಿನಿಮಾಗಳಿಗೆ ಅಭಿಮಾನಿಗಳಿದ್ದರು. ಇವತ್ತಿಗೂ ರಷ್ಯಾಗೆ ಹೋದರೆ ಟ್ಯಾಕ್ಸಿಯವರು ತಮ್ಮನ್ನು ಪುಕಸಟ್ಟೆಯಾಗಿ ಕರೆದುಕೊಂಡು ಹೋಗುತ್ತಾರೆ ಎಂದು ನಟ ರಣಬೀರ್ ಕಪೂರ್, ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದಾಗ ಹೇಳಿದ್ದರು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ




ಡಣ್ಣ ಚಕ್ಕು ಶೇಕ್ರಷ್ಟು ಕಥೆಯ

ಯು ಟರ್ನ್‌ಗೇ ಯುಟರ್ನ್

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗೆಳೆಯರೊಂದಿಗೆ ಕ್ರಿಕೆಟ್ ಆಟವಾಡಲು ಗುಂಡ ಸಂಜೆಯ ವೇಳೆಗೆ ಮೈದಾನದ ಕಡೆ ಹೊರಟಿದ್ದ. ದಾರಿಯಲ್ಲಿ ಪ್ಲಾಸ್ಟಿಕ್ ಕಂಬದಲ್ಲಿ ನೇತುಹಾಕಿದ್ದ ಯು ಟರ್ನ್ ಬೋರ್ಡ್ ಆತನಿಗೆ ಕಾಣಿಸಿತು. ಕೆಲ ಕಾಲ ಯೋಚಿಸಿದ ಗುಂಡ, ಅಲ್ಲೇ ಇದ್ದ ಕಲ್ಲೊಂದನ್ನು ಮೇಲಕ್ಕೆಸೆದು ಅದನ್ನು ಬ್ಯಾಟ್‌ನಲ್ಲಿ ಹೊಡೆದ. ಆ ಕಲ್ಲು ನೇರವಾಗಿ ಬೋರ್ಡ್‌ಗೆ ತಾಗಿ ಆ ಬೋರ್ಡ್ ನೇತು ಹಾಕಿದ್ದ ಕಂಬವೇ ಯು ಟರ್ನ್ ರೀತಿಯಲ್ಲಿ ಬಾಗಿತು. ಗುಂಡ ಮೈದಾನದತ್ತ ಹೆಜ್ಜೆ ಹಾಕಿದ...



ಜಾಣಪದಾಕ್ಷರ ಆಟ

ಇಲ್ಲಿ ಕೊಟ್ಟಿರುವ ನಾಲ್ಕಕ್ಷರಗಳು ಅದಲು ಬದಲಾಗಿದ್ದು, ಅವುಗಳನ್ನು ಸರಿಯಾಗಿ ಕೂಡಿಸಿ ಅರ್ಥಬದ್ಧಪದ ಮಾಡಬಲ್ಲಿರಾ?

ಉದಾ: ಗರಡಿ + ಯಾ = ಗಡಿಯಾರ

1	ಅರಸ	ವ	
2	ಅವರ	ತಾ	
3	ಸರಸ	ಮ	
4	ಇವಳು	ರಿ	
5	ವರಸೆ	ಭ	
6	ಕರಕ	ನಿ	
7	ಸುಗಮ	ನಿ	
8	ಅನತಿ	ವ	
9	ಮಧುರ	ಸು	
10	ವನಜ	ರಿ	

ಪದಶೋಧ

ಇಲ್ಲಿ ಕೊಟ್ಟಿರುವ ಚಲನಚಿತ್ರದ ಹೆಸರುಗಳಲ್ಲಿ ಒಂದೊಂದು ಅಕ್ಷರ ತೆಗೆದುಕೊಂಡು ಮಂಡ್ಯಕ್ಕಿರುವ ಅನ್ವರ್ಥನಾಮ ಹುಡುಕಿ

1.ಹೊಸಬೆಳಕು

2.ತಾಯಿಗೆ ತಕ್ಕ ಮಗ

3.ಕರುಳಿನ ಕರೆ

4.ನಾಗರಹಾವು

5.ಬಿಡುಗಡೆ

ಉತ್ತರ:...

ಗಣಿತದಲ್ಲಿ ಗರ್ದಿ ಗಮ್ಮತ್ತು

1.ರಾಮಾನುಜನ್ ಸಂಖ್ಯೆ 1729

ಇದು ರಾಮಾನುಜನ್ ಸಂಖ್ಯೆ ಎಂದೇ ಪ್ರಸಿದ್ಧ. ಗಣಿತ ಲೋಕದ ವಿಸ್ಮಯ ಈ ಶ್ರೀನಿವಾಸ ರಾಮಾನುಜನ್. ಅವರು ಒಮ್ಮೆ ಆಸ್ಪತ್ರೆಯಲ್ಲಿದ್ದಾಗ ಅವರನ್ನು ಮಾತನಾಡಿಸಲು ಹಾರ್ಡಿ ಎಂಬ ಗಣಿತಜ್ಞ ರಿಕ್ಷಾದಲ್ಲಿ ಬಂದರು. ಅವರು ರಿಕ್ಷಾ ಸಂಖ್ಯೆ 1729 ಗಮನಿಸಿ ಈ ಸಂಖ್ಯೆ ಅಷ್ಟೊಂದು ಶುಭಕರವಲ್ಲ ಎಂದರು. ತಕ್ಷಣ ರಾಮಾನುಜನ್ ಹಾಗೇಕೆ ಹೇಳುತ್ತೀರಿ, ಅದೊಂದು ವಿಶಿಷ್ಟ ಸಂಖ್ಯೆ. ಎರಡು ಘಾತಗಳಲ್ಲಿ ಬರೆಯಬಹುದಾದ ಅತಿ ಸಣ್ಣ ಸಂಖ್ಯೆಯೆಂದು ಹೇಳಿ ಆಶ್ಚರ್ಯವನ್ನುಂಟು ಮಾಡಿದರು. ಇದರಲ್ಲಿ ಇನ್ನೂ ಒಂದು ಸ್ವಾರಸ್ಯವಿದೆ. ಈ ಸಂಖ್ಯೆಯ ಎಲ್ಲ ಅಂಕಿಗಳನ್ನು ಕೂಡಿಸಿದರೆ 19 ಆಗುತ್ತದೆ. ಅದರ ವಿಲೋಮ ಸಂಖ್ಯೆಯಿಂದ 91ರಿಂದ ಗುಣಿಸಿದರೆ ಮತ್ತೆ 1729 ಬರುತ್ತದೆ.

ಗುಣಾಕಾರ ಮಾಡಿ

ಈ ಕೆಳಗಿನ ಗುಣಾಕಾರ ಮಾಡಿನೋಡಿ. ಈಗ ನಡೆದಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಷ್ಟನೇದ್ದು ಎಂದು ತಿಳಿಯುತ್ತದೆ.

97643X9=

ಕೊಂಚತಂತ್ರ

ಪ್ರಾಣಿಜಗತ್ತಿನಲ್ಲಿ ತಮ್ಮ ಚೀಲದಲ್ಲಿ ಮರಿಗಳನ್ನು ಇಟ್ಟುಕೊಂಡು ತಿರುಗಾಡುವ ಎರಡು ಪ್ರಾಣಿಗಳ ಹೆಸರನ್ನು 'OK' ಎಂಬುವುದನ್ನು ನೆನಪಿಡುವ ಮೂಲಕ ನೆನಪಿಸಿಕೊಳ್ಳಬಹುದು.

O=ಓಪಾಸಮ್

K=ಕಾಂಗರೂ

ಪ್ರಾಸ ಪದ ಬಂಧ

ಅಕ್ಷರ ಪಟ್ಟಿ			
ಎಂ	ತಂ	ಗೋ	ನ
ತೊಂ	ನಿ	ಶಾ	ನಂ
ಮಾ	ಸಂ	ಗ್ಯಾ	ಅ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ಭ	ತ್ತು
	ಭ	ತ್ತು

2

	ಲಿ	ನಿ
	ಲಿ	ನಿ

3

	ಕು	ಲ
	ಕು	ಲ

4

	ಬಿ	ಗೆ
	ಬಿ	ಗೆ

5

	ರಂ	ಟಿ
	ರಂ	ಟಿ

6

	ಖಿ	ಲ
	ಖಿ	ಲ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಕವಿತೆ-ಅವಿತೆ 2.ಕೊರೆತ-ಮರೆತ 3.ಉಡುಗೆ-ಕೊಡುಗೆ 4.ತಗಣಿ-ಸಗಣಿ 5.ಆಲೂರ-ಬೇಲೂರ 6.ಕಮಲ-ವಿಮಲ

ಮೋಜಿನ ಇಂಗ್ಲಿಷ್: 1.GOAT 2.RABBIT 3.DONKEY 4.ELEPHANT 5.LION 6.OCTOPUS 7.OPOSSUM 8.MARTEN 9.BISON 10.WOMBAT

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಚೇತನ್ ಎಂ.ಎಸ್.
ನಿಂಬೆಗೊಂಡಿ



ಚಾರಿತ್ರ್ಯ
ಚಾಮರಾಜನಗರ




ಸುಜಲ್ ಸಂಜೀವ್
ಕೊಣ್ಣೂರ, ಬಾಗಲಕೋಟೆ



ಮೇದಿನಿ ಎಸ್.
ಬೆಂಗಳೂರು



ಸೃಷ್ಟಿ ಗೌಡರ
ತಳುವಗೇರ



ಸಂಚಿತ್ ಎಸ್.
ಬೆಂಗಳೂರು

ವಿಜಯ್ ಹಜಾರೆ ಟ್ರೋಫಿ: ಶ್ರೀಜಿತ್ – ಪ್ರವೀಣ ದುಬೆ ಅಬ್ಬರಕ್ಕೆ ಶರಣಾದ ಮುಂಬೈ

ಕರ್ನಾಟಕಕ್ಕೆ ಗೆಲುವಿನ 'ಶ್ರೀಕಾರ'

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೋಟೇರಾ ಅಂಗಳದಲ್ಲಿ ಶನಿವಾರ ಎರಡು ಶತಕಗಳು ದಾಖಲಾದವು. ಮುಂಬೈನ ಅನುಭವಿ ಆಟಗಾರ ಶ್ರೇಯಸ್ ಅಯ್ಯರ್ ಮತ್ತು ಕರ್ನಾಟಕದ ಉದಯೋನ್ಮುಖ ಬ್ಯಾಟರ್ ಕೃಷ್ಣನ್ ಲಕ್ಷ್ಮಣನ್ ಶ್ರೀಜಿತ್ ಅವರು ಶತಕ ಗಳಿಸಿದರು. ಆದರೆ ಜಯ ಒಲಿದಿದ್ದು ಮಾತ್ರ ಶ್ರೀಜಿತ್ ಅವರ ಆಟಕ್ಕೆ.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆರಂಭವಾದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡವು ಬಲಿಷ್ಠ ಮುಂಬೈ ಎದುರು 7 ವಿಕೆಟ್‌ಗಳಿಂದ ಜಯಸಾಧಿಸಿತು. ಅಲ್ಲದೇ ಟೂರ್ನಿಯ ಇತಿಹಾಸದಲ್ಲಿ ಅತಿ ದೊಡ್ಡ ಮೊತ್ತದ ಗುರಿ ಬೆನ್ನಟ್ಟಿದ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿತು. ಅದಕ್ಕೆ ಕಾರಣರಾಗಿದ್ದು ಶ್ರೀಜಿತ್ (ಅಜೇಯ 150; 101ಎ, 4X20, 6X4) ಅವರ ಶತಕ. ಕೆ.ವಿ. ಅನೀಶ್ (82; 66ಎ, 4X9, 6X3) ಹಾಗೂ ಪ್ರವೀಣ ದುಬೆ (65; 50ಎ, 4X5, 6X1) ಅವರೂ ಮಹತ್ವದ ಕಾಣಿಕೆ ನೀಡಿದರು.

ಟಾಸ್ ಗೆದ್ದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್ ಸ್ನೇಹಿ ಪಿಚ್‌ನಲ್ಲಿ ಮಯಂಕ್ ನಿರ್ಧಾರವನ್ನು ತಪ್ಪು ಎಂದು ಅಬ್ಬರದ ಶತಕ ಸಿಡಿಸಿದ ಮುಂಬೈ ನಾಯಕ ಶ್ರೇಯಸ್ ಅಯ್ಯರ್ (114; 55ಎ, 4X5, 6X2) ಸಾಬೀತು ಮಾಡಿದರು. ಅಲ್ಲದೇ ಆಯುಷ್ ಮಾತ್ರ (78; 82ಎ), ಹಾರ್ದಿಕ್ ತಮೋರೆ (84; 94ಎ) ಹಾಗೂ ಶಿವಂ ದುಬೆ (63; 36ಎ) ಅವರೂ ರನ್ ಸೂರೆ ಮಾಡಿದರು. ಅದರಿಂದಾಗಿ ಮುಂಬೈ ತಂಡವು 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 382 ರನ್ ಗಳಿಸಿತು. ಕರ್ನಾಟಕದ ಬೌಲರ್‌ಗಳು ಬಸವಳಿದರು.

ಹೊಸ ಆಟಗಾರರು ಇರುವ ಕರ್ನಾಟಕ ತಂಡವು ಈ ಬೃಹತ್ ಗುರಿ ಸಾಧಿಸುವುದೇ ಎಂಬ ಅಳುಕು ಆರಂಭದಲ್ಲಿ ಕಾಡಿತ್ತು. ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮಯಂಕ್ ಬಳಗವು ನಾಕೌಟ್ ಕೂಡ ಪ್ರವೇಶಿಸಿರಲಿಲ್ಲ. ಅದೇ ಮುಂಬೈ ತಂಡವು ಟಿ20 ಟೂರ್ನಿಯಲ್ಲಿ ಚಾಂಪಿಯನ್ ಆಗಿ ಇಲ್ಲಿಗೆ ಬಂದಿತ್ತು. ಮುಂಬೈ ಬೌಲರ್‌ಗಳೂ ಕರ್ನಾಟಕದ ಬ್ಯಾಟರ್‌ಗಳನ್ನು ಕಾಡುವ ಆತಂಕ ಇತ್ತು.

ಆದರೆ, ಪಂದ್ಯದಲ್ಲಿ ಇನ್ನೂ 3.4 ಓವರ್ ಬಾಕಿ ಇರುವಾಗಲೇ 3 ವಿಕೆಟ್‌ಗಳಿಗೆ 383 ರನ್ ಗಳಿಸಿತು. ಈ ಹಿಂದೆ ಆಂಧ್ರ ತಂಡವು 384 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಸಾಧಿಸಿತ್ತು.

ಇನಿಂಗ್ಸ್ ಆರಂಭದಲ್ಲಿ ಕರ್ನಾಟಕದ ನಿಕಿನ್ ಜೋಸ್ (21; 13ಎ) ಐದನೇ ಓವರ್‌ನಲ್ಲಿಯೇ ಜುನೇದ್ ಖಾನ್ ಎಸೆತದಲ್ಲಿ ಔಟಾದರು. ಆಗ ಕ್ರೀಸ್‌ಗೆ ಬಂದ ಅನೀಶ್ ಅವರು ಮಯಂಕ್ (47 ರನ್) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 70 (57ಎಸೆತ) ರನ್ ಸೇರಿಸಿದರು. ಶಿವಂ ದುಬೆ ಬೌಲಿಂಗ್‌ನಲ್ಲಿ ಅಥರ್ವ ಅಂಕೋಲೇಕರ್‌ಗೆ ಕ್ಯಾಚಿತ್ತ ಮಯಂಕ್ ನಿರ್ಗಮಿಸಿದಾಗ ಜೊತೆಯಾಟ ಮುರಿಯಿತು.

ಕ್ರೀಸ್‌ಗೆ ಬಂದ ಶ್ರೀಜಿತ್ ಅವರು ಅನೀಶ್ ಜೊತೆಗೂಡಿ ತಂಡಕ್ಕೆ ಗೆಲುವಿನ ವಿಶ್ವಾಸ ಮೂಡಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಕೇವಲ 72 ಎಸೆತಗಳಲ್ಲಿ 94 ರನ್ ಗಳಿಸಿದರು. ಬೌಲರ್ ಜುನೇದ್ ಅವರು ಈ ಜೊತೆಯಾಟವನ್ನು ಮುರಿಯುವಲ್ಲಿ ಯಶಸ್ವಿಯಾದರು. ಅವರು ಅನೀಶ್ ವಿಕೆಟ್ ಗಳಿಸಿದಾಗ ಮುಂಬೈ ತಂಡವು ಮತ್ತೆ ಹಿಡಿತ ಸಾಧಿಸುವ ಸಾಧ್ಯತೆ ಇತ್ತು.

ಆದರೆ ಶ್ರೀಜಿತ್ ಜೊತೆಗೂಡಿದ ಪ್ರವೀಣ ಅವರು ಮುಂಬೈ ಕೈಯಿಂದ ಅವಕಾಶ ಕಸಿದುಕೊಂಡರು. ಇಬ್ಬರ ಬೀಸಾಟ ರಂಗೇರಿತು. ಒಂದು ಲಕ್ಷ ಪ್ರೇಕ್ಷಕರು ಸೇರಬಹುದಾದ ಕ್ರೀಡಾಂಗಣದ ಗ್ಯಾಲರಿಗಳು ಖಾಲಿ ಇದ್ದವು. ಖಾಲಿ ಕುರ್ಚಿಗಳ ಮೇಲೆ ಶ್ರೀಜಿತ್ ಮತ್ತು ದುಬೆ ಸಿಕ್ಸರ್ ಬಾರಿಸಿದಾಗೆಲ್ಲ ಚೆಂಡು ಪುಟಿದು ಮರಳಿದವು!

28 ವರ್ಷದ ಶ್ರೀಜಿತ್ ಅವರಿಗೆ ಇದು 3ನೇ ಲಿಸ್ಟ್ ಎ ಪಂದ್ಯ. ಬೆಂಗಳೂರಿನ ಎಡಗೈ ಬ್ಯಾಟರ್ ಈಚೆಗೆ ರಣಜಿ ಟ್ರೋಫಿ ಟೂರ್ನಿಯಲ್ಲಿ ಪದಾರ್ಪಣೆ ಮಾಡಿ ಶತಕ ಗಳಿಸಿದ್ದರು.

ಟಿ20 ಟೂರ್ನಿಯಲ್ಲಿ ಅಜೇಯ ಅರ್ಧಶತಕ ಹೊಡೆದಿದ್ದರು. ದುಬೆ ಲೆಗ್‌ಬ್ರೇಕ್ ಬೌಲರ್ ಆಗಿದ್ದಾರೆ. ಸೀಮಿತ ಓವರ್‌ಗಳ ಮಾದರಿಗಳಲ್ಲಿ ಉತ್ತಮ ಬ್ಯಾಟರ್ ಆಗಿದ್ದಾರೆ.

(ಮಾಹಿತಿ: ಬಿಸಿಸಿಐ ಡಾಟ್ ಟಿವಿ)


ಶತಕ ಬಾರಿಸಿದ ಶ್ರೀಜಿತ್

ಮುಖ್ಯಾಂಶಗಳು

- ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಕೆ.ವಿ. ಅನೀಶ್
- ಬ್ಯಾಟಿಂಗ್ ಸ್ನೇಹಿ ಪಿಚ್‌ನಲ್ಲಿ ದಾಖಲೆ ಗುರಿ ಮುಟ್ಟಿದ ಕರ್ನಾಟಕ
- ದುಬಾರಿಯಾದ ಉಭಯ ತಂಡಗಳ ಬೌಲರ್‌ಗಳು

ಸ್ಕೋರ್ ಕಾರ್ಡ್

ಮುಂಬೈ: 50 ಓವರುಗಳಲ್ಲಿ 4 ವಿಕೆಟ್‌ಗೆ 382
ರಘುವಂಶಿ ಸಿ ಮತ್ತು ಬಿ ವಿದ್ಯಾಧರ 6 (17ಎ, 4x1)
ಆಯುಷ್ ಸಿ ಸ್ಮರಣ್ ಬಿ ಪ್ರವೀಣ್ 78 (82ಎ, 4x6, 6x2)
ತಮೋರೆ ಬಿ ಶ್ರೇಯಸ್ ಗೋಪಾಲ್ 84 (94ಎ, 4x7, 6x3)
ಶ್ರೇಯಸ ಅಯ್ಯರ್ ಔಟಾಗದೇ 114 (55ಎ, 4x5, 6x10)
ಸೂರ್ಯಕುಮಾರ್ ಎಲ್‌ಬಿಡಬ್ಲ್ಯು ಬಿ ಪ್ರವೀಣ್ 20 (16ಎ, 4x2, 6x1)
ಶಿವಂ ದುಬೆ ಔಟಾಗದೇ 63 (36ಎ, 4x5, 6x5)
ಇತರೆ: 17 (ವೈಡ್ 11, ಲೆಗ್‌ಬೈ6)
ವಿಕೆಟ್ ಪತನ: 1-7 (ಅಂಗ್‌ಕ್ರಿಷ್ ರಘುವಂಶಿ, 3.1), 2-148 (ಆಯುಷ್ ಮ್ಹಾತ್ರೆ 29.5.), 3-178 (ಹಾರ್ದಿಕ್ ತಮೋರೆ, 33.3), 4-234 (ಸೂರ್ಯಕುಮಾರ್ ಯಾದವ್, 39.1)
ಬೌಲಿಂಗ್: ವಿ. ಕೌಶಿಕ್ 10-0-45-0; ವಿದ್ಯಾಧರ ಪಾಟೀಲ್ 10-0-103-1; ಶ್ರೇಯಸ್ ಗೋಪಾಲ್ 10-1-65-1; ವೈಶಾಖ ವಿಜಯಕುಮಾರ್ 10-0-74-0; ಪ್ರವೀಣ್ ದುಬೆ 10-0-89-2.

ಕರ್ನಾಟಕ: 46.2 ಓವರುಗಳಲ್ಲಿ 3 ವಿಕೆಟ್‌ಗೆ 383
ನಿಕಿನ್ ಸಿ ಶಿವಂ ದುಬೆ ಬಿ ಜುನೇದ್ ಖಾನ್ 21 (13ಎ, 4x5)
ಮಯಂಕ್ ಸಿ ಅಥರ್ವ ಬಿ ಶಿವಂ ದುಬೆ 47 (48ಎ, 4x7, 6x1)
ಅನೀಶ್ ಸಿ ಅಥರ್ವ ಬಿ ಜುನೇದ್ ಖಾನ್ 82 (66ಎ, 4x9, 6x3)
ಶ್ರೀಜಿತ್ ಔಟಾಗದೇ 150 (101ಎ, 4x9, 6x3)
ಪ್ರವೀಣ್ ದುಬೆ ಔಟಾಗದೇ 65 (50ಎ, 4x5, 6x1)
ಇತರೆ: 18 (ವೈಡ್ 15, ಲೆಗ್‌ಬೈ3)
ವಿಕೆಟ್ ಪತನ: 1-36 (ನಿಕಿನ್ ಜೋಸ್, 4.6), 2-106 (ಮಯಂಕ್ ಅಗರವಾಲ್, 14.3), 3-200 (ಕೆ.ವಿ.ಅನೀಶ್, 26.3)
ಬೌಲಿಂಗ್: ಶಾರ್ದೂಲ್ ಠಾಕೂರ್ 6-0-72-0; ಅಥರ್ವ ಅಂಕೋಲೇಕರ್ 10-0-57-0; ಮೊಹಮ್ಮದ್ ಜುನೇದ್ ಖಾನ್ 8-0-70-2; ಶಿವಂ ದುಬೆ 6-0-42-1; ತನಿಶ್ ಕೋಟ್ಯಾನ್ 9-0-73-0; ಸೂರ್ಯಾಂಶ್ ಶೆಡ್ಗೆ 4-0-35-0; ಶ್ರೇಯಸ್ ಅಯ್ಯರ್ 3-0-28-0; ಅಂಗ್‌ಕ್ರಿಷ್ ರಘುವಂಶಿ 0.2-0-3-0
ಪಂದ್ಯದ ಆಟಗಾರ : ಶ್ರೀಜಿತ್

ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಜಯ

ಅನ್ಮೋಲ್‌ಪ್ರೀತ್ ಶರವೇಗದ ಶತಕ

ಅಹಮದಾಬಾದ್(ಪಿಟಿಐ): ಪಂಜಾಬ್ ತಂಡದ ಅನ್ಮೋಲ್‌ಪ್ರೀತ್ ಸಿಂಗ್ 35 ಎಸೆತಗಳಲ್ಲಿ ಶತಕ ಗಳಿಸಿದರು. ಅದರೊಂದಿಗೆ ಲಿಸ್ಟ್ ಎ ಮಾದರಿಯ ಕ್ರಿಕೆಟ್‌ನಲ್ಲಿ ಅತಿ ವೇಗದ ಶತಕ ಹೊಡೆದ ದಾಖಲೆ ಬರೆದರು.

ಶನಿವಾರ ಆರಂಭವಾದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಅನ್ಮೋಲ್ ಆಟದ ಬಲದಿಂದ ಪಂಜಾಬ್ ತಂಡವು 9 ವಿಕೆಟ್‌ಗಳಿಂದ ಅರುಣಾಚಲಪ್ರದೇಶ ವಿರುದ್ಧ ಜಯಿಸಿತು.

ಅನ್ಮೋಲ್‌ಪ್ರೀತ್ ಅವರನ್ನು ಈಚೆಗೆ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಯಾವುದೇ ತಂಡವೂ ಖರೀದಿಸಿರಲಿಲ್ಲ. ಆದರೆ ಇಲ್ಲಿ ಅವರು ಬರೋಡಾ ತಂಡದ ಯೂಸುಫ್ ಪಠಾಣ್ ಅವರು 2009-10ರಲ್ಲಿ 40 ಎಸೆತದಲ್ಲಿ ಗಳಿಸಿದ್ದ ಶತಕದ ದಾಖಲೆಯನ್ನು ಮುರಿದರು.

ಅಂತರರಾಷ್ಟ್ರೀಯ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾದ ಜೇಕ್ ಫ್ರೆಸರ್ ಮೆಕ್‌ಗುರ್ಕ್ ಅವರು ಸೌತ್ ಆಸ್ಟ್ರೇಲಿಯಾ ಪರವಾಗಿ 29 ಎಸೆತಗಲ್ಲಿ ಟಾಸ್ಮೇನಿಯಾ ವಿರುದ್ಧ ಶತಕ ಹೊಡೆದಿದ್ದರು. 2023-24ರಲ್ಲಿ ಮತ್ತು ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು ವೆಸ್ಟ್ ಇಂಡೀಸ್ ವಿರುದ್ಧ 31 ಎಸೆತಗಳಲ್ಲಿ ಮೂರಂಕಿ ಮೊತ್ತ ಗಳಿಸಿದ್ದರು. ಈ ಪಂದ್ಯದಲ್ಲಿ ಅರುಣಾಚಲ ತಂಡವು 165 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಪಂಜಾಬ್ ತಂಡವು ಅನ್ಮೋಲ್ ಪ್ರೀತ್ (115; 45ಎಸೆತ, 4X12, 6X9) ಅವರ ಅಬ್ಬರದ ಆಟದಿಂದಾಗಿ 12.5 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು.

ಚಿರಾಗ್ ಸೇನ್‌ಗೆ ಆಘಾತ

ಬ್ಯಾಡ್ಮಿಂಟನ್: ರುಜುಲಾಗೆ ಅಚ್ಚರಿಯ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೇಮ್ ಹಿನ್ನಡೆಯಿಂದ ಮರುಹೋರಾಟ ನಡೆಸಿದ ತಮಿಳುನಾಡಿನ ರಿತ್ವಿಕ್ ಸಂಜೀವಿ ಅವರು ಹಾಲಿ ಚಾಂಪಿಯನ್, ಆರನೇ ಶ್ರೇಯಾಂಕದ ಚಿರಾಗ್ ಸೇನ್ ಅವರಿಗೆ 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮೂರನೇ ಸುತ್ತಿನಲ್ಲಿ ಆಘಾತ ನೀಡಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಹಾಲ್‌ನಲ್ಲಿ ಶನಿವಾರ ಮೊದಲ ಗೇಮ್ ಸೋತ ನಂತರ ರಿತ್ವಿಕ್ ತೊಂದರೆಗೆ ಸಿಲುಕಿದಂತೆ ಕಂಡಿತು. ಆದರೆ ಅಮೋಘವಾಗಿ ಚೇತರಿಸಿಕೊಂಡ ಅವರು ಉತ್ತರಾಖಂಡದ ಅಮ್ರೋಹಾದ ಆಟಗಾರನ್ನು 12-21, 21-19, 21-15 ರಿಂದ ಸೋಲಿಸಿ ಪ್ರಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಭಾನುವಾರ 16ರ ಸುತ್ತಿನಲ್ಲಿ ಕರ್ನಾಟಕದ ರಘು ಎಂ. ಅವರನ್ನು ಎದುರಿಸಲಿದ್ದಾರೆ.

ಚಿರಾಗ್ ಅವರು ಭಾರತದ ಪ್ರಮುಖ ಆಟಗಾರ ಲಕ್ಷ್ಯ ಸೇನ್ ಅವರ ಸೋದರ. ಪುರುಷರ ವಿಭಾಗದಲ್ಲಿ ಚಿರಾಗ್ ಜೊತೆ, ನಾಲ್ಕನೇ ಶ್ರೇಯಾಂಕದ ಭಾರ್ಗವ್ ಎಸ್., ಐದನೇ ಶ್ರೇಯಾಂಕದ ಸನೀತ್ ಡಿ.ಎಸ್. ಮತ್ತು ಒಂಬತ್ತನೇ ಶ್ರೇಯಾಂಕದ ರವಿ ಎಸ್. ಅವರೂ ಹೊರಬಿದ್ದರು.

ಮನರಾಜ್ ಸಿಂಗ್ 21-11, 21-13 ರಿಂದ ಭಾರ್ಗವ್ ಅವರನ್ನು ಸೋಲಿಸಿದರೆ, ಮನೀಷ್ ಫೋಗಟ್ 14-21, 21-14, 21-18 ರಿಂದ ರವಿ ವಿರುದ್ಧ ಜಯಗಳಿಸಿದರು. ದಿನದ ಕೊನೆಯ ಪಂದ್ಯದಲ್ಲಿ ರೌನಕ್ ಚೌಹಾನ್ 21-11, 21-16 ರಿಂದ ಸನೀತ್ ಅವರ ಅಭಿಯಾನಕ್ಕೆ ತೆರೆಯೆಳೆದರು.

ಆದರೆ ಮಹಿಳೆಯರ ವಿಭಾಗದಲ್ಲಿ ಇಂಥ ಅನಿರೀಕ್ಷಿತಗಳಿರಲಿಲ್ಲ. ಹಾಲಿ ಚಾಂಪಿಯನ್ ಅನ್ಮೋಲ್ ಖಾರ್ಬ್, ರನ್ನರ್ ಅಪ್ ತನ್ವಿ ಶರ್ಮಾ ಅವರು 16ರ ಸುತ್ತಿಗೆ ನೇರ ಗೇಮ್‌ಗಳ ಗೆಲುವಿನೊಡನೆ ಮುನ್ನಡೆದರು. ಉದಯೋನ್ಮುಖ ಆಟಗಾರ್ತಿ ಅನ್ಮೋಲ್ 21-14, 21-14 ರಿಂದ ಕೃಷಿಕಾ ಮಹಾಜನ್ ಅವರನ್ನು ಹಿಮ್ಮೆಟ್ಟಿಸಿದರೆ, ತನ್ವಿ 21-12, 21-8 ರಿಂದ ಸ್ವಾತಿ ಸೋಲಂಕಿ ಮೇಲೆ ಗೆಲ್ಲಲು ಕಷ್ಟಪಡಲಿಲ್ಲ.

ರುಜುಲಾಗೆ ಅಚ್ಚರಿಯ ಗೆಲುವು: ಕರ್ನಾಟಕದ ರುಜುಲಾ ರಾಮು ಎರಡನೇ ಸುತ್ತಿನಲ್ಲಿ 21-19, 19-21, 21-17 ರಿಂದ 10ನೇ ಶ್ರೇಯಾಂಕದ ಸೂರ್ಯ ಚರಿಷ್ಮಾ ತಮಿರಿ (ಆಂಧ್ರ ಪ್ರದೇಶ) ಅವರನ್ನು, ಜಿಯಾ ರಾವತ್ ಹಿನ್ನಡೆಯಿಂದ ಚೇತರಿಸಿ, 25-27, 21-14, 21-10 ರಿಂದ ಒಂಬತ್ತನೇ ಶ್ರೇಯಾಂಕದ ಶ್ರುತಿ ಮುಂದಡ ಅವರನ್ನು ಸೋಲಿಸಿದರು.

ಮಿಥುನ್ ಮುನ್ನಡೆ: ಎರಡನೇ ಸುತ್ತಿನ ಪಂದ್ಯದಲ್ಲಿ ಮಾಜಿ ಚಾಂಪಿಯನ್, ಕರ್ನಾಟಕದ ಮಿಥುನ್ ಮಂಜುನಾಥ್ 21-9, 21-18 ರಿಂದ ಮೂರನೇ ಶ್ರೇಯಾಂಕದ ಭರತ್ ಭಾರ್ಗವ್ ಅವರನ್ನು ಹಿಮ್ಮೆಟ್ಟಿಸಿದರೆ, ಇನ್ನೊಬ್ಬ ಮಾಜಿ ಚಾಂಪಿಯನ್ ಸೌರಭ್ ವರ್ಮಾ 21-17, 21-17 ರಿಂದ ಅಭಿನವ್ ಗಾರ್ಗ್ ಅವರನ್ನು ಮಣಿಸಿದರು.


ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಹತ್ತನೇ ಶ್ರೇಯಾಂಕದ ಸೂರ್ಯಚರಿಷ್ಮಾ ದೇವಿ ಮೇಲೆ ಜಯಗಳಿಸಿದ ಕರ್ನಾಟಕದ ರುಜುಲಾ ರಾಮು ಶಟ್ಲ್ ಹಿಂತಿರುಗಿಸಲು ಮುಂದಾದರು. ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ್

ಉದ್ಯೋಗಿಗಳ ಭವಿಷ್ಯ ನಿಧಿ ಹಣ ವಂಚನೆ ಆರೋಪ

ರಾಬಿನ್ ಉತ್ತಪ್ಪ ವಿರುದ್ಧ ಬಂಧನ ವಾರಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಹಣ ವಂಚಿಸಿದ ಆರೋಪದ ಮೇಲೆ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ರಾಬಿನ್ ಉತ್ತಪ್ಪ ವಿರುದ್ಧ ಡಿಸೆಂಬರ್ 4ರಂದು ಬಂಧನದ ವಾರಂಟ್ ಜಾರಿಗೊಳಿಸಲಾಗಿದೆ.

ರಾಬಿನ್ ಉತ್ತಪ್ಪ ಅವರು ಪುಲಕೇಶಿ ನಗರ ಠಾಣೆ ವ್ಯಾಪ್ತಿಯ ನಿವಾಸಿ ಆಗಿರುವುದರಿಂದ ಅವರನ್ನು ಬಂಧಿಸುವಂತೆ ಇಪಿಎಫ್ ಪ್ರಾದೇಶಿಕಆಯುಕ್ತ ಷಡಾಕ್ಷರಿ ಗೋಪಾಲ ರೆಡ್ಡಿ ಅವರು ಪೊಲೀಸರಿಗೆ ಪತ್ರ ಬರೆದಿದ್ದಾರೆ.

ರಾಬಿನ್ ಅವರು ಸೆಂಚುರೀಸ್ ಲೈಫ್-ಸ್ಟೈಲ್ ಬ್ರ್ಯಾಂಡ್ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಕಂಪನಿಯ ಸಹ ಪಾಲುದಾರರಾಗಿದ್ದಾರೆ. ಕಂಪನಿಯ ಕೆಲ ಉದ್ಯೋಗಿಗಳ ಭವಿಷ್ಯ ನಿಧಿ ಹಣ ಪಾವತಿಸಿಲ್ಲ. ಸಂಬಳದಲ್ಲಿ ಭವಿಷ್ಯ ನಿಧಿ ಹಣ ಕಡಿತಗೊಳಿಸಿಕೊಂಡು, ಉದ್ಯೋಗಿಗಳ ಖಾತೆಗೆ ಹಾಕದೇ ₹ 23,36,602 ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.


ರಾಬಿನ್ ಉತ್ತಪ್ಪ

ದೂರಿನ ಅನ್ವಯ ರಾಬಿನ್ ಅವರ ವಿಳಾಸಕ್ಕೆ ಪೊಲೀಸರು ತೆರಳಿ ಪರಿಶೀಲಿಸಿದ ವೇಳೆ, ಅವರು ಸದ್ಯ ಆ ವಿಳಾಸದಲ್ಲಿ ವಾಸವಿರಲಿಲ್ಲ ಎಂದು ಗೊತ್ತಾಗಿದೆ.

'ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರು ಹೊರಡಿಸಿದ ಬಂಧನ ವಾರಂಟ್‌ನಲ್ಲಿ ಉಲ್ಲೇಖಿಸಿರುವ ವಿಳಾಸ ಹಳೆಯದಾಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ವೇಳೆ, ವರ್ಷದ ಹಿಂದೆಯೇ ರಾಬಿನ್ ಉತ್ತಪ್ಪ ಮನೆ ಖಾಲಿ ಮಾಡಿರುವುದು ಗೊತ್ತಾಗಿದೆ. ಸಂಬಂಧಪಟ್ಟ ಅಧಿಕಾರಿಗೆ ಈ ಮಾಹಿತಿ ನೀಡಲಾಗಿದೆ.

ಬಂಧನ ವಾರಂಟ್ ಹೊರಡಿಸಿದ ಸಂಬಂಧಿತ ಪ್ರಾಧಿಕಾರವು ಮುಂದಿನ ನಿರ್ಧಾರ ಕೈಗೊಳ್ಳಲಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ರೇಸ್: ಲಿರೋನ್‌ಗೆ ಪ್ರಶಸ್ತಿ

ಕೊಯಿಮತ್ತೂರ (ಪಿಟಿಐ): ಡಿಟಿಎಸ್ ರೇಸಿಂಗ್‌ನ ಲಿರೊನ್ ಜೇಡನ್ ಸ್ಯಾಮುಯೆಲ್ಸ್ ಅವರು ಜೆ.ಕೆ ಟೈರ್ ನೊವೈಸ್ ಕಪ್ 27ನೇ ಎಫ್‌ಎಂಎಸ್‌ಸಿಐ ನ್ಯಾಷನಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದರು. ಶನಿವಾರ ಕಾರಿ ಮೋಟಾರ್‌ಸ್ಪೀಡ್‌ವೇನಲ್ಲಿ ನಡೆದ ರೇಸ್‌ನಲ್ಲಿಲಿರೊನ್ 37 ಅಂಕಗಳನ್ನು ಕಲೆಹಾಕಿದರು.

ಕಾನ್ಫಿಡೆಂಟ್ ಪಾರ್ಟೀ ವಿಜಯಿ

ಬೆಂಗಳೂರು: ಕಾನ್ಫಿಡೆಂಟ್ ಪಾರ್ ಟೀ ತಂಡವು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಈಚೆಗೆ ನಡೆದ ಬಿಜಿಎಲ್ 5.0 ಫೈನಲ್‌ನಲ್ಲಿ ಗೆಲುವು ಸಾಧಿಸಿತು. ಕಾನ್ಫಿಡೆಂಟ್ 238 ಅಂಕ ಗಳಿಸಿತು. ಆಭರಣ್ ಅಲ್ಬೆಟ್ರಾಸ್ (236), ಟೋಲೆಡೊ ಪಂಟರ್ಸ್ (235) ಮತ್ತು ಡ್ಯೂಡ್ಸ್ ಆಫ್ ಸ್ಪೈರ್ (231) ಕ್ರಮವಾಗಿ ಮೊದಲ, ಎರಡನೇ ಮತ್ತು ಮೂರನೇ ರನ್ನರ್ಸ್ ಅಪ್ ಆಗಿ ಹೊರಹೊಮ್ಮಿದವು.

ಭಾರತಕ್ಕೆ 2 ಬೆಳ್ಳಿ

ದೋಹಾ (ಪಿಟಿಐ): ಭಾರತದ ಕೋಯೆಲ್ ಬರ್ ಮತ್ತು ಎಲ್. ನೀಲಮ್ ದೇವಿ ಅವರು ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 55 ಕೆ.ಜಿ ವಿಭಾಗದಲ್ಲಿ ಶನಿವಾರ ಬೆಳ್ಳಿ ಪದಕಗಳನ್ನು ಗೆದ್ದುಕೊಂಡರು.

ಉತ್ಸಾಹದಲ್ಲಿ ಭಾರತ ಮಹಿಳಾ ತಂಡ

ವಿಂಡೀಸ್ ವಿರುದ್ಧ ಏಕದಿನ ಸರಣಿ: ಮೊದಲ ಪಂದ್ಯ ಇಂದು

ವಡೋದರ (ಪಿಟಿಐ): ಭಾರತ ತಂಡ, ಭಾನುವಾರ ಇಲ್ಲಿ ಆರಂಭವಾಗಲಿರುವ ಮೂರು ಪಂದ್ಯಗಳ ಮಹಿಳಾ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ. ಇತ್ತೀಚಿನ ವರ್ಷಗಳ ಉತ್ತಮ ಫಾರ್ಮ್ ಆಧಾರವಾಗಿಟ್ಟುಕೊಂಡು ಕಣಕ್ಕಿಳಿಯಲು ಆತಿಥೇಯ ತಂಡ ಉತ್ಸುಕವಾಗಿದೆ.

ಹೊಸದಾಗಿ ನಿರ್ಮಾಣಗೊಂಡಿರುವ ಕೋತಂಬಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಅಂತರರಾಷ್ಟ್ರೀಯ ಪಂದ್ಯ ಇದು.

ಭಾರತ ತಂಡ ಐದು ವರ್ಷಗಳಲ್ಲಿ ಇದೇ ಮೊದಲ ಬಾರಿ ಟಿ20 ಸರಣಿಯಲ್ಲಿ 2-1 ರಿಂದ ಕೆರಿಬಿಯನ್ನರ ಮೇಲೆ ಈ ವಾರದ ಆದಿಯಲ್ಲಿ ಜಯಗಳಿಸಿತ್ತು.

2017ರಿಂದೀಚೆಗೆ ವೆಸ್ಟ್ ಇಂಡೀಸ್ ವಿರುದ್ಧ ಆಡಿರುವ ಏಕದಿನ ಪಂದ್ಯಗಳ ಮುಖಾಮುಖಿಯಲ್ಲಿ ಭಾರತ 4:1 ಗೆಲುವಿನ ದಾಖಲೆ ಹೊಂದಿದೆ.

ಭಾರತ ತಂಡಕ್ಕೆ ಇರುವ ಒಂದೇ ಚಿಂತೆಯ ವಿಷಯ ಎಂದರೆ ಪೂರ್ಣಾವಧಿ ನಾಯಕಿ ಹರ್ಮನ್‌ಪ್ರೀತ್ ಅವರ ಫಿಟ್ನೆಸ್. ಅವರು ಮೊಣಕಾಲು ನೋವಿನಿಂದ ವೆಸ್ಟ್ ಇಂಡೀಸ್ ವಿರುದ್ಧ ಕೊನೆಯ ಟಿ20 ಪಂದ್ಯ ಆಡಿರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ತಂಡವನ್ನು ಮುನ್ನಡೆಸಿದ ಸ್ಮೃತಿ ಮಂದಾನ ಅರ್ಧ ಶತಕ ಬಾರಿಸಿ ಗೆಲುವಿಗೆ ನೆರವಾಗಿದ್ದರು. ಅದು ಅವರ ಸತತ ಮೂರನೇ ಅರ್ಧಶತಕ ಆಗಿತ್ತು.

ಎಡಗೈ ಆಟಗಾರ್ತಿ ಈಗ ಅದೇ ಲಯವನ್ನು ಏಕದಿನ ಸರಣಿಗೂ ಮುಂದುವರಿಸುವ ತವಕದಲ್ಲಿದ್ದಾರೆ. ಕೊನೆಯ ಹತ್ತು ಏಕದಿನ ಪಂದ್ಯಗಳಲ್ಲಿ ಸ್ಮೃತಿ 60ರ ಸರಾಸರಿಯಲ್ಲಿ 599 ರನ್ ಗಳಿಸಿದ್ದಾರೆ. ಸ್ಟ್ರೈಕ್ ರೇಟ್ 98.

ಮಧ್ಯಮ ಕ್ರಮಾಂಕ ಬಲವಾಗಿದೆ. ಸ್ಮೃತಿ ಜೊತೆಗೆ ಜೆಮಿಮಾ ರಾಡ್ರಿಗಸ್ ಅವರೂ ಎಂದಿನ ಆಟಕ್ಕೆ ಕುದುರಿಕೊಳ್ಳುವ ಲಕ್ಷಣ ತೋರಿಸಿದ್ದಾರೆ. ತೇಜಲ್ ಹಸಬ್ನಿಸ್ ಮತ್ತು ಹರ್ಲೀನ್ ಡಿಯೋಲ್ ಕೂಡ ಉಪಯುಕ್ತ ಆಟವಾಡುವ ಸಾಮರ್ಥ್ಯ ಉಳ್ಳವರು.

ದೀಪ್ತಿ ಶರ್ಮಾ, ರೇಣುಕಾ ಸಿಂಗ್ ಮತ್ತು ಸೈಮಾ ಠಾಕೂರ್ ಜೊತೆ ಯುವ ಉತ್ಸಾಹಿ ತಿತಾಸ್ ಸಾಧು ಬೌಲಿಂಗ್ ಹೊಣೆ ವಹಿಸಲಿದ್ದಾರೆ.

ವೆಸ್ಟ್ ಇಂಡೀಸ್ ತಂಡವು ಅನುಭವಿಗಳಾದ ನಾಯಕಿ ಹೇಲ್ಲಿ ಮ್ಯಾಥ್ಯೂಸ್, ಡಿಯಾಂಡ್ರಾ ಡೊಟಿನ್ ಮತ್ತು ಶೆರ್ಮೆನ್ ಕ್ಯಾಂಪ್‌ಬೆಲ್ ಅವರ ಮೇಲೆ ಹೆಚ್ಚಿನ ಭರವಸೆಯಿಟ್ಟಿದೆ. ಹೇಲ್ಲಿ ಕಳೆದ ಏಳು ಪಂದ್ಯಗಳಲ್ಲಿ 45ರ ಸರಾಸರಿಯಲ್ಲಿ 308 ರನ್ ಪೇರಿಸಿದ್ದಾರೆ. ಆದರೆ ಬೌಲಿಂಗ್ ವಿಭಾಗ ಇಷ್ಟು ಬಲವಾಗಿಲ್ಲ. **ಪಂದ್ಯ ಆರಂಭ: ಮಧ್ಯಾಹ್ನ 1.30ನೇರ ಪ್ರಸಾರ: ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ ಆ್ಯಪ್**


ಸ್ಮೃತಿ ಮಂದಾನ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್

ಜೈಂಟ್ಸ್ ಜೊತೆ ಟೈ ಮಾಡಿಕೊಂಡ ಪೈರೇಟ್ಸ್

ಪುಣೆ: ತೀವ್ರ ಹಣಾಹಣಿ ಕಂಡ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡ ಶನಿವಾರ ಗುಜರಾತ್ ಜೈಂಟ್ಸ್ ಜೊತೆ 40-40ರಲ್ಲಿ ಟೈ ಮಾಡಿಕೊಳ್ಳಬೇಕಾಯಿತು. ಹೀಗಾಗಿ 11ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನಲ್ಲಿ ಮೊದಲ ಎರಡರಲ್ಲಿ ಸ್ಥಾನ ಪಡೆಯುವ ಪಟ್ನಾ ಕನಸಿಗೆ ಹಿನ್ನಡೆಯಾಗಿದೆ.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಗುಜರಾತ್ ತಂಡ 22-18 ಅಂಕಗಳಿಂದ ಮುಂದಿತ್ತು.

ಪಟ್ನಾ ತಂಡಕ್ಕೆ ದೇವಾಂಕ್ 10 ಅಂಕ ಗಳಿಸಿದರೆ, ಸುಧಾಕರ್ 7 ಅಂಕ ಕಲೆಹಾಕಿದರು. ಗುಜರಾತ್ ತಂಡದ ಪರ ರಾಕೇಶ್ 9 ಅಂಕಗಳೊಡನೆ ಟಾಪ್ ಸ್ಕೋರರ್ ಎನಿಸಿದರು. ಅನುಭವಿ ಗುಮನ್ ಸಿಂಗ್ ಮತ್ತು ಜಿತೇಂದರ್ ತಲಾ ಎಂಟು ಅಂಕ ಗಳಿಸಿದರು.

ಪಟ್ನಾ ತನ್ನ ಎಲ್ಲಾ (22) ಪಂದ್ಯಗಳನ್ನು ಆಡಿದ್ದು 77 ಪಾಯಿಂಟ್‌ಗಳೊಡನೆ ಲೀಗ್ ವ್ಯವಹಾರ ಮುಗಿಸಿತು. ಅದು ಸದ್ಯ ಎರಡನೇ ಸ್ಥಾನದಲ್ಲಿದೆ. ಆದರೆ ಮೂರನೇ ಸ್ಥಾನದಲ್ಲಿರುವ ದಬಾಂಗ್ ಡೆಲ್ಲಿ ಮತ್ತು ನಾಲ್ಕನೇ ಸ್ಥಾನದಲ್ಲಿರುವ ಯುಪಿ ಯೋಧಾಸ್ ತಂಡಗಳಿಗೆ ಒಂದೊಂದು ಪಂದ್ಯ ಆಡಲು ಉಳಿದಿದೆ.

ಲೀಗ್ ಪಟ್ಟಿಯಲ್ಲಿ ಕೊನೆಯಿಂದ ಎರಡನೇ ಸ್ಥಾನದಲ್ಲಿರುವ ಜೈಂಟ್ಸ್‌ಗೆ ಇದು ಮೂರನೇ ಟೈ. ಅದು 21 ಪಂದ್ಯಗಳಿಂದ 38 ಪಾಯಿಂಟ್ಸ್ ಸಂಗ್ರಹಿಸಿದೆ.

ದಿನದ ಎರಡನೇ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಕೆ.ಸಿ. ತಂಡ 33-31 ಪಾಯಿಂಟ್‌ಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿತು.

ಭಾನುವಾರದ ಪಂದ್ಯಗಳು: ತಮಿಳ್ ತಲೈವಾಸ್– ಬೆಂಗಳೂರು ಬುಲ್ಸ್ (ರಾತ್ರಿ 8); ಹರಿಯಾಣ ಸ್ಟೀಲರ್ಸ್– ಯು ಮುಂಬಾ (ರಾತ್ರಿ 9)


ಗುಜರಾತ್ ಜೈಂಟ್ಸ್ ಆಟಗಾರರಿಗೆ 'ಕ್ಯಾಚ್ ಆದ' ಪಟ್ನಾ ಪೈರೇಟ್ಸ್ ಆಟಗಾರ.

ಭಾರತಕ್ಕೆ ಜೂನಿಯರ್ ವಿಶ್ವಕಪ್ ಶೂಟಿಂಗ್ ಆತಿಥ್ಯ

ನವದೆಹಲಿ (ಪಿಟಿಐ): ಭಾರತವು ಮುಂದಿನ ವರ್ಷದ ಜೂನಿಯರ್ ವಿಶ್ವಕಪ್ ಆತಿಥ್ಯವನ್ನು ವಹಿಸಿಕೊಂಡಿದೆ. ಇದರಲ್ಲಿ ರೈಫಲ್, ಪಿಸ್ತೂಲ್ ಮತ್ತು ಶಾಟ್‌ಗನ್ ವಿಭಾಗಗಳು ಒಳಗೊಂಡಿವೆ ಎಂದು ಭಾರತ ರಾಷ್ಟ್ರೀಯ ರೈಫಲ್ ಅಸೋಸಿಯೇಷನ್ ಶನಿವಾರ ಇಲ್ಲಿ ತಿಳಿಸಿದೆ. ಇದರ ದಿನಾಂಕವನ್ನು ಇನ್ನೂ ಅಂತಿಮಗೊಳಿಸಿಲ್ಲ. ಇದು ಭಾರತ ಆಯೋಜಿಸುತ್ತಿರುವ ಅಂತರರಾಷ್ಟ್ರೀಯ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಷನ್‌ನ (ಐಎಸ್‌ಎಸ್‌ಎಫ್) ಮೂರನೇ ಪ್ರಮುಖ ಪಂದ್ಯಾವಳಿ ಆಗಿದೆ. 2023ರಲ್ಲಿ ಭೋಪಾಲ್‌ನಲ್ಲಿ ವಿಶ್ವಕಪ್ ನಡೆದಿತ್ತು. ಈ ವರ್ಷದ ಆರಂಭದಲ್ಲಿ ವರ್ಷಾಂತ್ಯದ ವಿಶ್ವಕಪ್ ಫೈನಲ್ ನಡೆದಿತ್ತು.

ಚೆಂಡು ಬಡಿದು ರಾಹುಲ್ ಕೈಗೆ ಪೆಟ್ಟು

ಮೆಲ್ಬರ್ನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಅವರ ಕೈಗೆ ಶನಿವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ಚೆಂಡು ಬಡಿದು ನೋವನುಭವಿಸಿದರು. ಕೂಡಲೇ ತಂಡದ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು.



ರಾಹುಲ್ ಅವರು ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರ ಬಲಗೈಗೆ ಚೆಂಡು ಬಡಿಯಿತು. ಇದರಿಂದಾಗಿ ಸ್ವಲ್ಪ ಹೊತ್ತು ನೋವನುಭವಿಸಿದರು.

ಇದೇ 26ರಿಂದ ಇಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯ ನಡೆಯಲಿದೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಈ ಸರಣಿಯು ಸದ್ಯ 1-1ರ ಸಮಬಲದಲ್ಲಿದೆ. ಕಳೆದ ಪಂದ್ಯದಲ್ಲಿ ರಾಹುಲ್ ಅಮೋಘ ಬ್ಯಾಟಿಂಗ್ ಮಾಡಿದ್ದರು.

ಅವರ ಗಾಯದ ಗಂಭೀರತೆ ಬಗ್ಗೆ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ತಂಡದ ವ್ಯವಸ್ಥಾಪಕರು ಕೂಡ ಇದುವರೆಗೆ ಗಾಯದ ಕುರಿ ಮಾಹಿತಿಯನ್ನು ಬಿಡುಗಡೆ ಮಾಡಿಲ್ಲ.

ಸಚಿನ್ ಮನಗೆದ್ದ ಬರಿಗಾಲ ಬೌಲರ್ ಸುಶೀಲಾ ಮೀನಾ

ಬೆಂಗಳೂರು: ರಾಜಸ್ಥಾನದ ಹುಡುಗಿ ಸುಶೀಲಾ ಮೀನಾಗೆ ಈಗ ಸಂಭ್ರಮವೋ ಸಂಭ್ರಮ. ಏಕೆಂದರೆ ಈ ಬಾಲಕಿಯು ಎಡಗೈ ಬೌಲಿಂಗ್ ಮಾಡುವ ವಿಡಿಯೊ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಮೆಚ್ಚುಗೆ ಗಳಿಸಿದೆ.

ಅಷ್ಟೇ ಅಲ್ಲ; ಬರಿಗಾಲಿನಲ್ಲಿ ಓಡಿ ಬಂದು ಎಡಗೈವೇಗದ ಬೌಲಿಂಗ್ ಮಾಡುವ ಈ ಹುಡುಗಿಯ ವಿಡಿಯೊವನ್ನು ತಮ್ಮ ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿರುವ ಸಚಿನ್, 'ನಯ, ಸರಾಗ ಮತ್ತು ಚೆಂದದ ಶೈಲಿ ನೋಡಿ. ಸುಶೀಲಾ ಮೀನಾ ಬೌಲಿಂಗ್ ಶೈಲಿಯು ನಿಮ್ಮ ತರಹದ ಶೈಲಿಯಂತಿದೆ' ಎಂದು ತಮ್ಮೊಂದಿಗೆ ಭಾರತ ತಂಡದಲ್ಲಿ ಆಡಿದ್ದ ಎಡಗೈ ಬೌಲರ್ ಜಹೀರ್ ಖಾನ್ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಅದಕ್ಕೆ ಪ್ರತಿಕ್ರಿಯಿಸಿರುವ ಜಹೀರ್, 'ನೀವು ಸರಿಯಾಗಿ ಗುರುತಿಸಿದ್ದೀರಿ. ಆಕೆಯ ಶೈಲಿ ನಯವಾಗಿ ಮತ್ತು ಪ್ರಭಾವಶಾಲಿಯಾಗಿದೆ. ಬಹಳಷ್ಟು ಭರವಸೆ ಮೂಡಿಸಿರುವ ಬಾಲೆ' ಎಂದಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಈ ಹುಡುಗಿಯ ಬೌಲಿಂಗ್ ವಿಡಿಯೊ ಹರಿದಾಡಿತ್ತು. ಅದನ್ನು ನೋಡಿದ ಸಚಿನ್ ತೆಂಡೂಲ್ಕರ್ ವಿಡಿಯೊ ಹಂಚಿಕೊಂಡಿದ್ದಾರೆ.

ರಾಜಸ್ಥಾನದ ಐದನೇ ತರಗತಿ ವಿದ್ಯಾರ್ಥಿನಿ ಸುಶೀಲಾಗೆ ಕ್ರಿಕೆಟ್ ಆಸಕ್ತಿ ಮತ್ತು ಪ್ರತಿಭೆ ಎರಡೂ ಇವೆ. ಅವರಿಗೆ ಉತ್ತಮ ಭವಿಷ್ಯವಿದೆ ಪ್ರೋತ್ಸಾಹ ಬೇಕೆಂದು ಪ್ರತಿಕ್ರಿಯಿಸಿದ್ದಾರೆ.


ಸುಶೀಲಾ ಮೀನಾ ಬೌಲಿಂಗ್ ಶೈಲಿ

ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ : ಆದಿತ್ಯ ದಾಸ್‌ಗೆ ಪ್ರಶಸ್ತಿ

ತನಿಷ್ಕಾ ಕಾಲಭೈರವಗೆ ಸಿಂಗಲ್ಸ್ ಕಿರೀಟ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ ಮತ್ತು ಬಂಗಾಳದ ಆದಿತ್ಯ ದಾಸ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಯೂತ್ ವಿಭಾಗದಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕಿಯರ ಮತ್ತು 15 ವರ್ಷದ ಬಾಲಕರ ವಿಭಾಗದ ಪ್ರಶಸ್ತಿ ಜಯಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಬಾಲಕರ ಫೈನಲ್‌ನಲ್ಲಿ ಆದಿತ್ಯ 11-9, 11-9, 11-6ರಿಂದ ತಮಿಳುನಾಡಿನ ಅಕ್ಷಯ್ ಭೂಷಣ್ ವಿರುದ್ಧ ಜಯಿಸಿದರು. ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಆದಿತ್ಯ 3-2ರಿಂದ ಮಹಾರಾಷ್ಟ್ರದ ಶೌರೆನ್ ಸೋಮನ್ ವಿರುದ್ಧ; ಅಕ್ಷಯ್ 3-2ರಿಂದ ಋತ್ವಿಕ್ ಗುಪ್ತಾ ವಿರುದ್ಧ ಗೆದ್ದರು.

13 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ ಕರ್ನಾಟಕದ ತನಿಷ್ಕಾ 14-12, 11-8, 11-9ರಿಂದ ಮಹಾರಾಷ್ಟ್ರದ ಮೈರಾ ಸಾಂಗ್ಳೇಕರ್ ವಿರುದ್ಧ ಜಯಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ 3-2ರಿಂದ ಪಿಎಸ್‌ಪಿಬಿಎದ ಆರ್ಯಾ ರೆಡ್ಕರ್ ವಿರುದ್ಧ; ಮೈರಾ 3-2ರಿಂದ ಮಂಗಾಳದ ಶ್ರೇಯೊಶ್ರೀ ಚಕ್ರವರ್ತಿ ವಿರುದ್ಧ ಜಯಿಸಿದರು.

ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ದಿವ್ಯಾಂಶಿ 9-11, 11-5, 6-11, 11-4, 11-7ರಿಂದ ತಮಿಳುನಾಡಿನ ಅನನ್ಯ ಮುರಳೀಧರನ್ ವಿರುದ್ಧ ಜಯಿಸಿದರು. ನಾಲ್ಕರ ಘಟ್ಟದಲ್ಲಿ ದಿವ್ಯಾಸಿ 3-0ಯಿಂದ ಪಶ್ಚಿಮ ಬಂಗಾಳದ ಶ್ರೇಯಾ ಧಾರ್ ವಿರುದ್ಧ; ಅನನ್ಯ 3-0ಯಿಂದ ಕರ್ನಾಟಕದ ಹಿಯಾ ಸಿಂಗ್ ವಿರುದ್ಧ ಗೆದ್ದರು. 13 ವರ್ಷದೊಳಗಿನವರ ಯೂತ್ ಬಾಲಕರ ಫೈನಲ್‌ನಲ್ಲಿ ಮಹಾರಾಷ್ಟ್ರದ ಪ್ರತೀಕ್ ತುಳ್ಸಾನಿ 11-6, 8-11, 15-13, 11-9 ರಿಂದ ತಮಿಳುನಾಡಿನ ಸಂಜಯ್ ಅರವಿಂದ್ ವಿರುದ್ಧ ಜಯಿಸಿದರು. ಸೆಮಿಫೈನಲ್‌ನಲ್ಲಿ ಪ್ರತೀಕ್ 3-0ಯಿಂದ ಬಂಗಾಳದ ಸೌಶ್ವರ್ಯ ಬ್ಯಾನರ್ಜಿ ವಿರುದ್ಧ ಗೆದ್ದರು. ಸಂಜಯ್ 3-1ರಿಂದ ಬಂಗಾಳದ ಹಿಮನ್ ಕುಮಾರ್ ಮಂಡಲ್ ವಿರುದ್ಧ ಗೆದ್ದರು.


ತನಿಷ್ಕಾ ಕಾಲಭೈರವ ಆಟದ ವೈಖರಿ–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್